ಶನಿವಾರ, ಮೇ 11, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಂದಹಾಸ
ಮುಂಬೈನಲ್ಲಿ ನಡೆದ ಚಲನಚಿತ್ರವೊಂದರ ಪ್ರಚಾರ ಕಾರ್ಯಕ್ರಮದಲ್ಲಿ ನಟಿ ಮಧು ಪಾಲ್ಗೊಂಡಿದ್ದರು

RERA NO: PRM/KA/RERA/1251/310/PR/040524/006862
FOR MORE DETAILS VISIT WWW.RERA.KARNATAKA.GOV.IN

BENGALURU, THIS IS
THE GREATEST
LIVING EXPERIENCE

LAUNCHING
CASAGRAND CASABLANCA
PHASE-I

LUXURIOUS 2, 3 & 4 APTS.
5 BHK FLOOR VILLAS
& PENTHOUSES

₹79L - ₹2.56CR

OFF KANAKAPURA ROAD | 5 MINS FROM FORUM MALL

1700+ HOMES ON 27 ACRES | 100+ WORLD-CLASS AMENITIES | BENGALURU'S LARGEST 2.5 ACRES CLUBHOUSE | 23 ACRES OF OPEN SPACE | COMPLETION IN 36 MONTHS

PRICE BENEFITS

MARKET PRICE OFF KANAKAPURA RD. ~~₹9500/SFT~~
LAUNCH PRICE ~~₹5999/SFT~~

CASAGRAND EARLY BIRD PRICE
₹5499/SFT (First 50 bookings) | ₹5599/SFT (51 - 100 bookings)
₹5699/SFT (101 - 150 bookings) | ₹5999/SFT (150+ bookings)

INCREDIBLY PRICED

TYPE	SIZE	LAUNCH PRICE	EARLY BIRD PRICE
2 BHK	1265 SFT	~~₹85L~~	₹79L
3 BHK	1548 - 2012 SFT	~~₹1.02CR - ₹1.33CR~~	₹94L - ₹1.23CR
4 BHK	3039 SFT	~~₹2.03CR~~	₹1.88CR
5 BHK FLOOR VILLA	3987 SFT	~~₹2.75CR~~	₹2.55CR
5 BHK PENTHOUSE	3787 - 3884 SFT	~~₹2.60CR - ₹2.75CR~~	₹2.40CR - ₹2.56CR

*T&C APPLY

PHASE 1 UNITS - 805 | UNITS SOLD - 323 | AVAILABLE UNITS - 482

CREDAI
Exclusive site visit available. Visit model house at site.
93840 54982 | www.casagrand.co.in

CASAGRAND
building aspirations

RERA NO: PRM/KA/RERA/1251/310/PR/040524/006862
FOR MORE DETAILS VISIT WWW.RERA.KARNATAKA.GOV.IN

LAUNCHING
CASAGRAND CASABLANCA
PHASE-I

LUXURIOUS 2, 3 & 4 BHK APTS.
5 BHK FLOOR VILLAS & PENTHOUSES
OFF KANAKAPURA ROAD | 5 MINS FROM FORUM MALL

₹79L ONWARDS

PODIUM

CLUBHOUSE

BALCONY VIEW

WHY THE GREATEST LIVING EXPERIENCE

COMMUNITY
1. 1700+ homes community on 27 acres
2. 18 meticulously crafted floors
3. 23 acres of open space with lush greenery
4. 15 acres of central landscape with tropical forest
5. Basement parking for vehicle-free community
6. 7-star styled double-height entrance & lift lobbies
7. Roman themed majestic elevation
8. Resort like ambience for luxury living

FLOOR PLAN & SPECIFICATIONS
9. Spacious homes for maximum functionality, comfort & privacy
10. Floor to floor is min 11 ft high for grandeur
11. Large windows for 2x more light & ventilation
12. Vaastu compliant homes with no wastage of spaces
13. Apartments designed for unobstructed views
14. High-end specifications like Italian marble, digital door lock & more
15. 2023 quality checks to ensure international standards

AMENITIES
16. 100+ world-class amenities & features
17. 2.5 acres largest clubhouse
18. 24,000 sft grand swimming pool
19. Indoor sports arena with 4 badminton, 3 squash courts & many more
20. Huge amphitheater to host 450+ audience
21. 2 AV rooms with 95+ seaters
22. Forest walkways with Koi & Lily ponds
23. Roman themed wellness gardens

CONVENIENCE
24. 2 Independent entrances for seamless accessibility
25. Multilayer safety & security system
26. Supermarket, cafeteria, clinic, laundry - all at one hub to cater your everyday needs
27. 100% hassle-free & ease of living by assured maintenance services
28. Casagrand arranges exclusive events like festivals, social gatherings, workshops and more engagements within the community

LOCATION
29. 2 mins signal free access to NICE Road
30. 5 mins from Forum Mall & Vajarahalli Metro Station
31. 10 mins from JP Nagar
32. 15 mins from Global Tech Park
33. 25 mins from Electronic City
34. Close proximity to schools, colleges, business centers & IT parks



*T&C APPLY

LOCATION BENEFITS	BANNERGHATTA RD. (10 MINS)	RR NAGAR (15 MINS)	JP NAGAR (18 MINS)	BANASHANKARI (20 MINS)	ELECTRONIC CITY (25 MINS)	JAYANAGAR (28 MINS)	BTM LAYOUT (30 MINS)

SUPERIOR VALUE ASSURED*
- World-class homes with maximum ventilation
- Exclusive community lifestyle with on call service
- Crafted with German standards
- 10 years maintenance warranty
- 3 months rental & 6 months resale guarantee

SCAN TO EXPERIENCE
THE GREATEST LIVING IN BENGALURU

CREDAI
Exclusive site visit available. Visit model house at site.
93840 54982 | www.casagrand.co.in

CASAGRAND
building aspirations

ಶನಿವಾರ, ಮೇ 11, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸೆಲ್ಫಿ ಸಮಯ

ಅಕ್ಷಯ ತೃತೀಯಾ ದಿನವಾದ ಶುಕ್ರವಾರ ಬೆಂಗಳೂರಿನ ಚಿನ್ನದ ಮಳಿಗೆಯೊಂದರಲ್ಲಿ ಯುವತಿಯರು ಆಭರಣ ಧರಿಸಿ ಸೆಲ್ಫಿ ತೆಗೆದುಕೊಂಡರು

ಬಿರು ಬೇಸಿಗೆಯಲ್ಲೂ ರಾಮೋಹಳ್ಳಿ ಕೆರೆಯಲ್ಲಿ ಜಲ ವೈಭವ

● ಚಿಕ್ಕರಾಮು

ಬೆಂಗಳೂರು: ಎರಡು ವರ್ಷಗಳ ಹಿಂದೆ ಹೂಳು ತುಂಬಿಕೊಂಡು, ಬರಿದಾಗಿದ್ದ ರಾಮೋಹಳ್ಳಿಯ ಕೆರೆಯಲ್ಲೀಗ ಬಿರು ಬೇಸಿಗೆಯಲ್ಲೂ ಜಲ ವೈಭವ. ಕೆರೆಯ ಸುತ್ತಾ ಪಕ್ಷಿಗಳ ಕಲರವ...

ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿರುವ ರಾಮೋಹಳ್ಳಿ ಕೆರೆ 65 ಎಕರೆ ವಿಸ್ತೀರ್ಣವಿದೆ. ಎರಡು ವರ್ಷಗಳ ಹಿಂದೆ ಈ ಕೆರೆಯಲ್ಲಿ ಹೂಳು ತುಂಬಿಕೊಂಡಿತ್ತು. ಕುರುಚಲು ಗಿಡಗಳು ಬೆಳೆದಿದ್ದವು. ಮಳೆ ಬಂದಾಗ ಅಲ್ಲಲ್ಲಿ ಇದ್ದ ಗುಂಡಿಗಳಲ್ಲಿ ಮಾತ್ರ ನೀರು ನಿಲ್ಲುತ್ತಿತ್ತು. ಅದೂ ಎರಡು–ಮೂರು ತಿಂಗಳಲ್ಲಿ ಬತ್ತಿ ಹೋಗುತ್ತಿತ್ತು.

ಈ ಕೆರೆಗೆ, ಪುನುಗುಮಾರನಹಳ್ಳಿಯ ರಾಮಪ್ಪನ ಕೆರೆ ಹಾಗೂ ಸುತ್ತಮುತ್ತಲಿನ

ರಾಮೋಹಳ್ಳಿ ಕೆರೆಯಲ್ಲಿ ಬೇಸಿಗೆಯಲ್ಲೂ ನೀರು ಇದೆ

ಪ್ರದೇಶದಲ್ಲಿರುವ ರಾಜಕಾಲುವೆಗಳ ಮೂಲಕ ಮಳೆ ನೀರು ಹರಿದು ಬರುತ್ತಿತ್ತು. ರಾಜಕಾಲುವೆಗಳು ಒತ್ತುವರಿಯಾಗಿದ್ದರಿಂದ, ಮೇಲ್ಭಾಗದ ಕೆರೆ ತುಂಬಿ ಕೋಡಿ ಹರಿದರೂ ಈ ಕೆರೆಗೆ ನೀರು ತಲುಪುತ್ತಿರಲಿಲ್ಲ.

ರಾಮೋಹಳ್ಳಿ ಕೆರೆಯ ಸ್ಥಿತಿಯನ್ನು ಗಮನಿಸಿದ 'ಯುದ್ಧ ಭೂಮಿ ಹೋರಾಟ ಸೇನೆ'ಯ ರಾಜ್ಯ ಘಟಕದ ಅಧ್ಯಕ್ಷ ಹೇಮಂತರಾಜ್, ಕೆರೆಗೆ ಮಳೆ ನೀರು ಹರಿಯದಿರಲು ಕಾರಣವೇನೆಂದು ಗುರುತಿಸಿದರು. 'ಕೆರೆ ಪುನಶ್ಚೇತನ ಗೊಳಿಸಿ ನೀರು ತುಂಬುವಂತೆ ಮಾಡಬೇಕು' ಎಂದು ಸಂಕಲ್ಪ ಮಾಡಿದರು. ಈ ಭಾಗದ ಜಿಲ್ಲಾಧಿಕಾರಿ, ಉಪ ವಿಭಾಗಧಿಕಾರಿ, ತಹಶೀಲ್ದಾರ್ ಸೇರಿದಂತೆ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳಿಗೆ ಕೆರೆಯ ಸ್ಥಿತಿ–ಗತಿ ವಿವರಿಸಿ, ಪುನಶ್ಚೇತನ ಕಾರ್ಯಕ್ಕೆ ಅನುಮತಿ ಪಡೆದರು.

ಕೆರೆ ಅಭಿವೃದ್ಧಿಯ ವೇಳೆ ಹಲವು ಅಡೆತಡೆಗಳು ಎದುರಾದರೂ, ಹೇಮಂತರಾಜ್ ಅವರು ಯಾವುದಕ್ಕೂ ಅಂಜದೇ, ಕೆರೆ ಪುನಶ್ಚೇತನಗೊಳಿಸಿ, ನೀರು ತುಂಬುವಂತೆ ಮಾಡಿದ್ದಾರೆ
ಆರ್. ಪಿ. ಪ್ರಕಾಶ್
ರಾಮೋಹಳ್ಳಿ

ರಾಮಪ್ಪನ ಕೆರೆ ಕೋಡಿಬಿದ್ದಾಗ ರಾಜಕಾಲುವೆ ಮೂಲಕ ನೀರು ಹರಿದು ರಾಮೋಹಳ್ಳಿ ಕೆರೆ ಸೇರುತ್ತಿರಲಿಲ್ಲ. ಈಗ ಒತ್ತುವರಿ ತೆರವುಗೊಳಿಸಿದ್ದರಿಂದ ಕೆರೆಯಲ್ಲಿ ನೀರು ಸಂಗ್ರಹವಾಗಿದೆ
ವಿ.ವೇಣುಗೋಪಾಲ್
ಗ್ರಾ.ಪಂ ಅಧ್ಯಕ್ಷ, ರಾಮೋಹಳ್ಳಿ

ಸ್ವಂತ ಹಣ ವ್ಯಯಿಸಿ, 25ಕ್ಕೂ ಹೆಚ್ಚು ಜೆಸಿಬಿ ಯಂತ್ರಗಳು, 40 ಟ್ರ್ಯಾಕ್ಟರ್‌ಗಳನ್ನು ಬಳಸಿ ಹೂಳು ಎತ್ತಿಸಿದರು. ಕುರುಚಲು ಗಿಡಗಳನ್ನು ತೆಗೆಸಿದರು. ಮಳೆ ನೀರು ಹರಿಯುವ ರಾಜಕಾಲುವೆಗಳನ್ನೂ ಸ್ವಚ್ಛಗೊಳಿಸಿದರು. ಆ ವರ್ಷ (2022) ಉತ್ತಮ ಮಳೆಯಾಯಿತು. ರಾಜಕಾಲುವೆಗಳು ಸ್ವಚ್ಛವಾದ ಪರಿಣಾಮ ಮೇಲ್ಭಾಗದ ಕೆರೆ

ಹೇಮಂತ್‌ರಾಜ್

ನೀರು ಹಾಗೂ ಮಳೆ ನೀರು ಸರಾಗವಾಗಿ ರಾಮೋಹಳ್ಳಿ ಕೆರೆ ಸೇರಿತು. 21 ವರ್ಷಗಳ ನಂತರ ರಾಮೋಹಳ್ಳಿ ಕೆರೆ ತುಂಬಿ ಕೋಡಿ ಹರಿಯಿತು. ಇದರಿಂದ ಸುತ್ತಮುತ್ತಲ ಪ್ರದೇಶದಲ್ಲಿ ಅಂತರ್ಜಲ ಹೆಚ್ಚಳವಾಯಿತು. ಕೊಳವೆಬಾವಿಗಳಲ್ಲಿ ನೀರಿನ ಪ್ರಮಾಣ ದಲ್ಲಿ ಏರಿಕೆಯಾಯಿತು. ಕೆರೆ ಸುತ್ತಲಿನ ಪರಿಸರವೂ ಹಸಿರಾಯಿತು. ಈಗ ಮುಂಜಾನೆ– ಸಂಜೆ ಪಕ್ಷಿಗಳ ಕಲರವ ಕೇಳಿಸುತ್ತಿದೆ.

'ಕೆರೆಯ ಸ್ಥಿತಿ ನೋಡಿ ಬೇಸರವಾಗಿತ್ತು. ಪ್ರಾಣಿ–ಪಕ್ಷಿಗಳು ನೀರಿಲ್ಲದೇ ಪರದಾಡಿದ್ದನ್ನು ನೋಡಿ ಸಂಕಟವಾಗಿತ್ತು. ಆಗಲೇ ಕೆರೆ ಅಭಿವೃದ್ಧಿಪಡಿಸಲು ನಿರ್ಧರಿಸಿದೆ. ಅಧಿಕಾರಿಗ ಳಿಂದ ಅನುಮತಿ ಕೇಳಿದೆ. ಬೆಂಗಳೂರು ದಕ್ಷಿಣ ತಾಲ್ಲೂಕು ಉಪವಿಭಾಗಾಧಿಕಾರಿ ಶಿವಣ್ಣ ಅವರು ಕೆರೆ ಅಭಿವೃದ್ಧಿ, ರಾಜಕಾಲುವೆ ಸ್ವಚ್ಛಗೊಳಿಸಲು ಅನುಮತಿ ನೀಡಿದರು. ಜೊತೆಗೆ ಅವರೇ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡಿದರು. ಅಧಿಕಾರಿಗಳ ನೇತೃತ್ವದಲ್ಲೇ ಒತ್ತುವರಿ ತೆರವುಗೊಳಿಸಲಾಯಿತು. ಕೆರೆ ಸ್ವಚ್ಛವಾಗಿ, ನೀರು ತುಂಬಿತು. ಈ ಬೇಸಿಗೆಯಲ್ಲೂ ಕೆರೆಯಲ್ಲಿ ನೀರಿದೆ. ಪಶು–ಪಕ್ಷಿಗಳ ಬಾಯಾರಿಕೆ ನೀಗಿಸುತ್ತಿದೆ' ಎಂದು ಹೇಳಿದರು ಹೇಮಂತರಾಜ್.

'ಕೆರೆ ತುಂಬಿ ಎರಡು ವರ್ಷಗಳಾದರೂ, ಈಗಲೂ ಕೆರೆಯಲ್ಲಿ ನೀರಿದೆ. ಸುತ್ತಲಿನ ಕೊಳವೆಬಾವಿಗಳಲ್ಲೂ ನೀರು ಸಿಗುತ್ತಿದೆ. ಆಗ ನೀರಿನ ಸಮಸ್ಯೆ ಇತ್ತು. ಈಗ ಇಲ್ಲ' ಎಂದು ಗ್ರಾಮಸ್ಥರು ಸಂತಸ ವ್ಯಕ್ತಪಡಿಸುತ್ತಾರೆ.

ಬಾಲ್ಯವಿವಾಹದ ನಿಶ್ಚಿತಾರ್ಥವನ್ನು ತಡೆದಿದ್ದ ಅಧಿಕಾರಿಗಳು ● ತಲೆ ಕಡಿದ ಆರೋಪಿ

ಬಾಲಕಿಯ ರುಂಡದೊಂದಿಗೆ ಪರಾರಿ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನ ಕುಂಬಾರಗಡಿಗೆ ಗ್ರಾಮದಲ್ಲಿ ಮೊಣ್ಣಂಡ ಪ್ರಕಾಶ್ (33) ಎಂಬಾತ, 16 ವರ್ಷ ವಯಸ್ಸಿನ ಮೀನಾ ಎಂಬ ಬಾಲಕಿಯನ್ನು ಕೊಂದು ಆಕೆಯ ರುಂಡದೊಂದಿಗೆ ಪರಾರಿಯಾಗಿದ್ದಾನೆ.

'ಸಮೀಪದ ಹಮ್ಮಿಯಾಳ ಗ್ರಾಮದ ನಿವಾಸಿಯಾದ ಆರೋಪಿಯೊಂದಿಗೆ ಬಾಲಕಿಯ ಮದುವೆ ನಿಶ್ಚಿತಾರ್ಥ ಗುರುವಾರ ನಡೆದಿತ್ತು. ಮಾಹಿತಿ ಪಡೆದು ಸ್ಥಳಕ್ಕೆ ಬಂದ ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳು, ಮದುವೆ ಮಾಡದಂತೆ ಬಾಲಕಿಯ ಪೋಷಕರ ಮನವೊಲಿಸಿದ್ದರು. 18 ವರ್ಷ ತುಂಬಿದ ನಂತರವೇ ಮದುವೆ ಮಾಡುವುದಾಗಿ ಮುಚ್ಚಳಿಕೆ ಬರೆಸಿಕೊಂಡು, ತೆರಳಿದ್ದರು.

ಬಳಿಕ ಬಾಲಕಿಯ ಮನೆಗೆ ಬಂದ ಆರೋಪಿಯು ಆಕೆಯನ್ನು ಹೊತ್ತೊಯ್ಯಲು ಪ್ರಯತ್ನಿಸಿದ್ದ. ತಡೆಯಲು ಬಂದ ತಂದೆಗೆ ಒದ್ದು, ತಾಯಿಯ ಕೈಗೆ ಮಚ್ಚಿನಿಂದ ಹೊಡೆದು ಬಾಲಕಿಯನ್ನು ಸಮೀಪದ ಕಾಡಿನೊಳಕ್ಕೆ ಎಳೆದೊಯ್ದಿದ್ದ. ನಂತರ, ಬಾಲಕಿಯ ರುಂಡವನ್ನು ಕತ್ತರಿಸಿಕೊಂಡು ಪರಾರಿಯಾದ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ತಿಳಿಸಿದರು.

ಕೊಲೆಗೆ ನಿಖರ ಕಾರಣ ಗೊತ್ತಾಗಿಲ್ಲ. ಬಾಲಕಿ ತಾಯಿಯ ಕೈ ನರಗಳಿಗೆ ತೀವ್ರ-

ಕೃತ್ಯ ನಡೆದ ಸ್ಥಳದಲ್ಲಿ ಶ್ವಾನದಳವು ಹುಡುಕಾಟ ನಡೆಸಿತು

ಸ್ವರೂಪದ ಗಾಯಗಳಾಗಿರುವುದರಿಂದ ಅವರನ್ನು ಸಶಸ್ತ್ರ ಪೊಲೀಸ್ ಭದ್ರತೆಯಲ್ಲಿ ಮೈಸೂರಿನ ಆಸ್ಪತ್ರೆಗೆ ದಾಖಲಿಸಲಾಗಿದೆ. ಗ್ರಾಮದಲ್ಲೂ ಎಲ್ಲೆಡೆ ಸಶಸ್ತ್ರ ಪೊಲೀಸರನ್ನು ನಿಯೋಜಿಸಲಾಗಿದೆ. ಲಘು ಗಾಯಗಳಾಗಿರುವ ಬಾಲಕಿಯ ತಂದೆ ಸದ್ಯ ಮಡಿಕೇರಿ ಜಿಲ್ಲಾಸ್ಪತ್ರೆಯಲ್ಲಿದ್ದು, ಅಲ್ಲೂ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದೆ.

'ಶ್ವಾನದಳ ಹುಡುಕಾಟ ನಡೆಸಿದಾಗ, ಕೃತ್ಯ ನಡೆದ ಸ್ಥಳದಿಂದ ಸ್ವಲ್ಪ ದೂರದಲ್ಲಿ ಮಚ್ಚು ಸಿಕ್ಕಿದೆ' ಎಂದು ಪೊಲೀಸರು ತಿಳಿಸಿದ್ದಾರೆ. ಐಪಿಸಿ ಸೆಕ್ಷನ್ 302 (ಕೊಲೆ), 307 (ಕೊಲೆ ಯತ್ನ) ಮತ್ತು ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ಸಂಭ್ರಮದ ಮನೆಯಲ್ಲಿ ಸೂತಕ!: 'ಸಮೀಪದ ಶಾಲೆಯೊಂದರಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಏಕೈಕ ಬಾಲಕಿ' ಎಂಬ ಹೆಗ್ಗಳಿಕೆಯುಳ್ಳ ಆಕೆ ಸುಮಾರು 5 ಕಿ.ಮೀ ದೂರದವರೆಗೂ ನಡೆದುಕೊಂಡೇ ಶಾಲೆಗೆ ಹೋಗುತ್ತಿದ್ದಳು. ಗುರುವಾರಷ್ಟೇ ಆಕೆ ಉತ್ತೀರ್ಣಳಾಗಿದ್ದು, ಜಿಲ್ಲೆಯಲ್ಲೇ ಏಕೈಕ ವಿದ್ಯಾರ್ಥಿನಿ ಇರುವ ಶಾಲೆಯಲ್ಲಿ ಶೇ 100ರಷ್ಟು ಫಲಿತಾಂಶ ಬರಲು ಆಕೆಯೇ ಕಾರಣ ಎಂಬ ವ್ಯಾಪಕ ಶ್ಲಾಘನೆ ವ್ಯಕ್ತವಾಗಿತ್ತು. ಅದರೊಂದಿಗೆ, ನಿಶ್ಚಿತಾರ್ಥದ ಸಂಭ್ರಮವೂ ಮನೆಯಲ್ಲಿತ್ತು. ಆದರೆ, ಈಗ ಸೂತಕ ಆವರಿಸಿದೆ.

ಊಹಾಪೋಹ: 'ಆರೋಪಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ' ಎಂಬ ಊಹಾಪೋಹವೂ ಇಡೀ ದಿನ ವ್ಯಾಪಕವಾಗಿ ಹರಡಿತ್ತು. ಆದರೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಇದನ್ನು ಖಚಿತಪಡಿಸಿಲ್ಲ.

ಉಗ್ರಪ್ಪ ಸಮಿತಿ ವರದಿ ಜಾರಿಗೆ ಒತ್ತಾಯ

ಬೆಂಗಳೂರು: ಕೊಡಗು ಜಿಲ್ಲೆಯ ಸೂರ್ಲಬ್ಬಿ ಗ್ರಾಮದಲ್ಲಿ ನಡೆದಿರುವ ಬಾಲಕಿ ಕೊಲೆ ಪ್ರಕರಣವನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಖಂಡಿಸಿದೆ.

16 ವರ್ಷದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿನಿ ಮೀನಾಳನ್ನು ಪ್ರಕಾಶ್ ಅಲಿಯಾಸ್ ಓಂಪ್ರಕಾಶ್ ಎಂಬಾತ ಹತ್ಯೆ ಮಾಡಿದ್ದಾನೆ. ಇದು ಅತ್ಯಂತ ಹೇಯ ಕೃತ್ಯ. ಕೊಲೆಗಾರ ಆ ಪುಟ್ಟ ಬಾಲಕಿಯ ರುಂಡ ಕತ್ತರಿಸಿ ಹಾಕಿದ್ದಾನೆ. ಬಾಲಕಿಯನ್ನು 35 ವರ್ಷದ ವ್ಯಕ್ತಿಯೊಂದಿಗೆ ಮದುವೆ ಮಾಡಲು ಪೋಷಕರು ಹೊರಟಿದ್ದರು. ಮದುವೆ ಮಾಹಿತಿ ತಿಳಿದು, ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಬಾಲ್ಯ ವಿವಾಹ ಕಾನೂನು ಬಾಹಿರವೆಂದು ಪೋಷಕರಿಗೆ ಮನವರಿಕೆ ಮಾಡಿಕೊಟ್ಟಿದ್ದರು. ನಂತರ, ಮದುವೆ ಮುಂದೂಡಲಾಗಿತ್ತು. ಮದುವೆ ಆಗಬೇಕಿದ್ದ ವ್ಯಕ್ತಿಯೇ ರೋಷದಿಂದ ಬಾಲಕಿಯನ್ನು ಕೊಲೆ ಮಾಡಿದ್ದಾನೆ. ಈ ರೀತಿಯ ಘಟನೆಗಳು ಆತಂಕ ಹುಟ್ಟಿಸುತ್ತಿವೆ ಎಂದು ಸಂಘಟನೆ ಅಧ್ಯಕ್ಷರಾದ ಮೀನಾಕ್ಷಿ ಬಾಳಿ ಹಾಗೂ ಪ್ರಧಾನ ಕಾರ್ಯದರ್ಶಿ ದೇವಿ ಹೇಳಿದ್ದಾರೆ.

'ಎಸ್‌ಎಸ್‌ಎಲ್‌ಸಿ ಫಲಿತಾಂಶ ಬಂದ ಖುಷಿಯಲ್ಲಿ ಬಾಲಕಿಯಿದ್ದಳು. ಮಗು ಸಂತೋಷದಲ್ಲಿರುವಾಗಲೇ ವಿಕೃತ ಮನಸ್ಸಿನ ಓಂಕಾರಪ್ಪ ಅವಳನ್ನು ಎಳೆದೊಯ್ದು ನಿರ್ದಯವಾಗಿ ರುಂಡ ಕತ್ತರಿಸಿ ಮುಂಡವನ್ನು ಬೇರೆ ಮಾಡಿ ಅಕ್ಷರಶಃ ರಾಕ್ಷಸನಂತೆ ಅಟ್ಟಹಾಸಗೈದಿದ್ದಾನೆ. ಈ ಘಟನೆ ರಾಜ್ಯವನ್ನು ಬೆಚ್ಚಿ ಬೀಳಿಸಿದೆ. ಕರ್ನಾಟಕವೇ ತಲೆತಗ್ಗಿಸುವಂತೆ ಆಗಿದೆ. ಸಂಸದ ಪ್ರಜ್ವಲ್ ರೇವಣ್ಣನ ಪೆನ್‌ಡ್ರೈವ್ ಪ್ರಕರಣ ರಾಜಕೀಯ ಕೆಸರೆರಚಾಟಕ್ಕೆ ನಲುಗುತ್ತಿರುವಾಗಲೇ ಕೊಡಗಿನಲ್ಲಿ ಈ ರೀತಿಯ ಕೃತ್ಯ ನಡೆದಿದೆ. ರಾಜ್ಯದಲ್ಲಿ ಹಿಂಸೆ, ದೌರ್ಜನ್ಯಗಳು ಅನಿಯಂತ್ರಿತವಾಗಿ ನಡೆಯುತ್ತಿದ್ದು, ಸರ್ಕಾರ ಗಂಭೀರವಾಗಿ ಕ್ರಮ ಕೈಗೊಳ್ಳಬೇಕು. ಮಹಿಳೆಯರ ವಿರುದ್ಧ ನಡೆಯುತ್ತಿರುವ ಹಿಂಸೆ, ದೌರ್ಜನ್ಯಗಳನ್ನು ತಡೆಗಟ್ಟಲು ಉಗ್ರಪ್ಪ ಸಮಿತಿ ನೀಡಿದ ವರದಿಯನ್ನು ತಕ್ಷಣವೇ ಜಾರಿಗೆ ತರಬೇಕು' ಎಂದು ಅವರು ಆಗ್ರಹಿಸಿದ್ದಾರೆ.

ದರ್ಶನಕ್ಕೆ ಚಾಲನೆ ಚಾರ್ ಧಾಮ್ ಯಾತ್ರೆಯ ಅಂಗವಾಗಿ ರುದ್ರಪ್ರಯಾಗ ಜಿಲ್ಲೆಯ ಕೇದಾರನಾಥ ದೇವಾಲಯಕ್ಕೆ ಭಕ್ತರು ಶುಕ್ರವಾರ ಭೇಟಿ ನೀಡಿದರು –ಪಿಟಿಐ ಚಿತ್ರ

ಬ್ರಿಜ್‌ಭೂಷಣ್ ಸಿಂಗ್ ವಿರುದ್ಧ ದೋಷಾರೋಪ ನಿಗದಿಗೆ ಆದೇಶ

ನವದೆಹಲಿ (ಪಿಟಿಐ): ಆರು ಜನ ಮಹಿಳಾ ಕುಸ್ತಿಪಟುಗಳು ದಾಖಲಿಸಿರುವ ಪ್ರಕರಣ ದಲ್ಲಿ ಭಾರತೀಯ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಮಾಜಿ ಅಧ್ಯಕ್ಷ ಹಾಗೂ ಬಿಜೆಪಿ ಸಂಸದ ಬ್ರಿಜ್‌ಭೂಷಣ್ ಶರಣ್ ಸಿಂಗ್ ವಿರುದ್ಧ ಲೈಂಗಿಕ ಕಿರುಕುಳ ಹಾಗೂ ಇತರ ಆರೋಪಗಳನ್ನು ನಿಗದಿ ಮಾಡುವಂತೆ ದೆಹಲಿಯ ನ್ಯಾಯಾಲಯವೊಂದು ಶುಕ್ರವಾರ ಆದೇಶಿಸಿದೆ.

ಪ್ರಕರಣದ ವಿಚಾರಣೆ ನಡೆಸಿದ ಹೆಚ್ಚುವರಿ ಚೀಫ್ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಪ್ರಿಯಾಂಕಾ ರಜಪೂತ್, 'ಆರೋಪಿ ವಿರುದ್ಧ ದೋಷಾರೋಪ ನಿಗದಿ ಮಾಡುವುದಕ್ಕೆ ಸಂಬಂಧಿಸಿ ಸಾಕಷ್ಟು ಸಾಕ್ಷ್ಯಗಳಿಗೆ' ಎಂದು ಹೇಳಿದ್ದಾರೆ.

'ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧ ಐಪಿಸಿ ಸೆಕ್ಷನ್ 354, 354–ಎ ಹಾಗೂ 506ರ ಅಡಿ ಆರೋಪ ನಿಗದಿ ಮಾಡುವಂತೆ' ಆದೇಶಿಸಿದ್ದಾರೆ.

6 ಮಹಿಳೆಯರ ಪೈಕಿ ಒಬ್ಬ ಕುಸ್ತಿಪಟು ನೀಡಿದ್ದ ದೂರಿಗೆ ಸಂಬಂಧಿಸಿದಂತೆ. ಸಾಕ್ಷ್ಯಗಳ ಕೊರತೆಗಳ ಕಾರಣ ಸಿಂಗ್ ಅವರನ್ನು ಆರೋಪಮುಕ್ತಗೊಳಿಸಿದ್ದಾರೆ. ಮೇ 21 ರಂದು ಕೋರ್ಟ್ ಅಧಿಕೃತವಾಗಿ ದೋಷಾರೋಪ ನಿಗದಿ ಮಾಡಲಿದೆ.

ಈ ಪ್ರಕರಣದಲ್ಲಿ ಸಹ ಆರೋಪಿಯಾಗಿರುವ ಫೆಡರೇಷನ್‌ನ ಮಾಜಿ ಸಹಾಯಕ ಕಾರ್ಯದರ್ಶಿ ವಿನೋದ್ ತೋಮರ್ ವಿರುದ್ಧವೂ ದೋಷಾರೋಪ ನಿಗದಿ ಮಾಡುವಂತೆ ಹೆಚ್ಚುವರಿ ಚೀಫ್ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಪ್ರಿಯಾಂಕಾ ರಜಪೂತ್ ಆದೇಶಿಸಿದ್ದಾರೆ.

ಸಿಂಗ್ ವಿರುದ್ಧ ದೆಹಲಿ ಪೊಲೀಸರು ಐಪಿಸಿ ಸೆಕ್ಷನ್ 354, 354–ಎ, 354–ಡಿ ಹಾಗೂ 506 ರ ಅಡಿ ಕಳೆದ ಜೂನ್ 15ರಂದು ಆರೋಪಪಟ್ಟಿ ಸಲ್ಲಿಸಿದ್ದರು.

ಮೇ 20ಕ್ಕೆ ಆದೇಶ: ಬ್ರಿಜ್‌ಭೂಷಣ್ ಶರಣ್ ಸಿಂಗ್ ವಿರುದ್ಧ ಅಪ್ರಾಪ್ತ ವಯಸ್ಕ ಕುಸ್ತಿಪಟುವೊಬ್ಬರು ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದ ದೂರನ್ನು ದಾಖಲಿಸಿದ್ದರು. ಈ ದೂರನ್ನು ರದ್ದುಪಡಿಸುವಂತೆ ಕೋರಿ ಪೊಲೀಸರು ಸಲ್ಲಿಸಿದ್ದ ವರದಿಯನ್ನು ಅಂಗೀಕರಿಸಬೇಕೇ ಬೇಡವೇ ಎಂಬ ಕುರಿತು ದೆಹಲಿಯ ಮತ್ತೊಂದು ನ್ಯಾಯಾಲಯ ಮೇ 20ರಂದು ಆದೇಶ ಪ್ರಕಟಿಸಲಿದೆ.

ಬ್ರಿಜ್ ಭೂಷಣ್ ಸಿಂಗ್ ಅವರು ಉತ್ತರ ಪ್ರದೇಶದಲ್ಲಿ ಪ್ರಭಾವಿ ರಜಪೂತ್ ಮುಖಂಡರಾಗಿದ್ದಾರೆ. ಅವರ ವಿರುದ್ಧ ಕೇಳಿಬಂದಿರುವ ಲೈಂಗಿಕ ಕಿರುಕುಳದ ಆರೋಪಗಳ ಕಾರಣ ಅವರಿಗೆ ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್ ನಿರಾಕರಿಸಿದೆ. ಅವರು ಪ್ರತಿನಿಧಿಸುತ್ತಿರುವ ಕೈಸರ್‌ಗಂಜ್ ಕ್ಷೇತ್ರದಿಂದ ಅವರ ಪುತ್ರ ಕರಣ್ ಭೂಷಣ್ ಸಿಂಗ್ ಅವರನ್ನು ಕಣಕ್ಕಿಳಿಸಲಾಗಿದೆ.

ಇಸ್ರೊ ರಾಕೆಟ್‌ಗೆ 3ಡಿ ಮುದ್ರಣದ ಎಂಜಿನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಸ್ರೊ ಇದೇ ಮೊದಲ ಬಾರಿಗೆ 'ತ್ರಿ–ಡಿ' ಮುದ್ರಣದ ಮೂಲಕ ಮರುವಿನ್ಯಾಸಗೊಳಿಸಿ ತಯಾರಿಸಿರುವ ಪಿಎಸ್ 4 ಎಂಜಿನ್‌ನ ಸುದೀರ್ಘಾವಧಿಯ ಪರೀಕ್ಷೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ.

ಮರುವಿನ್ಯಾಸಗೊಂಡ ತ್ರಿ–ಡಿ ಮುದ್ರಣದ ಈ ಹೊಸ ಎಂಜಿನ್ ಬಿಡಿಭಾಗಗಳಿಂದ ಜೋಡಿಸಿದ ಎಂಜಿನ್ ಆಗಿರದೇ, ಇಡಿಯಾಗಿ ತಯಾರಿಸಲಾಗಿದೆ (ಸಿಂಗಲ್ ಪೀಸ್). ಇದರಿಂದ ಶೇ 97ರಷ್ಟು ಕಚ್ಚಾ ವಸ್ತುಗಳು ಉಳಿತಾಯವಾಗಿದ್ದು, ಶೇ 60ರಷ್ಟು ತಯಾರಿಕಾ ಸಮಯವೂ ಉಳಿತಾಯವಾಗುತ್ತದೆ ಎಂದು ಇಸ್ರೊ ಪ್ರಕಟಣೆಯಲ್ಲಿ ತಿಳಿಸಿದೆ.

ತ್ರಿ–ಡಿ ಮುದ್ರಿತ ಎಂಜಿನ್

ತ್ರಿ–ಡಿ ಮುದ್ರಿತ ಎಂಜಿನ್‌ನ ಪರೀಕ್ಷೆ

ಇದು ದ್ರವ ಇಂಧನದ ರಾಕೆಟ್‌ನ ಎಂಜಿನ್ ಆಗಿದ್ದು, ಇದರ ಉಷ್ಣತಾ ಪರೀಕ್ಷೆ ಯಶಸ್ವಿಯಾಗಿರುವುದು ಇಸ್ರೊ ರಾಕೆಟ್ ತಂತ್ರಜ್ಞಾನದಲ್ಲಿ ಮೈಲಿಗಲ್ಲಾಗಿದೆ. ತ್ರಿಡಿ ಮುದ್ರಿತ ಎಂಜಿನ್‌ನ ಪರೀಕ್ಷೆಯ ಅವಧಿ 665 ಸೆಕೆಂಡುಗಳಾಗಿದ್ದವು ಎಂದು ಇಸ್ರೊ ಹೇಳಿದೆ.

ಪಿಎಸ್‌ಎಲ್‌ವಿಯ ಮೇಲ್ಭಾಗದ ಹಂತದಲ್ಲಿ ಪಿಎಸ್4 ಅನ್ನು ಬಳಸಲಾಗುತ್ತದೆ. ಈವರೆಗೆ ಈ ಎಂಜಿನ್ ಅನ್ನು ಮೆಷಿನಿಂಗ್ ಮತ್ತು ವೆಲ್ಡಿಂಗ್ ವಿಧಾನದಲ್ಲಿ ತಯಾರಿಸಲಾಗುತ್ತಿತ್ತು. 7.33 ಕೆಎನ್ ಅಥವಾ ನಾಟ್ ನಿರ್ವಾತ ಸ್ಥಿತಿಯಲ್ಲಿ ಒತ್ತಡ ಹಾಕಲು ನಾಲ್ಕನೇ ಹಂತದಲ್ಲಿ ಪಿಎಸ್4 ಬಳಕೆ ಮಾಡಲಾಗುತ್ತದೆ.

ಅಲ್ಲದೆ, ಪಿಎಸ್‌ಎಲ್‌ವಿಯ ಮೊದಲ ಹಂತದಲ್ಲಿ ರಿಯಾಕ್ಷನ್ ಕಂಟ್ರೋಲ್ ಸಿಸ್ಟಮ್‌ನಲ್ಲೂ ಇದೇ ಎಂಜಿನ್ ಬಳಸಲಾಗುತ್ತದೆ ಎಂದು ಇಸ್ರೊ ತಿಳಿಸಿದೆ.

ಲೇಸರ್ ಪೌಡರ್ ಫ್ಯೂಷನ್ ಟೆಕ್ನಿಕ್ ಬಳಸಿ 14 ವಿವಿಧ ಭಾಗಗಳನ್ನು ಒಂದು ಇಡಿಯಾದ ಎಂಜಿನ್ ಆಗಿ ರೂಪಿಸಲಾಗಿದೆ (ಸಿಂಗಲ್ ಪೀಸ್). 19 ವೆಲ್ಡಿಂಗ್ ಜೋಡಣೆ ಮಾಡುವುದನ್ನು ತಪ್ಪಿಸಲಾಗಿದೆ. ಇದಕ್ಕೆ 13.7 ಕೆ.ಕೆ ಲೋಹದ ಪುಡಿಯನ್ನು ಬಳಸಲಾಗಿದೆ. ಸಾಂಪ್ರದಾಯಿಕ ವಿಧಾನದಲ್ಲಿ ಎಂಜಿನ್ ತಯಾರಿಕೆಗೆ 565 ಕೆ.ಜಿ.ಯಷ್ಟು ಲೋಹವನ್ನು ಫೋರ್ಜಿಂಗ್ ಮತ್ತು ಶೀಟ್‌ಗಳಿಗೆ ಬಳಸಲಾಗುತ್ತಿತ್ತು. ತ್ರಿ–ಡಿ ಎಂಜಿನ್ ಅನ್ನು ಇಂಡಿಯನ್ ಇಂಡಸ್ಟ್ರಿ (ಮೆಸರ್ಸ್ ವಿಪ್ರೊ 3ಡಿ) ತಯಾರಿಸಿದೆ. ತಮಿಳುನಾಡಿನ ಮಹೇಂದ್ರಗಿರಿಯಲ್ಲಿರುವ ಇಸ್ರೊ ಪ್ರೊಪಲ್ಷನ್ ಕಾಂಪ್ಲೆಕ್ಸ್‌ನಲ್ಲಿ ಎಂಜಿನ್ ಪರೀಕ್ಷೆ ನಡೆಸಲಾಗಿದೆ.

ಛತ್ತೀಸಗಢ: 12 ನಕ್ಸಲರ ಹತ್ಯೆ

ಬಿಜಾಪುರ (ಪಿಟಿಐ): ಛತ್ತೀಸಗಢದ ಬಿಜಾಪುರ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ಶುಕ್ರವಾರ ನಡೆಸಿದ ಎನ್‌ಕೌಂಟರ್‌ನಲ್ಲಿ 12 ನಕ್ಸಲರು ಹತರಾಗಿದ್ದಾರೆ ಎಂದು ಮುಖ್ಯಮಂತ್ರಿ ವಿಷ್ಣುದೇವ್ ಸಾಯ್ ತಿಳಿಸಿದರು.

ಗಂಗಲೂರು ಪೊಲೀಸ್ ಠಾಣಾ ವ್ಯಾಪ್ತಿಯ ಪಿಡಿಯಾ ಗ್ರಾಮದ ಬಳಿ ಅರಣ್ಯದಲ್ಲಿ ಭದ್ರತಾ ಸಿಬ್ಬಂದಿಯ ತಂಡ ನಕ್ಸಲ್ ವಿರೋಧಿ ಕಾರ್ಯಾಚರಣೆ ನಡೆಸುತ್ತಿದ್ದಾಗ ಗುಂಡಿನ ಚಕಮಕಿ ನಡೆದಿದೆ. 12 ನಕ್ಸಲರ ಶವಗಳನ್ನು ವಶಪಡಿಸಿಕೊಳ್ಳಲಾಗಿದ್ದು, ಭದ್ರತಾ ಪಡೆಗಳು ಪ್ರಮುಖ ಯಶಸ್ಸನ್ನು ಸಾಧಿಸಿವೆ ಎಂದು ಅವರು ಸುದ್ದಿಗಾರರಿಗೆ ಹೇಳಿದರು.

ಈ ಕಾರ್ಯಾಚರಣೆಗೆ ಸಂಬಂಧಿಸಿದಂತೆ ಭದ್ರತಾ ಪಡೆಗಳು ಮತ್ತು ಹಿರಿಯ ಅಧಿಕಾರಿಗಳನ್ನು ಮುಖ್ಯಮಂತ್ರಿ ಅಭಿನಂದಿಸಿದರು. ತಿಂಗಳಲ್ಲಿ ಛತ್ತೀಸಗಢದಲ್ಲಿ ನಕ್ಸಲರ ವಿರುದ್ಧ ಭದ್ರತಾ ಪಡೆಗಳಿಗೆ ದೊರೆತಿರುವ ಮೂರನೇ ದೊಡ್ಡ ಯಶಸ್ಸು ಇದಾಗಿದೆ.

ಏಪ್ರಿಲ್ 16ರಂದು ಕಂಕೇರ್ ಜಿಲ್ಲೆಯಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ 29 ನಕ್ಸಲರು ಹಾಗೂ ಏಪ್ರಿಲ್ 30ರಂದು ನಾರಾಯಣಪುರ ಮತ್ತು ಕಂಕೇರ್ ಜಿಲ್ಲೆಗಳ ಗಡಿಯಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ 10 ನಕ್ಸಲರನ್ನು ಕೊಲ್ಲಲಾಗಿತ್ತು.

ರಾಜ್ಯದ ಬಸ್ತಾರ್ ಪ್ರದೇಶದಲ್ಲಿ ಈ ವರ್ಷ ನಡೆದಿರುವ ಪ್ರತ್ಯೇಕ ಎನ್‌ಕೌಂಟರ್‌ಗಳಲ್ಲಿ ಇಲ್ಲಿಯವರೆಗೆ ಒಟ್ಟು 103 ನಕ್ಸಲರು ಹತರಾಗಿದ್ದಾರೆ.

ಜೆಎಸ್‌ಡಬ್ಲ್ಯು ಘಟಕದ ಸುರಂಗದ ನೀರಿನಲ್ಲಿ ಕೊಚ್ಚಿ ಹೋದ ಮೂವರು

ಬಳ್ಳಾರಿ: ತೋರಣಗಲ್‌ನಲ್ಲಿರುವ ಜೆಎಸ್‌ಡಬ್ಲ್ಯು ಸ್ಟೀಲ್ ಲಿಮಿಟೆಡ್‌ನಲ್ಲಿ ಗುರುವಾರ ಸಂಭವಿಸಿದ ದುರಂತದಲ್ಲಿ ಸಂಸ್ಥೆಯ ಮೂವರು ಸಿಬ್ಬಂದಿ ಸುರಂಗದ ರಭಸದ ನೀರಿನ ಹರಿವಿನಲ್ಲಿ ಕೊಚ್ಚಿ ಹೋಗಿ, ಸಾವಿಗೀಡಾಗಿದ್ದಾರೆ.

ಸಂಸ್ಥೆಯ ಸಿವಿಲ್ ಎಂಜಿನಿಯರಿಂಗ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ಹೊಸಪೇಟೆಯ ಗಂಟೆ ಜಡೆಪ್ಪ (31), ಚೆನ್ನೈನ ಶಿವಮಗದೇವ್ (22) ಮತ್ತು ಬೆಂಗಳೂರಿನ ಸುಶಾಂತ್ ಕೃಷ್ಣ ನೈನಾರು (23) ಮೃತರು.

'ವಿದ್ಯುತ್ ಪೂರೈಕೆಯಲ್ಲಿ ಉಂಟಾದ ಸಮಸ್ಯೆಯಿಂದ ಕಾರ್ಖಾನೆಯ ಎಚ್‌ಎಸ್‌ಎಂ-3 ಘಟಕದ ಸುರಂಗದಲ್ಲಿ ನೀರಿನ ಹರಿವು ಸ್ಥಗಿತಗೊಂಡಿತ್ತು. ಅದರ ಪರಿಶೀಲನೆಗೆ ಮೂವರೂ ಸಿಬ್ಬಂದಿ ಅದರೊಳಗೆ ಪ್ರವೇಶಿಸಿದ್ದರು. ಸುರಂಗದಲ್ಲಿ ನೀರು ಏಕಾಏಕಿ ಪ್ರವಹಿಸಿದ ಪರಿಣಾಮ ಮೂವರೂ ಕೊಚ್ಚಿ ಹೋಗಿ 70ರಿಂದ 80 ಅಡಿ ಆಳದ ಬೇರೆ ಬೇರೆ ನೀರಿನ ಟ್ಯಾಂಕ್‌ಗಳಲ್ಲಿ ಬಿದ್ದರು. ಗುರುವಾರ ರಾತ್ರಿ ಎರಡು ಶವಗಳು ಸಿಕ್ಕರೆ, ಇನ್ನೊಬ್ಬರ ಮೃತದೇಹ ಶುಕ್ರವಾರ ಬೆಳಿಗ್ಗೆ ಸಿಕ್ಕಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಕಬ್ಬಿಣದ ಬಿಸಿ ಸರಳುಗಳನ್ನು ತಣಿಸಲು ಈ ಸುರಂಗಗಳ ಮೂಲಕ ನಿರಂತರ ನೀರು ಹರಿಸಲಾಗುತ್ತದೆ. ಹೀಗೆ ಹರಿಸಿದ ನೀರು ವಿವಿಧ ಟ್ಯಾಂಕ್‌ಗಳಲ್ಲಿ ಮರಳಿ ಸಂಗ್ರಹವಾಗುತ್ತದೆ. ನೀರಿನ ಸುರಂಗಗಳಲ್ಲಿನ ಸಮಸ್ಯೆ ಸರಿಪಡಿಸಲು ಈ ಮೂವರು ಸಿಬ್ಬಂದಿ ತೆರಳಿದ್ದರು.

'ಮೃತದೇಹಗಳನ್ನು ವಿಮ್ಸ್ ಶವಾಗಾರದಲ್ಲಿ ಇರಿಸಲಾಗಿದೆ. ಕುಟುಂಬಸ್ಥರು ಬಂದ ಬಳಿಕ ಮುಂದಿನ ಕಾನೂನು ಪ್ರಕ್ರಿಯೆ ಆರಂಭಿಸಲಾಗುವುದು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು ತಿಳಿಸಿದ್ದಾರೆ.

'ಶಾಲೆಗಳಿಗೆ ಪಾಕ್‌ನಿಂದ ಇ–ಮೇಲ್'

ಅಹಮದಾಬಾದ್: ಇದೇ ತಿಂಗಳ 6ರಂದು ಅಹಮದಾಬಾದ್‌ನ 36 ಶಾಲೆಗಳಿಗೆ ಬಾಂಬ್ ಬೆದರಿಕೆ ಇ–ಮೇಲ್ ಕಳುಹಿಸಿದ್ದ ಆರೋಪಿಯ ಗುರುತು ಪತ್ತೆ ಹಚ್ಚಲಾಗಿದ್ದು, ಆತ ಪಾಕಿಸ್ತಾನದ ನಿವಾಸಿ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

'ಆರೋಪಿಯು ತೌಹೀದ್ ಲಿಯಾಕತ್ ಎಂಬ ನಕಲಿ ಹೆಸರಿಟ್ಟುಕೊಂಡು, 'mail.ru' ಎಂಬ ರಷ್ಯಾದ ಡೊಮೈನ್ ಮೂಲಕ ಇ–ಮೇಲ್ ಕಳುಹಿಸಿದ್ದಾನೆ. ಈತ ಹಮದ್ ಜಾವೇದ್ ಎಂಬ ಹೆಸರಿನಲ್ಲಿ ಪಾಕಿಸ್ತಾನದ ಫೈಸಲಾಬಾದ್‌ನಿಂದ ಕಾರ್ಯಾಚರಣೆ ನಡೆಸುತ್ತಿರುವುದು ತನಿಖೆಯ ವೇಳೆ ಪತ್ತೆಯಾಗಿದೆ. ಅಲ್ಲದೆ, ಈತ ವಿವಿಧ ಸಾಮಾಜಿಕ ಜಾಲತಾಣಗಳಲ್ಲಿ ನಾನಾ ಹೆಸರಿನ ಖಾತೆ ಹೊಂದಿದ್ದು, ಭಾರತ ವಿರೋಧಿ ಪೋಸ್ಟ್‌ಗಳನ್ನು ಹಂಚುತ್ತಿದ್ದ' ಎಂದು ಹೇಳಿದ್ದಾರೆ.

ಜೂನ್ 6ರವರೆಗೂ ನೀತಿಸಂಹಿತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಲ್ಲ ಲೋಕಸಭಾ ಕ್ಷೇತ್ರಗಳಲ್ಲಿ ಮತದಾನ ಮುಗಿದಿದ್ದರೂ, ಜೂನ್ 6ರವರೆಗೆ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರಲಿದೆ. ಹೀಗಾಗಿ ರಾಜ್ಯ ಸರ್ಕಾರವು ಪ್ರಮುಖ ನಿರ್ಧಾರ ಕೈಗೊಳ್ಳಲು ಮತ್ತು ಹೊಸ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲು ಒಂದು ತಿಂಗಳು ಕಾಯಲೇಬೇಕಿದೆ.

ಮಾರ್ಚ್ 16ರಿಂದ ದೇಶದಾದ್ಯಂತ ಚುನಾವಣಾ ನೀತಿ ಸಂಹಿತೆ ಜಾರಿಯಾಗಿತ್ತು. ಏಳು ಹಂತಗಳ ಮತದಾನದ ಬಳಿಕ ಜೂನ್ 4ರಂದು ಮತ ಎಣಿಕೆ ನಡೆಯಲಿದೆ. ಚುನಾವಣಾ ಪ್ರಕ್ರಿಯೆ ಪೂರ್ಣಗೊಂಡಿರುವ ಘೋಷಣೆಯನ್ನು ಜೂನ್ 6ರಂದು ಕೇಂದ್ರ ಚುನಾವಣಾ ಆಯೋಗ ಹೊರಡಿಸಲಿದೆ. ಅಲ್ಲಿಯವರೆಗೂ ನೀತಿಸಂಹಿತೆ ಜಾರಿಯಲ್ಲಿ ಇರಲಿದೆ.

ರಾಜ್ಯದಲ್ಲಿ ಏಪ್ರಿಲ್ 26 ಮತ್ತು ಮೇ 7ರಂದು ತಲಾ 14 ಲೋಕಸಭಾ ಕ್ಷೇತ್ರಗಳಲ್ಲಿ ಮತದಾನ ಪೂರ್ಣಗೊಂಡಿದೆ. ಮತ ಎಣಿಕೆಗೆ ಜೂನ್ 4ರವರೆಗೂ ಕಾಯಬೇಕಿದೆ. ಮತದಾನ ಮತ್ತು ಎಣಿಕೆ ಮಧ್ಯೆ ತಿಂಗಳ ಅಂತರವಿದ್ದು, ಈ ಅವಧಿಗೆ ಚುನಾವಣಾ ನೀತಿಸಂಹಿತೆ ಸಡಿಲಿಕೆ ಮಾಡಬಹುದು ಎಂಬ ನಿರೀಕ್ಷೆ ರಾಜ್ಯ ಸರ್ಕಾರದಲ್ಲಿ ಇತ್ತು.

ರಾಜ್ಯದಲ್ಲಿ 223 ತಾಲ್ಲೂಕುಗಳಲ್ಲಿ ತೀವ್ರವಾದ ಬರಗಾಲ ಇದೆ. ಮುಂಗಾರು ಮಳೆಗಾಲವೂ ಸಮೀಪಿಸುತ್ತಿದೆ. ಆಯೋಗವು ನೀತಿಸಂಹಿತೆ ಸಡಿಲಿಕೆ ಮಾಡಿದರೆ ಬರ ನಿರ್ವಹಣೆ, ವಿಪತ್ತು ನಿರ್ವಹಣೆಗೆ ಸಿದ್ಧತೆ ಜತೆಗೆ ಅಭಿವೃದ್ಧಿ ಕಾಮಗಾರಿ ಹಾಗೂ ನೀತಿ ನಿರೂಪಣೆಗೆ ಸಂಬಂಧಿಸಿದ ಪ್ರಮುಖ ವಿಷಯಗಳ ಕುರಿತು ಸಂಪುಟ ಸಭೆಯಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಲು ರಾಜ್ಯ ಸರ್ಕಾರ ಯೋಚಿಸಿತ್ತು ಎಂದು ಮೂಲಗಳು ತಿಳಿಸಿವೆ.

ಮೇಲುಸ್ತುವಾರಿ ಸಮಿತಿಗೇ ಅಧಿಕಾರ: 'ಚುನಾವಣಾ ನೀತಿಸಂಹಿತೆಯನ್ನು ಪೂರ್ಣ ಪ್ರಮಾಣದಲ್ಲಿ ಸಡಿಲಿಕೆ ಮಾಡುವಂತೆ ಯಾವುದೇ ಮನವಿ ಬಂದಿಲ್ಲ. ಅದಕ್ಕೆ ಅವಕಾಶವೂ ಇಲ್ಲ. ದೇಶದ ಇತರೆಡೆ ಇರುವಂತೆ ರಾಜ್ಯದಲ್ಲೂ ಜೂನ್ 6ರವರೆಗೆ ನೀತಿಸಂಹಿತೆ ಜಾರಿಯಲ್ಲಿ ಇರುತ್ತದೆ' ಎಂದು ರಾಜ್ಯದ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದರು.

'ತುರ್ತು ಅಗತ್ಯವಿರುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಸಂಬಂಧ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯ ಮೇಲುಸ್ತುವಾರಿ ಸಮಿತಿ ನಿಯಮಿತವಾಗಿ ಸಭೆ ನಡೆಸಿ, ಪರಿಶೀಲಿಸುತ್ತಿದೆ. ಸಮಿತಿ ಕಳುಹಿಸುವ ಪ್ರಸ್ತಾವಗಳನ್ನು ಕೇಂದ್ರ ಚುನಾವಣಾ ಆಯೋಗಕ್ಕೆ ರವಾನಿಸುತ್ತೇವೆ. ಆಯೋಗದ ಅನುಮತಿ ದೊರೆತ ಬಳಿಕ ಕಾಮಗಾರಿ ಕೈಗೆತ್ತಿಕೊಳ್ಳಲು ಅವಕಾಶವಿದೆ' ಎಂದರು.

ಭಾರತದಲ್ಲಿ 50.28 ಲಕ್ಷ, ಕರ್ನಾಟಕದಲ್ಲಿ 10 ಲಕ್ಷ ಲಂಬಾಣಿ ಭಾಷಿಕರು

ಕಲ್ಯಾಣ ಕರ್ನಾಟಕದಲ್ಲಿ ಲಂಬಾಣಿ ಭಾಷಾ ವೈವಿಧ್ಯ

● ಮನೋಜಕುಮಾರ್ ಗುದ್ದಿ

ಕಲಬುರಗಿ: ರಾಜ್ಯದಲ್ಲಿ ಅತಿ ಹೆಚ್ಚು ಬಳಕೆಯಲ್ಲಿರುವ ಏಳು ಭಾಷೆಗಳ ಪೈಕಿ ಲಂಬಾಣಿ ಭಾಷೆಯೂ ಒಂದಾಗಿದ್ದು, ಕಲ್ಯಾಣ ಕರ್ನಾಟಕದ ಐದು ಜಿಲ್ಲೆಗಳಲ್ಲಿ ಈ ಭಾಷಿಕರು ಹೆಚ್ಚಿನ ಸಂಖ್ಯೆಯಲ್ಲಿ ನೆಲೆಸಿದ್ದಾರೆ. ಈ ಕುರಿತು ಸಂಶೋಧನೆ ನಡೆಸಿರುವ ಜಿಲ್ಲೆಯ ಕಡಗಂಚಿಯಲ್ಲಿರುವ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಸಂಶೋಧಕರು ಹಲವು ಮಹತ್ವದ ಸಂಗತಿಗಳನ್ನು ಕಂಡುಕೊಂಡಿದ್ದಾರೆ.

ಲಮಾಣಿ, ಲಂಬಾಡಿ, ಬಂಜಾರಿ (ಬಂಜಾರ), ಸುಗಾಲಿ ಎಂಬ ವಿವಿಧ ಹೆಸರುಗಳಿಂದ ಕರೆಯಲಾಗುವ ಈ ಭಾಷೆಯನ್ನು ಮಾತನಾಡುವವರ ಪೈಕಿ ಶೇ 20ರಷ್ಟು ಭಾಷಿಕರು ಕರ್ನಾಟಕದಲ್ಲಿಯೇ ಇದ್ದಾರೆ. ಸ್ವಂತ ಲಿಪಿಯನ್ನು ಹೊಂದಿರದ ಈ ಭಾಷೆಗೆ ರಾಜ್ಯಭಾಷೆಯ ಸ್ಥಾನಮಾನ ಸಿಕ್ಕಿಲ್ಲ. ಹಿಂದಿ ಭಾಷೆಯೊಂದಿಗೇ ಇದನ್ನು ಸೇರಿಸಿಕೊಳ್ಳುತ್ತಿದ್ದು, ಪ್ರತ್ಯೇಕ ಭಾಷೆಯ ಸ್ಥಾನಮಾನ ಸಿಕ್ಕರೆ ಭಾಷೆಯ ಇನ್ನಷ್ಟು ಬೆಳವಣಿಗೆ ಸಾಧ್ಯವಾಗುತ್ತದೆ. ಹೀಗಾಗಿ ಭಾರತ ಸರ್ಕಾರ ಬಂಜಾರ ಭಾಷೆಗೆ ಮಾನ್ಯತೆ ನೀಡಬೇಕು ಎನ್ನುತ್ತಾರೆ ಬಂಜಾರ ಭಾಷೆಯ ಬಗ್ಗೆ ಸಂಶೋಧನೆ ನಡೆಸಿರುವ ಕೇಂದ್ರೀಯ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಪ್ರೊ. ಬಸವರಾಜ ಕೋಡಗುಂಟಿ.

ಬಂಜಾರ ಸಮುದಾಯದ ಮಹಿಳೆಯರ ನೃತ್ಯ –ಪ್ರಜಾವಾಣಿ ಸಂಗ್ರಹ ಚಿತ್ರ

ಲಂಬಾಣಿಯು ಹಿಂದಿ ಭಾಷೆಗಿಂತ ಭಿನ್ನವಾದ ಪದಕೋಶ, ಧ್ವನಿಕೋಶ, ವಾಕ್ಯ, ವ್ಯಾಕರಣವನ್ನು ಹೊಂದಿದೆ. ಇವುಗಳನ್ನು ಸಾಮಾಜಿಕವಾಗಿ ಬೆಸೆಯುವ ಯಾವುದೇ ಆಧಾರ ಇಲ್ಲ. ಹೀಗಾಗಿ ಸ್ವತಂತ್ರ ಭಾಷೆಯ ಸ್ಥಾನಕ್ಕೆ ಅರ್ಹತೆ ಹೊಂದಿದೆ
ಪ್ರೊ. ಬಸವರಾಜ ಕೋಡಗುಂಟಿ
ಪ್ರಾಧ್ಯಾಪಕ, ಕರ್ನಾಟಕ ಕೇಂದ್ರೀಯ ವಿ.ವಿ, ಕಲಬುರಗಿ

ಲಂಬಾಣಿ ಎಂಬುದು ರಾಜಸ್ಥಾನಿ ಭಾಷಾ ಗುಂಪಿಗೆ ಸೇರಿದ ಭಾಷೆಯಾಗಿದ್ದು, ಈ ಗುಂಪಿನಲ್ಲಿ ರಾಜಸ್ಥಾನಿ, ಮಾರ್ವಾರಿ, ಮೇವಾರಿ, ಮೇವಾತಿ ಮೊದಲಾದ ಇತರ ಹಲವು ಭಾಷೆಗಳಿವೆ. ಇವೆಲ್ಲವನ್ನೂ ಹಿಂದಿಯ ಉಪ ಭಾಷೆಯಾಗಿಯೇ ಪರಿಗಣಿಸಲಾಗುತ್ತಿದೆ. ನೂರಾರು ವರ್ಷಗಳ ಹಿಂದೆ ಲಂಬಾಣಿ ಸಮುದಾಯದವರು ರಾಜಸ್ಥಾನದಿಂದ ಹೊರಟು ಭಾರತದಾದ್ಯಂತ ವಿವಿಧ ಪ್ರದೇಶಗಳಲ್ಲಿ ನೆಲೆ ನಿಂತಿದ್ದಾರೆ.

ರಾಜ್ಯದಲ್ಲಿ ಲಂಬಾಣಿ ಸಮುದಾಯ

ಜಿಲ್ಲೆ	ಭಾಷಿಕರು
ಕಲಬುರಗಿ	1,81,847
ವಿಜಯಪುರ	1,12,870
ಯಾದಗಿರಿ	75,804
ಬಳ್ಳಾರಿ	75,638
ದಾವಣಗೆರೆ	72,001
ಬೀದರ್	61,375
ಶಿವಮೊಗ್ಗ	51,735
ಹಾವೇರಿ	45,422
ಚಿತ್ರದುರ್ಗ	38,016
ರಾಯಚೂರು	35,151
ಗದಗ	32,571
ತುಮಕೂರು	28,633
ಬಾಗಲಕೋಟೆ	27,991
ಕೊಪ್ಪಳ	23,436
ಚಿಕ್ಕಮಗಳೂರು	22,862
ಬೆಂಗಳೂರು	21,031
ಬೆಳಗಾವಿ	20,190

ಲಂಬಾಣಿಗಳು ಬಹಮನಿ ಸುಲ್ತಾನರ ಆಳ್ವಿಕೆಯ ಕಾಲದಲ್ಲಿ ಕರ್ನಾಟಕಕ್ಕೆ ಬಂದಿದ್ದಕ್ಕೆ ಆಧಾರಗಳಿವೆ.

ಭಾರತದ ಹಲವು ತಾಯ್ನುಡಿಗಳಲ್ಲಿ ಲಂಬಾಣಿ ಭಾಷೆಯೂ ಒಂದಾಗಿದೆ. ದೇಶದಾದ್ಯಂತ 50.28 ಲಕ್ಷ ಜನರು ಈ ಭಾಷೆಯನ್ನು ಮಾತನಾಡುತ್ತಾರೆ. ಲಂಬಾಣಿ ತಾಂಡಾಗಳಲ್ಲಿ ವಾಸಿಸುವ ಬಂಜಾರ ಸಮುದಾಯದವರು ತಮ್ಮ ಭಾಷೆ, ವೇಷಭೂಷಣ ಹಾಗೂ ಜನಪದ ಆಚರಣೆಗಳನ್ನು ಇನ್ನೂ ಪೋಷಿಸಿಕೊಂಡು ಬಂದಿದ್ದಾರೆ. ದಿನದಿನಕ್ಕೆ ಹಲವು ಭಾಷೆಗಳು ನಶಿಸಿ ಹೋಗುತ್ತಿದ್ದು, ಸೂಕ್ತ ಪ್ರೋತ್ಸಾಹ, ಭಾಷೆಯ ಕಲಿಕೆಗೆ ನೆಲೆಯನ್ನು ಒದಗಿಸದಿದ್ದರೆ ಪ್ರಮುಖ ಭಾಷೆಗಳೂ ಮುಂದಿನ ದಿನಗಳಲ್ಲಿ ತಮ್ಮ ಅಸ್ತಿತ್ವ ಕಳೆದುಕೊಳ್ಳಬಹುದು ಎಂಬ ಆತಂಕವೂ ಭಾಷಾ ತಜ್ಞರನ್ನು ಕಾಡುತ್ತಿದೆ.

'ಈ ಭಾಷೆಗೆ ಮಾನ್ಯತೆ ನೀಡುವುದರಿಂದ ಲಂಬಾಣಿ ಸಮುದಾಯದವರು ಯಾವುದೇ ಆತಂಕ ಇಲ್ಲದೇ ಮಾತನಾಡಬಹುದು. ಈ ಭಾಷೆಯಲ್ಲಿ ಸಿನಿಮಾಗಳು ತಯಾರಾಗಬಹುದು. ಭಾಷಾ ಅಭಿವೃದ್ಧಿ ಪ್ರಾಧಿಕಾರವನ್ನೂ ರಚಿಸಬಹುದು' ಎನ್ನುತ್ತಾರೆ ಪ್ರೊ. ಕೋಡಗುಂಟಿ.

ಶನಿವಾರ, ಮೇ 11, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 131 | ಪುಟ 26

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ

ಅಪ್ಪನೂ...
ಅಮ್ಮನೂ
ನೀನೇ...

ಆಳ–ಅಗಲ

ಹರಿಯಾಣ: ಬದಲಾಗುತ್ತಿದೆಯೇ ರಾಜಕೀಯ ಸಮೀಕರಣ...

ಲೋಕ ಟಿಕೆಟ್: ಜಿಗಿತ ವೀರರಿಗೆ ಶುಕ್ರದೆಸೆ 8

ಪ್ರಜ್ವಲ್ ವಿರುದ್ಧ 3ನೇ ಎಫ್‌ಐಆರ್ 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
72,664	22,055	₹74,850 (ಬೆಂಗಳೂರು)	₹86,400 (ಬೆಂಗಳೂರು)	83.51

ಮಣಿಶಂಕರ್ ಅಯ್ಯರ್ ಮಾತಿಗೆ ಬಿಜೆಪಿ ಕಿಡಿ 11

ಚಿನ್ನದ ಸಾಲ ನಿಯಮ ಪಾಲಿಸಿ 10

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಚುನಾವಣಾ ಪ್ರಚಾರಕ್ಕಾಗಿ ಮಧ್ಯಂತರ ಜಾಮೀನು ನೀಡಿದ ಸುಪ್ರೀಂ ಕೋರ್ಟ್

ಕೇಜ್ರಿವಾಲ್ ಬಿಡುಗಡೆ

ನವದೆಹಲಿ(ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಂಧಿತರಾಗಿರುವ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಸುಪ್ರೀಂ ಕೋರ್ಟ್ ಮಧ್ಯಂತರ ಜಾಮೀನು ಮಂಜೂರು ಮಾಡಿದ್ದು, ತಿಹಾರ್ ಜೈಲಿನಿಂದ ಅವರು ಶುಕ್ರವಾರ ಸಂಜೆ ಹೊರಬಂದರು.

ಲೋಕಸಭಾ ಚುನಾವಣೆ ನಡೆಯುತ್ತಿರುವ ಈ ಸಂದರ್ಭದಲ್ಲಿ, ಸುಪ್ರೀಂ ಕೋರ್ಟ್‌ನ ಆದೇಶದಿಂದ ಕೇಜ್ರಿವಾಲ್ ಮತ್ತು ಎಎಪಿ ಪಕ್ಷದ ಮುಖಂಡರು ನಿರಾಳರಾಗಿದ್ದಾರೆ.

ಮಧ್ಯಂತರ ಜಾಮೀನು ಕೋರಿ ಕೇಜ್ರಿವಾಲ್ ಸಲ್ಲಿಸಿದ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಹಾಗೂ ದೀಪಂಕರ್ ದತ್ತ ಅವರಿದ್ದ ನ್ಯಾಯಪೀಠ ನಡೆಸಿತು.

‘ಈ ಪ್ರಕರಣದಲ್ಲಿ ತಮ್ಮ ಪಾತ್ರದ ಕುರಿತು ಕೇಜ್ರಿವಾಲ್ ಯಾವುದೇ ಹೇಳಿಕೆ ನೀಡಬಾರದು. ಸಾಕ್ಷಿಗಳ ಜೊತೆ ಮಾತನಾಡಬಾರದು ಅಥವಾ ಪ್ರಕರಣಕ್ಕೆ ಸಂಬಂಧಿಸಿದ ಯಾವುದೇ ಕಡತವನ್ನು ಪಡೆದು, ಪರಿಶೀಲಿಸಬಾರದು’ ಎಂಬ ಷರತ್ತನ್ನೂ ಪೀಠ ವಿಧಿಸಿದೆ.

ಮಧ್ಯಂತರ ಜಾಮೀನು ನೀಡುವ ಮೂಲಕ ಕೇಜ್ರಿವಾಲ್ ಅವರನ್ನು ನ್ಯಾಯಾಂಗ ಬಂಧನದಿಂದ ಬಿಡುಗಡೆ ಮಾಡುವುದಕ್ಕೆ ಜಾರಿ ನಿರ್ದೇಶನಾಲಯ (ಇ.ಡಿ) ವಿರೋಧ ವ್ಯಕ್ತಪಡಿಸಿತು.

11ನೇ ಪುಟ ನೋಡಿ

ಪೀಠ ಹೇಳಿದ್ದೇನು?

- ಕೇಜ್ರಿವಾಲ್ ಅವರು ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಂಧಿತರಾಗಿ 50 ದಿನಗಳು ಕಳೆದ ನಂತರ ಮಧ್ಯಂತರ ಜಾಮೀನು ನೀಡಿರುವ ಸುಪ್ರೀಂ ಕೋರ್ಟ್, 21 ದಿನಗಳ ಕಾಲ ಚುನಾವಣಾ ಪ್ರಚಾರ ಕಾರ್ಯದಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಿದೆ
- ಜೂನ್ 1ರವರೆಗೆ ಕೇಜ್ರಿವಾಲ್ ಅವರಿಗೆ ಮಧ್ಯಂತರ ಜಾಮೀನು ನೀಡಲಾಗಿದೆ. ಕೊನೆ ಹಂತದ ಮತದಾನ ಬಳಿಕ, ಜೂನ್ 2ರಂದು ಅವರು ಶರಣಾಗಬೇಕು ಎಂದು ಸೂಚಿಸಿದೆ
- ₹ 50 ಸಾವಿರ ಮೊತ್ತದ ಬಾಂಡ್ ಹಾಗೂ ಜೈಲು ಸೂಪರಿಂಟೆಂಡೆಂಟ್ ಒಪ್ಪುವ ಮೊತ್ತದಷ್ಟು ಮತ್ತೊಂದು ಖಾತರಿ ಒದಗಿಸಬೇಕು ಎಂಬ ಷರತ್ತನ್ನೂ ಪೀಠ ವಿಧಿಸಿದೆ
- ಮುಖ್ಯಮಂತ್ರಿ ಕಚೇರಿ ಅಥವಾ ದೆಹಲಿ ಸಚಿವಾಲಯಕ್ಕೆ ಕೇಜ್ರಿವಾಲ್ ಭೇಟಿ ನೀಡಬಾರದು. ಲೆಫ್ಟಿನೆಂಟ್ ಗವರ್ನರ್ ಅವರ ಒಪ್ಪಿಗೆ ಪಡೆಯಬೇಕಾದ ಕಡತ ಹೊರತುಪಡಿಸಿ ಸರ್ಕಾರದ ಬೇರೆ ಯಾವ ಕಡತಕ್ಕೂ ರುಜು ಹಾಕಬಾರದು ಎಂದು ಪೀಠ ಸೂಚಿಸಿದೆ

ಜೈಲಿನಿಂದ ಹೊರಬಂದ ಬಳಿಕ ಅರವಿಂದ ಕೇಜ್ರಿವಾಲ್ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದರು – ಪಿಟಿಐ ಚಿತ್ರ

> ಭಗವಾನ್ ಹನುಮಾನ್‌ಗೆ ಧನ್ಯವಾದ. ದೇಶವನ್ನು ಸರ್ವಾಧಿಕಾರದಿಂದ ರಕ್ಷಿಸಬೇಕಿದೆ. ಈ ಹೋರಾಟದಲ್ಲಿ ಜನರು ಸಹಕಾರ ನೀಡಬೇಕು
>
> **ಅರವಿಂದ ಕೇಜ್ರಿವಾಲ್**
> ದೆಹಲಿ ಮುಖ್ಯಮಂತ್ರಿ (ಜೈಲಿನಿಂದ ಹೊರಬಂದ ಬಳಿಕ)

ದಾಭೋಲ್ಕರ್ ಹತ್ಯೆ ಅಪರಾಧಿಗಳಿಗೆ ಶಿಕ್ಷೆ

ಇಬ್ಬರಿಗೆ ಜೀವಾವಧಿ, ಸಾಕ್ಷ್ಯ ಸಾಲದೆ ಮೂವರ ಖುಲಾಸೆ

ಪುಣೆ(ಪಿಟಿಐ): ವಿಚಾರವಾದಿ ನರೇಂದ್ರ ದಾಭೋಲ್ಕರ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿ ಇಬ್ಬರಿಗೆ ಜೀವಾವಧಿ ಶಿಕ್ಷೆ ಹಾಗೂ ತಲಾ ₹5 ಲಕ್ಷ ದಂಡ ವಿಧಿಸಿರುವ ಇಲ್ಲಿನ ವಿಶೇಷ ಕೋರ್ಟ್, ಸಾಕ್ಷ್ಯಗಳ ಕೊರತೆ ಹಿನ್ನೆಲೆಯಲ್ಲಿ ಪ್ರಮುಖ ಸಂಚುಕೋರ ವೀರೇಂದ್ರ ಸಿಂಗ್ ತಾವ್ಡೆ ಸೇರಿದಂತೆ ಮೂವರನ್ನು ಆರೋಪಮುಕ್ತಗೊಳಿಸಿ ಶುಕ್ರವಾರ ಆದೇಶಿಸಿದೆ.

ಕಿಕ್ಕಿರಿದು ತುಂಬಿದ್ದ ನ್ಯಾಯಾಲಯದ ಸಭಾಂಗಣದಲ್ಲಿ ಆದೇಶ ಪ್ರಕಟಿಸಿದ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ (ವಿಶೇಷ ನ್ಯಾಯಾಲಯ) ಪಿ.ಪಿ.ಜಾಧವ, ‘ದಾಭೋಲ್ಕರ್ ಹತ್ಯೆಗೆ ಸಂಬಂಧಿಸಿದಂತೆ, ಶೂಟರ್‌ಗಳಾದ ಸಚಿನ್ ಅಂದುರೆ ಹಾಗೂ ಶರದ್ ಕಳಸ್ಕರ್ ವಿರುದ್ಧದ ಎಲ್ಲ ಆರೋಪಗಳನ್ನು ಪ್ರಾಸಿಕ್ಯೂಷನ್ ಸಾಬೀತುಪಡಿಸಿದೆ’ ಎಂದರು.

ಕಿವಿ–ಮೂಗು–ಗಂಟಲು ಶಸ್ತ್ರಚಿಕಿತ್ಸಕ ತಾವ್ಡೆ, ಸಂಜೀವ್ ಪುಣಾಳೇಕರ್ ಮತ್ತು ವಿಕ್ರಮ್ ಭಾವೆ ಆರೋಪದಿಂದ ಮುಕ್ತಗೊಂಡವರು.

ದಾಭೋಲ್ಕರ್ ಅವರ ಕೊಲೆಯಾಗಿ 11 ವರ್ಷಗಳ ನಂತರ ಹಂತಕರನ್ನು ಶಿಕ್ಷೆಗೆ ಗುರಿಪಡಿಸಿದಂತಾಗಿದೆ.

9ನೇ ಪುಟ ನೋಡಿ

ಮೌಢ್ಯ ವಿರೋಧಿಸಿದ್ದಕ್ಕೆ ಕೊಲೆ



ದಾಭೋಲ್ಕರ್

ಮೂಢನಂಬಿಕೆಗಳ ವಿರುದ್ಧ ದನಿ ಎತ್ತುತ್ತಿದ್ದ ವಿಚಾರವಾದಿ, ದಾಭೋಲ್ಕರ್ ಅವರನ್ನು 2013ರ ಆಗಸ್ಟ್ 20ರಂದು ಪುಣೆ ನಗರದ ಓಂಕಾರೇಶ್ವರ ಬ್ರಿಡ್ಜ್ ಮೇಲೆ ವಾಯುವಿಹಾರ ಮಾಡುತ್ತಿದ್ದ ವೇಳೆ ಹತ್ಯೆ ಮಾಡಲಾಗಿತ್ತು.

ಬೈಕ್‌ಗಳಲ್ಲಿ ಬಂದಿದ್ದ ಇಬ್ಬರು ಗುಂಡಿಕ್ಕಿ ಅವರನ್ನು ಹತ್ಯೆ ಮಾಡಿದ್ದರು. ‘ಮಹಾರಾಷ್ಟ್ರ ಅಂಧಶ್ರದ್ಧಾ ನಿರ್ಮೂಲನಾ ಸಮಿತಿ’ ಎಂಬ ಸಂಘಟನೆ ಸ್ಥಾಪಿಸಿದ್ದ ದಾಭೋಲ್ಕರ್ ಮೂಢನಂಬಿಕೆಗಳ ವಿರುದ್ಧ ದೊಡ್ಡ ಹೋರಾಟ ನಡೆಸುತ್ತಿದ್ದರು. ತಾವ್ಡೆ ಸೇರಿದಂತೆ ಈ ಪ್ರಕರಣದಲ್ಲಿ ಆರೋಪಿಗಳಾಗಿದ್ದ ಇತರರು ನಂಟು ಹೊಂದಿದ್ದ ‘ಸನಾತನ ಸಂಸ್ಥಾ’ ಎಂಬ ಸಂಘಟನೆ ದಾಭೋಲ್ಕರ್ ಅವರ ಕಾರ್ಯವನ್ನು ವಿರೋಧಿಸುತ್ತಿತ್ತು ಎಂದು ಪ್ರಾಸಿಕ್ಯೂಷನ್ ಹೇಳಿದೆ.

ಪ್ರಕರಣದ ತನಿಖೆ ಕೈಗೊಂಡಿದ್ದ ಸಿಬಿಐ, ತಲೆಮರೆಸಿಕೊಂಡಿದ್ದ ಸಾರಂಗ್ ಅಕೋಲಕರ್ ಹಾಗೂ ವಿನಯ್ ಪವಾರ್ ಅವರನ್ನು ಶೂಟರ್‌ಗಳು ಎಂಬುದಾಗಿ ಆರೋಪಪಟ್ಟಿಯಲ್ಲಿ ಉಲ್ಲೇಖಿಸಿತ್ತು. ಸಚಿನ್ ಅಂದುರೆ ಹಾಗೂ ಶರದ್ ಕಳಸ್ಕರ್ ಅವರನ್ನು ಬಂಧಿಸಿದ ನಂತರ, ಈ ಇಬ್ಬರು ದಾಭೋಲ್ಕರ್ ಅವರನ್ನು ಗುಂಡಿಕ್ಕಿ ಹತ್ಯೆ ಮಾಡಿದ್ದರು ಎಂಬುದಾಗಿ ಪೂರಕ ಆರೋಪಪಟ್ಟಿಯಲ್ಲಿ ಸಿಬಿಐ ಉಲ್ಲೇಖಿಸಿತ್ತು. ಬಳಿಕ, ವಕೀಲ ಸಂಜೀವ್ ಪುಣಾಳೇಕರ್ ಹಾಗೂ ವಿಕ್ರಮ್ ಭಾವೆ ಅವರನ್ನು ಬಂಧಿಸಿದ್ದ ಸಿಬಿಐ, ಇಬ್ಬರನ್ನು ಸಹಸಂಚುಕೋರರು ಎಂಬುದಾಗಿ ಆರೋಪಿಸಿತ್ತು.

ಮದ್ಯ ಮಾರಾಟ ನಿಷೇಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯ ಪೂರ್ವವಿಭಾಗದ ಜೆ.ಬಿ.ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ವೀರಭದ್ರಸ್ವಾಮಿಯ ಪಲ್ಲಕ್ಕಿ ಉತ್ಸವ ನಡೆಯಲಿದ್ದು, ಶಾಂತಿ ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಮೇ 11ರಂದು ಮದ್ಯ ಮಾರಾಟವನ್ನು ನಿಷೇಧಿಸಲಾಗಿದೆ.

ಉತ್ಸವದಲ್ಲಿ 30 ಪಲ್ಲಕ್ಕಿಗಳು ಪಾಲ್ಗೊಳ್ಳಲಿವೆ. ಉತ್ಸವಕ್ಕೆ ಸಾವಿರಾರು ಭಕ್ತರು ಸೇರಲಿದ್ದಾರೆ. ಈ ಸಮಯದಲ್ಲಿ ಮದ್ಯದ ಅಮಲಿನಲ್ಲಿ ಕಿಡಿಗೇಡಿಗಳು ದುಷ್ಕೃತ್ಯ ಎಸಗಿ ಸಮಾಜದಲ್ಲಿ ಶಾಂತಿ ಸುವ್ಯವಸ್ಥೆಗೆ ಭಂಗ ತರುವ ಸಾಧ್ಯತೆಯಿದೆ.

ಹೀಗಾಗಿ ಮೇ 11ರಂದು ಬೆಳಿಗ್ಗೆ 6ರಿಂದ ಮೇ 12ರ ಮಧ್ಯಾಹ್ನ 1 ಗಂಟೆ ವರೆಗೆ ಈ ಠಾಣಾ ವ್ಯಾಪ್ತಿಯ ಎಲ್ಲ ಮದ್ಯದ ಅಂಗಡಿ, ಬಾರ್ ಹಾಗೂ ರೆಸ್ಟೋರೆಂಟ್ (ಸ್ಟಾರ್ ಹೋಟೆಲ್ ಹಾಗೂ ಕ್ಲಬ್‌ಗಳನ್ನು ಹೊರತು ಪಡಿಸಿ) ಬಂದ್ ಮಾಡುವಂತೆ ಆದೇಶದಲ್ಲಿ ತಿಳಿಸಲಾಗಿದೆ.

ಇಂಡಿಯಾ ಪೋರ್ಟ್ಸ್ ಗ್ಲೋಬಲ್ ಲಿಮಿಟೆಡ್

ಸಿಐಎನ್: U61100MH2015GOI261274

ಬಹಿರಂಗ ಟೆಂಡರ್ ಪ್ರಕಟಣೆ–ಟೆಂಡರ್ ನಂ.: ಐಪಿಜಿಎಲ್/ಎಎಂಸಿ/ಎಂಎಚ್‌ಸಿ/ಎಸ್‌ಬಿಪಿ/2024–25/01

"ಶಹೀದ್ ಬೆಹೆಶ್ತಿ ಪೋರ್ಟ್ ಆಫ್ ಛಬಹಾರ್ ಫೆಸಿಲಿಟಿಯಲ್ಲಿನ 4 ಗ್ರಾಬ್‌ಗಳನ್ನು, 2 ಸ್ಪ್ರೆಡರ್‌ಗಳನ್ನು ಮತ್ತು ಎರಡು ಹುಕ್ಕಗಳನ್ನು ಹೊಂದಿರುವ ಇಟಾಲ್ಗ್ರೂ ಮೇಕ್ ಹಾರ್ಬರ್ ಕ್ರೇನ್‌ಗಳ (140 ಟಿ ಸಾಮರ್ಥ್ಯವುಳ್ಳ 2, 100ಟಿ ಸಾಮರ್ಥ್ಯವುಳ್ಳ 4), ಒಂದು ವರ್ಷದ ಅವಧಿಗೆ ಮತ್ತು ಇನ್ನೊಂದು ವರ್ಷ ಮುಂದುವರಿಸಬಹುದಾದ ಅವಧಿಯ ವಾರ್ಷಿಕ ಗುತ್ತಿಗೆಗಾಗಿ ಪ್ರಸ್ತಾವಣೆಗೆ ಮನವಿ ಆಹ್ವಾನಿಸಲಾಗಿದೆ. ಮೇಲ್ಕಂಡ ಟೆಂಡರ್‌ಗಾಗಿ ಹೊಸ ಬಿಡ್ ಆಹ್ವಾನಿಸಲಾಗಿದೆ. ದಿನಾಂಕ 01.05.2024ರ ಟೆಂಡರ್‌ಗಾಗಿ ಆಸಕ್ತಿಯುಳ್ಳ ಬಿಡ್‌ದಾರರಿಂದ ಪ್ರಸ್ತಾವಣೆಗಳ ಆಹ್ವಾನ ಪ್ರಕಟಣೆಯನ್ನು ಅಪ್‌ಲೋಡ್ ಮಾಡಲಾಗಿದೆ. ಪ್ರಸ್ತಾವಣೆಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ 10.06.2024 (15:00) ಆಗಿರುತ್ತದೆ. ವಿವರಗಳಿಗಾಗಿ ಲಾಗಾನ್ ಮಾಡಿರಿ https://www.ipgl.co.in, https://www.ipa.nic.in, https://www.sdclindia.com/

CBC 37220/12/0002/2425

ಬಿಬಿಎಂಪಿಯಿಂದ ವ್ಯಾಪಾರ ಪರವಾನಗಿ ಸಹ ಅಮಾನತು

ಮಂತ್ರಿ ಮಾಲ್‌ಗೆ ಮತ್ತೆ ಬೀಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರದ ಸಂಪಿಗೆ ರಸ್ತೆಯಲ್ಲಿರುವ ಮಂತ್ರಿ ಮಾಲ್ (ಮಂತ್ರಿ ಸ್ಕ್ವೇರ್) ಆಸ್ತಿ ತೆರಿಗೆ ಪಾವತಿಸದ ಕಾರಣ ಬಿಬಿಎಂಪಿ ಅಧಿಕಾರಿಗಳು ಈ ವರ್ಷದಲ್ಲಿ ಎರಡನೇ ಬಾರಿಗೆ ಬೀಗ ಹಾಕಿದ್ದಾರೆ. ವ್ಯಾಪಾರ ಪರವಾನಗಿಯನ್ನೂ ಅಮಾನತುಗೊಳಿಸಿದ್ದಾರೆ.

ಇದೇ ವರ್ಷ ಮಾರ್ಚ್ 16ರಂದು ಬೀಗ ಹಾಕಲಾಗಿತ್ತು. ಇದೀಗ ಮೇ 10ರಂದು ಬೀಗಹಾಕಿ, ಸೀಲ್ ಮಾಡಲಾಗಿದೆ. ಸುಮಾರು ₹30 ಕೋಟಿ ತೆರಿಗೆ ಬಾಕಿ ಉಳಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

2023ರ ಡಿಸೆಂಬರ್ 6ರಂದು ಬಿಬಿಎಂಪಿ ಹೊರಡಿಸಿರುವ ಸುತ್ತೋಲೆಯಂತೆ ವ್ಯಾಪಾರದ ಪರವಾನಗಿ ಅಮಾನತುಗೊಳಿಸಲಾಗಿದೆ ಮತ್ತು ಆಸ್ತಿ ತೆರಿಗೆ ಬಾಕಿ ಪಾವತಿಸದ ಕಾರಣಕ್ಕೆ ಆಸ್ತಿಯನ್ನು ಸೀಲ್ ಮಾಡಲಾಗಿದೆ ಎಂಬ ಫಲಕವನ್ನು ಮಂತ್ರಿ ಸ್ಕ್ವೇರ್‌ನ ಪ್ರಮುಖ ಪ್ರವೇಶ ದ್ವಾರ ಸೇರಿದಂತೆ ಹಲವೆಡೆ ಬಿಬಿಎಂಪಿ ಲಗತ್ತಿಸಿದೆ. ಮುಖ್ಯದ್ವಾರಕ್ಕೆ ಬೀಗ ಹಾಕಿ ಸೀಲ್ ಮಾಡಿದೆ.

'ಕಳೆದ ಬಾರಿ ಬೀಗ ಹಾಕಿದ್ದಾಗ ಮಂತ್ರಿ ಸ್ಕ್ವೇರ್‌ನವರು ನ್ಯಾಯಾಲಯದಿಂದ ಆದೇಶ ತಂದು ತೆರವು ಮಾಡಿಸಿಕೊಂಡಿದ್ದರು. ನಂತರ ಸುಮಾರು ₹5 ಕೋಟಿಯಷ್ಟು ಮಾತ್ರ ಆಸ್ತಿ ತೆರಿಗೆ ಪಾವತಿಸಿ, ಉಳಿದ ಪಾವತಿಗೆ ಕಾಲಾವಕಾಶ ಕೇಳಿದ್ದರು. ನಂತರ ಯಾವುದೇ ರೀತಿಯ ಪಾವತಿ ಮಾಡಿರಲಿಲ್ಲ. ಮೇನಲ್ಲಿ ಮತ್ತೊಂದು ನೋಟಿಸ್ ಜಾರಿ ಮಾಡಲಾಗಿತ್ತು. ಅವರಿಂದ ಉತ್ತರ ಬಂದಿಲ್ಲ. ಹೀಗಾಗಿ, ಶುಕ್ರವಾರ ಬೀಗ ಹಾಕಲಾಗಿದೆ. ಬಿಬಿಎಂಪಿಯ ಮಾರ್ಷಲ್‌ಗಳು ಸ್ಥಳದಲ್ಲಿದ್ದಾರೆ' ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದರು.

'ಮಂತ್ರಿ ಮಾಲ್ 2020–21ನೇ ಸಾಲಿನಿಂದ ಆಸ್ತಿ ತೆರಿಗೆ ಪಾವತಿಸಿಲ್ಲ. 2009–10ನೇ ಸಾಲಿನಿಂದ 2019–20ನೇ ಸಾಲಿನವರೆಗೆ ಸ್ವಯಂ ಘೋಷಣೆ ಆಸ್ತಿ ತೆರಿಗೆ ಪದ್ಧತಿಯಡಿ ಘೋಷಿಸಿಕೊಂಡಿರುವ ಮೊತ್ತವೂ ತಪ್ಪಾಗಿದೆ. ಬಾಕಿ ಮೊತ್ತ ₹27.75 ಕೋಟಿ ಹಾಗೂ ವ್ಯತ್ಯಾಸದ ಮೊತ್ತ ₹4.87 ಕೋಟಿ ಪಾವತಿಸಲು ನೋಟಿಸ್ ಜಾರಿ ಮಾಡಲಾಗಿದೆ. 2024ರ ಮೇ 3ರಂದು ಮಂತ್ರಿ ಮಾಲ್ ಮಾಲೀಕರು ₹1.5 ಕೋಟಿ ಮೊತ್ತದ ಡಿಡಿ ಪಾವತಿಸಿದ್ದಾರೆ. 2020ರಂತೆ ಬಡ್ಡಿ ಹಾಗೂ ದಂಡವನ್ನು ಪಾವತಿಸಬೇಕಿದ್ದು, ಫೆಬ್ರುವರಿಯಲ್ಲಿ ಅದನ್ನೂ ಮನ್ನಾ ಮಾಡಿ ಸರ್ಕಾರ ಆದೇಶಿಸಿದೆ. ಇಷ್ಟಾದರೂ ಬಾಕಿ ಪಾವತಿ ಮಾಡಿಲ್ಲ' ಎಂದು ಬಿಬಿಎಂಪಿ ಅಧಿಕಾರಿಗಳು ಮಾಹಿತಿ ನೀಡಿದರು.

ಮಲ್ಲೇಶ್ವರದ ಸಂಪಿಗೆ ರಸ್ತೆಯಲ್ಲಿರುವ ಮಂತ್ರಿ ಮಾಲ್‌ಗೆ (ಮಂತ್ರಿ ಸ್ಕ್ವೇರ್) ಬಿಬಿಎಂಪಿ ಅಧಿಕಾರಿಗಳು ಶುಕ್ರವಾರ ಬೀಗ ಹಾಕಿದ್ದಾರೆ

ರಕ್ತದ ಆಕರ ಕೋಶ: ಜರ್ಮನಿಯ ದಾನಿ ಭೇಟಿಯಾದ ಬಾಲಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಕ್ತ ಸಂಬಂಧಿ ಸಮಸ್ಯೆಯಾದ ಥಲಸ್ಸೇಮಿಯಾದಿಂದ ಬಳಲುತ್ತಿದ್ದ ಇಲ್ಲಿನ 17 ವರ್ಷದ ಬಾಲಕನಿಗೆ ಜರ್ಮನಿಯ 29 ವರ್ಷದ ಯುವಕ ರಕ್ತದ ಆಕರ ಕೋಶ ದಾನ ಮಾಡುವ ಮೂಲಕ ಚೇತರಿಕೆಗೆ ನೆರವಾಗಿದ್ದಾರೆ. ಡಿಕೆಎಂಎಸ್–ಬಿಎಂಎಸ್‌ಟಿ ಫೌಂಡೇಷನ್ ನೆರವಿನಿಂದ ಈ ಇಬ್ಬರೂ ಏಳು ವರ್ಷಗಳ ಬಳಿಕ ಭೇಟಿಯಾಗಿದ್ದಾರೆ.

ಬಾಲಕ ಚಿರಾಗ್‌ಗೆ ರಕ್ತದ ಆಕರ ಕೋಶ ಒದಗಿಸಲು ದಾನಿಗಾಗಿ ಕುಟುಂಬದ ಸದಸ್ಯರು ಹತ್ತು ವರ್ಷಗಳಿಂದ ಹುಡುಕಾಡಿದ್ದರು. ಡಿಕೆಎಂಎಸ್–ಬಿಎಂಎಸ್‌ಟಿ ಫೌಂಡೇಷನ್ ನೋಂದಣಿ ಆಧಾರದಲ್ಲಿ ಜರ್ಮನಿಯ ರೋಮನ್ ಸಿಮ್ನಿರ್ಝಿ ಎಂಬುವರನ್ನು ಸಂಪರ್ಕಿಸಿ, ರಕ್ತದ ಆಕರ ಕೋಶ (ಬ್ಲಡ್ ಸ್ಟೆಮ್ ಸೆಲ್) ಒದಗಿಸಿದೆ. ಇದರಿಂದಾಗಿ ಬಾಲಕನ ಆರೋಗ್ಯದಲ್ಲಿ ಚೇತರಿಕೆ ಕಂಡಿದೆ. ವಿಶ್ವ ಥಲಸ್ಸೇಮಿಯಾ ದಿನದ ಪ್ರಯುಕ್ತ ಫೌಂಡೇಷನ್ ದಾನಿಯ ಭೇಟಿಗೆ ಕಲ್ಪಿಸಿದ್ದ ವೇದಿಕೆಯಲ್ಲಿ ಬಾಲಕ ಅಭಿನಂದನೆ ಸಲ್ಲಿಸಿ, ಸಂತಸ ವ್ಯಕ್ತಪಡಿಸಿದ್ದಾನೆ.

'ರಕ್ತದ ಆಕರ ಕೋಶ ದಾನ ಮಾಡಿದ ವ್ಯಕ್ತಿಯನ್ನು ಭೇಟಿ ಮಾಡಿದ್ದು ಅದ್ಭುತ ಅನುಭವ. ಅವರು ನನಗೆ ಕೇವಲ ರಕ್ತದ ಆಕರ ಕೋಶ ದಾನ ಮಾಡದೆ, ನನಗೆ ಮರುಜೀವ ನೀಡಿದ್ದಾರೆ' ಎಂದು ಬಾಲಕ ಚಿರಾಗ್ ತಿಳಿಸಿದ್ದಾನೆ.

'ಅನಾರೋಗ್ಯದಿಂದ ಬಳಲುತ್ತಿದ್ದ ಬಾಲಕನಿಗೆ ನೆರವಾಗಿ, ಆತನ ಚೇತರಿಕೆಗೆ ಕಾರಣವಾಗಿದ್ದಕ್ಕೆ ತುಂಬಾ ಸಂತೋಷವಾಗಿದೆ. ಇದಕ್ಕಿಂತ ಖುಷಿಯ ಸಂಗತಿ ಬೇರೊಂದಿಲ್ಲ' ಎಂದು ದಾನಿ ರೋಮನ್ ಸಿಮ್ನಿರ್ಝಿ ಸಂತಸ ವ್ಯಕ್ತಪಡಿಸಿದ್ದಾರೆ.

ಬಾಲಕನಿಗೆ ಚಿಕಿತ್ಸೆ ನೀಡಿದ ಅಪೋಲೊ ಆಸ್ಪತ್ರೆಯ ಡಾ.ರೇವತಿ ರಾಜ್, 'ಥಲಸ್ಸೇಮಿಯಾ ಸಮಸ್ಯೆಗೆ ಒಳಗಾಗುವವರ ಸಂಖ್ಯೆ ಹೆಚ್ಚಳವಾಗುತ್ತಿದೆ. ದೇಶದಲ್ಲಿ ಪ್ರತಿ ವರ್ಷ ಹತ್ತು ಸಾವಿರಕ್ಕೂ ಹೆಚ್ಚು ಮಕ್ಕಳು ಜನಿಸುತ್ತಲೇ ಈ ಸಮಸ್ಯೆ ಹೊಂದುತ್ತಿದ್ದಾರೆ. ಈ ಸಮಸ್ಯೆ ಇರುವವರಿಗೆ ನಿಯಮಿತವಾಗಿ ರಕ್ತ ನೀಡಬೇಕಾಗುತ್ತದೆ. ರಕ್ತದ ಆಕರ ಕೋಶ ಕಸಿಯೇ ಇದಕ್ಕೆ ಪರಿಹಾರ. ಆದ್ದರಿಂದ ಜನರು ರಕ್ತದ ಆಕರ ಕೋಶ ದಾನಕ್ಕೆ ಮುಂದಾಗಬೇಕು' ಎಂದು ಹೇಳಿದ್ದಾರೆ.

ಫೌಂಡೇಷನ್‌ನ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿ ಪ್ಯಾಟ್ರಿಕ್ ಪಾಲ್, 'ರಕ್ತದ ಕ್ಯಾನ್ಸರ್ ಹಾಗೂ ರಕ್ತ ಸಂಬಂಧಿ ಕಾಯಿಲೆಯಿಂದ ಬಳಲುತ್ತಿರುವ ರೋಗಿಗಳನ್ನು ಕಾಪಾಡಲು ರಕ್ತದ ಆಕರ ಕೋಶ ಸಹಾಯಕ. ಆರೋಗ್ಯವಂತ ವ್ಯಕ್ತಿಗಳು ರಕ್ತದ ಆಕರಕೋಶ ದಾನ ಮಾಡುವ ಮೂಲಕ ರೋಗಿಗಳ ಚೇತರಿಕೆಗೆ ನೆರವಾಗಬೇಕು' ಎಂದು ತಿಳಿಸಿದ್ದಾರೆ.

ದಾನಿ ರೋಮನ್ ಸಿಮ್ನಿರ್ಝಿ ಭೇಟಿಯಾದ ಚಿರಾಗ್

ಹೆಚ್‌ಕ್ಯೂ ಮದ್ರಾಸ್ ಇಂಜಿನಿಯರ್ ಗ್ರೂಪ್ ಅಂಡ್ ಸೆಂಟರ್

ಬೆಂಗಳೂರು –560042

(ರಕ್ಷಣಾ ಸಚಿವಾಲಯ, ಭಾರತ ಸರ್ಕಾರ)

ರಕ್ಷಣಾ ನಾಗರಿಕ ಉದ್ಯೋಗಿಗಳ ಕೆಳಕಂಡ ಹುದ್ದೆಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ

ಕ್ರ. ಸಂ.	ಹುದ್ದೆ ಹೆಸರು	ಹುದ್ದೆ ಮೀಸಲಾತಿ	ಒಟ್ಟು ಖಾಲಿ ಹುದ್ದೆ
1.	ಸಿವಿಲಿಯನ್ ಟ್ರೇಡ್ ಇನ್‌ಸ್ಟ್ರಕ್ಟರ್ (ಸಿಟಿಐ):– ಒಇಎಂ (ಆಪರೇಟರ್ ಎಕ್ಸ್‌ಕ್ಯಾವೇಟರಿ ಮಷೀನ್)	ಎಸ್‌ಸಿ	01
2.	ಮಲ್ಟಿ ಟಾಸ್ಕಿಂಗ್ ಸ್ಟಾಫ್ (ಎಂಟಿಎ): ಗಾರ್ಡನರ್	ಎಸ್‌ಸಿ	01
3.	ಬಾರ್ಬರ್	ಎಸ್‌ಟಿ	01
	ಒಟ್ಟು		03

ಖಾಲಿಹುದ್ದೆಗಳು, ವೇತನ ಶ್ರೇಣಿ, ಅರ್ಹತಾ ಮಾನದಂಡ, ಶೈಕ್ಷಣಿಕ ವಿದ್ಯಾರ್ಹತೆ, ಸಾಮಾನ್ಯ ಷರತ್ತುಗಳು, ಅರ್ಜಿ ನಮೂನೆ ಹಾಗೂ ಪ್ರವೇಶ ಪತ್ರ ಕುರಿತಾದ ಹೆಚ್ಚಿನ ವಿವರಗಳಿಗಾಗಿ ನಮ್ಮ https://indianarmy.nic.in ವೆಬ್‌ಸೈಟ್‌ಗೆ ಭೇಟಿ ಕೊಡಿ.

CBC 10622/11/0006/2425

ಪೆಟ್ರೋಲಿಯಂ ಸಚಿವಾಲಯ ಅಧಿಕಾರಿ ವಿರುದ್ಧದ ಲಂಚ ಪ್ರಕರಣ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು:ಲಂಚದ ಆರೋಪದಡಿ ಕೇಂದ್ರ ಪೆಟ್ರೋಲಿಯಂ ಸಚಿವಾಲಯದ ಹಿರಿಯ ಅಧಿಕಾರಿ ಎಸ್.ಎಂ.ಮಣ್ಣನ್ ವಿರುದ್ಧ ಸಿಬಿಐ ದಾಖಲಿಸಿದ್ದ ಪ್ರಕರಣವನ್ನು ಹೈಕೋರ್ಟ್ ರದ್ದುಗೊಳಿಸಿದೆ.

ಈ ಸಂಬಂಧ ಮಣ್ಣನ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

'ಅರ್ಜಿದಾರರ ವಿರುದ್ಧದ ಆರೋಪ ಸಾಬೀತುಪಡಿಸಲು ಸಾಕ್ಷ್ಯಗಳಿಲ್ಲ' ಎಂಬ ಅಭಿಪ್ರಾಯದೊಂದಿಗೆ ಮಣ್ಣನ್ ಅವರನ್ನು ಖುಲಾಸೆಗೊಳಿಸಿದೆ.

ಪ್ರಕರಣವೇನು?: 'ರಾಮನಗರ ಜಿಲ್ಲೆಯಲ್ಲಿ ಎಲ್‌ಪಿಜಿ ದಾಸ್ತಾನು ಘಟಕದ ಲೈಸೆನ್ಸ್ ರದ್ದುಪಡಿಸುವ ಆದೇಶವನ್ನು ಜಾರಿಗೊಳಿಸಿ' ಎಂದು ಸಿಬಿಐನ ಡೆಪ್ಯುಟಿ ಸೂಪರಿಂಟೆಂಡೆಂಟ್ (ಭ್ರಷ್ಟಾಚಾರ ನಿಗ್ರಹ ದಳ) ಡಬ್ಲ್ಯು.ಜಿ. ಜಯಂತಿ ಅವರು ಮಣ್ಣನ್ ಅವರಿಗೆ ನಿರ್ದೇಶಿಸಿದ್ದರು. ಆದರೆ ಮಣ್ಣನ್, 'ಅಕ್ರಮವಾಗಿ ಲೈಸೆನ್ಸ್ ರದ್ದುಪಡಿಸುವಂತೆ ಕೋರಿರುವ ಕಾರಣ ನಿಮ್ಮ ನಿರ್ದೇಶನ ಪಾಲಿಸಲಾಗದು' ಎಂದು ಪ್ರತ್ಯುತ್ತರಿಸಿದ್ದರು.

ಈ ವಿಚಾರದಲ್ಲಿ, 'ಮಣ್ಣನ್ ₹50 ಸಾವಿರ ಲಂಚಕ್ಕೆ ಬೇಡಿಕೆ ಇರಿಸಿದ್ದಾರೆ' ಎಂದು ಆರೋಪಿಸಿ 2019ರ ಸೆಪ್ಟೆಂಬರ್ 22ರಂದು ಸಿಬಿಐ ಮಣ್ಣನ್ ವಿರುದ್ಧ ಪ್ರಕರಣ ದಾಖಲಿಸಿತ್ತು. ಇದನ್ನು ಪ್ರಶ್ನಿಸಿ ಮಣ್ಣನ್ ಹೈಕೋರ್ಟ್ ಮೆಟ್ಟಿಲೇರಿದ್ದರು.

ರಾಮನವಮಿ ಸಂಗೀತ

ಬೆಂಗಳೂರಿನ 'ಕೋಟೆ ಹೈಸ್ಕೂಲ್' ಆವರಣದಲ್ಲಿ ಶುಕ್ರವಾರ 'ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೆಷನ್ ಟ್ರಸ್ಟ್' ಆಯೋಜಿಸಿದ್ದ '86ನೇ ಶ್ರೀ ರಾಮನವಮಿ ಸಂಗೀತೋತ್ಸವ - 2024' ಕಾರ್ಯಕ್ರಮದಲ್ಲಿ ಸಂಗೀತಗಾರ ರಿಕ್ಕಿ ಕೇಜ್ ಕಾರ್ಯಕ್ರಮ ನಡೆಸಿಕೊಟ್ಟರು – ಪ್ರಜಾವಾಣಿ ಚಿತ್ರ

ಈಗ ಹೊಚ್ಚ ಹೊಸ ಸ್ಟಾಕ್ ಬಂದಿದೆ

ಬೆಂಗಳೂರಿನ ಇತಿಹಾಸದಲ್ಲಿ ನೀವು ಹಿಂದೆಂದೂ ಕಂಡು ಕೇಳರಿಯದ

ಭಾರಿ ಡಿಸ್ಕೌಂಟ್ ಸೇಲ್

ತ್ವರೆ ಮಾಡಿ ಈ ಸುವರ್ಣಾವಕಾಶ ಕಳೆದುಕೊಳ್ಳಬೇಡಿ

UP TO 90% ವರೆಗೆ ಆಫರ್

ಹೆಚ್ಚು ವ್ಯಯಿಸಿ.. ಹೆಚ್ಚು ಉಳಿಸಿ

ಬೆಂಗಳೂರಿನಲ್ಲಿ ಮೊದಲ ಬಾರಿಗೆ @ ವೈಟ್‌ಹೌಸ್ ಮತ್ತು ಎಂಎಲ್‌ಆರ್ ಕನ್ವೆನ್ಷನ್ ಸೆಂಟರ್ ವೈಟ್‌ಫೀಲ್ಡ್

PUMA benetton Levi's PARK AVENUE Raymond Colorplus adidas dhuni by avaasa DNMX HAUTECurry MODA RAPIDO FCUK FLYING MACHINE PARK AVENUE U.S. POLO ASSN. Pepe Jeans LONDON

ಪುಮಾ ಶೂಸ್
ಎಂಆರ್‌ಪಿ ರೂ. 2999 ರಿಂದ 9999
ಯಾವುದೇ ಖರೀದಿಸಿ@ ಫ್ಲ್ಯಾಟ್ ರೂ. RS. 999/-

ಮೆನ್ಸ್ ಬಾಕ್ಸರ್ ಷಾರ್ಟ್ಸ್, ವುಮನ್ಸ್ ವೆಸ್ಟರ್ನ್ ಟಾಪ್ಸ್, ಲೇಡೀಸ್ ಸ್ಯಾರೀ 6 ತಿಂಗಳಿಂದ 2 ವರ್ಷದ ಮಕ್ಕಳು — ಯಾವುದೇ ಐಟಂ ಖರೀದಿಸಿ @ ಕೇವಲ ರೂ. 99/-

ಮೆನ್ಸ್ ಟಿ–ಷರ್ಟ್ಸ್ — ಯಾವುದೇ ಖರೀದಿಸಿ @ ಕೇವಲ ರೂ. 149/-

ಕಿಡ್ಸ್ ಬಾಯ್ಸ್ ಮತ್ತು ಗರ್ಲ್ಸ್ — ಯಾವುದೇ ಐಟಂ ಖರೀದಿಸಿ @ ಕೇವಲ ರೂ. 99/-

ಮೆನ್ಸ್ ಬ್ರಾಂಡೆಡ್ ಟಿ–ಷರ್ಟ್ಸ್ — ಯಾವುದೇ ಖರೀದಿಸಿ @ ಕೇವಲ ರೂ. 249/-

ವುಮನ್ಸ್ ಕುರ್ತಿ, ಪ್ಲಾಜೊ, ಜೀನ್ಸ್, ಟ್ರ್ಯಾಕ್ ಪ್ಯಾಂಟ್, ಷಾರ್ಟ್ಸ್, ಲೆಗ್ಗಿನ್ಸ್, ಪಟಿಯಾಲಾ — ಯಾವುದೇ ಐಟಂ ಖರೀದಿಸಿ @ ಕೇವಲ ರೂ. 199/-

ವುಮನ್ಸ್ ಜಾಕೆಟ್ಸ್, ವುಡ್ಡೀಸ್, ಜಿಪ್ಪರ್, ಸ್ವೆಟ್ ಷರ್ಟ್ಸ್, ಸ್ವೆಟರ್ಸ್ — ಯಾವುದೇ ಐಟಂ ಖರೀದಿಸಿ @ ಕೇವಲ ರೂ. 299/-

ಮೆನ್ಸ್ ಜೀನ್ಸ್, ಪುಮಾ ಟ್ರ್ಯಾಕ್ ಪ್ಯಾಂಟ್, ಮೆನ್ಸ್ ಜಾಕೆಟ್ಸ್, ಜಿಪ್ಪರ್, ವುಡ್ಡೀಸ್, ಸ್ವೆಟ್ ಷರ್ಟ್ಸ್ — ಎಂಆರ್‌ಪಿ ರೂ. 1999–4999 ಯಾವುದೇ ಐಟಂ ಖರೀದಿಸಿ @ ಕೇವಲ ರೂ. 499/-

ನಂಬಲಸಾಧ್ಯ ಬೆಲೆಗಳು. ಬನ್ನಿರಿ ಕಣ್ಣಾರೆ ಕಾಣಿರಿ ಮತ್ತು ಇಷ್ಟವಾದರೆ ಮಾತ್ರ ಖರೀದಿಸಿರಿ.

ಸ್ಥಳ

ಕೊನೆಯ 2 ದಿನಗಳು ಮಾತ್ರ — 2 ದಿನಗಳು ಮಾತ್ರ — ಶನಿ 11, ಭಾನು 12 ಮೇ 2024
ವೈಟ್ ಹೌಸ್
ಪಿ1 & ಪಿ2, 14ನೇ ಮೇನ್ ರಸ್ತೆ, ಬಿಡಿಎ ಕಾಂಪ್ಲೆಕ್ಸ್ ಪಕ್ಕ, ಹೆಚ್‌ಎಸ್‌ಆರ್ ಲೇಔಟ್, 6ನೇ ಸೆಕ್ಟರ್, ಬೆಂಗಳೂರು-560102

ಇಂದಿನಿಂದ ಪ್ರಾರಂಭ — 6 ದಿನಗಳು ಮಾತ್ರ — ಶನಿ 11, ಭಾನು 12, ಸೋಮ 13, ಮಂಗಳ 14, ಬುಧ 15, ಗುರು 16 ಮೇ 2024
ಎಂಎಲ್‌ಆರ್ ಕನ್ವೆನ್ಷನ್ ಸೆಂಟರ್
ವೈಟ್‌ಫೀಲ್ಡ್
ಬ್ರಿಗೇಡ್ ಸ್ಕೂಲ್ ಪಕ್ಕ, ನಂ. 35, 4ನೇ ಕ್ರಾಸ್, ಗರುಡಚಾರ್‌ಪಾಳ್ಯ ಮೆಟ್ರೋ ಕ್ಯಾಶ್ & ಕ್ಯಾರಿ ಎದುರುಗಡೆ ರಸ್ತೆ, ಮಹದೇವಪುರ ಪೋಸ್ಟ್, ಬೆಂಗಳೂರು-560048

ಎಲ್ಲಾ ಪ್ರಮುಖ ಡೆಬಿಟ್/ಕ್ರೆಡಿಟ್ ಕಾರ್ಡ್ಸ್, ಆನ್‌ಲೈನ್ ಪೇಮೆಂಟ್ ಸ್ವೀಕರಿಸಲಾಗುತ್ತದೆ

ಸಮಯ: ಬೆಳಗ್ಗೆ 10 ರಿಂದ ರಾತ್ರಿ 10 ಗಂಟೆ | ಸಂಪರ್ಕಿಸಿ : 8747869888

ಉಚಿತ ಪ್ರವೇಶ ಮತ್ತು ಪಾರ್ಕಿಂಗ್

S.I. Advertisers, Lucknow.

ಅವಾಂತರ ತಪ್ಪಿಸಲು ತಂತ್ರಜ್ಞಾನ ಬಳಕೆ: 124 ಸ್ಥಳಗಳಲ್ಲಿ ಉಪಕರಣ ಅಳವಡಿಕೆ

ರಾಜಕಾಲುವೆಗಳಲ್ಲಿ ಸೆನ್ಸರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿಪ್ರವಾಹನಿಭಾಯಿಸಲು,ಅವಾಂತರಗಳನ್ನು ತಪ್ಪಿಸಲು ತಂತ್ರಜ್ಞಾನ ಬಳಸಿಕೊಳ್ಳಲಾಗಿದ್ದು, ರಾಜಕಾಲುವೆಗಳಲ್ಲಿ ಸೆನ್ಸರ್‌ಗಳನ್ನು ಅಳವಡಿಸಲಾಗಿದೆ.

124 ಸ್ಥಳಗಳಲ್ಲಿ ನೀರಿನ ಮಟ್ಟ ಅಳೆಯುವ ಸಂವೇದಕಗಳನ್ನು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ (ಕೆಎಸ್‌ಎನ್‌ಡಿ ಎಂಸಿ) ವತಿಯಿಂದ ಅಳವಡಿ ಸಲಾಗಿದೆ. ಪ್ರತಿಯೊಂದು ಸೆನ್ಸರ್ ಯಂತ್ರಕ್ಕೂ ಸೋಲಾರ್ ವಿದ್ಯುತ್ ಅಳವಡಿಸಲಾಗಿದೆ. ಈ ಸೆನ್ಸರ್‌ಗಳಿಂದ ನಿತ್ಯವೂ ಅಂತರ್ಜಾಲದ ಮೂಲಕ ಕೆಎಸ್‌ಎನ್‌ಡಿಎಂಸಿ ನಿಯಂತ್ರಣ ಕೊಠಡಿಗೆ ಮಾಹಿತಿ ಲಭ್ಯವಾಗಲಿದೆ. ನಂತರ ಪಾಲಿಕೆಯ ಇಂಟಿಗ್ರೇಟೆಡ್ ಕಮಾಂಡಿಂಗ್ ಕಂಟ್ರೋಲ್ ಸೆಂಟರ್‌ಗೆ (ಐಸಿಸಿಸಿ) ಈ ಮಾಹಿತಿ ರವಾನೆಯಾಗಲಿದೆ ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

ಸೆನ್ಸರ್ ಅಳವಡಿಸಿರುವ ಕಡೆ ರಾಜಕಾಲುವೆಯಲ್ಲಿ ಹರಿಯುವ ನೀರಿನ ಮಟ್ಟವನ್ನು ಹಸಿರು, ನೀಲಿ, ಕೆಂಪು ಹಾಗೂ ಕಪ್ಪು ಬಣ್ಣಗಳಲ್ಲಿ ಗುರುತಿಸಲಾಗುತ್ತದೆ. ಹಸಿರು ಹಾಗೂ ನೀಲಿ ಬಣ್ಣವಿದ್ದರೆ ಯಾವುದೇ ಅಪಾಯವಿರುವುದಿಲ್ಲ. ಕೆಂಪು ಬಣ್ಣವಿದ್ದರೆ ಅಪಾಯ ಹಾಗೂ ಕಪ್ಪು ಬಣ್ಣಕ್ಕೆ ತಿರುಗಿದರೆ ಪ್ರವಾಹ ಉಂಟಾಗಲಿದೆ ಎಂಬ ಮಾಹಿತಿ ತಿಳಿಯಲಿದೆ. ಆ ಮಾಹಿತಿಗೆ ಅನುಗುಣವಾಗಿ ಪ್ರವಾಹ ಉಂಟಾಗುವ ಸ್ಥಳದ ಸುತ್ತಮುತ್ತಲಿನ ನಿವಾಸಿಗಳನ್ನು ಬೇರೆಡೆ ತೆರಳುವಂತೆ ಸೂಚನೆ ನೀಡಬಹುದು. ಇದರಿಂದ ಪ್ರವಾಹದಿಂದಾಗುವ ಅನಾಹುತಗಳನ್ನು ತಪ್ಪಿಸಬಹುದು.

ಬಿಬಿಎಂಪಿಯು ಈಗಾಗಲೇ ಸಾಕಷ್ಟು ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡಿದ್ದು, ಮಳೆಗಾಲದಲ್ಲಿ ಸಂಭವಿಸುವ ಅವಾಂತರಗಳನ್ನು ತಪ್ಪಿಸಲು ಈಗಾಗಲೇ ಎಲ್ಲ ರೀತಿಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ.

ರಾಜಕಾಲುವೆ, ದ್ವಿತೀಯ ರಾಜ ಕಾಲುವೆ, ಚರಂಡಿಗಳಲ್ಲಿ ಹೂಳು ತೆಗೆಯುವ ಕಾರ್ಯವನ್ನು ನಿರಂತರವಾಗಿ ನಡೆಸಲಾಗುತ್ತಿದೆ. ಜೊತೆಗೆ ರಸ್ತೆ ಬದಿಯ ಚರಂಡಿಗಳ ಬಳಿ ಇರುವ ತ್ಯಾಜ್ಯವನ್ನು ತೆರವುಗೊಳಿಸಿ ರಸ್ತೆ ಮೇಲೆ ನೀರು ನಿಲ್ಲದೆ ಸರಾಗವಾಗಿ ಹರಿದು ಹೋಗುವ ವ್ಯವಸ್ಥೆ ಮಾಡಲಾಗಿದೆ.

ಮುಖ್ಯ ಹಾಗೂ ಉಪ ಮುಖ್ಯರಸ್ತೆಗಳ ಚರಂಡಿಗಳನ್ನು ಸ್ವಚ್ಛಗೊಳಿಸುವುದು ಮತ್ತು ರಸ್ತೆ ಮೇಲೆ ಶೇಖರಣೆಯಾಗಿರುವ ಅನುಪಯುಕ್ತ ಕಟ್ಟಡ ತ್ಯಾಜ್ಯ ತೆರವು ಕಾರ್ಯ ಸಕ್ರಿಯವಾಗಿ ನಡೆಯುತ್ತಿದೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

ನಗರದ ರಾಜಕಾಲುವೆಯಲ್ಲಿ ಸೆನ್ಸರ್ ಅಳವಡಿಸಲಾಗಿದೆ

ತಡೆಗೋಡೆ ನಿರ್ಮಾಣ ಪ್ರಗತಿಯಲ್ಲಿ!

ಬಿಬಿಎಂಪಿ ವ್ಯಾಪ್ತಿಯಲ್ಲಿ 860 ಕಿ.ಮೀ ಉದ್ದದ ರಾಜಕಾಲುವೆಯಿದ್ದು, ಈ ಪೈಕಿ 581 ಕಿ.ಮೀ ಉದ್ದ ರಾಜಕಾಲುವೆಯನ್ನು ಆರ್.ಸಿ.ಸಿ ತಡೆಗೋಡೆಯಿಂದ ನಿರ್ಮಾಣ ಮಾಡಲಾಗಿದೆ. 199 ಕಿ.ಮೀ ಉದ್ದ ರಾಜಕಾಲುವೆಯ ಆರ್.ಸಿ.ಸಿ ತಡೆಗೋಡೆ ಕಾಮಗಾರಿ ಪ್ರಗತಿಯಲ್ಲಿದೆ. ಇನ್ನುಳಿದ 80 ಕಿ.ಮೀ ರಾಜಕಾಲುವೆಯು ಕಚ್ಚಾ ಡ್ರೈನ್ ಒಳಗೊಂಡಿರುತ್ತದೆ.

ತಡೆಗೋಡೆ ನಿರ್ಮಿಸಿರುವ ರಾಜಕಾಲುವೆಯ ಭಾಗದಲ್ಲಿ ಹೂಳೆತ್ತುವ ಕಾರ್ಯ ನಡೆಯುತ್ತಿದೆ. ನಗರದಲ್ಲಿ 74 ಕಡೆ ಪ್ರವಾಹ ಪೀಡಿತ ಪ್ರದೇಶಗಳಿದ್ದು, ಆ ಸ್ಥಳಗಳಲ್ಲಿ ಶಾಶ್ವತ ಪರಿಹಾರಕ್ಕೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಮಳೆಗಾಲದಲ್ಲಿ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಯಾವುದೇ ರೀತಿಯ ಸಮಸ್ಯೆಯಾಗದಂತೆ ತಾತ್ಕಾಲಿಕ ವ್ಯವಸ್ಥೆ ಮಾಡಿಕೊಳ್ಳಲಾಗಿದೆ ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ

ಸದಸ್ಯತ್ವ ಅನರ್ಹತೆ ಕಾಮಗಾರಿ ಗುತ್ತಿಗೆ ಚಾಲ್ತಿ ಅಗತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ರಾಮ ಪಂಚಾಯಿತಿ ಸದಸ್ಯರು ಪಂಚಾಯಿತಿಗೆ ಸಂಬಂಧಿಸಿದಂತೆ ಪಡೆದಿರುವ ಕಾಮಗಾರಿ ಗುತ್ತಿಗೆ (ಒಪ್ಪಂದ) ಚಾಲ್ತಿಯಲ್ಲಿದ್ದರೆ ಮಾತ್ರವೇ ಅದು ಆತನ ಸದಸ್ಯತ್ವ ರದ್ದುಪಡಿಸಲು ಕಾರಣವಾಗುತ್ತದೆ' ಎಂದು ಹೈಕೋರ್ಟ್ ಪ್ರಕರಣವೊಂದರಲ್ಲಿ ಸ್ಪಷ್ಟಪಡಿಸಿದೆ.

'ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆ ತಾಲ್ಲೂಕಿನ ಬೀರುಹಳ್ಳಿ ಗ್ರಾಮ ಪಂಚಾಯಿತಿಯ ಗುತ್ತಿಗೆ ಕಾಮಗಾರಿ ಕೆಲಸ ನಿರ್ವಹಿಸಿರುವ ಹಿನ್ನೆಲೆಯಲ್ಲಿ ಸದಸ್ಯ ಬಿ.ಎನ್.ಕುಮಾರ್ ಅವರನ್ನು ಅನರ್ಹಗೊಳಿಸಬೇಕು' ಎಂದು ಕೋರಿ ಗ್ರಾಮದ ನಿವಾಸಿ ಬಿ.ಟಿ. ಕುಮಾರ್ ಅವರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್. ಸುನಿಲ್ ದತ್ ಯಾದವ್ ಅವರಿದ್ದ ಪೀಠ ವಜಾಗೊಳಿಸಿದೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ-1993ರ ಕಲಂ 12 (ಎಚ್)ರ ಪ್ರಕಾರ ಗ್ರಾ.ಪಂ ಸದಸ್ಯರನ್ನು; ಅವರು ಪಂಚಾಯಿತಿಗೆ ಸೇರಿದ ಕಾಮಗಾರಿಗಳನ್ನು ಗುತ್ತಿಗೆ ಪಡೆದು, ಆ ಗುತ್ತಿಗೆಯ ಒಪ್ಪಂದ ಚಾಲ್ತಿಯಲ್ಲಿದ್ದರೆ ಮಾತ್ರವೇ ಸದಸ್ಯತ್ವ ಅನರ್ಹಗೊಳಿಸಲು ಕಾರಣವಾಗುವುದು. ಅದು ಬಿಟ್ಟು ಹಿಂದಿನ ವರ್ಷದ ಕಾಮಗಾರಿಗಳು ಅಂದರೆ ಅವರು ಸದಸ್ಯರಾಗುವ ಮುನ್ನ ಕಾಮಗಾರಿ ಗಳನ್ನು ನಡೆಸಿ, ಅದನ್ನು ಪೂರ್ಣಗೊಳಿಸಿದ್ದರೆ, ಅದರ ಆಧಾರದ ಮೇಲೆ ಸದಸ್ಯತ್ವ ರದ್ದುಪಡಿಸಲು ಸಾಧ್ಯವಿಲ್ಲ' ಎಂದು ನ್ಯಾಯಪೀಠ ವಿವರಿಸಿದೆ.

ಪಾಟರಿ ಟೌನ್ ಬಳಿ ಮಳೆಗೆ ಕುಸಿದ ಬೋರ್ ಬ್ಯಾಂಕ್ ರಸ್ತೆಯ ದುರಸ್ತಿ ಕಾಮಗಾರಿ ನಡೆಯುತ್ತಿದೆ

ಬೋರ್ ಬ್ಯಾಂಕ್ ರಸ್ತೆ 3 ದಿನ ಬಂದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಳೆಗೆ ರಸ್ತೆ ಕುಸಿದ ಕಾರಣ ಮುಚ್ಚಲಾಗಿರುವ ಬೋರ್ ಬ್ಯಾಂಕ್ ರಸ್ತೆಯು ಮೂರು ದಿನಗಳಲ್ಲಿ ಸಂಚಾರಕ್ಕೆ ತೆರೆದುಕೊಳ್ಳಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಕಾಳೇನ ಅಗ್ರಹಾರ-ನಾಗವಾರವನ್ನು ಸಂಪರ್ಕಿಸುವ 'ನಮ್ಮ ಮೆಟ್ರೊ' ಗುಲಾಬಿ ಮಾರ್ಗದಲ್ಲಿ ಪಾಟರಿ ಟೌನ್ ಮೆಟ್ರೊ ನಿಲ್ದಾಣ ಕಾಮಗಾರಿಗಾಗಿ ನಿರ್ಮಿಸಿದ್ದ ತಾತ್ಕಾಲಿಕ ತಡೆಗೋಡೆ ಬುಧವಾರ ಮಳೆಗೆ ಕುಸಿದು ಬಿದ್ದಿತ್ತು. ಜೊತೆಗೆ ಬೋರ್ ಬ್ಯಾಂಕ್ ರಸ್ತೆಯ ಮಧ್ಯದಲ್ಲಿಯೇ ಕುಸಿದು 5 ಅಡಿಗಿಂತಲೂ ಆಳವಾದ ಗುಂಡಿ ಬಿದ್ದಿತ್ತು. ಬೋರ್ ಬ್ಯಾಂಕ್ ರಸ್ತೆ ಸಂಚಾರವನ್ನು ಮುಚ್ಚಿ, ವಾಹನ ಸಂಚಾರಕ್ಕೆ ಪರ್ಯಾಯ ಮಾರ್ಗ ಮಾಡಲಾಗಿತ್ತು.

'ಒಂದು ಕಡೆಯಿಂದ ಪಾಟರಿ ಟೌನ್ ಮೆಟ್ರೊ ನಿಲ್ದಾಣಕ್ಕಾಗಿ ಕಾಮಗಾರಿ ನಡೆಯುತ್ತಿತ್ತು. ಇನ್ನೊಂದು ಕಡೆ ನೀರು ಹರಿದು ಹೋಗಲು ಸರಿಯಾದ ಚರಂಡಿ ವ್ಯವಸ್ಥೆ ಇರಲಿಲ್ಲ. ಇದರಿಂದ ರಸ್ತೆಯಲ್ಲಿಯೇ ನೀರು ನಿಂತು ಮಣ್ಣು ಕುಸಿದಿದೆ' ಎಂದು ಸ್ಥಳೀಯರು ತಿಳಿಸಿದ್ದಾರೆ.

ಗುಂಡಿ ತುಂಬುವ ಕೆಲಸ ಆಗಿದೆ. ಇನ್ನೆರಡು ದಿನಗಳಲ್ಲಿ ರಸ್ತೆ ಸರಿಯಾಗಲಿದೆ. ಆನಂತರ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗುವುದು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಮಾಹಿತಿ ನೀಡಿದರು.

ರಥದ ಚಕ್ರಕ್ಕೆ ಸಿಲುಕಿ ವ್ಯಕ್ತಿ ಸಾವು

ಅಣ್ಣಿಗೇರಿ: ತಾಲ್ಲೂಕಿನ ಮಜ್ಜಿಗುಡ್ಡ ಗ್ರಾಮದಲ್ಲಿ ಶುಕ್ರವಾರ ಬಸವೇಶ್ವರ ದೇವಸ್ಥಾನದ ರಥೋತ್ಸವ ವೇಳೆ ರಥದ ಚಕ್ರಕ್ಕೆ ಸಿಲುಕಿ ಗ್ರಾಮಸ್ಥ ಮಹಮ್ಮದ್ ಸಾಬ್ ಮೊಕಾಶಿ (55) ಮೃತಪಟ್ಟಿದ್ದಾರೆ.

'ಭಕ್ತರು ಎಸೆದ ಉತ್ತತ್ತಿ ಆರಿಸಿಕೊಳ್ಳುವ ಸಂದರ್ಭದಲ್ಲಿ ಮಹಮ್ಮದ್ ಸಾಬ್, ರಥದ ಚಕ್ರಕ್ಕೆ ಸಿಲುಕಿ ಮೃತಪಟ್ಟಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

RITES LIMITED

RITES THE INFRASTRUCTURE PEOPLE

(A Govt. of India Enterprise) CIN No. : L74899DL1974GOI007227

Shikhar, Plot No.1, Sector-29, Gurgaon – 122001

Requires Individual Consultant-for the below mentioned post/discipline through Interviews at RITES Office

VC No.	Post	Positions	Venue & Date
YP/03/24	Individual Consultant-(Environmental/Social Science/ Sustainability Expert)	01	1. RITES Office, Bengaluru- Dates: 17.05.2024

For details regarding how to Apply, Position, remuneration, qualification, age, date & venue, selection process etc., candidates may see the detailed advertisement posted on RITES website **www.rites.com** under Career Section.

ಡಯಾಲಿಸಿಸ್ ಘಟಕಕ್ಕೆ ಡಾ.ಸಿ.ಎನ್.ಮಂಜುನಾಥ್ ಚಾಲನೆ ನೀಡಿದರು. ರೋಟರಿ ಜಿಲ್ಲಾ ಗವರ್ನರ್ ವಿ.ಶ್ರೀನಿವಾಸಮೂರ್ತಿ, ರವಿ ಕಿರ್ಲೋಸ್ಕರ್ ವ್ಯವಸ್ಥಾಪಕ ಟ್ರಸ್ಟಿ ರಂಗನಾಥ್, ರವಿಂದು ಟೊಯೊಟದ ಮುಖ್ಯಸ್ಥೆ ಮೀನಾ ಕಿರ್ಲೋಸ್ಕರ್, ಡಯಾಲಿಸಿಸ್ ಘಟಕದ ಅಧ್ಯಕ್ಷ ಜೈಶಂಕರ್ ಪಾಲ್ಗೊಂಡಿದ್ದರು.

'ಸಮಾಜ ಸೇವೆಯಲ್ಲಿ ಸ್ಪರ್ಧೆ ಉಂಟಾಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಮಾಜ ಸೇವೆ ಹೊರತುಪಡಿಸಿ ಎಲ್ಲ ವಲಯಗಳಲ್ಲಿಯೂ ಸ್ಪರ್ಧೆಯಿದೆ. ಈ ವಲಯದಲ್ಲಿಯೂ ಸ್ಪರ್ಧೆ ಉಂಟಾಗಬೇಕಾದರೆ ದಾನಿಗಳನ್ನು ಸಮಾಜದಲ್ಲಿ ಗುರುತಿಸುವ ಕೆಲಸವಾಗಬೇಕು' ಎಂದು ಹೃದ್ರೋಗ ತಜ್ಞ ಡಾ.ಸಿ.ಎನ್. ಮಂಜುನಾಥ್ ತಿಳಿಸಿದರು.

ರೋಟರಿ ಬೆಂಗಳೂರು ಉದ್ಯೋಗ್ ಸಹಯೋಗದಲ್ಲಿ ರವಿ ಕಿರ್ಲೋಸ್ಕರ್ ಸ್ಮಾರಕ ಆಸ್ಪತ್ರೆಯಲ್ಲಿ ಪ್ರಾರಂಭಿಸಲಾದ ಡಯಾಲಿಸಿಸ್ ಘಟಕಕ್ಕೆ ಶುಕ್ರವಾರ ಚಾಲನೆ ನೀಡಿ, ಮಾತನಾಡಿದರು.

'ದಾನಿಗಳ ನೆರವಿನಿಂದ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಬಡ ಕುಟುಂಬಗಳ ರೋಗಿಗಳಿಗೂ ಸಂಕೀರ್ಣ ಹೃದ್ರೋಗ ಶಸ್ತ್ರಚಿಕಿತ್ಸೆಗಳನ್ನು ನಡೆಸಲು ಸಾಧ್ಯವಾಯಿತು. ಶೇ 30ರಷ್ಟು ಆರೋಗ್ಯ ಸೌಲಭ್ಯ ಮಾತ್ರ ಸರ್ಕಾರಿ ವ್ಯವಸ್ಥೆಯಡಿ ಸಿಗುತ್ತಿದೆ. ಇನ್ನುಳಿದ ಶೇ 70 ರಷ್ಟು ಆರೋಗ್ಯ ಸೌಲಭ್ಯವನ್ನು ಖಾಸಗಿ ವಲಯ ಒದಗಿಸುತ್ತಿದೆ. ಆದ್ದರಿಂದ ಎಲ್ಲರಿಗೂ ಗುಣಮಟ್ಟದ ವೈದ್ಯಕೀಯ ಸೌಲಭ್ಯ ದೊರೆಯುವಂತಾಗಲು ದಾನಿಗಳ ನೆರವು ಅತ್ಯಗತ್ಯ' ಎಂದು ತಿಳಿಸಿದರು.

'ದತ್ತಿ ದಾನಿಗಳ ನೆರವಿನಿಂದ ನಡೆಯುತ್ತಿರುವ ಕೆಲ ಸಂಸ್ಥೆಗಳಲ್ಲಿ ಗುಣಮಟ್ಟದ ವೈದ್ಯಕೀಯ ಸೇವೆ ಸವಾಲಾಗಿದೆ. ಆದ್ದರಿಂದ ಗುಣಮಟ್ಟದ ವೈದ್ಯಕೀಯ ಸೇವೆಗೆ ಆದ್ಯತೆ ನೀಡಬೇಕು. ಕಟ್ಟಡಗಳು ಮತ್ತು ವೈದ್ಯಕೀಯ ಉಪಕರಣಗಳಿಂದ ಮಾತ್ರ ಗುಣಮಟ್ಟದ ಸೇವೆ ಸಾಧ್ಯವಿಲ್ಲ. ತಂತ್ರಜ್ಞರು ಸೇರಿ ಅಗತ್ಯ ಮಾನವ ಸಂಪನ್ಮೂಲವೂ ಮುಖ್ಯವಾಗುತ್ತದೆ' ಎಂದು ಹೇಳಿದರು.

ರೋಟರಿ ಬೆಂಗಳೂರು ಉದ್ಯೋಗ್‌ನ ಅಧ್ಯಕ್ಷ ಪಂಚನಾಥನ್ ಎಸ್., 'ಈ ಡಯಾಲಿಸಿಸ್ ಘಟಕವು ಪೀಣ್ಯ ಕೈಗಾರಿಕೆ ವಲಯ, ದಾಸರಹಳ್ಳಿ ಹಾಗೂ ಸುತ್ತಮುತ್ತಲಿನ ಬಡ ಮತ್ತು ಕೆಳ ಮಧ್ಯಮ ವರ್ಗದ ರೋಗಿಗಳಿಗೆ ರಿಯಾಯಿತಿ ದರದಲ್ಲಿ ಡಯಾಲಿಸಿಸ್ ಚಿಕಿತ್ಸೆ ಒದಗಿಸಲಿದೆ' ಎಂದು ತಿಳಿಸಿದರು.

ಘಟಕವು ಐದು ಡಯಾಲಿಸಿಸ್ ಯಂತ್ರ, ಒಂದು ಎಕ್ಸ್‌-ರೇ ಯಂತ್ರ ಮತ್ತು ವೆಂಟಿಲೇಟರ್ ಒಳಗೊಂಡಿದೆ.

ಗೃಹ ಪ್ರವೇಶದ ಊಟ ಮಾಡಿ 25ಕ್ಕೂ ಹೆಚ್ಚು ಮಂದಿ ಅಸ್ವಸ್ಥ

ರಾಮನಗರ: ತಾಲ್ಲೂಕಿನ ಕನ್ನಮಂಗಲ ದೊಡ್ಡಿ ಗ್ರಾಮದಲ್ಲಿ ಶುಕ್ರವಾರ ಗೃಹ ಪ್ರವೇಶ ಕಾರ್ಯಕ್ರಮದಲ್ಲಿ ಊಟ ಮಾಡಿದ 25ಕ್ಕೂ ಹೆಚ್ಚು ಮಂದಿ ಅಸ್ವಸ್ಥಗೊಂಡಿದ್ದಾರೆ.

ಮಧ್ಯಾಹ್ನ ಊಟ ಮಾಡಿದ ಕೆಲವರ ಆರೋಗ್ಯದಲ್ಲಿ ಏರುಪೇರಾಗಿದೆ. ಎಂಟು ಮಕ್ಕಳು ಸೇರಿದಂತೆ 25ಕ್ಕೂ ಹೆಚ್ಚು ಜನರಿಗೆ ಹೊಟ್ಟೆ ನೋವು, ವಾಂತಿ, ಭೇದಿಯಾಗಿದೆ. ಎಲ್ಲರನ್ನೂ ರಾಮನಗರ ಜಿಲ್ಲಾ ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ಕೊಡಲಾಗಿದೆ.

'ಬೇಸಿಗೆ ಕಾರಣ ಆಹಾರ ಸೇವಿಸಿದ ನಂತರ ವ್ಯತ್ಯಾಸವಾಗಿದೆ. ಹೊಟ್ಟೆ ನೋವು, ವಾಂತಿ ಭೇದಿ ಕಾಣಿಸಿಕೊಂಡ ಕಾರಣ ಆಸ್ಪತ್ರೆ ದಾಖಲಾಗಿದ್ದಾರೆ' ಎಂದು ಆರ್.ಎಂ.ಒ. ನಾರಾಯಣಸ್ವಾಮಿ ತಿಳಿಸಿದರು. ಎಲ್ಲರಿಗೂ ಚಿಕಿತ್ಸೆ ನೀಡಲಾಗಿದ್ದು, ಅಸ್ವಸ್ಥರಾಗಿರುವ ಮಕ್ಕಳಿಗೂ ಯಾವುದೇ ತೊಂದರೆ ಇಲ್ಲ' ಎಂದರು.

ರಾಜಾಜಿನಗರದಲ್ಲಿ ಇಂದು 'ಸಂಚಾರ ಸಂಪರ್ಕ ದಿನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಚಾರ ಪೊಲೀಸರಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ದೂರು ಆಲಿಸಲು ರಾಜಾಜಿನಗರ ಕೈಗಾರಿಕಾ ಪ್ರದೇಶದಲ್ಲಿರುವ ಜಲಾರಾಮ್ ಭವನದಲ್ಲಿ ಮೇ 11ರಂದು 'ಸಂಚಾರ ಸಂಪರ್ಕ ದಿನ' ಕಾರ್ಯಕ್ರಮ ಆಯೋಜಿಸಲಾಗಿದೆ.

ಬೆಳಿಗ್ಗೆ 11 ಗಂಟೆಗೆ ಕಾರ್ಯಕ್ರಮ ಆರಂಭವಾಗಲಿದೆ. ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ್, ಜಂಟಿ ಕಮಿಷನರ್ (ಸಂಚಾರ) ಎಂ.ಎನ್. ಅನುಚೇತ್, ಪಶ್ಚಿಮ ವಿಭಾಗದ ಡಿಸಿಪಿ (ಸಂಚಾರ) ಅನಿತಾ ಹದ್ದಣ್ಣನವರ ಭಾಗವಹಿಸಲಿದ್ದಾರೆ.

'ಸಂಚಾರ ದಟ್ಟಣೆ, ಸಂಚಾರ ನಿಯಮ ಉಲ್ಲಂಘನೆ, ಪೊಲೀಸರಿಂದ ತೊಂದರೆ, ಸಂಚಾರ ವ್ಯವಸ್ಥೆ ಸುಧಾರಣೆಗೆ ಸಲಹೆಗಳು ಹಾಗೂ ಇತರೆ ವಿಷಯಗಳ ಬಗ್ಗೆ ಜನರಿಂದ ಅಹವಾಲು ಸ್ವೀಕರಿಸಲು ಕಾರ್ಯಕ್ರಮ ಆಯೋಜಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ. ಕೆ.ಜಿ. ಹಳ್ಳಿ ಸಂಚಾರ ಠಾಣೆ, ಬನಶಂಕರಿ ಸಂಚಾರ ಠಾಣೆ ಹಾಗೂ ಜಾಲಹಳ್ಳಿ ಸಂಚಾರ ಠಾಣೆಯಲ್ಲಿಯೂ ಡಿಸಿಪಿ ನೇತೃತ್ವದಲ್ಲಿ ಸಂಚಾರ ಸಂಪರ್ಕ ದಿನ ಕಾರ್ಯಕ್ರಮ ನಡೆಯಲಿದೆ. ಆಯಾ ಠಾಣೆ ವ್ಯಾಪ್ತಿಯ ಜನರು ಕಾರ್ಯಕ್ರಮದಲ್ಲಿ ಭಾಗವಹಿಸಿ, ದೂರು ಸಲ್ಲಿಸಬಹುದು.

ಮತ್ತೆ ಸೋರಿದ ವಿಮಾನ ನಿಲ್ದಾಣದ ಟರ್ಮಿನಲ್‌–2 • ಮಳೆ ನೀರು ಸಂಗ್ರಹ • ಪರದಾಡಿದ ಪ್ರಯಾಣಿಕರು

ನಗರದಲ್ಲಿ ತಡರಾತ್ರಿ ಭಾರಿ ವರ್ಷಧಾರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಶುಕ್ರವಾರ ತಡರಾತ್ರಿ ಹಲವು ಪ್ರದೇಶಗಳಲ್ಲಿ ಗುಡುಗು, ಮಿಂಚಿನೊಂದಿಗೆ ಭಾರಿ ಮಳೆಯಾಯಿತು.

ಶುಕ್ರವಾರ ಸಂಜೆ ವೇಳೆಗೆ ಮೋಡ ಕವಿದಿದ್ದರೂ ಹೆಚ್ಚಿನ ಮಳೆ ಬಂದಿರಲಿಲ್ಲ. ಅಲ್ಲಲ್ಲಿ ಸಾಧಾರಣ ಮಳೆಯಾಗಿತ್ತು. ರಾತ್ರಿ ಸುಮಾರು 11.30ರ ವೇಳೆಗೆ ಭಾರಿ ಗುಡುಗು, ಮಿಂಚಿನೊಂದಿಗೆ ಆರಂಭವಾದ ಮಳೆ, ಬಿರುಗಾಳಿಯೊಂದಿಗೆ, ಸುಮಾರು ಒಂದು ಗಂಟೆಗೂ ಹೆಚ್ಚು ಹೊತ್ತು ಸುರಿಯಿತು.

ಯಲಹಂಕ, ಜಕ್ಕೂರು, ಯಶವಂತಪುರ, ಕೆಂಗೇರಿ, ಬಾಗಲಗುಂಟೆ, ಚೊಕ್ಕಸಂದ್ರ, ಕೊಡಿಗೇಹಳ್ಳಿ, ಹೊರಮಾವು, ವಿಜಯನಗರ, ರಾಜಾಜಿನಗರ, ಜಯನಗರ, ಬನಶಂಕರಿ, ಹೆಬ್ಬಾಳ, ಬಳ್ಳಾರಿ ರಸ್ತೆಗಳಲ್ಲೂ ವರ್ಷಧಾರೆಯಾಗಿದೆ.

ನಾಯಂಡಹಳ್ಳಿ, ರಾಜರಾಜೇಶ್ವರಿ ನಗರ, ಹೆಮ್ಮಿಗೆಪುರ, ಮಾರುತಿ ಮಂದಿರ, ವಿದ್ಯಾಪೀಠ, ಜಕ್ಕೂರು, ಉತ್ತರಹಳ್ಳಿ ಸುತ್ತಮುತ್ತ ಒಂದು ಗಂಟೆಯಲ್ಲಿ 5 ಸೆಂ.ಮೀ.ಗೂ ಹೆಚ್ಚಿನ ಮಳೆಯಾಗಿದೆ.

ರಾಜಕಾಲುವೆಗಳಲ್ಲಿ ಅತಿ ಹೆಚ್ಚು ನೀರು ಹರಿದು, ಕೆಲವು ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದೆ

ದೇವನಹಳ್ಳಿ ವರದಿ: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಸುತ್ತಮುತ್ತ ಗುರುವಾರ ತಡರಾತ್ರಿ ಧಾರಾಕಾರ ಮಳೆ ಸುರಿದಿದೆ. ವಿಮಾನ ನಿಲ್ದಾಣದ ಟರ್ಮಿನಲ್‌–2ರಲ್ಲಿ ಮಳೆ ನೀರು ಸಂಗ್ರಹವಾದ ಕಾರಣ ಪ್ರಯಾಣಿಕರು ಪರದಾಡಬೇಕಾಯಿತು.

ಟರ್ಮಿನಲ್ ಚಾವಣಿಯಿಂದ ಮಳೆ ನೀರು ಸೋರಿ ಪ್ರಯಾಣಿಕರು ಲಗೇಜ್ ಪಡೆಯುವ ಪ್ರದೇಶದಲ್ಲಿ ನೀರು ಸಂಗ್ರಹವಾಗಿತ್ತು. ಇದರಿಂದಾಗಿ ನಿಲ್ದಾಣದ ಸಿಬ್ಬಂದಿ ಸೇರಿದಂತೆ ಪ್ರಯಾಣಿಕರು ಕಿರಿಕಿರಿ ಅನುಭವಿಸಿದರು.

ರಾತ್ರಿ ಸುರಿದ ಭಾರಿ ಮಳೆಗೆ ರನ್ ವೇ ಸ್ಪಷ್ಟವಾಗಿ ಕಾಣದ ಕಾರಣ 18ಕ್ಕೂ ಹೆಚ್ಚು ವಿಮಾನಗಳ ಮಾರ್ಗ ಬದಲಾವಣೆ ಮಾಡಿ ಬೇರೆ ವಿಮಾನ ನಿಲ್ದಾಣಗಳಿಗೆ ಕಳಿಸಲಾಯಿತು.

ಸಾಮಾಜಿಕ ಜಾಲತಾಣ ‘ಎಕ್ಸ್’ನಲ್ಲಿ ಪ್ರಯಾಣಿಕರು ತಮಗಾದ ಕಹಿ ಅನುಭವ ಹಂಚಿಕೊಂಡಿದ್ದಾರೆ.

‘ವಿಮಾನ ನಿಲ್ದಾಣದ ಕಾರು ಪಾರ್ಕಿಂಗ್ ಸ್ಥಳ ಮಳೆ ನೀರಿನಿಂದ ತುಂಬಿ ಹೋಗಿದೆ. ಮಳೆ ನೀರು ಸರಾಗವಾಗಿ ಹರಿದು ಹೋಗಲು ಚರಂಡಿ ವ್ಯವಸ್ಥೆ ಸಮರ್ಪಕವಾಗಿಲ್ಲ. ಇದನ್ನು ವಿನ್ಯಾಸ ಮಾಡಿದ ಎಂಜಿನಿಯರ್, ನಿರ್ಮಿಸಿದ ಗುತ್ತಿಗೆದಾರರು ಯಾವ ರೀತಿ ಕೆಲಸ ಮಾಡಿದ್ದಾರೆ ಎನ್ನಲು ಇದು ಕೈಗನ್ನಡಿ’ ಎಂದು ವೇದಂ ಜಯಶಂಕರ್ ಕಿಡಿಕಾರಿದ್ದಾರೆ.

‘ಒಂದು ಮಳೆಗೆ ವಿಮಾನ ನಿಲ್ದಾಣದ ನೈಜ ಬಣ್ಣ ಬಯಲಾಗಿದೆ. ವಿಮಾನ ನಿಲ್ದಾಣಕ್ಕೆ ಸಂಪರ್ಕಿಸುವ ರಸ್ತೆಗಳು ನೀರಿನಿಂದ ಆವೃತ್ತವಾಗಿವೆ. ರಸ್ತೆ ದೀಪ ಬೆಳಗದ ಕಾರಣ ಕತ್ತಲಲ್ಲಿಯೇ ಮಳೆ ನೀರಿನಲ್ಲಿ ಸಂಚರಿಸುವ ದುಸ್ಥಿತಿಗೆ ತಲುಪಿದ್ದೇವೆ’ ಎಂದು ದೀಪ ದೇವಿಕಾ ಎಂಬುವರು ಪ್ರತಿಕ್ರಿಯಿಸಿದ್ದಾರೆ.

ಪ್ರಧಾನಿಗೆ ‘ಎಕ್ಸ್’ನಲ್ಲಿ ಈ ಘಟನೆಯನ್ನು ಟ್ಯಾಗ್ ಮಾಡಿರುವ ಡಿ.ರವಿಕುಮಾರ ಎಂಬುವರು, ‘ಪ್ರಾಮಾಣಿಕತೆ ಕಣ್ಮರೆಯಾಗಿದೆ. ಭ್ರಷ್ಟಾಚಾರ ತಾಂಡವಾಡುತ್ತಿದೆ. ಆಡಳಿತದ ವೈಫಲ್ಯ ಎದ್ದು ಕಾಣುತ್ತಿದೆ’ ಎಂದು ತರಾಟೆಗೆ ತೆಗೆದುಕೊಂಡಿದ್ದಾರೆ.

ಇದಕ್ಕೆ ವೇದಂ ಜಯಶಂಕರ್, ‘ಆಳುವ ವರ್ಗ ಪಾರದರ್ಶಕ ಮತ್ತು ದಕ್ಷ ಆಗಿದ್ದರೆ ವಿಮಾನ ನಿಲ್ದಾಣ ನಿರ್ಮಿಸಿದ ಎಂಜಿನಿಯರ್ ಹಾಗೂ ಗುತ್ತಿಗೆದಾರರ ವಿರುದ್ಧ ಏನು ಕ್ರಮ ಕೈಗೊಳ್ಳುತ್ತಾರೆ ನೋಡೋಣ’ ಎಂಬ ಪ್ರಶ್ನೆ ಎತ್ತಿದ್ದಾರೆ.

ಗೇಟ್ ಬಿದ್ದು ಬಾಲಕಿ ಸಾವು

ನೆಲಮಂಗಲ: ಗುರುವಾರ ರಾತ್ರಿ ಸುರಿದ ಬಿರುಗಾಳಿ ಸಹಿತ ಭಾರಿ ಮಳೆಗೆ ಮನೆಯ ಗೇಟ್ ಬಿದ್ದು ಬಾಲಕಿ ಯಲ್ಲಮ್ಮ(8) ಮೃತಪಟ್ಟಿದ್ದಾರೆ.

ರಾಯಚೂರು ದೇವದುರ್ಗದ ಮುಕ್ಕಣ್ಣ ಮತ್ತು ಬಾಲಮ್ಮ ದಂಪತಿ ಗಾರೆ ಕೆಲಸದ ನಿಮಿತ್ತ ಇಲ್ಲಿಗೆ ಬಂದಿದ್ದರು. ಪಟ್ಟಣದ ವಾಜರಹಳ್ಳಿ ರಾಮ್ಕಿ ಬಡಾವಣೆಯಲ್ಲಿ ವಕೀಲ ರವಿ ಎಂಬುವವರ ಮನೆಯಲ್ಲಿ ಸಂಜೆ ಬಾಲಮ್ಮ ಮನೆಗೆಲಸ ಮಾಡುವ ವೇಳೆಯಲ್ಲಿ, ಹೊರಗಡೆ ಆಡಿಕೊಂಡಿದ್ದ ಮಗಳು ಯಲ್ಲಮ್ಮಳ ಮೇಲೆ ಮನೆಯ ಗೇಟ್ ಬಿದ್ದು ಮೃತಳಾಗಿದ್ದಾಳೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚೆನ್ನೈನಲ್ಲಿ ಇಳಿದ 17 ವಿಮಾನಗಳು

ಬೆಂಗಳೂರಿನಲ್ಲಿ ಬಿರುಗಾಳಿ ಸಹಿತ ಭಾರಿ ಮಳೆಯಾದ ಕಾರಣ ವಿಮಾನಗಳು ಇಳಿಯಲು ಸಾಧ್ಯವಾಗಲಿಲ್ಲ. ಹಾಗಾಗಿ ಚೆನ್ನೈನ ವಿಮಾನ ನಿಲ್ದಾಣದಲ್ಲಿ ಇಳಿಸಲಾಯಿತು.

ಬೆಂಗಳೂರಿನಲ್ಲಿ ಇಳಿಯಬೇಕಾಗಿದ್ದ 13 ದೇಶಿಯ ವಿಮಾನ, ಮೂರು ಅಂತರರಾಷ್ಟ್ರೀಯ ವಿಮಾನ ಹಾಗೂ ಒಂದು ಅಂತರಾಷ್ಟ್ರೀಯ ಸರಕು ಸಾಗಣೆ ವಾಣಿಜ್ಯ ವಿಮಾನಗಳು ಚೆನ್ನೈನ ವಿಮಾನ ನಿಲ್ದಾಣದಲ್ಲಿ ಇಳಿದಿವೆ ಎಂದು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನದ ವಕ್ತಾರರು ಮಾಹಿತಿ ನೀಡಿದ್ದಾರೆ.

ಬೆಂಗಳೂರಿನ ಜೆಪಿ ನಗರದಲ್ಲಿ ಗುರುವಾರ ರಾತ್ರಿ ಸುರಿದ ಬಿರುಗಾಳಿ ಸಹಿತ ಮಳೆಗೆ ಮರದ ಕೊಂಬೆಗಳು ಮುರಿದು ಬಿದ್ದಿದ್ದರಿಂದ ಶುಕ್ರವಾರ ಪಾದಚಾರಿ ಮಾರ್ಗ ಮತ್ತು ರಸ್ತೆ ಭಾಗಶಃ ಮುಚ್ಚಿದ್ದವು ಪ್ರಜಾವಾಣಿ ಚಿತ್ರ: ಪುಷ್ಕರ್ ವಿ.

ಶಾಲಾ ಕಟ್ಟಡ ಕೆಡವಿದ ವ್ಯಕ್ತಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: ನೆಲಮಂಗಲ ತಾಲ್ಲೂಕಿನ ಸೋಂಪುರ ಹೋಬಳಿ ಗಂಗೇನಪುರ ಗ್ರಾಮದ ಸರ್ಕಾರಿ ಶಾಲೆಯ ಕಟ್ಟಡವನ್ನು ವ್ಯಕ್ತಿಯೊಬ್ಬ ಕೆಡವಿದ್ದು, ಈ ಸಂಬಂಧ ಭಾನುಪ್ರಕಾಶ್ ಎಂಬಾತನ ವಿರುದ್ಧ ದಾಬಸ್‌ಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಶಾಲಾ ಮುಖ್ಯ ಶಿಕ್ಷಕಿ ನಾಗರತ್ನ ಅವರು ದೂರು ನೀಡಿದ್ದಾರೆ.

ಹಿಂದೆ ಗ್ರಾಮದಲ್ಲಿ ಹಿರಿಯ ಪ್ರಾಥಮಿಕ ಶಾಲೆಯಿತ್ತು. ಮಕ್ಕಳು ಕಡಿಮೆಯಾದ ನಂತರ 1995-96ರಲ್ಲಿ ಶಾಲೆಯನ್ನು ಕಿರಿಯ ಪ್ರಾಥಮಿಕ ಶಾಲೆಗಷ್ಟೇ ಸೀಮಿತಗೊಳಿಸಲಾಯಿತು. ಪ್ರಸ್ತುತ ಶಾಲೆಯಲ್ಲಿ ಇಬ್ಬರು ಶಿಕ್ಷಕರಿದ್ದು, ಸುಮಾರು 20 ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ.

ಶಾಲೆಯ ಕಟ್ಟಡವನ್ನು ಭಾನುಪ್ರಕಾಶ್ ಜೆಸಿಬಿಯಿಂದ ನೆಲಸಮ ಮಾಡಿದ್ದಾರೆ. ಅಲ್ಲಿ ಕಲಿಯುತ್ತಿದ್ದ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

‘ಈ ಶಾಲೆಯಲ್ಲಿ ಓದಿದ ಅನೇಕರು ಅತ್ಯುನ್ನತ ಸ್ಥಾನದಲ್ಲಿದ್ದಾರೆ. ಯಾವುದೇ ಅನುಮತಿ ಅಥವಾ ದಾಖಲೆ ಇಲ್ಲದೆ ಅದನ್ನು ಕೆಡವಲು ಇವರಿಗೆ ಅನುಮತಿ ಕೊಟ್ಟವರು ಯಾರು’ ಎಂದು ಪಂಚಾಯಿತಿ ಸದಸ್ಯ ದಿನೇಶ ನಾಯಕ ಪ್ರಶ್ನಿಸಿದ್ದಾರೆ.

‘ಶಾಲೆಯ ಕಟ್ಟಡ ಶಿಕ್ಷಣ ಇಲಾಖೆಗೆ ಸೇರಿದ್ದು, 1995ರಿಂದ ಶಾಲೆಯ ಜಾಗ ನಮ್ಮದು ಎಂಬುದಕ್ಕೆ ನಮ್ಮ ಬಳಿ ದಾಖಲಾತಿ ಇದೆ. ಆದರೂ ಖಾಸಗಿ ವ್ಯಕ್ತಿ ಶಾಲೆಯನ್ನು ಕೆಡವಿದ್ದಾರೆ. ಈ ಕುರಿತು ಪೊಲೀಸ್ ಇಲಾಖೆಗೆ ದೂರು ನೀಡಲಾಗಿದೆ’ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಎಚ್.ತಿಮ್ಮಯ್ಯ ತಿಳಿಸಿದ್ದಾರೆ.

ದಾಬಸ್‌ಪೇಟೆ ಠಾಣೆಯ ಪೊಲೀಸ್ ಸಿಬ್ಬಂದಿ ಮತ್ತು ಕಂದಾಯ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿದ್ದಾರೆ.

ಗಂಗೇನಪುರ ಸರ್ಕಾರಿ ಶಾಲೆಯ ಕಟ್ಟಡವನ್ನು ಕೆಡವಿ ಹಾಕಲಾಗಿದೆ

‘ಎನ್‌ಇಪಿ ರದ್ದತಿಯಿಂದ ಶಿಕ್ಷಣಕ್ಕೆ ಆಪತ್ತು’

ಮಂಗಳೂರು: ‘4 ವರ್ಷಗಳ ಪದವಿ ಸ್ಥಗಿತಗೊಳಿಸಿ, 3 ವರ್ಷಗಳ ಪದವಿ ಕೋರ್ಸ್‌ಗೆ ಸುತ್ತೋಲೆ ಹೊರಡಿಸಿರುವ ರಾಜ್ಯ ಸರ್ಕಾರದ ಕ್ರಮ ವಿದ್ಯಾರ್ಥಿಗಳಿಗೆ ಅಷ್ಟೇ ಅಲ್ಲ, ವಿಶ್ವವಿದ್ಯಾಲಯಗಳಿಗೂ ಆಪತ್ತು ತರಲಿದೆ’ ಎಂದು ಅರುಣ ಶಹಾಪುರ ಎಚ್ಚರಿಸಿದರು.

ಉದಕಮಂಡಲ ರೇಸ್

ಸಮುರಾಯ್ ಬ್ಲೂ ಗೆಲ್ಲುವ ನಿರೀಕ್ಷೆ

ಬೆಂಗಳೂರು ಟರ್ಫ್ ಕ್ಲಬ್ ಲಿಮಿಟೆಡ್ ಟ್ರೋಫಿ ಶನಿವಾರದ ಉದಕಮಂಡಲ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ಸಮುರಾಯ್‌ಬ್ಲೂ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಬೆಳಿಗ್ಗೆ 11:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ.

1ನೇ ರೇಸ್: ಅನ್ನಲಿಸ 1, ಮೆಮೋರಿ ಲೇನ್ 5, ಸ್ಟಿಲ್‌ವಾಟರ್ 9
2ನೇ ರೇಸ್: ಕ್ರಿಸ್ಪಿ 7, ಅನ್ನೆಟೆಡ್ 2, ಡ್ರಾಮಟಿಕ್ 5
3ನೇ ರೇಸ್: ನಾಟಿ ಇನ್ ಬ್ಲೂ 2, ದೆಸ್ಪಾಸಿಟೊ 9, ಕಾನ್ಸಿಯಸ್ ಕೀಪರ್ 8
4ನೇ ರೇಸ್: ಸಮುರಾಯ್ ಬ್ಲೂ 8, ಕ್ವೀನ್ ಅನುಲಾ 7, ಬರ್ಥ 5
5ನೇ ರೇಸ್: ಅಂಗವಾಯ್ 1, ಲೇಡಿ ಲಕ್ 3, ಎಂಪರರ್ ಅಶೋಕ 2
6ನೇ ರೇಸ್: ಸಲೊಮಿ 1, ಗೋಲ್ಡ್ ಫೇಮ್ 7, ವೇ ಟು ಗೋ 4
7ನೇ ರೇಸ್: ಗ್ರೇ ಬ್ಯೂಟಿ 5, ಶೀರ್ ಎಲಿಗೆನ್ಸ್ 1, ಸಮ್ಮರ್ ಸಾಂಗ್ 4

ಉತ್ತಮ ಬೆಟ್: ಕ್ರಿಸ್ಪಿ

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ದೂರು ಹಿಂಪಡೆಯಲು ಸಂತ್ರಸ್ತೆಯರಿಗೆ ಆಗ್ರಹ

ನವದೆಹಲಿ(ಪಿಟಿಐ): ಲೋಕಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಪಶ್ಚಿಮ ಬಂಗಾಳದ ಸಂದೇಶ್‌ಖಾಲಿಯಲ್ಲಿನ ಮಹಿಳೆಯರು ತಾವು ನೀಡಿದ ದೂರುಗಳನ್ನು ಹಿಂಪಡೆಯುವಂತೆ ಟಿಎಂಸಿ ಕಾರ್ಯಕರ್ತರು ಬಲವಂತ ಮಾಡಿದ್ದಾರೆ ಎಂದು ರಾಷ್ಟ್ರೀಯ ಮಹಿಳಾ ಆಯೋಗ ಆರೋಪಿಸಿದೆ. ಅಲ್ಲದೆ ಈ ಕುರಿತು ಚುನಾವಣಾ ಆಯೋಗ ತನಿಖೆ ನಡೆಸಬೇಕು ಎಂದು ಅದು ಮನವಿ ಮಾಡಿದೆ.

ಸ್ಥಳೀಯ ಬಿಜೆಪಿ ಮುಖಂಡರೊಬ್ಬರು, ಖಾಲಿ ಕಾಗದಗಳಿಗೆ ಸಂದೇಶ್‌ಖಾಲಿ ಮಹಿಳೆಯರಿಂದ ಸಹಿ ಮಾಡಿಸಿಕೊಂಡು, ಆ ಬಳಿಕ ಲೈಂಗಿಕ ದೌರ್ಜನ್ಯ ಎಸಗಿರುವ ದೂರು ದಾಖಲಿಸಲಾಗಿದೆ ಎಂಬಂತಿರುವ ಹಲವು ವಿಡಿಯೊಗಳನ್ನು ಟಿಎಂಸಿ ಗುರುವಾರ ಹಂಚಿಕೊಂಡಿತ್ತು.

ಇದರ ಬೆನ್ನಲ್ಲೇ, ಚುನಾವಣಾ ಆಯೋಗಕ್ಕೆ ಪತ್ರ ಬರೆದಿರುವ ಮಹಿಳಾ ಹಕ್ಕುಗಳ ತಜ್ಞರ ಸಮಿತಿಯು, ‘ಈ ಘಟನೆ ಕುರಿತು ಆದ್ಯತೆಯ ಮೇರೆಗೆ ತನಿಖೆ ಕೈಗೊಳ್ಳಬೇಕು. ಟಿಎಂಸಿ ನಾಯಕರ ಬೆದರಿಕೆಗಳಿಂದಾಗಿ ಮಹಿಳೆಯರು ತಾವು ನೀಡಿದ ದೂರುಗಳನ್ನು ಹಿಂಪಡೆಯದಂತೆ ನೋಡಿಕೊಳ್ಳಬೇಕು’ ಎಂದು ಕೋರಿಕೊಂಡಿದೆ.

ಟಿಎಂಸಿ ಕಾರ್ಯಕರ್ತರು ಭಯದ ಮೂಲಕ ಸಂದೇಶ್‌ಖಾಲಿ ಸಂತ್ರಸ್ತೆಯರ ಧ್ವನಿ ಹತ್ತಿಕ್ಕಲು ಯತ್ನಿಸುತ್ತಿದ್ದು, ಈ ಪ್ರದೇಶದಲ್ಲಿ ನ್ಯಾಯಬದ್ಧ ಚುನಾವಣಾ ಪ್ರಕ್ರಿಯೆಗಳ ಮೇಲೆ ಪರಿಣಾಮ ಬೀರಲಿದೆ ಎಂದು ಆಯೋಗ ಹೇಳಿದೆ.

ಈ ಕುರಿತು ಅಗತ್ಯ ಕ್ರಮ ಕೈಗೊಳ್ಳುವಂತೆ ಆಯೋಗವು ಸೂಚಿಸುವ ಸಾಧ್ಯತೆ ಇದೆ.

ಈ ಕುರಿತು ತಾವು ದಾಖಲಿಸಿದ್ದ ಪ್ರಕರಣಗಳನ್ನು ಹಿಂಪಡೆಯಲು ಮುಂದಾಗಿರುವಂತೆ ಇರುವ ವಿಡಿಯೊಗಳನ್ನು ಟಿಎಂಸಿ ಬಿಡುಗಡೆ ಮಾಡಿದ್ದು, ಅದರಲ್ಲಿ ‘ಬಿಜೆಪಿಯು ಹಣಕಾಸಿನ ನೆರವು ನೀಡುವುದಾಗಿ ಆಮಿಷವೊಡ್ಡುತ್ತಿದೆ ಮತ್ತು ಬೆದರಿಕೆ ಒಡ್ಡುತ್ತಿದೆ’ ಎಂದು ಆರೋಪಿಸಿದ್ದರು.

ಆಯೋಗಕ್ಕೆ ದೂರು

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಸಂದೇಶ್‌ಖಾಲಿಯಲ್ಲಿ ಮಹಿಳೆಯರ ಮೇಲೆ ದೌರ್ಜನ್ಯಗಳು ನಡೆದಿವೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷೆ ರೇಖಾ ಶರ್ಮಾ ವಿರುದ್ಧ ಚುನಾವಣಾ ಆಯೋಗಕ್ಕೆ ದೂರು ದಾಖಲಿಸಲಾಗುವುದು ಎಂದು ಟಿಎಂಸಿ ತಿಳಿಸಿದೆ.

ಈ ಕುರಿತು ಪ್ರತಿಕ್ರಿಯಿಸಿದ ಪಶ್ಚಿಮ ಬಂಗಾಳದ ಸಚಿವ ಶಶಿ ಪಾಂಜಾ, ‘ಸುವೇಂದು ಅಧಿಕಾರಿ ವಿರುದ್ಧ ಚುನಾವಣಾ ಆಯೋಗಕ್ಕೆ ಈಗಾಗಲೇ ದೂರು ಸಲ್ಲಿಸಲಾಗಿದೆ’ ಎಂದರು.

ಬೈಕ್ ಮೆಕ್ಯಾನಿಕ್ ಕೊಲೆ

ಬೆಂಗಳೂರು: ಬೈಕ್ ಮೆಕ್ಯಾನಿಕ್ ದಿಲೀಪ್ (34) ಎಂಬುವವರನ್ನು ಕೊಲೆ ಮಾಡಲಾಗಿದ್ದು, ಪರಿಚಯಸ್ಥರೇ ಕೃತ್ಯ ಎಸಗಿರುವ ಬಗ್ಗೆ ಪೊಲೀಸರು ಅನುಮಾನ ವ್ಯಕ್ತಪಡಿಸಿದ್ದಾರೆ.

‘ಓಕಳಿಪುರ ಬಳಿಯ ರೈಲ್ವೆ ಸೇತುವೆ ಸಮೀಪದಲ್ಲಿ ಮೇ 1ರಂದು ಮೃತದೇಹ ಪತ್ತೆಯಾಗಿತ್ತು. ಆದರೆ, ಗುರುತು ಪತ್ತೆಯಾಗಿರಲಿಲ್ಲ. ಮೃತದೇಹದ ಫೋಟೊಗಳನ್ನು ನಗರ ಹಾಗೂ ಹೊರ ಜಿಲ್ಲೆಗಳ ಪೊಲೀಸ್ ಠಾಣೆಗಳಿಗೆ ಕಳುಹಿಸಲಾಗಿತ್ತು. ದಿಲೀಪ್ ಅವರದ್ದೇ ಮೃತದೇಹ ಎಂಬುದನ್ನು ಸಂಬಂಧಿಕರು ಗುರುತು ಹಿಡಿದಿದ್ದಾರೆ’ ಎಂದು ಶ್ರೀರಾಮಪುರ ಠಾಣೆ ಪೊಲೀಸರು ಹೇಳಿದರು.

‘ಎಲ್.ಎನ್.ಪುರದ ದಿಲೀಪ್ ಅವರನ್ನು ಕೊಲೆ ಮಾಡಿ, ಮೃತದೇಹವನ್ನು ಹಳಿ ಬಳಿ ಎಸೆದು ಹೋಗಿರುವ ಅನುಮಾನವಿದೆ. ಆರೋಪಿಗಳ ಪತ್ತೆಗಾಗಿ, ಹಳಿ ಸಮೀಪದ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯ ಪರಿಶೀಲಿಸಲಾಗುತ್ತಿದೆ’ ಎಂದು ತಿಳಿಸಿದರು.

ಕೇಜ್ರಿವಾಲ್‌ಗೆ ಜಾಮೀನು, ಸಂಭ್ರಮ
‘ಸರ್ವಾಧಿಕಾರಿ ಸೊಕ್ಕು ಅಡಗಿದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಸುಪ್ರೀಂ ಕೋರ್ಟ್ ಮಧ್ಯಂತರ ಜಾಮೀನು ಮಂಜೂರು ಮಾಡಿದ್ದು, ಸತ್ಯಕ್ಕೆ ಸಂದ ಗೆಲುವಾಗಿದೆ. ಇದು ಪ್ರಜಾಪ್ರಭುತ್ವದ ಗೆಲುವಾಗಿದೆ’ ಎಂದು ಎಎಪಿ ರಾಜ್ಯ ಘಟಕದ ಅಧ್ಯಕ್ಷ ‘ಮುಖ್ಯಮಂತ್ರಿ’ ಚಂದ್ರು ಹರ್ಷ ವ್ಯಕ್ತಪಡಿಸಿದರು.

‘ಪ್ರಧಾನಿ ನರೇಂದ್ರ ಮೋದಿ ಅವರ ಸೋಲಿನ ಮುನ್ಸೂಚನೆ ಇದಾಗಿದೆ. ಸರ್ವಾಧಿಕಾರಿಯ ಸೊಕ್ಕು ಅಡಗಿದೆ. ಈ ಬಾರಿಯ ಚುನಾವಣೆಯಲ್ಲಿ ಕೇಜ್ರಿವಾಲ್ ಅಲೆಯನ್ನು ತಡೆಯಲು ಪ್ರಧಾನಿ ಮೋದಿಗೆ ಇನ್ನಾವ ದಾರಿಯೂ ಉಳಿದಿಲ್ಲ. ಇಂಡಿಯಾ ಒಕ್ಕೂಟದ ಗೆಲುವನ್ನು ತಡೆಯುವ ಮೋದಿ ಅವರ ಹುನ್ನಾರ ನುಚ್ಚುನೂರಾಗಿದೆ. ಮೇ 25ರಂದು ದೆಹಲಿಯಲ್ಲಿ ನಡೆಯಲಿರುವ ಚುನಾವಣೆಯಲ್ಲಿ ಕೇಜ್ರಿವಾಲ್ ಅವರ ಉಪಸ್ಥಿತಿಯಿಂದ ಇಂಡಿಯಾ ಒಕ್ಕೂಟ 7ಕ್ಕೆ 7 ಸ್ಥಾನವನ್ನು ಗೆಲ್ಲಲಿದೆ’ ಎಂದು ಹೇಳಿದರು.

‘ಚುನಾವಣೆಯಲ್ಲಿ ಎಎಪಿಯನ್ನು ಕಟ್ಟಿಹಾಕುವ ಸಲುವಾಗಿ ಚುನಾವಣೆಯ ಹೊಸ್ತಿಲಲ್ಲಿ ಕೇಜ್ರಿವಾಲ್ ಅವರನ್ನು ಸುಳ್ಳು ಪ್ರಕರಣದಲ್ಲಿ ಸಿಲುಕಿಸಿ ಬಂಧಿಸಿದರು ಎಂಬ ಸತ್ಯ ಭಾರತದ ಜನತೆಗೆ ಅರಿವಾಗಿದೆ. ಮೂರು ಬಾರಿ ಪ್ರಚಂಡ ಬಹುಮತದಿಂದ ಗೆದ್ದಿರುವ ಕೇಜ್ರಿವಾಲ್ ಅವರನ್ನು ಬಂಧಿಸುವ ಮೂಲಕ ಪ್ರಜಾಪ್ರಭುತ್ವದ ವಿರುದ್ಧ ಅಣಕವಾಡಿದ್ದ ಮೋದಿಗೆ ತಕ್ಕ ಶಾಸ್ತಿಯಾಗುವ ದಿನಗಳು ಹತ್ತಿರವಾಗಿವೆ’ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

‘ಕೇಜ್ರಿವಾಲ್ ಹೊರಬರುತ್ತಿರುವ ವಿಚಾರವು ಬಿಜೆಪಿಗೆ ನಡುಕ ಹುಟ್ಟಿಸಿದೆ. 3 ಹಂತದ ಮತದಾನ ಮುಗಿದಿರುವ ಈ ಸಂದರ್ಭದಲ್ಲೇ ಸೋಲಿನ ಭೀತಿಯಲ್ಲಿ ಮಾನಸಿಕ ಅಸ್ವಸ್ಥರಂತೆ ಭಾಷಣ ಮಾಡುತ್ತಿರುವ ಮೋದಿ ಅವರು ಕೇಜ್ರಿವಾಲ್ ಬಿಡುಗಡೆಯಿಂದ ಸಂಪೂರ್ಣ ಸ್ಥಿಮಿತ ಕಳೆದುಕೊಳ್ಳಲಿದ್ದಾರೆ. ಕೇಜ್ರಿವಾಲ್ ಬಿಡುಗಡೆಯಿಂದ ಇನ್ನುಳಿದ ನಾಲ್ಕು ಹಂತಗಳ ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವ ಇಂಡಿಯಾ ಅಭ್ಯರ್ಥಿಗಳಲ್ಲಿ ಗೆಲುವಿನ ವಿಶ್ವಾಸವನ್ನು ಹೆಚ್ಚಿಸಿದೆ’ ಎಂದು ಚಂದ್ರು ಹೇಳಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

RENTAL PROPERTIES

Accommodation Available

Commercial

COMMERCIAL BUILDING 7000 SFT Available FOR RENT Near JINDAL NAGAR, Anchepalya Main Road, Tumkur Road, Bangalore-560073. Contact-9945622240

Industrial And Factory

WARE HOUSE FOR RENT
AVLB in Harohalli Industrial Area 3rd Phase, 11,000 Sft. READY TO OCCUPY
Call: 91089 82314

House

"FOR-RENT RMV-2ND_STAGE near_RMV Club, Prestigious Location spacious`4BHK North`facing Corner`House with_Servant Quarters &`Fabulous Amenities. 9945070268/ 8431259631"

2BHK FOR Rent Banashankari Vidyapeeta. Vaastu Ground Floor. Vegetarian Brahmins only. Rs. 15,000. 99867-42260/ 99864-94502.

JOB
To Place your Classified Ads Contact:
9886213331

REAL ESTATE BUYING

General

General

WANTED AGRICULTURE/ Residential/ Commercial/ Industrial Lands for JV or Purchase in BLR. 9916310226/ 9620253180. vernadevelopers1@gmail.com Barton_Centre, MG_Road.

Sites

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha & Mysore MUDA Sites, immediate settlement. Genuine Sellers Contact: 9902038118, 9449060605

WANTED BDA Site Anjanapura, Banashankari 6th Stage, Vishweshwaraiah layout, Kempegowda Layout & any BDA Katha Sites, immediate settlement. Genuine Sellers Contact: 9972223222, 9606632777

Kanakapura Road

WANTED/ BUYING SITE 30x40, 40x60 Anjanapura BDA Banashankari 6th Stage BDA, Doddakallasandra, Vajarahalli, Gubblala Konanakunte Cross Agents Excuse 9008259222.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

WANTED SITES 40x60, 30x40,50x80 Residential/ Commercial BDA Anjanapura, BSK VI`Stage`BCMC, Jayanagar Housing, (Agents_Excuse) Communicate-9845232711

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology-9880916988

WE-FIX LEAKING ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVILWORKS. 9448572697

OTHERS

Medical

RUNNING NEW Modern NABH Ready 50 Bed Hospital South Bangalore, Longterm Rental Partnership WhatsApp: 00447868727506

BUSINESS

Business to Business

Business

WANTED BUSINESS PARTNER ATTRACTIVE INCOME CONTACT: 88925 01007/ 9606701007

JOB OPPORTUNITIES

General

EMPLOYEE NEEDED! Business Development Office for property developer company No investment, age above 30 years experienced required. Earning Rs. 50,000/- per month Retired persons are eligible. Contact:-9845334751.

Multiple Vacancy

OPPORTUNITY OF Career & Income for Retired Officials, Bankers, Teachers, CAs, Professionals, Homemakers. CALL: 8095301555

CONNECT

ಇಂಡಿಯನ್ ಪೊಟ್ಯಾಷ್ ಲಿಮಿಟೆಡ್
ಪ್ರಾದೇಶಿಕ ಕಛೇರಿ, ಮಿತ್ತಲ್ ಟವರ್, 'ಸಿ' ವಿಂಗ್, 3ನೇ ಮಹಡಿ, ನಂ.6, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು, ಕರ್ನಾಟಕ 560001
IPL
Phone: 080-25588057, 25588286, 48651305, 25583400
Fax : 080 25559554, Email: iplblr@potindia.com
ರಸಗೊಬ್ಬರಗಳ 100% ನೀರಿನಲ್ಲಿ ಕರಗುವ ಮಿಶ್ರಣದ ತಯಾರಿಕೆ, ಸಂಗ್ರಹಣೆ ಮತ್ತು ಮಾರಾಟಕ್ಕೆ ಸೂಚನೆ
ಆದೇಶ ಸಂಖ್ಯೆ 2900 (ಇ) ದಿನಾಂಕ 24ನೇ ಅಕ್ಟೋಬರ್ 2015 ರಲ್ಲಿ 1985ರಲ್ಲಿ FCO ದಯವಿಟ್ಟು ನೋಡಿ.
ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯ ಹೊರಡಿಸಿದ 24ನೇ ಅಕ್ಟೋಬರ್ 2015 ರ ಆದೇಶ ಸಂಖ್ಯೆ 2900 (ಇ) ಮತ್ತು ಅದರ ನಂತರ ತಿದ್ದುಪಡಿಯನ್ನು ಉಲ್ಲೇಖಿಸಿ, ಇಂಡಿಯನ್ ಪೊಟ್ಯಾಷ್ ಲಿಮಿಟೆಡ್, ಈ ಕೆಳಗಿನ ದರ್ಜೆಯ 100% ನೀರಿನಲ್ಲಿ ಕರಗುವ ರಸಗೊಬ್ಬರ ಮಿಶ್ರಣವನ್ನು ತಯಾರಿಕೆ, ಸಂಗ್ರಹಣೆ ಮತ್ತು ಮಾರಾಟವನ್ನು ಪ್ರಾರಂಭಿಸುತ್ತೇವೆ ಎಂದು ಸಾರ್ವಜನಿಕರಿಗೆ ತಿಳಿಸಲು ನಾವು ಸಂತೋಷಪಡುತ್ತೇವೆ. ಕರ್ನಾಟಕ ರಾಜ್ಯದ ರೈತರು ಈ ಕೆಳಗಿನ ದರ್ಜೆಯ 100% ನೀರಿನಲ್ಲಿ ಕರಗುವ ರಸಗೊಬ್ಬರ ಮಿಶ್ರಣವನ್ನು ಬಳಸಿಕೊಳ್ಳಲು ವಿನಂತಿ.

S.No.	Nutrients	Grade
1.	NPK	19:19:19

– ಮ್ಯಾನೇಜ್‌ಮೆಂಟ್

Teachers/ Professors

MARIAN PRIMARY and MIDDLE SCHOOL (State Syllabus) #3, Millers Road, VasanthNagar, Bangalore- 560052. Email: marianprischool@gmail.com Required Trained TEACHERS BA/ B.Ed, B.Sc/ B.Ed, DPED/ BPED, PUC/ D.Ed. Maths/ Science/ Social/ Kannada/ Hindi/ Computer. Apply immediately. Contact: 080-22201321, 9901549378. 7090455092, 8105692541

REQUIRED KINDERGARTEN, Art teachers for premier school on Bangalore Mysore Road. call 9036656567

Wanted

REQUIRED SHOWROOM & Field Sales Executive For Swastik Ceramics Co Jayanagar 5th Block Contact:9741040290

Situation Required

SHADOW TEACHER REQUIRED For 4th Std girl child at Mangalore. Languages known English, Hindi and Kannada. Call 9892135451

PERSONAL

Change of Name

CHANGE OF NAME
I, NISHA SUBASH BABU, NISHA N, NISHA SUBASHBABU and NISHA SUBASH, residing at No. GP-1-104, Astro Green Regency, Amrita Engineering College, Kasavanahalli, Halanayakanahalli, Bengaluru- 560035, declare that all the above names pertain to me only and henceforth I shall be known as NISHA SUBASH vide affidavit dated 10.05.2024 before Notary K.V. Mani, Bangalore.

PROPERTY CORNER

Convert your Agricultural Land to Coconut Farm
Grow Coconuts, Grow Wealth! Contact Us for more details
+91 80500 37373
DEEJAY COCONUT FARM Pvt. Ltd., Bengaluru
Having 50 years of experience in Coconut Farming

ಅಕ್ಷಯ ತೃತೀಯ ಕೊಡುಗೆ ಸೈಟುಗಳು ಮಾರಾಟಕ್ಕಿವೆ
ಬುಕಿಂಗ್ ಪ್ರಾರಂಭವಾಗಿದೆ
ತುಮಕೂರು ರೋಡ್ ಟಿ. ಬೇಗೂರ್, ಸಿದ್ಧಾರ್ಥ್ ಮೆಡಿಕಲ್ ಕಾಲೇಜ್ ಹತ್ತಿರ. 20x30 ~~ರೂ. 6 ಲಕ್ಷ~~ ರೂ. 5 ಲಕ್ಷ
ನೆಲಮಂಗಲ ಬಯಲು ಆಂಜನೇಯಸ್ವಾಮಿ ದೇವಸ್ಥಾನದ ಹತ್ತಿರ DC ಕನ್ವರ್ಷನ್ ಸೈಟ್ 20x30 ~~ರೂ. 7.60 ಲಕ್ಷ~~ ರೂ. 6 ಲಕ್ಷ
ಬುಕಿಂಗ್ ಪ್ರಾರಂಭವಾಗಿದೆ.
ಬ್ಯಾಂಕ್ ಲೋನ್ ದೊರೆಯುತ್ತದೆ.
ಸಂಪರ್ಕಿಸಿ: 8880660099

MH PROMOTERS
Sites - Villas Farmland Kanakapura Road
BMRDA Approved, Clear Legal Titles, Ready for Registration, Bank Loan Avbl
Call for Site Visit: 95138 50029
www.mhpromoters.in

CHANGE OF NAME
I, KISHORE KUMAR SHETTY, Residing at # 4, Ganesha Nilaya, 19th A Cross, Near Rama Temple, Ejipura, Bangalore-560 047 have changed my name to KISHOR KUMAR SHETTY B. A. vide affidavit dated 10.05.2024, before notary K.V.Mani, Bangalore. Henceforth I shall be called as KISHOR KUMAR SHETTY B. A. only

I, JUGAL.R.VAGADIA have changed my name to Jugal.R.Patel vide affidavit 08/05/2024 before Notary Deepa.M, Bengaluru

MORE Classifieds IN SUPPLEMENT

DH DECCAN HERALD The Power of Good
ಪ್ರಜಾವಾಣಿ
Classifieds
More value, more impact
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
For more details contact:
+91 9731810277 | +91 9886213331
+91 9845114560 | +91 9900428036
+91 9901641752 | 080- 45557163/164
*Conditions apply

ಸಂಚಾರ ನಿಯಮ ಉಲ್ಲಂಘನೆ • ಕ್ಯಾಮೆರಾ ದೃಶ್ಯ ಆಧರಿಸಿ ಕ್ರಮ • ಚುನಾವಣೆ ಪ್ರಚಾರದ ತಿಂಗಳು ಕಡಿಮೆ ಪ್ರಕರಣ

ನಾಲ್ಕು ತಿಂಗಳಲ್ಲಿ ₹18.61 ಕೋಟಿ ದಂಡ

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಪ್ರಸಕ್ತ ವರ್ಷದ ಜನವರಿಯಿಂದ ಏಪ್ರಿಲ್‌ವರೆಗಿನ ಅವಧಿಯಲ್ಲಿ ಸಂಚಾರ ನಿಯಮ ಉಲ್ಲಂಘನೆಗೆ ಸಂಬಂಧಪಟ್ಟಂತೆ 30.61 ಲಕ್ಷ ಪ್ರಕರಣಗಳು ದಾಖಲಾಗಿದ್ದು, ವಿವಿಧ ಪ್ರಕಾರಗಳ ವಾಹನಗಳಿಗೆ ₹ 18.61 ಕೋಟಿ ದಂಡ ವಿಧಿಸಲಾಗಿದೆ.

ಸಂಚಾರ ನಿಯಮ ಉಲ್ಲಂಘನೆ ವಿರುದ್ಧ ಕೈಗೊಂಡ ಕ್ರಮದ ಅಂಕಿ–ಅಂಶವನ್ನು ಸಂಚಾರ ಪೊಲೀಸರು ಬಿಡುಗಡೆ ಮಾಡಿದ್ದಾರೆ. ಮೂರು ತಿಂಗಳಿಗೆ (ಜನವರಿ–ಮಾರ್ಚ್) ಹೋಲಿಸಿದರೆ ಚುನಾವಣೆ ಪ್ರಚಾರ ಚುರುಕುಗೊಂಡಿದ್ದ ಏಪ್ರಿಲ್ ತಿಂಗಳಿನಲ್ಲಿ ಪ್ರಕರಣಗಳ ಪ್ರಮಾಣದಲ್ಲಿ ಇಳಿಕೆ ಕಂಡುಬಂದಿದೆ.

‘ಜನವರಿಯಲ್ಲಿ 8.47 ಲಕ್ಷ, ಫೆಬ್ರುವರಿಯಲ್ಲಿ 7.79 ಲಕ್ಷ ಹಾಗೂ ಮಾರ್ಚ್‌ನಲ್ಲಿ 7.43 ಲಕ್ಷ ಪ್ರಕರಣಗಳು ದಾಖಲಾಗಿವೆ. ಆದರೆ, ಏಪ್ರಿಲ್‌ನಲ್ಲಿ 6.90 ಲಕ್ಷ ಪ್ರಕರಣಗಳು ಮಾತ್ರ ದಾಖಲಾಗಿವೆ’ ಎಂಬುದು ಅಂಕಿ–ಅಂಶಗಳಿಂದ ಗೊತ್ತಾಗುತ್ತಿದೆ.

ಸಂಚಾರ ನಿಯಮ ಉಲ್ಲಂಘನೆ ಪತ್ತೆ ಹಚ್ಚುವುದಕ್ಕಾಗಿ ನಗರದ ಹಲವು ಕಡೆಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಇವುಗಳು ಕ್ಲಿಕ್ಕಿಸುವ ಫೋಟೊ ಆಧರಿಸಿ ತಪ್ಪಿತಸ್ಥರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗುತ್ತಿದೆ. ಹಲವರ ಮೊಬೈಲ್‌ಗೆ ಸಂದೇಶ ಕಳುಹಿಸಿ, ದಂಡ ಪಾವತಿಸುವಂತೆ ಪೊಲೀಸರು ಸೂಚನೆ ನೀಡುತ್ತಿದ್ದಾರೆ.

‘₹ 50 ಸಾವಿರಕ್ಕಿಂತ ಹೆಚ್ಚು ದಂಡ ಬಾಕಿ ಉಳಿಸಿಕೊಂಡಿರುವವರ ಪಟ್ಟಿ ಸಿದ್ಧಪಡಿಸಲಾಗಿದೆ. ಇಂಥವರ ವಿಳಾಸವನ್ನು ಪತ್ತೆ ಮಾಡಿ ಮನೆಗೆ ಹೋಗಿ ದಂಡ ವಸೂಲಿ ಮಾಡುವ ಪ್ರಕ್ರಿಯೆಯೂ ಆರಂಭವಾಗಿದೆ’ ಎಂದು ಸಂಚಾರ ವಿಭಾಗದ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ದಂಡ ಪಾವತಿ ಮೇಲೆ ಶೇ 50ರಷ್ಟು ರಿಯಾಯಿತಿ ನೀಡಲಾಗಿತ್ತು. ಅದರ ಅವಧಿ ಮುಗಿದಿದೆ. ಹಲವರು ಈ ಸಮಯದಲ್ಲಿ ದಂಡ ಪಾವತಿಸಿ ಪ್ರಕರಣ ಇತ್ಯರ್ಥಪಡಿಸಿಕೊಂಡಿದ್ದಾರೆ’ ಎಂದು ತಿಳಿಸಿದರು.

‘ವಾಹನ ಮೇಲಿನ ದಂಡ ತಿಳಿಯಿರಿ’

ನಗರದ ಯಾವುದೇ ಸ್ಥಳದಲ್ಲಿ ಸಂಚಾರ ನಿಯಮ ಉಲ್ಲಂಘನೆ ಮಾಡಿದ್ದರೆ ಅಥವಾ ವಾಹನಗಳ ಮೇಲೆ ದಾಖಲಿಸಿರುವ ಪ್ರಕರಣಗಳ ಮಾಹಿತಿ ತಿಳಿಯಲು ಪೊಲೀಸರು ಆನ್‌ಲೈನ್ ವ್ಯವಸ್ಥೆ ಮಾಡಿದ್ದಾರೆ.

‘https://btp.gov.in/’ ಜಾಲತಾಣದಲ್ಲಿ ‘ನಿಮ್ಮ ದಂಡವನ್ನು ಪಾವತಿಸಿ’ ಬಾಕ್ಸ್‌ನಲ್ಲಿ ‘ವಾಹನ ಸಂಖ್ಯೆಯ ಮೂಲಕ ಹುಡುಕಾಟ ಮತ್ತು ಪಾವತಿಸುವ ಉಲ್ಲಂಘನೆ’ ಆಯ್ಕೆ ಇದೆ. ಅದನ್ನು ಕ್ಲಿಕ್ ಮಾಡಬೇಕು. ನಂತರ, ಕರ್ನಾಟಕ ಒನ್ ಲಿಂಕ್ ತೆರೆದುಕೊಳ್ಳುತ್ತದೆ. ಅದರಲ್ಲಿ ವಾಹನಗಳ ನೋಂದಣಿ ಸಂಖ್ಯೆ ನಮೂದಿಸಿದರೆ, ಪ್ರಕರಣ ಹಾಗೂ ದಂಡದ ವಿವರ ಫೋಟೊಗಳ ಸಮೇತ ಲಭ್ಯವಾಗುತ್ತದೆ. ನಂತರ, ಆನ್‌ಲೈನ್ ಮೂಲಕವೇ ದಂಡ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ.

‘ಆಟೊ ಚಾಲಕರ ವಿರುದ್ಧ 1,287 ಪ್ರಕರಣ’

ನಗರದಲ್ಲಿರುವ ಹಲವು ಆಟೊ ಚಾಲಕರು, ಹೆಚ್ಚು ಪ್ರಯಾಣ ದರ ಕೇಳುತ್ತಾರೆಂಬ ಆರೋಪಗಳಿವೆ. ಇದಕ್ಕೆ ಸಂಬಂಧಪಟ್ಟಂತೆ ಪೊಲೀಸರು ಆಗಾಗ ವಿಶೇಷ ಕಾರ್ಯಾಚರಣೆ ನಡೆಸುತ್ತಿದ್ದು, ಜನವರಿಯಿಂದ ಏಪ್ರಿಲ್‌ವರೆಗೆ ಆಟೊ ಚಾಲಕರ ವಿರುದ್ಧ 1,287 ಪ್ರಕರಣ ದಾಖಲಿಸಿಕೊಂಡಿದ್ದಾರೆ.

‘ಪ್ರಯಾಣಿಕರ ಜೊತೆ ಸೌಜನ್ಯದಿಂದ ವರ್ತಿಸುವಂತೆ ಹಾಗೂ ಮೀಟರ್ ಆಧರಿಸಿ ಪ್ರಯಾಣ ದರ ಪಡೆಯುವಂತೆ ಆಟೊ ಚಾಲಕರಿಗೆ ಎಚ್ಚರಿಕೆ ನೀಡಲಾಗಿದೆ. ಯಾರಾದರೂ ಹೆಚ್ಚುವರಿ ದರ ಕೇಳಿದರೆ, ಪ್ರಯಾಣಿಕರಿಗೆ ಸಮೀಪದ ಸಂಚಾರ ಠಾಣೆಗೆ ಅಥವಾ 080-22868444, 22868550 ಕರೆ ಮಾಡಿ ದೂರು ನೀಡಬಹುದು’ ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಪೊಲೀಸರು ಬಿಡುಗಡೆ ಮಾಡಿರುವ ಜನವರಿ–ಏಪ್ರಿಲ್‌ವರೆಗಿನ ಅಂಕಿ–ಅಂಶಗಳ ವಿವರ ಇಲ್ಲಿದೆ.

81,359 ಮೋಟಾರು ವಾಹನಗಳ ಕಾಯ್ದೆಯಡಿ ದಾಖಲಾದ ಪ್ರಕರಣ

₹12.35 ಕೋಟಿ ಮೋಟಾರು ವಾಹನಗಳ ಕಾಯ್ದೆಯಡಿ ವಿಧಿಸಿದ ದಂಡ

453 ಕರ್ನಾಟಕ ಪೊಲೀಸ್ ಕಾಯ್ದೆಯಡಿ ದಾಖಲಾದ ಪ್ರಕರಣಗಳು

₹56,200 ಕರ್ನಾಟಕ ಪೊಲೀಸ್ ಕಾಯ್ದೆಯಡಿ ವಿಧಿಸಿದ ದಂಡ

29.80 ಲಕ್ಷ ಕ್ಯಾಮೆರಾ ಸಹಾಯದಿಂದ ದಾಖಲಿಸಲಾದ ಪ್ರಕರಣಗಳು

₹6.25 ಕೋಟಿ ಕ್ಯಾಮೆರಾ ಸಹಾಯದಿಂದ ವಿಧಿಸಿದ ದಂಡ

ಕೆಲ ನಿಯಮ ಉಲ್ಲಂಘನೆ ಪ್ರಕರಣಗಳ ವಿವರ (ಜನವರಿ–ಏಪ್ರಿಲ್)

ಯಾವ ನಿಯಮ ಉಲ್ಲಂಘನೆ	ಸಂಖ್ಯೆ
ನಿರ್ಲಕ್ಷ್ಯದ ಚಾಲನೆ	1,263
ಅತೀ ವೇಗದ ಚಾಲನೆ	1,787
ಮದ್ಯ ಕುಡಿದು ವಾಹನ ಚಾಲನೆ	4,275
ಪರವಾನಗಿ ಇಲ್ಲದೇ ಚಾಲನೆ	2,193
ಸಿಗ್ನಲ್ ಜಂಪ್	1.55 ಲಕ್ಷ
ತಪ್ಪು ನಿಲುಗಡೆ	3.53 ಲಕ್ಷ
ದೋಷಪೂರಿತ ನೋಂದಣಿ ಸಂಖ್ಯೆ ಫಲಕ	76,838
ನಿರ್ಬಂಧಿತ ರಸ್ತೆಯಲ್ಲಿ ಚಾಲನೆ	49,723
ಪಾದಚಾರಿ ಮಾರ್ಗದಲ್ಲಿ ವಾಹನ ನಿಲುಗಡೆ	52,044
ದ್ವಿಚಕ್ರ ವಾಹನದಲ್ಲಿ ಮೂವರ ಸವಾರಿ	62,688
ಚಾಲನೆ ವೇಳೆ ಮೊಬೈಲ್ ಬಳಕೆ	44,352
ಸೀಟ್ ಬೆಲ್ಟ್ ಧರಿಸದೇ ಪ್ರಯಾಣ	1.05 ಲಕ್ಷ
ಹೆಲ್ಮೆಟ್ ರಹಿತ ಚಾಲನೆ (ಸವಾರ)	12.10 ಲಕ್ಷ
ಹೆಲ್ಮೆಟ್ ರಹಿತ ಚಾಲನೆ (ಹಿಂಬದಿ ಸವಾರ	9.18 ಲಕ್ಷ
ಇತರೆ	5,469

ಅಪಘಾತ ಪ್ರಕರಣಗಳ ವಿವರ (ಜನವರಿ–ಏಪ್ರಿಲ್)

1,633 2024ರ ಜನವರಿ–ಏಪ್ರಿಲ್‌ವರೆಗಿನ ಅಪಘಾತ ಪ್ರಕರಣ

310 ಮೃತರು

1,376 ಗಾಯಗೊಂಡವರು

ಐಎಫ್‌ಎಸ್: ಹುಬ್ಬಳ್ಳಿಯ ಕೃಪಾ ಜೈನ್‌ಗೆ 18ನೇ ರ‍್ಯಾಂಕ್

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಇಲ್ಲಿನ ಕೃಪಾ ಜೈನ್ ಅವರು ಕೇಂದ್ರ ಲೋಕಸೇವಾ ಆಯೋಗ ನಡೆಸಿದ ಭಾರತೀಯ ಅರಣ್ಯ ಸೇವೆ (ಐಎಫ್‌ಎಸ್) ಪರೀಕ್ಷೆಯಲ್ಲಿ 18ನೇ ರ‍್ಯಾಂಕ್ ಪಡೆದಿದ್ದಾರೆ.

ಕಳೆದ ತಿಂಗಳು ಪ್ರಕಟಗೊಂಡ ಯುಪಿಎಸ್‌ಸಿ ಪರೀಕ್ಷೆಯಲ್ಲೂ ಅವರು 440ನೇ ರ‍್ಯಾಂಕ್ ಗಳಿಸಿದ್ದರು.

ಇಂದಿರಾ ಮತ್ತು ಉದ್ಯಮಿ ಅಭಯ್ ಪಾರ್ಲೆಚಾ ದಂಪತಿ ಪುತ್ರಿ ಕೃಪಾ, ದ್ವಿತೀಯ ಪಿಯುವರೆಗೆ ಹುಬ್ಬಳ್ಳಿಯಲ್ಲಿಯೇ ಶಿಕ್ಷಣ ಪಡೆದಿದ್ದಾರೆ. ಬೆಂಗಳೂರಿನ ಆರ್. ವಿ. ಎಂಜಿನಿಯರಿಂಗ್ ಕಾಲೇಜಿನಲ್ಲಿ ಕಂಪ್ಯೂಟರ್ ಸೈನ್ಸ್ ವಿಭಾಗದಲ್ಲಿ ಬಿ.ಇ ಪದವಿ ಪೂರೈಸಿದ್ದಾರೆ. ಬಿ.ಇ. ಓದುವಾಗ ನಾಗರಿಕ ಸೇವೆ ಕಡೆಗೆ ಆಸಕ್ತಿ ಬೆಳೆಸಿಕೊಂಡ ಅವರು, ದೆಹಲಿಗೆ ತೆರಳಿ ತಜ್ಞರ ಸಲಹೆ ಪಡೆದು ಸ್ವಯಂ ಅಧ್ಯಯನ ಮಾಡಿದರು.

‘ಯುಪಿಎಸ್‌ಸಿ ಮತ್ತು ಐಎಫ್‌ಎಸ್ ಎರಡರಲ್ಲೂ ಒಳ್ಳೆಯ ರ‍್ಯಾಂಕ್ ಬಂದಿದ್ದು ಖುಷಿ ತಂದಿದೆ. ಆದರೆ ಯಾವ ಸೇವೆಗೆ ಸೇರಬೇಕೆಂದು ನಿರ್ಧರಿಸಿಲ್ಲ. ಯುಪಿಎಸ್‌ಸಿಯಲ್ಲಿ ಯಾವ ಹುದ್ದೆ ಸಿಗುವುದೆಂದು ನೋಡಿ ನಿರ್ಧರಿಸುವೆ. ಕರ್ನಾಟಕದಲ್ಲೇ ಪೋಸ್ಟಿಂಗ್ ಸಿಗುತ್ತದೆ ಎಂದಾದರೆ ಫಾರೆಸ್ಟ್ ಸರ್ವೀಸ್ ಆಯ್ಕೆ ಮಾಡಿಕೊಳ್ಳುವೆ’ ಎಂದು ಕೃಪಾ ‘ಪ್ರಜಾವಾಣಿ’ಗೆ ತಿಳಿಸಿದರು.

ಪೋಕ್ಸೊ ಪ್ರಕರಣದ ಆರೋಪಿ ಮೃತದೇಹ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಪಂಗಿರಾಮನಗರ ಠಾಣೆ ವ್ಯಾಪ್ತಿಯಲ್ಲಿ ಸತ್ಯ (20) ಎಂಬುವವರ ಮೃತದೇಹ ಪತ್ತೆಯಾಗಿದ್ದು, ಯುಡಿಆರ್ (ಅಸಹಜ ಸಾವು) ದಾಖಲಿಸಿಕೊಂಡು ಪೊಲೀಸರು ತನಿಖೆ ಆರಂಭಿಸಿದ್ದಾರೆ.

‘ಸ್ಥಳೀಯ ನಿವಾಸಿ ಸತ್ಯ, ಬಾಲಕಿಯೊಬ್ಬಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ 2023ರಲ್ಲಿ ಪ್ರಕರಣ ದಾಖಲಿಸಿಕೊಂಡು, ಸತ್ಯನನ್ನು ಬಂಧಿಸಲಾಗಿತ್ತು. ಜಾಮೀನು ಪಡೆದಿದ್ದ ಆರೋಪಿ ಜೈಲಿನಿಂದ ಹೊರಗೆ ಬಂದಿದ್ದ’ ಎಂದು ಪೊಲೀಸರು ಹೇಳಿದರು.

‘ಸತ್ಯ ಮೃತದೇಹ ಗುರುವಾರ ಪತ್ತೆಯಾಗಿದೆ. ಈ ಬಗ್ಗೆ ಸಂಬಂಧಿಕರು ಹಾಗೂ ಸ್ಥಳೀಯರ ಹೇಳಿಕೆ ಪಡೆಯಲಾಗಿದೆ. ಈ ಸಾವಿಗೆ ಕಾರಣ ಏನು? ಎಂಬುದು ಸದ್ಯಕ್ಕೆ ಗೊತ್ತಾಗಿಲ್ಲ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ. ಪರೀಕ್ಷೆ ವರದಿ ಬಂದ ನಂತರವೇ ಸಾವಿನ ಬಗ್ಗೆ ನಿಖರ ಮಾಹಿತಿ ಲಭ್ಯವಾಗಲಿದೆ’ ಎಂದು ತಿಳಿಸಿದರು.

ನಗರದಲ್ಲಿ ಪ್ರತಿಭಟನೆ ನಡೆಸಿದ ಯುವ ಕಾಂಗ್ರೆಸ್ ಕಾರ್ಯಕರ್ತರು

ದೇವರಾಜೇಗೌಡ ಬಂಧನಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅವರಿಂದ ದೌರ್ಜನ್ಯಕ್ಕೊಳಗಾಗಿರುವ ಸಂತ್ರಸ್ತೆ ನೀಡಿರುವ ದೂರನ್ನು ಆಧರಿಸಿ ಬಿಜೆಪಿ ಮುಖಂಡ, ವಕೀಲ ದೇವರಾಜೇಗೌಡ ಅವರನ್ನು ಬಂಧಿಸುವಂತೆ ಆಗ್ರಹಿಸಿ ಯುವ ಕಾಂಗ್ರೆಸ್ ಕಾರ್ಯಕರ್ತರು ಶುಕ್ರವಾರ ಪ್ರತಿಭಟನೆ ನಡೆಸಿದರು.

ರೇಸ್ ಕೋರ್ಸ್ ರಸ್ತೆಯಲ್ಲಿರುವ ಕಾಂಗ್ರೆಸ್ ಭವನದ ಆವರಣದಲ್ಲಿ ಯುವ ಕಾಂಗ್ರೆಸ್ ಮುಖಂಡ ಎಸ್. ಮನೋಹರ್ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದ ಕಾರ್ಯಕರ್ತರು, ದೇವರಾಜೇಗೌಡ ಭಾವಚಿತ್ರಕ್ಕೆ ಚಪ್ಪಲಿಯಲ್ಲಿ ಹೊಡೆದು ಆಕ್ರೋಶ ಹೊರ ಹಾಕಿದರು.

‘ದೇವರಾಜೇಗೌಡ ಸಂತ್ರಸ್ತೆಯರಿಗೆ ಕಿರುಕುಳ ನೀಡುತ್ತಿದ್ದಾರೆ. ಅವರ ವಿರುದ್ಧ ಸಂತ್ರಸ್ತೆಯೊಬ್ಬರು ಹಾಸನ ಜಿಲ್ಲೆಯ ಹೊಳೆನರಸೀಪುರ ಠಾಣೆಗೆ ದೂರು ನೀಡಿದ್ದಾರೆ. ಪೆನ್‌ಡ್ರೈವ್ ಹಂಚಿದ ಪ್ರಕರಣದಲ್ಲಿ ಕಾಂಗ್ರೆಸ್ ವಿರುದ್ಧ ಸುಳ್ಳು ಹೇಳಿಕೆ ನೀಡುತ್ತಿರುವ ಅವರು ಸಂತ್ರಸ್ತೆಯರ ಹಿತ ರಕ್ಷಣೆಗೆ ವಿರುದ್ಧವಾಗಿದ್ದಾರೆ. ಅವರನ್ನು ತಕ್ಷಣ ಬಂಧಿಸಬೇಕು’ ಎಂದು ಆಗ್ರಹಿಸಿದರು.

ಪೊಲೀಸ್ ಠಾಣೆಗೆ ಮನವಿ: ಹೊಳೆನರಸೀಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣ ಆಧರಿಸಿ ದೇವರಾಜೇಗೌಡ ಅವರನ್ನು ಬಂಧಿಸುವಂತೆ ಆಗ್ರಹಿಸಿ ಬೆಂಗಳೂರು ಪಶ್ಚಿಮ ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಪುಟ್ಟರಾಜು ವೈ. ನೇತೃತ್ವದ ನಿಯೋಗವು ಹೈಗ್ರೌಂಡ್ಸ್ ಪೊಲೀಸ್ ಠಾಣೆಗೆ ಶುಕ್ರವಾರ ಮನವಿ ಸಲ್ಲಿಸಿದೆ.

ಬಿಜೆಪಿ ಮುಖಂಡ ದೇವರಾಜೇಗೌಡ ಅವರನ್ನು ಬಂಧಿಸುವಂತೆ ಆಗ್ರಹಿಸಿ ಯುವ ಕಾಂಗ್ರೆಸ್ ಕಾರ್ಯಕರ್ತರು ಬೆಂಗಳೂರಿನ ರೇಸ್‌ಕೋರ್ಸ್ ರಸ್ತೆಯಲ್ಲಿರುವ ಕಾಂಗ್ರೆಸ್ ಭವನದ ಆವರಣದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಪಬ್ಲಿಕ್ ಪ್ರಾಸಿಕ್ಯೂಟರ್ ಬಂಧನ

ಲೈಂಗಿಕ ಕಿರುಕುಳ ಆರೋಪ: ಆರೋಪಿಯನ್ನು ಬೆನ್ನಟ್ಟಿ ಹಿಡಿದಿದ್ದ ಜನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಹಿಳೆಯೊಬ್ಬರನ್ನು ಅಪಹರಿಸಿ ಲೈಂಗಿಕ ಕಿರುಕುಳ ನೀಡಿದ್ದ’ ಆರೋಪದಡಿ ನಗರದ 71ನೇ ಸಿಸಿಎಚ್ ನ್ಯಾಯಾಲಯದ ಪಬ್ಲಿಕ್ ಪ್ರಾಸಿಕ್ಯೂಟರ್ ಶ್ರೀರಾಮ್ ಅವರನ್ನು ಕಾಟನ್‌ಪೇಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ನಗರದಲ್ಲಿ ವಾಸವಿರುವ 32 ವರ್ಷ ವಯಸ್ಸಿನ ಮಹಿಳೆ ಕೃತ್ಯದ ಬಗ್ಗೆ ದೂರು ನೀಡಿದ್ದರು. ಐಪಿಸಿ 354-ಎ (ಲೈಂಗಿಕ ಕಿರುಕುಳ) ಹಾಗೂ ಐಪಿಸಿ 366 (ಮದುವೆ, ಇತ್ಯಾದಿಗೆ ಒತ್ತಾಯಿಸಿ ಮಹಿಳೆಯನ್ನು ಅಪಹರಣ ಮಾಡುವುದು) ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಆರೋಪಿ ಶ್ರೀರಾಮ್‌ನನ್ನು ಬಂಧಿಸಿ, ನ್ಯಾಯಾಲಯದ ಎದುರು ಹಾಜರುಪಡಿಸಲಾಗಿತ್ತು. ನ್ಯಾಯಾಲಯ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಶ್ರೀರಾಮ್

ಸದ್ಯ ಆರೋಪಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿದ್ದಾರೆ’ ಎಂದು ಪೊಲೀಸರು ಹೇಳಿದರು.

ಜಾಮೀನು ವಿಚಾರಕ್ಕೆ ಪರಿಚಯ: ‘ನ್ಯಾಯಾಲಯದ ಪ್ರಕರಣವೊಂದರಲ್ಲಿ ಮಹಿಳೆಗೆ ಜಾಮೀನು ಮಂಜೂರಾಗಿತ್ತು. ಜಾಮೀನು ರದ್ದುಪಡಿಸುವಂತೆ ಕೋರಿ ಮೇಲ್ಮನವಿ ಸಲ್ಲಿಸಲು ತಯಾರಿ ನಡೆಸಿದ್ದ ಮಹಿಳೆ, ಜಾಮೀನು ಪ್ರತಿ ಪಡೆಯಲು ಮೇ 9ರಂದು ಮಧ್ಯಾಹ್ನ ಆರೋಪಿಯ ಕಚೇರಿಗೆ ಹೋಗಿದ್ದರೆಂದು ಗೊತ್ತಾಗಿದೆ’ ಎಂದು ಪೊಲೀಸರು ತಿಳಿಸಿದರು.

‘ಜಾಮೀನು ರದ್ದುಪಡಿಸುವುದಕ್ಕಾಗಿ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲು ಸಹಾಯ ಮಾಡುವುದಾಗಿ ಹೇಳಿದ್ದ ಆರೋಪಿ, ನ್ಯಾಯಾಲಯದ ಪ್ರವೇಶ ದ್ವಾರದ ಬಳಿ ಕಾಯುವಂತೆ ತಿಳಿಸಿದ್ದ. ಅದಕ್ಕೆ ಒಪ್ಪಿ ಮಹಿಳೆ ಕಾಯುತ್ತಿದ್ದರು. ಆಟೊವೊಂದರಲ್ಲಿ ಸ್ಥಳಕ್ಕೆ ಹೋಗಿದ್ದ ಆರೋಪಿ, ಮಹಿಳೆಯನ್ನು ಹತ್ತಿಸಿಕೊಂಡು ಕಾಟನ್‌ಪೇಟೆ ಬಳಿಯ ಲಾಡ್ಜ್‌ವೊಂದರ ಬಳಿ ತೆರಳಿದ್ದ.’

‘ಲಾಡ್ಜ್ ಒಳಗೆ ಹೋಗಿದ್ದ ಆರೋಪಿ, ಮಹಿಳೆಯನ್ನೂ ಒಳಗೆ ಬರುವಂತೆ ಕರೆದಿದ್ದ. ಆದರೆ, ಮಹಿಳೆ ಒಪ್ಪಿರಲಿಲ್ಲ. ‘ನಿನ್ನ ಪ್ರಕರಣವನ್ನೆಲ್ಲ ಮುಗಿಸಿಕೊಡುತ್ತೇನೆ. ಒಳಗೆ ಬಾ’ ಎಂದಿದ್ದ. ನಿರಾಕರಿಸಿದ್ದ ಮಹಿಳೆ, ಸಮೀಪದಲ್ಲಿದ್ದ ಹೋಟೆಲ್‌ಗೆ ಹೋಗಿ ಕುಳಿತಿದ್ದರು. ಪತಿಗೆ ಕರೆ ಮಾಡಿ ವಿಷಯ ತಿಳಿಸಿದ್ದರು. ಹೋಟೆಲ್‌ಗೂ ಹೋಗಿದ್ದ ಆರೋಪಿ, ‘ಬೇರೆ ಲಾಡ್ಜ್ ಮಾಡುತ್ತೇನೆ. ಬಾ’ ಎಂಬುದಾಗಿ ಪುನಃ ಒತ್ತಾಯಿಸಿದ್ದ. ಕೆಲ ನಿಮಿಷಗಳ ನಂತರ, ಮಹಿಳೆಯ ಪತಿಯ ಸ್ನೇಹಿತ ಸ್ಥಳಕ್ಕೆ ಬಂದಿದ್ದರು. ಆರೋಪಿಯ ಕೃತ್ಯವನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸಿಕೊಂಡಿದ್ದರು. ಅದನ್ನು ನೋಡಿದ್ದ ಆರೋಪಿ, ಸ್ಥಳದಿಂದ ಓಡಲಾರಂಭಿಸಿದ್ದರು. ಸ್ನೇಹಿತ ಹಾಗೂ ಸ್ಥಳೀಯರು, ಆರೋಪಿಯನ್ನು ಬೆನ್ನಟ್ಟಿ ಹಿಡಿದಿದ್ದರು. ಬಳಿಕ, ಸ್ಥಳಕ್ಕೆ ಹೋದ ಗಸ್ತು ವಾಹನದ ಸಿಬ್ಬಂದಿ ಆರೋಪಿಯನ್ನು ವಶಕ್ಕೆ ಪಡೆದು ಠಾಣೆಗೆ ಕರೆತಂದಿದ್ದರು’ ಎಂದು ಹೇಳಿದರು.

ಎಸ್‌ಎಸ್‌ಎಲ್‌ಸಿ ಸಾಧಕರು

ನೇಹ ಜವಳಿ (ಶೇ 99.04) ವಿಶ್ವ ವೆಂಕಟೇಶ್ವರ ಇಂಟರ್ ನ್ಯಾಷನಲ್ ಶಾಲೆ, ಕೋಡಿಪಾಳ್ಯ

ಧನುಶ್ರೀ. ವೈ (ಶೇ 99.04) ವಿಶ್ವ ವೆಂಕಟೇಶ್ವರ ಇಂಟರ್ ನ್ಯಾಷನಲ್ ಶಾಲೆ, ಕೋಡಿಪಾಳ್ಯ

ಎಚ್‌ಆರ್. ಗಗನಶ್ರೀ ಶೇ 98 ಅಪೋಲೊ ಶಾಲೆ, ಮಾದ ನಾಯಕನ ಹಳ್ಳಿ

ಟಿ. ಮೇಘನಾ ಶೇ 97.12 ಶ್ರೀವಿದ್ಯಾ ಪಬ್ಲಿಕ್ ಶಾಲೆ, ತುಂಗಾನಗರ

ಮಂತ್ರಾಲಯ: ಚಂದನ ಉತ್ಸವ

ಮಂತ್ರಾಲಯದಲ್ಲಿ ಸುಬುಧೇಂದ್ರ ತೀರ್ಥರ ನೇತೃತ್ವದಲ್ಲಿ ಶ್ರೀಗಂಧ ದ್ರವ್ಯವನ್ನು ಗರ್ಭಗುಡಿಯ ಕಡೆಗೆ ಮೆರವಣಿಗೆಯಲ್ಲಿ ಒಯ್ಯಲಾಯಿತು

ಪ್ರಜಾವಾಣಿ ವಾರ್ತೆ

ರಾಯಚೂರು: ಅಕ್ಷಯ ತೃತೀಯ ಪ್ರಯುಕ್ತ ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಚಂದನ ಉತ್ಸವ ಅದ್ದೂರಿಯಾಗಿ ನಡೆಯಿತು.

ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥರ ನೇತೃತ್ವದಲ್ಲಿ ಭಕ್ತರು ಹಾಗೂ ಮಠದ ಸಿಬ್ಬಂದಿ ಶ್ರೀಗಂಧದ ದ್ರವ್ಯವನ್ನು ಗರ್ಭಗುಡಿಯ ಕಡೆಗೆ ಮೆರವಣಿಗೆಯಲ್ಲಿ ಕೊಂಡೊಯ್ದರು.

ಶ್ರೀ ರಾಯರ ಮೂಲ ಬೃಂದಾವನದ ಗಂಧಲೇಪನ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಗಂಧಕ್ಕೆ ಮಂಗಳಾರತಿ ನೆರವೇರಿಸಿದರು. ಶ್ರೀ ರಾಯರ ಬೃಂದಾವನಕ್ಕೆ ಮಾತ್ರವಲ್ಲದೆ ಶ್ರೀ ಮಂಚಾಲಮ್ಮ, ಶ್ರೀ ಪ್ರಾಣದೇವರು, ಶ್ರೀ ರುದ್ರ ದೇವರು ಮತ್ತು ಶ್ರೀ ಮಠದಲ್ಲಿರುವ ಸಂತರ ಇತರ ಬೃಂದಾವನಗಳಿಗೂ ಗಂಧಲೇಪನ ಮಾಡಲಾಯಿತು.

ನಿಧನವಾರ್ತೆ

ವಿಧಾನಪರಿಷತ್ ಮಾಜಿ ಸದಸ್ಯ ಟಿ.ಕೆ.ಚಿನ್ನಸ್ವಾಮಿ

ಕೆ.ಆರ್.ನಗರ: ವಿಧಾನಪರಿಷತ್ ಮಾಜಿ ಸದಸ್ಯ ಟಿ.ಕೆ. ಚಿನ್ನಸ್ವಾಮಿ (94) ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಗುರುವಾರ ರಾತ್ರಿ ನಿಧನರಾದರು.

ಅವರಿಗೆ ಮೂವರು ಪುತ್ರರಿದ್ದಾರೆ. ಲ್ಲಿನ ಕಂಠೇನಹಳ್ಳಿ ಸಾರ್ವಜನಿಕ ಸ್ಮಶಾನದಲ್ಲಿ ಶುಕ್ರವಾರ ಅಂತ್ಯಸಂಸ್ಕಾರ ನಡೆಯಿತು.

ಕೊಡಗು ಜಿಲ್ಲೆಯ ತೊರೆನೂರು ಗ್ರಾಮದವರಾದ ಅವರು, ಕೆ.ಆರ್. ನಗರ ತಾಲ್ಲೂಕಿನ ಮಳಲಿ ಗ್ರಾಮದ ಸೋದರ ಮಾವನ ಮನೆಯಲ್ಲಿದ್ದುಕೊಂಡೇ ಶಿಕ್ಷಣ ಪೂರೈಸಿದ್ದರು. ಪ್ರಾಥಮಿಕ ಮತ್ತು ಪ್ರೌಢಶಾಲೆ ಶಿಕ್ಷಕರಾಗಿ, ಸರ್ಕಾರಿ ನೌಕರರ ಸಂಘದ ನಿರ್ದೇಶಕರಾಗಿದ್ದರು.

ನಿವೃತ್ತಿ ನಂತರ 1988ರಲ್ಲಿ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ವಿಧಾನಪರಿಷತ್ ಗೆ ಮೊದಲ ಬಾರಿ ಆಯ್ಕೆಯಾಗಿದ್ದರು.

ಚಿನ್ನದ ಸರಕ್ಕಾಗಿ ಮಹಿಳೆ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಗೇರಿ ಠಾಣೆ ವ್ಯಾಪ್ತಿಯಲ್ಲಿರುವ ಮನೆಯೊಂದಕ್ಕೆ ನುಗ್ಗಿದ್ದ ದುಷ್ಕರ್ಮಿಗಳು, ಒಂಟಿಯಾಗಿದ್ದ ದಿವ್ಯಾ (36) ಎಂಬುವವರನ್ನು ಕೊಂದು ಚಿನ್ನದ ಸರ ದೋಚಿ ಪರಾರಿಯಾಗಿದ್ದಾರೆ.

‘ಕೋನಸಂದ್ರದಲ್ಲಿರುವ ಮನೆಯಲ್ಲಿ ಶುಕ್ರವಾರ ಮಧ್ಯಾಹ್ನ ಈ ಕೃತ್ಯ ನಡೆದಿದೆ. ಕೊಲೆ ಹಾಗೂ ಸುಲಿಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ದಿವ್ಯಾ ಅವರು ಪತಿ ಜೊತೆ ವಾಸವಿದ್ದರು. ಪತಿ, ಸಲೂನ್ ಮಳಿಗೆ ನಡೆಸುತ್ತಿದ್ದರು. ಗುರುವಾರ ಪತಿ ಮಳಿಗೆಗೆ ಹೋಗಿದ್ದರು. ಈ ಸಂದರ್ಭದಲ್ಲಿ ದಿವ್ಯಾ ಒಬ್ಬರೇ ಮನೆಯಲ್ಲಿದ್ದರು’ ಎಂದು ತಿಳಿಸಿದರು.

ಚಿನ್ನದ ಸರ ದೋಚಲು ಕೃತ್ಯ: ‘ದಿವ್ಯಾ ಅವರು ಚಿನ್ನದ ಸರ ಧರಿಸಿದ್ದರು. ಅದನ್ನು ನೋಡಿದ್ದ ಆರೋಪಿಗಳು, ಮನೆ ಬಳಿ ಹಲವು ಸುತ್ತಾಡಿದ್ದರೆಂದು ಗೊತ್ತಾಗಿದೆ. ಮನೆಯಲ್ಲಿ ಯಾರೂ ಇಲ್ಲವೆಂಬುದು ಗೊತ್ತಾಗುತ್ತಿದ್ದಂತೆ ಆರೋಪಿಗಳು, ಒಳಗೆ ನುಗ್ಗಿ ಚಿನ್ನದ ಸರ ಕಿತ್ತುಕೊಳ್ಳಲು ಮುಂದಾಗಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ದಿವ್ಯಾ ಅವರು ಪ್ರತಿರೋಧವೊಡ್ಡಿದ್ದರು. ಆರೋಪಿಗಳು, ಕುತ್ತಿಗೆ ಹಿಸುಕಿ ದಿವ್ಯಾ ಅವರನ್ನು ಕೊಂದು ಪರಾರಿಯಾಗಿದ್ದಾರೆ. ಜೊತೆಗೆ, ಚಿನ್ನದ ಸರವನ್ನೂ ಕಿತ್ತೊಯ್ದಿದ್ದಾರೆ’ ಎಂದು ತಿಳಿಸಿವೆ.

‘ಚಿನ್ನದ ಸರಕ್ಕಾಗಿ ಕೊಲೆ ಮಾಡಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಆದರೆ, ಬೇರೆ ಕಾರಣವೂ ಇರುವ ಸಂಶಯವಿದೆ. ಎಲ್ಲ ಆಯಾಮದಲ್ಲಿ ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ನಿಧಿ ಆಸೆಗೆ ಚಕ್ರಬಸವಣ್ಣ ವಿಗ್ರಹ ಎತ್ತಿಟ್ಟ ಕಳ್ಳರು

ಪ್ರಜಾವಾಣಿ ವಾರ್ತೆ

ಮಾಗಡಿ (ಕುದೂರು): ಕೆಂಪೇಗೌಡರು ನಿರ್ಮಿಸಿದ ಹೊಸಹಳ್ಳಿಯ ಐತಿಹಾಸಿಕ ಸೋಮೇಶ್ವರ ದೇವಸ್ಥಾನದ ಹಿಂಭಾಗದ ಬೃಹತ್ ಚಕ್ರ ಬಸವಣ್ಣ ವಿಗ್ರಹವನ್ನು ನಿಧಿ ಆಸೆಗಾಗಿ ಅರ್ಧ ಅಡಿಯಷ್ಟು ಪಕ್ಕಕ್ಕೆ ಸರಿಸಲಾಗಿದೆ.

ಮಂಗಳವಾರ ರಾತ್ರಿ ವಿಗ್ರಹದ ತಳಭಾಗವನ್ನು ಹಾರೆ ಕೋಲಿನಿಂದ ಅಗೆದಿರುವ ನಿಧಿಕಳ್ಳರು ವಿಗ್ರಹವನ್ನು ಪಕ್ಕಕ್ಕೆ ಸರಿಸಿ, ಹಾಗೆ ಬಿಟ್ಟು ಹೋಗಿದ್ದಾರೆ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದ್ದಾರೆ.

ಪ್ರತಿ ವರ್ಷದಂತೆ ಹೊಸಹಳ್ಳಿ ಗ್ರಾಮಸ್ಥರು ಸೋಮವಾರ ಸಂಜೆ ಮಳೆಗಾಗಿ ಬಸವಣ್ಣನ ವಿಗ್ರಹಕ್ಕೆ ಪೂಜೆ ಸಲ್ಲಿಸಿದ್ದರು.ದೇವಸ್ಥಾನದಲ್ಲಿ ಈ ಹಿಂದೆ ಕಳ್ಳತನ ಆಗಿತ್ತು. ದೇವಸ್ಥಾನದ ಮೂಲ ಗೋಪುರವನ್ನು ಕಳ್ಳರು ಒಡೆದು ಹಾಕಿದ್ದರು.

ಸೋಮೇಶ್ವರ ದೇವಸ್ಥಾನ ಪ್ರಾಚ್ಯವಸ್ತು ಇಲಾಖೆಗೆ ಸೇರಿದ್ದು ಇಂತಹ ಘಟನೆ ನಡೆದರೂ ಇಲಾಖೆ ಯಾವುದೇ ಕ್ರಮ ಜರುಗಿಸುತ್ತಿಲ್ಲ. ಅಭಿವೃದ್ಧಿಪಡಿಸುವ ಕೆಲಸವನ್ನು ಪ್ರಾಚ್ಯವಸ್ತು ಇಲಾಖೆ ಮಾಡುತ್ತಿಲ್ಲ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ವಾಹನ ಸಂಚಾರ ಮಾರ್ಗ ಬದಲಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲೆಕ್ಟ್ರಾನಿಕ್ ಸಿಟಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಹೊಸರಸ್ತೆ ಹಾಗೂ ಚನ್ನಕೇಶವನಗರದಲ್ಲಿ ಮೇ 11ರಂದು ಊರು ಹಬ್ಬದ ಅಂಗವಾಗಿ ನಡೆಯುವ ರಥೋತ್ಸವ, ಕರಗ, ಪಲ್ಲಕ್ಕಿ ಉತ್ಸವಕ್ಕೆ ಹೆಚ್ಚಿನ ಭಕ್ತರು ಬರುವ ನಿರೀಕ್ಷೆಯಿದ್ದು ಸಂಚಾರ ದಟ್ಟಣೆ ಉಂಟಾಗುವ ಸಾಧ್ಯತೆಯಿದೆ. ಸುಗಮ ಸಂಚಾರ ಕಲ್ಪಿಸಲು ವಾಹನ ಸಂಚಾರ ಮಾರ್ಗ ಬದಲಾವಣೆ ಮಾಡಲಾಗಿದೆ.

ರಾಯಸಂದ್ರ ಜಂಕ್ಷನ್ ಕಡೆಯಿಂದ ಕೂಡ್ಲುಗೇಟ್ ಕಡೆಗೆ ಸಂಚರಿಸುವ ವಾಹನಗಳು ಚೂಡಸಂದ್ರ, ಬಿರ್ಲಾ ಜಂಕ್ಷನ್ ಮೂಲಕ ಕೂಡ್ಲುಗೇಟ್ ಕಡೆಗೆ ತೆರಳಬೇಕು. ರಾಯಸಂದ್ರ ಜಂಕ್ಷನ್ ಕಡೆಯಿಂದ ಎಲೆಕ್ಟ್ರಾನಿಕ್ ಸಿಟಿ ಕಡೆಗೆ ಸಂಚರಿಸುವ ವಾಹನಗಳು ಒಲ್ಡ್ ಆರ್‌ಟಿಒ ಜಂಕ್ಷನ್‌ನಿಂದ ದೊಡ್ಡ ನಾಗಮಂಗಲ ಮೂಲಕ ಎಲೆಕ್ಟ್ರಾನಿಕ್ ಸಿಟಿ ಕಡೆಗೆ ಸಂಚರಿಸಬಹುದು. ನಾಗನಾಥಪುರ ಜಂಕ್ಷನ್ ಕಡೆಯಿಂದ ರಾಯಸಂದ್ರ ಕಡೆಗೆ ಸಂಚರಿಸುವ ವಾಹನಗಳು ಕೂಡ್ಲುಗೇಟ್ ಜಂಕ್ಷನ್‌ನಿಂದ ಕೂಡ್ಲುರಸ್ತೆ, ಬಿರ್ಲಾ ಜಂಕ್ಷನ್, ಚೂಡಸಂದ್ರ ಜಂಕ್ಷನ್ ಮೂಲಕ ರಾಯಸಂದ್ರ ಕಡೆಗೆ ಸಂಚರಿಸಬಹುದು.

ಹೊಸೂರು ರಸ್ತೆ ಕಡೆಯಿಂದ ಜೈಲು ರಸ್ತೆ, ರಾಯಸಂದ್ರ ರಸ್ತೆಯ ಕಡೆಗೆ ಸಂಚರಿಸುವ ವಾಹನಗಳು, ಎಲೆಕ್ಟ್ರಾನಿಕ್ ಸಿಟಿ 2ನೇ ಹಂತದಿಂದ ದೊಡ್ಡ ನಾಗಮಂಗಲ, ಓಲ್ಡ್ ಆರ್‌ಟಿಒ ಜಂಕ್ಷನ್ ಮೂಲಕ ಸಂಚರಿಸಬಹುದು ಎಂದು ಪೊಲೀಸರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಗರದಲ್ಲಿ ಇಂದು

ವೇದಾವತಿ ಕೋದಂಡರಾಮು ಅವರ ‘ಯಾವ ಜನ್ಮದ ಮೈತ್ರಿ’ ಪುಸ್ತಕ ಬಿಡುಗಡೆ: ಮುಖ್ಯ ಅತಿಥಿಗಳು: ಎಸ್. ಜಿ. ಸಿದ್ಧರಾಮಯ್ಯ, ಎಂ. ನಾರಾಯಣ ಸ್ವಾಮಿ, ಆಯೋಜನೆ: ವೇದಾವತಿ ಕೋದಂಡರಾಮು ಮತ್ತು ಕುಟುಂಬ, ಸ್ಥಳ: ಒಡೆಯರ್ ಹಾಲ್, ಸೆಂಚುರಿ ಕ್ಲಬ್, ಕಬ್ಬನ್ ಉದ್ಯಾನ, ಬೆಳಿಗ್ಗೆ 10.30

ಲಿಂಗತ್ವ ಅಲ್ಪಸಂಖ್ಯಾತರ ರಾಜಕೀಯ ಪ್ರಾತಿನಿಧ್ಯತೆ ಬಗ್ಗೆ ಸಮ್ಮೇಳನ: ಆಯೋಜನೆ: ಕರ್ನಾಟಕ ರಾಜ್ಯ ಲಿಂಗತ್ವ ಹಾಗೂ ಲೈಂಗಿಕತೆ ಅಲ್ಪಸಂಖ್ಯಾತರ ಒಕ್ಕೂಟ-ಕೊಯಲಿಷನ್ ಫಾರ್ ಕನ್ವರ್ಜೆನ್ಸ್, ಸ್ಥಳ: ಎಸ್.ಸಿ.ಎಂ. ಹೌಸ್, ಮಿಷನ್ ರಸ್ತೆ, ಕಾರ್ಪೊರೇಷನ್ ಸರ್ಕಲ್, ಬೆಳಿಗ್ಗೆ 10.30

ವಿದುಷಿ ಥೈಲಾಂಬಲ್ ಸ್ಮಾರಕ ಸಂಗೀತ: ಗಾಯನ: ಜೋಸ್ಯರ್ ಶ್ರೀಕಾಂತ್, ಪಿಟೀಲು: ಜಿ. ವೆಂಕಟೇಶ್ ಜೋಸ್ಯರ್, ಮೃದಂಗ: ಎ.ಎಸ್.ಎನ್. ಸ್ವಾಮಿ, ಆಯೋಜನೆ: ದಿ ಕಲಾಪ್ರೇಮಿ ಫೌಂಡೇಶನ್, ಸ್ಥಳ: ಸೇವಾ ಸದನ ಸಭಾಂಗಣ, 14ನೇ ಕ್ರಾಸ್, ಮಲ್ಲೇಶ್ವರ, ಬೆಳಿಗ್ಗೆ 11

ಸ್ವರಶ್ರೀ ತೃತೀಯ ವಾರ್ಷಿಕೋತ್ಸವ ಹಾಗೂ ಪ್ರಶಸ್ತಿ ಪ್ರದಾನ, ‘ಸ್ವರ ಸಂಕಲನ’ ಪುಸ್ತಕ ಬಿಡುಗಡೆ: ಬಾಗೂರು ಮಾರ್ಕಾಂಡೇಯ, ಸಾನ್ನಿಧ್ಯ: ದಿನೇಶ ಗುರೂಜಿ, ಮುಖ್ಯ ಅತಿಥಿ: ಶ್ರೀಲಕ್ಷ್ಮಿ ಬಿ. ರಾವ್, ಆಯೋಜನೆ: ಸ್ವರಶ್ರೀ ಸಂಗೀತ ಶಾಲೆ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಮಧ್ಯಾಹ್ನ 3

ವಿಶ್ವೋದಯ: ಅಂತರರಾಷ್ಟ್ರೀಯ ಸೇವೆ ಮತ್ತು ಸಾರ್ವಜನಿಕ ವ್ಯಕ್ತಿತ್ವದ ಬಗ್ಗೆ ಉಪನ್ಯಾಸ: ಜಾವಗಲ್ ಶ್ರೀನಾಥ್, ಚಂದನ್ ಶರ್ಮ, ರಾಜೇಶ್ ಚಕ್ರವರ್ತಿ, ಆಯೋಜನೆ: ರೋಟರಿ ಡಿಸ್ಟ್ರಿಕ್ಟ್ 3192, ಕ್ರಿಯೇಟ್ ಹೋಪ್ ಇನ್ ದಿ ವರ್ಲ್ಡ್, ಸ್ಥಳ: ಪ್ರೆಸ್ಟೀಜ್ ಶ್ರೀಹರಿ ಖೋಡೆ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್, ಕನಕಪುರ ರಸ್ತೆ, ಮಧ್ಯಾಹ್ನ 3.30

ಜಾವಗಲ್ ಶ್ರೀನಾಥ್

ಭರತನಾಟ್ಯ ರಂಗ ಪ್ರವೇಶ: ಲೇಖನಾ ವೆಂಕಟೇಶ್, ಅತಿಥಿಗಳು: ಎಚ್.ಎಸ್. ವೇಣುಗೋಪಾಲ್, ಸುಪರ್ಣ ವೆಂಕಟೇಶ್, ಚಿತ್ರ ಗ್ಯಾಲರಿ ಉದ್ಘಾಟನೆ: ಡುಂಡಿರಾಜ್, ಸ್ಥಳ: ಯುವಪಥ, ಜಯನಗರ 4ನೇ ಹಂತ, ಸಂಜೆ 5

ರಾಮನವಮಿ ಸಂಗೀತೋತ್ಸವ ಸಮಾರೋಪ: ಗಾಯನ: ಮಲ್ಲಾಡಿ ಸೂರಿಬಾಬು, ಬಳ್ಳಾರಿ ರಮೇಶ್, ಎಸ್.ಆರ್. ವಿನಯ್, ಪಿಟೀಲು: ನಿಶಾಂತ್ ಚಂದ್ರನ್, ಮೃದಂಗ: ಅರವಿಂದ್ ಕಾರ್ತಿಕ್ ಶರ್ಮ, ಘಟ: ಶರತ್ ಕೌಶಿಕ್, ಆಯೋಜನೆ ಮತ್ತು ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ, ಸಂಜೆ 5ರಿಂದ

ಶಂಕರ ಜಯಂತಿ, 52ನೇ ವರ್ಷದ ಸುವರ್ಣ ಮಹೋತ್ಸವ ಸಂಗೀತೋತ್ಸವ: ವೇಣುವಾದನ: ಬಿ.ಕೆ. ಅನಂತರಾಮ್, ಪಿಟೀಲು: ಅರ್ಜುನ್ ಎಂ.ಡಿ., ಮೃದಂಗ: ಆನಂದ್ ಬಿ.ಎಸ್., ಖಂಜಿರಾ: ಕಾರ್ತಿಕ್ ಆರ್., ಆಯೋಜನೆ: ಶ್ರೀತ್ಯಾಗರಾಜ ಗಾನಸಭಾ ಟ್ರಸ್ಟ್, ಸ್ಥಳ: ಬಾಲಮೋಹನ ವಿದ್ಯಾಮಂದಿರ, ರಾಜಾಜಿನಗರ, ಸಂಜೆ 6ರಿಂದ

‘ತ್ರಿಂಶತಿ ವೈಭವ’ ಆಟೋಟ ಸ್ಪರ್ಧೆ: ವೇಷಭೂಷಣ ಸ್ಪರ್ಧೆ ಹಾಗೂ ಇತರ ಆಟಗಳು–ಬೆಳಿಗ್ಗೆ 10.30ರಿಂದ ಸಂಜೆ 4.30,

ತ್ರಿಂಶತಿ ಸಂಭ್ರಮ ಹಾಗೂ ನೃತ್ಯ ಪ್ರದರ್ಶನ: ಮುಖ್ಯ ಅತಿಥಿಗಳು: ಸುದರ್ಶನ್ ರಂಗಪ್ರಸಾದ್, ಸಂಗೀತಾ ಭಟ್, ದೀಪ್ತಿ ಬಿ.ಟಿ., ಆಯೋಜನೆ: ಹಿತೈಶಿ ಮಹಿಳಾ ಮಂಡಳಿ, ಸ್ಥಳ: ಸೇವಾಸದನ, ಮಲ್ಲೇಶ್ವರ, ಸಂಜೆ 6

ಪ್ರಸನ್ನ ವೆಂಕಟರಮಣ ಸ್ವಾಮಿ ರಥೋತ್ಸವ: ಹಂಸವಾಹನೋತ್ಸವ, ಆಯೋಜನೆ: ಹಿಂದೂ ಧಾರ್ಮಿಕ ದತ್ತಿ ಇಲಾಖೆ, ಸ್ಥಳ:ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನ, ಕೋಟೆ, ಸಂಜೆ 7ರಿಂದ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಉಸಿರುಗಟ್ಟಿಸಿ ಕೊಂದು ಪರಾರಿಯಾಗಿದ್ದ ಆರೋಪಿ

ಲಿಂಗತ್ವ ಅಲ್ಪಸಂಖ್ಯಾತನ ಕೊಲೆ: ಮಹಿಳೆ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಿಂಗತ್ವ ಅಲ್ಪಸಂಖ್ಯಾತರಾದ ಮಂಜಿ ಬಾಯ್ ಅಲಿಯಾಸ್ ಮಂಜ ನಾಯ್ಕ್ (42) ಎಂಬುವವರನ್ನು ಉಸಿರುಗಟ್ಟಿಸಿ ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿದ್ದ ಆರೋಪದಡಿ ಸ್ನೇಹಿತೆ ಪ್ರೇಮಾ ಅವರನ್ನು ಜೀವನ್‌ಬಿಮಾನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಮುರುಗೇಶ್ ಪಾಳ್ಯದ ಶ್ರೀರಾಮನಗರ ಮಂಜಿ ಬಾಯ್, ಆರೋಪಿ ಪ್ರೇಮಾ ಜೊತೆ ವಾಸವಿದ್ದರು. ಏಪ್ರಿಲ್ 26ರಂದು ರಾತ್ರಿ ಮಂಜಿ ಬಾಯ್ ಅವರನ್ನು ಕೊಲೆ ಮಾಡಲಾಗಿತ್ತು. ಮೇ 3ರಂದು ಮೃತದೇಹ ಪತ್ತೆಯಾಗಿತ್ತು. ಕೃತ್ಯ ಎಸಗಿ ಪರಾರಿಯಾಗಿದ್ದ ಪ್ರೇಮಾ ಅವರನ್ನು ಇತ್ತೀಚೆಗೆ ಸೆರೆ ಹಿಡಿಯಲಾಗಿದೆ’ ಎಂದು ಪೊಲೀಸರು ಹೇಳಿದರು.

ಮಂಜಿ ಬಾಯ್

ಪ್ರೇಮಾ

20 ವರ್ಷಗಳ ಸ್ನೇಹ: ‘ಚನ್ನರಾಯಪಟ್ಟಣದ ಪ್ರೇಮಾ ಅವರ ಪತಿ ಹಲವು ವರ್ಷಗಳ ಹಿಂದೆಯೇ ತೀರಿಕೊಂಡಿದ್ದರು. ಕೆಲಸ ಹುಡುಕಿಕೊಂಡು ಪ್ರೇಮಾ ಅವರು 20 ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದರು. ಕಂಪನಿಯೊಂದರಲ್ಲಿ ಸ್ವಚ್ಛತೆ ಕೆಲಸಕ್ಕೆ ಸೇರಿದ್ದರು. ಇದೇ ಸಂದರ್ಭದಲ್ಲಿ ಅವರಿಗೆ ಮಂಜಿ ಬಾಯ್ ಪರಿಚಯವಾಗಿತ್ತು’ ಎಂದು ಪೊಲೀಸರು ಹೇಳಿದರು.

‘ಪರಸ್ಪರ ಸ್ನೇಹಿತರಾಗಿದ್ದ ಇಬ್ಬರು, ಒಂದೇ ಮನೆಯಲ್ಲಿ ವಾಸವಿದ್ದರು. ಇತ್ತೀಚಿನ ದಿನಗಳಲ್ಲಿ ಇಬ್ಬರೂ ಆಗಾಗ ಜಗಳ ಮಾಡುತ್ತಿದ್ದರು. ಏಪ್ರಿಲ್ 26ರಂದು ರಾತ್ರಿಯೂ ಇಬ್ಬರ ನಡುವೆ ಮಾತಿನ ಚಕಮಕಿ ನಡೆದಿತ್ತು. ಇದೇ ಸಂದರ್ಭದಲ್ಲಿ ಮಂಜಿ ಬಾಯ್, ಚಾಕುವಿನಿಂದ ಪ್ರೇಮಾ ಅವರಿಗೆ ಇರಿಯಲು ಹೋಗಿದ್ದರು. ಅದರಿಂದ ತಪ್ಪಿಸಿಕೊಂಡಿದ್ದ ಪ್ರೇಮಾ, ಮಂಜಿ ಬಾಯ್ ಅವರನ್ನು ಹಿಡಿದುಕೊಂಡು ಕುತ್ತಿಗೆಗೆ ಟವಲ್ ಬಿಗಿದಿದ್ದರು. ಉಸಿರುಗಟ್ಟಿ ಮಂಜಿ ಬಾಯ್ ಸ್ಥಳದಲ್ಲೇ ಮೃತಪಟ್ಟಿದ್ದರು’ ಎಂದರು.

‘ಕೃತ್ಯದ ಬಳಿಕ ಪ್ರೇಮಾ ನಗರ ತೊರೆದು, ತಮ್ಮೂರಿಗೆ ಹೋಗಿದ್ದರು. ಮೇ 3ರಂದು ಮನೆಯಿಂದ ದುರ್ವಾಸನೆ ಬರುತ್ತಿತ್ತು. ಸಂಬಂಧಿಕರು ಪರಿಶೀಲನೆ ನಡೆಸಿದಾಗ, ಮಂಜಿ ಬಾಯ್ ಮೃತದೇಹ ಕೊಳೆತ ಸ್ಥಿತಿಯಲ್ಲಿ ಕಂಡಿತ್ತು. ಆದರೆ, ಸಾವಿನ ಬಗ್ಗೆ ಆರಂಭದಲ್ಲಿ ಯಾವುದೇ ಮಾಹಿತಿ ಇರಲಿಲ್ಲ. ಮರಣೋತ್ತರ ಪರೀಕ್ಷೆ ನಡೆಸಿದಾಗ, ಕೊಲೆ ಎಂಬುದು ಗೊತ್ತಾಗಿತ್ತು’ ಎಂದು ಪೊಲೀಸರು ಹೇಳಿದರು.

‘ಸ್ಥಳೀಯರು, ಕುಟುಂಬಸ್ಥರು ಹಾಗೂ ಸಂಬಂಧಿಕರನ್ನು ವಿಚಾರಣೆ ನಡೆಸಲಾಗಿತ್ತು. ಕೊನೆಯಲ್ಲಿ, ಪ್ರೇಮಾ ಬಗ್ಗೆ ಮಾಹಿತಿ ಲಭ್ಯವಾಗಿತ್ತು. ಅವರನ್ನು ವಶಕ್ಕೆ ಪಡೆದು ವಿಚಾರಿಸಿದಾಗ, ತಪ್ಪೊಪ್ಪಿಕೊಂಡರು. ತಮ್ಮನ್ನು ಕೊಲೆ ಮಾಡಲು ಬಂದಿದ್ದಾಗಿ, ಮಂಜಿ ಬಾಯ್ ಅವರನ್ನು ಕೊಲೆ ಮಾಡಿದ್ದಾಗಿ ಆರೋಪಿ ಹೇಳಿಕೆ ನೀಡಿದ್ದಾರೆ’ ಎಂದು ತಿಳಿಸಿದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆ: ಅನೈತಿಕ ಸ್ಪರ್ಧೆಗೆ ಇತಿಶ್ರೀ, ನೈಜ ಸಾಮರ್ಥ್ಯಕ್ಕೆ ಆದ್ಯತೆ

ಅಧಿಕ ಫಲಿತಾಂಶದ ಭ್ರಮೆ ಕಳಚಿದ 'ವೆಬ್‌ಕಾಸ್ಟಿಂಗ್'

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿನ ಭಾರಿ ಕುಸಿತ ಚರ್ಚೆಗೆ ಗ್ರಾಸವಾದರೂ, ಇದುವರೆಗೆ ಹೆಚ್ಚು ಫಲಿತಾಂಶ ಪಡೆಯಲು ಅನುಸರಿಸುತ್ತಿದ್ದ ವಾಮಮಾರ್ಗಗಳನ್ನು ಅನಾವರಣಗೊಳಿಸಿದೆ.

ಕಳೆದೆರಡು ದಶಕಗಳಿಂದ 'ಹೆಚ್ಚಿನ ಫಲಿತಾಂಶ' ಎಂಬ ಪ್ರತಿಷ್ಠೆಯ ಬೆನ್ನು ಹತ್ತಿದ ಶಿಕ್ಷಣ ಇಲಾಖೆಯ ಅಧಿಕಾರಿಗಳು, ಮುಖ್ಯ ಶಿಕ್ಷಕರು, ಶಿಕ್ಷಕರು ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಹಾಗೂ ಅವರ ಪೋಷಕರನ್ನು ಅಂಕಗಳ ಭ್ರಮಾ ಲೋಕದಲ್ಲಿ ತೇಲಿಸಿದ್ದರು ಎಂಬ ಸತ್ಯವನ್ನು ಇದೇ ಮೊದಲ ಬಾರಿ ಪರೀಕ್ಷಾ ಕೇಂದ್ರಗಳಲ್ಲಿ ಅಳವಡಿಸಿದ 'ವೆಬ್‌ಕಾಸ್ಟಿಂಗ್' ವ್ಯವಸ್ಥೆ ಬಿಚ್ಚಿಟ್ಟಿದೆ.

2023ರ ಮಾರ್ಚ್–ಏಪ್ರಿಲ್‌ನಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ನಕಲು ಮಾಡಲು ವಿದ್ಯಾರ್ಥಿಗಳಿಗೆ ಸಹಕರಿಸಿದ ಆರೋಪದ ಮೇಲೆ 100ಕ್ಕೂ ಹೆಚ್ಚು ಶಿಕ್ಷಕರನ್ನು ಅಮಾನತು ಮಾಡಲಾಗಿತ್ತು.

ವಿಜಯಪುರ, ಯಾದಗಿರಿ, ಬೆಳಗಾವಿ, ಚಿತ್ರದುರ್ಗ, ಬೀದರ್, ಬಾಗಲಕೋಟೆ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಅತಿಹೆಚ್ಚು ನಕಲು ನಡೆದಿತ್ತು.

ಕಳೆದ ವರ್ಷದ ಫಲಿತಾಂಶ ಬಂದಾಗ ನಕಲು ನಡೆದಿದ್ದ ಬಹುತೇಕ ಜಿಲ್ಲೆಗಳು ಫಲಿತಾಂಶದ ಜಿಲ್ಲಾವಾರು ಪಟ್ಟಿಯಲ್ಲಿ ಭಾರಿ ಜಿಗಿತ ಕಂಡಿದ್ದವು. ಪರೀಕ್ಷೆಗಳಲ್ಲಿ ಬಿಗಿ ಕ್ರಮ ಕೈಗೊಳ್ಳುತ್ತಿದ್ದ ಉಡುಪಿ, ದಕ್ಷಿಣ ಕನ್ನಡದಂತಹ ಜಿಲ್ಲೆಗಳು ಕುಸಿತ ಕಂಡಿದ್ದವು. ಹಾಗಾಗಿ, 2024ರಲ್ಲಿ ನಡೆಯುವ ಪರೀಕ್ಷೆಯಲ್ಲಿ ನಕಲು, ವ್ಯವಹಾರಕ್ಕೆ ಸಂಪೂರ್ಣ ಕಡಿವಾಣ ಹಾಕಲು ಕ್ರಮಕೈಗೊಳ್ಳುವಂತೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಪರೀಕ್ಷಾ ಮಂಡಳಿಗೆ ಸೂಚಿಸಿತ್ತು.

2024ರ ಪರೀಕ್ಷೆಗಳನ್ನು ಅತ್ಯಂತ ವ್ಯವಸ್ಥಿತವಾಗಿ, ನಕಲಿಗೆ ಅವಕಾಶವಿಲ್ಲದಂತೆ ಪಾರದರ್ಶಕವಾಗಿ ನಡೆಸಲು ನಿರ್ಧರಿಸಿದ್ದ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಕಳೆದ ಆಗಸ್ಟ್‌ನಲ್ಲೇ ಎರಡು ಮಹತ್ವದ ನಿರ್ಧಾರ ತೆಗೆದುಕೊಂಡಿತ್ತು.

ಸಾಮೂಹಿಕವಾಗಿ ನಕಲು ಮಾಡಲು ಅವಕಾಶ ನೀಡುವ ಮೂಲಕ ವಾಮಮಾರ್ಗಗಳಿಂದ ಹೆಚ್ಚು ಫಲಿತಾಂಶ ಪಡೆಯುತ್ತಿದ್ದ ಪರೀಕ್ಷಾ ಕೇಂದ್ರಗಳನ್ನು ರದ್ದು ಮಾಡುವುದು, ಅಂತಹ ವಿದ್ಯಾರ್ಥಿಗಳಿಗೆ ಸಮೀಪದ ಕೇಂದ್ರಗಳಲ್ಲಿ ವ್ಯವಸ್ಥೆ ಕಲ್ಪಿಸುವುದು ಹಾಗೂ ಪ್ರತಿ ಪರೀಕ್ಷಾ ಕೇಂದ್ರಗಳಲ್ಲೂ ವೆಬ್‌ಕಾಸ್ಟಿಂಗ್ ಅಳವಡಿಸುವುದು. ಎರಡನೇ ಕ್ರಮ ಸಾಕಷ್ಟು ಟೀಕೆಗೆ ಒಳಗಾದರೂ ಪರೀಕ್ಷಾ ಅಕ್ರಮಗಳನ್ನು ತಡೆಯುವಲ್ಲಿ ಯಶಸ್ವಿಯಾಗಿದೆ.

ಅಕ್ರಮಗಳನ್ನು ತಡೆಯಲು ತೆಗೆದುಕೊಂಡ ಕ್ರಮಗಳಿಂದಾಗಿ ಫಲಿತಾಂಶ ಕಳೆದ ಬಾರಿಗಿಂತ ಶೇಕಡ 30ರಷ್ಟು ಕುಸಿತವಾಗಿತ್ತು. ಪರೀಕ್ಷೆ ಬರೆದಿದ್ದ 8.59 ಲಕ್ಷ ವಿದ್ಯಾರ್ಥಿಗಳಲ್ಲಿ 3.97 ಲಕ್ಷ ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದರು. ಇದರಿಂದ ವಿದ್ಯಾರ್ಥಿಗಳ ಮನೋಬಲ ಕುಗ್ಗುವ ಸಾಧ್ಯತೆ ಇದೆ ಎಂದು ಮನಗಂಡ ಶಿಕ್ಷಣ ಇಲಾಖೆ ಕೃಪಾಂಕಗಳ ನಿಯಮಗಳನ್ನು ಬದಲಾಯಿಸಿ, 1.69 ಲಕ್ಷ ವಿದ್ಯಾರ್ಥಿಗಳನ್ನು ತೇರ್ಗಡೆ ಮಾಡಿದೆ.

'ಶಿಕ್ಷಣ ಪೂರೈಸಿದ ನಂತರ ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದೆ. ಮೊದಲ ಬಾರಿ ಕೆಇಎಸ್ (ಕರ್ನಾಟಕ ಶಿಕ್ಷಣ ಸೇವೆ) ತೇರ್ಗಡೆಯಾಗಿ 1999ರಲ್ಲಿ ಗ್ರಾಮೀಣ ಭಾಗದ ಸರ್ಕಾರಿ ಶಾಲೆಗೆ ಮುಖ್ಯ ಶಿಕ್ಷಕಿಯಾಗಿ ಹೋದೆ. ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರವೂ ಆಗಿದ್ದ ಶಾಲೆಯ ಫಲಿತಾಂಶ ಸುತ್ತಲ ಇತರೆ ಶಾಲೆಗಳಿಗಿಂತ ಉತ್ತಮವಾಗಿತ್ತು. ಸಾಮೂಹಿಕ ನಕಲು ಹಿಂದಿನಿಂದಲೂ ನಡೆದುಕೊಂಡು ಬಂದಿದೆ ಎಂಬ ಮಾಹಿತಿ ಕೇಳಿ ಆಶ್ಚರ್ಯದ ಜತೆಗೆ, ಕೋಪವೂ ಬಂದಿತ್ತು. ಕೆಲ ಶಿಕ್ಷಕರ ವಿರೋಧದ ಮಧ್ಯೆಯೂ ಆ ವರ್ಷ ನಕಲು ಮಾಡಿಸಲು ಅವಕಾಶ ಕೊಡಲಿಲ್ಲ. ಅದುವರೆಗೂ ಶೇ 100 ಫಲಿತಾಂಶ ಪಡೆಯುತ್ತಿದ್ದ ಶಾಲೆ ಒಮ್ಮೆಲೇ ಶೇ 49ಕ್ಕೆ ಕುಸಿದಿತ್ತು.

'ಎರಡು ಮೂರು ವರ್ಷ ಅಧಿಕಾರಿಗಳ ಕಿರಿಕಿರಿ ಸಹಿಸಲ ಸಾಧ್ಯವಾಗಿತ್ತು. ಏಕ ವಚನದ ಪ್ರಯೋಗವನ್ನೂ ಮಾಡಿದ್ದರು. ಪೋಷಕರು ಶಾಲೆಗೆ ಮಕ್ಕಳನ್ನು ಸೇರಿಸಲು ಹಿಂದೇಟು ಹಾಕಿದ್ದರು. ಆದರೂ, ಎದೆಗುಂದದೆ ಮಕ್ಕಳಲ್ಲಿ ಆತ್ಮಸ್ಥೈರ್ಯ ತುಂಬಿ, ಕಠಿಣ ಪರಿಶ್ರಮ ಹಾಗೂ ಪಾಠದ ಗುಣಮಟ್ಟಕ್ಕೆ ಗಮನಕೊಟ್ಟ ಕಾರಣ ಫಲಿತಾಂಶ ಕ್ರಮೇಣ ವೃದ್ಧಿಸಿತು. ಈಗ ಇಲಾಖೆಯೇ ಪಾರದರ್ಶಕ ಪರೀಕ್ಷೆ ನಡೆಸಲು ಕ್ರಮ ಕೈಗೊಂಡಿರುವುದು ಹೆಮ್ಮೆ ತಂದಿದೆ' ಎಂದು ಮುಖ್ಯ ಶಿಕ್ಷಕಿಯೊಬ್ಬರು 'ಪ್ರಜಾವಾಣಿ' ಜತೆ ಅನಿಸಿಕೆ ಹಂಚಿಕೊಂಡರು.

'ಪರೀಕ್ಷಾ ಕೇಂದ್ರಗಳಲ್ಲಿ ಸಾಮೂಹಿಕ ನಕಲು ಮಾಡಿಸಲು ಒಪ್ಪದ ಪ್ರಾಮಾಣಿಕ ಶಿಕ್ಷಕರು ಅಥವಾ ಶಿಕ್ಷಕಿಯರನ್ನು ಪರೀಕ್ಷಾ ಕೇಂದ್ರದಿಂದ ಹೊರಗೆ ಕಳುಹಿಸಿ ನಕಲು ಮಾಡಿಸುವ ಪರಿಪಾಟ ಮಂಡ್ಯ ಜಿಲ್ಲೆಯ ಹಲವು ಕಡೆಗಳಲ್ಲಿ ನಡೆಯುತ್ತಿದೆ' ಎಂದು ಶಿಕ್ಷಕರೊಬ್ಬರು ಹೇಳಿದ್ದಾರೆ.

ಮೂರು ಪರೀಕ್ಷಾ ಪದ್ಧತಿ ಪರಿಚಯಿಸಲಾಗಿದೆ. ಕಡಿಮೆ ಅಂಕ ಪಡೆದ, ಅನುತ್ತೀರ್ಣರಾದ ವಿದ್ಯಾರ್ಥಿಗಳು ಆತಂಕ ಪಡುವ ಅಗತ್ಯವಿಲ್ಲ. ಮೂರು ಪರೀಕ್ಷೆ ಬರೆದು ಹೆಚ್ಚು ಅಂಕ ಗಳಿಸಿದ ಅಂಕಪಟ್ಟಿ ಪಡೆಯಬಹುದು. ಶಾಲೆಗಳಲ್ಲೇ ಹೆಚ್ಚುವರಿ ಬೋಧನೆಗೂ ವ್ಯವಸ್ಥೆ ಮಾಡಲಾಗಿದೆ

ರಿತೇಶ್‌ಕುಮಾರ್ ಸಿಂಗ್, ಪ್ರಧಾನ ಕಾರ್ಯದರ್ಶಿ, ಶಾಲಾ ಶಿಕ್ಷಣ ಇಲಾಖೆ

ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತಮ ಅಂಕ ಪಡೆದ ಮಗ ಎಂಜಿನಿಯರಿಂಗ್‌ನಲ್ಲಿ ವಿಫಲನಾದ. ಪ್ರೌಢಶಾಲೆಯಲ್ಲಿ ಗುಣಮಟ್ಟದ ಪಾಠ ಮಾಡದೇ ನಕಲು ಮಾಡಿಸಿದ್ದರ ಫಲ ಈಗ ಅನುಭವಿಸುತ್ತಿದ್ದೇವೆ. ಮಕ್ಕಳು ಅನುತ್ತೀರ್ಣರಾದರೂ ಪರವಾಗಿಲ್ಲ. ಪಾರದರ್ಶಕ ಪರೀಕ್ಷೆ ನಡೆಸಬೇಕು

ಅನುರಾಗ್, ಪೋಷಕ, ಚಿತ್ರದುರ್ಗ

12 ವರ್ಷಗಳ ಹಿಂದಿನ ಮಾತು. ಕೊಠಡಿಯಲ್ಲಿ ನಡೆಯುತ್ತಿದ್ದ ಸಾಮೂಹಿಕ ನಕಲು ವಿರೋಧಿಸಿದಕ್ಕೆ ಶಿಕ್ಷಕರೇ ಅವಮಾನಿಸಿದ್ದರು. ನಿಯತ್ತಿನಿಂದ ಓದಿದ್ದಕ್ಕೆ ಈಗ ಸರ್ಕಾರಿ ಅಧಿಕಾರಿಯಾಗಿರುವೆ

ಚನ್ನಬಸಪ್ಪ, ಹಳೆಯ ವಿದ್ಯಾರ್ಥಿ, ಕಲಬುರಗಿ

ವರ್ಷ	ಫಲಿತಾಂಶ (ಶೇಕಡವಾರು)
2018-19	73.70
2019-20	71.80
2020-21	99.99
2021-22	85.13
2022-23	83.89
2023-24	73.40

ಏನಿದು ವೆಬ್‌ಕಾಸ್ಟಿಂಗ್?

ಪ್ರತಿ ಪರೀಕ್ಷಾ ಕೊಠಡಿಯಲ್ಲೂ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಲಾಗುತ್ತದೆ. ಹೀಗೆ ಅಳವಡಿಸಿದ ಕ್ಯಾಮೆರಾಗಳ ಐಪಿ ಸಂಖ್ಯೆಗಳನ್ನು (ಇಂಟರ್‌ನೆಟ್ ಪ್ರೋಟೊಕಾಲ್ ನಂಬರ್) ಬಳಸಿಕೊಂಡು ಆಯಾ ಜಿಲ್ಲಾ ಕೇಂದ್ರಗಳಲ್ಲಿ ಸ್ಥಾಪಿಸಿದ ನಿಯಂತ್ರಣ ಕೊಠಡಿಗಳಲ್ಲಿ ಕುಳಿತು ಅಧಿಕಾರಿಗಳು ಎಲ್ಲ ಕೇಂದ್ರಗಳ ಚಟುವಟಿಕೆ ವೀಕ್ಷಿಸಬಹುದು. ಪರೀಕ್ಷಾ ಅಕ್ರಮ ಕಂಡುಬಂದರೆ ತಕ್ಷಣ ಆ ಕೇಂದ್ರದ ಮುಖ್ಯಸ್ಥರಿಗೆ ಮಾಹಿತಿ ನೀಡಲಾಗುತ್ತದೆ. ಜತೆಗೆ, ಅಕ್ರಮಕ್ಕೆ ಸಹಕರಿಸಿದ ಕೊಠಡಿ ಮೇಲ್ವಿಚಾರಕರ ಮೇಲೆ ಕ್ರಮ ಜರುಗಿಸಲಾಗುತ್ತದೆ.

ವೆಬ್‌ಕಾಸ್ಟಿಂಗ್‌ನತ್ತ ಸಿಬಿಎಸ್‌ಇ ಒಲವು

ಕರ್ನಾಟಕದಲ್ಲಿ 2024ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಬಳಸಿದ ವೆಬ್‌ಕಾಸ್ಟಿಂಗ್ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ಸಿಬಿಎಸ್‌ಇ (ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಶನ್) ಸಹ ಒಲವು ತೋರಿದೆ. ಹಾಗೆಯೇ, ಇತರೆ ಹಲವು ರಾಜ್ಯಗಳು ಶಿಕ್ಷಣ ಇಲಾಖೆಯಿಂದ ಮಾಹಿತಿ ಪಡೆದಿದೆ.

ಕೃಪಾಂಕಕ್ಕೂ ಇತಿಶ್ರೀ

ವೆಬ್‌ಕಾಸ್ಟಿಂಗ್‌ನಿಂದ ಫಲಿತಾಂಶದಲ್ಲಾದ ಭಾರಿ ಪ್ರಮಾಣದಲ್ಲಿ ಕುಸಿತ ತಡೆಯಲು ಗರಿಷ್ಠ 20ರವರೆಗೆ ಈ ಬಾರಿ ಕೃಪಾಂಕ ನೀಡಲಾಗಿದೆ. 2024–25ನೇ ಸಾಲಿನಿಂದ ಶಿಕ್ಷಕರು ವಾಮಮಾರ್ಗಗಳನ್ನು ಬಿಟ್ಟು ಗುಣಮಟ್ಟದ ಪಾಠಗಳಿಗೆ ಗಮನ ನೀಡಬೇಕು. ಹೊಸ ವ್ಯವಸ್ಥೆಗೆ ಹೊಂದಿಕೊಳ್ಳಬೇಕು. ಹಾಗಾಗಿ, 2025ರ ಪರೀಕ್ಷೆಯಲ್ಲಿ ಕೃಪಾಂಕ ವ್ಯವಸ್ಥೆ ಇರುವುದಿಲ್ಲ ಎಂದು ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ರಿತೇಶ್‌ಕುಮಾರ್ ಸಿಂಗ್ ಮಾಹಿತಿ ನೀಡಿದರು.

ಶೂನ್ಯ ಫಲಿತಾಂಶ: ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯೂ ಕ್ಷೀಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೂನ್ಯ ಫಲಿತಾಂಶ ಪಡೆದ ರಾಜ್ಯದ 52 ಶಾಲೆಗಳ ವಿದ್ಯಾರ್ಥಿಗಳ ಸಂಖ್ಯೆ ಒಂದರಿಂದ ಒಂಬತ್ತರ ಒಳಗೆ ಇದೆ.

62 ಖಾಸಗಿ, 13 ಅನುದಾನಿತ ಹಾಗೂ ಮೂರು ಸರ್ಕಾರಿ ಶಾಲೆಗಳು ಸೇರಿದಂತೆ 78 ಶಾಲೆಗಳು ಈ ಬಾರಿ ಶೂನ್ಯ ಫಲಿತಾಂಶ ದಾಖಲಿಸಿವೆ. ಹೆಚ್ಚಿನ ಶಾಲೆಗಳು ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಿಗೆ ಸೇರಿವೆ.

34ನೇ ಸ್ಥಾನ ಪಡೆದಿರುವ ಕಲಬುರಗಿ ಜಿಲ್ಲೆಯಲ್ಲೇ 18 ಶಾಲೆಗಳು ಶೂನ್ಯ ಫಲಿತಾಂಶ ಪಡೆದಿವೆ. ಯಾದಗಿರಿ ಒಂಬತ್ತು, ಬೆಳಗಾವಿ ಆರು ಹಾಗೂ ಚಿಕ್ಕೋಡಿ ಜಿಲ್ಲೆಯಲ್ಲಿ ಐದು ಶಾಲೆಗಳಿವೆ.

ಬೆಂಗಳೂರು ಉತ್ತರದಲ್ಲಿ ಎರಡು ಶಾಲೆಗಳು ಶೂನ್ಯ ಫಲಿತಾಂಶ ಪಡೆದಿದ್ದು, ಕ್ರಮವಾಗಿ ಎರಡು ಮತ್ತು ಏಳು ವಿದ್ಯಾರ್ಥಿಗಳು ಇದ್ದಾರೆ. ಬೆಂಗಳೂರು ದಕ್ಷಿಣದ ಮತ್ತೊಂದು ಶಾಲೆಯಲ್ಲೂ ಏಳು ಮಕ್ಕಳು ಪ್ರವೇಶ ಪಡೆದಿದ್ದರು. ಈ ಎಲ್ಲವೂ ಖಾಸಗಿ ಶಾಲೆಗಳು.

ನಿಯಮದ ಪ್ರಕಾರ ಯಾವುದೇ ಅನುದಾನಿತ ಶಾಲೆ ಮಾನ್ಯತೆ ಪಡೆಯಲು ಕನಿಷ್ಠ 25 ಮಕ್ಕಳು ಇರಬೇಕು. ಶೂನ್ಯ ಫಲಿತಾಂಶ ಪಡೆದ ಮಕ್ಕಳ ಸಂಖ್ಯೆ ಗಮನಿಸಿದರೆ ಶಿಕ್ಷಣ ಇಲಾಖೆಯ ಅಧಿಕಾರಿಗಳು ಶಾಲೆಯ ನವೀಕರಣದ ಮಾನದಂಡಗಳನ್ನು ಪಾಲಿಸಿಲ್ಲ. ಸರ್ಕಾರಿ ಹಾಗೂ ಖಾಸಗಿ ಶಾಲೆಗಳಿಗೆ ವಿದ್ಯಾರ್ಥಿಗಳ ಸಂಖ್ಯೆಯ ನಿರ್ಬಂಧವಿಲ್ಲ.

ಜಗಜ್ಯೋತಿ ಬಸವೇಶ್ವರರ ಜಯಂತಿ ಅಂಗವಾಗಿ ವಚನ ಜ್ಯೋತಿ ಬಳಗ ಆಯೋಜಿಸಿದ್ದ ಬಸವ ಉತ್ಸವದ ಮೆರವಣಿಗೆಯು ಹೊಸಹಳ್ಳಿಯ ಜಗಜ್ಯೋತಿ ಬಸವೇಶ್ವರ ವಿದ್ಯಾರ್ಥಿನಿಲಯದ ಮುಂಭಾಗದಿಂದ ಹೊರಟು ವಿಜಯನಗರ ರಸ್ತೆಯಲ್ಲಿ ವಿಜೃಂಭಣೆಯಿಂದ ಸಾಗಿತು ಪ್ರಜಾವಾಣಿ ಚಿತ್ರ

ಬಸವ ಜಯಂತಿಯಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್

'ಬಸವಣ್ಣ ಎಂದರೆ ಭಯವಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವಣ್ಣ ಇದ್ದೆಡೆ ಭಯವಿಲ್ಲ. ಬಸವಣ್ಣ ಎಂದರೆ ಹಸಿವಿಲ್ಲ. ಬಸವ ಎಂದರೆ ಬೆಳಕು. ಬಸವ ಎಂದರೆ ಬದುಕು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಣ್ಣಿಸಿದರು.

ಬಸವ ಸಮಿತಿಯು ನಗರದ ಬಸವ ಭವನದಲ್ಲಿ ಶುಕ್ರವಾರ ಏರ್ಪಡಿಸಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಬಸವಣ್ಣನವರ ವಿಚಾರಗಳ ಕಡೆಗೆ ಜಗತ್ತು ತಿರುಗಿ ನೋಡುತ್ತಿದೆ. ಅವರ ತತ್ವ, ಆದರ್ಶಗಳನ್ನು ಅಳವಡಿಸಿಕೊಳ್ಳುವುದು ಇಂದಿನ ತುರ್ತು. ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕ ಎಂದು ನಮ್ಮ ಕಾಂಗ್ರೆಸ್ ಸರ್ಕಾರ ಘೋಷಣೆ ಮಾಡಿ ಗೌರವ ಸಲ್ಲಿಸಿದೆ. ನಮ್ಮ ಸರ್ಕಾರ ಬಸವಣ್ಣ ಹಾಕಿಕೊಟ್ಟ ಹಾದಿಯಲ್ಲಿ ನಡೆಯುತ್ತಿದೆ' ಎಂದು ಹೇಳಿದರು.

'ನಾನು ರೇಣುಕಾಚಾರ್ಯ ಕಾಲೇಜಿನಲ್ಲಿ ಓದಿದ್ದರೂ ಯಾರೂ ಬಸವಣ್ಣನವರ ಬಗ್ಗೆ ತಿಳಿಸಿರಲಿಲ್ಲ. ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿದ್ದ ವಿಲಾಸ್ ರಾವ್ ದೇಶ್‌ಮುಖ್ ಅವರು ಬಸವ ಜಯಂತಿಗೆ ರಜೆ ಘೋಷಣೆ ಮಾಡಿದಾಗ ಆಸಕ್ತಿ ಬಂದು ತಿಳಿದುಕೊಂಡೆ' ಎಂದು ತಿಳಿಸಿದರು.

ಬಸವ ಸಮಿತಿ ಅಧ್ಯಕ್ಷ ಅರವಿಂದ ಜತ್ತಿ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಲಿಂಗಾಯತ ಎಜುಕೇಶನ್ (ಕೆಎಲ್‌ಇ) ಸೊಸೈಟಿ ಅಧ್ಯಕ್ಷ ಪ್ರಭಾಕರ ಕೋರೆ ಅವರಿಗೆ 'ಕಾಯಕ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ವಿವಿಧೆಡೆ ಬಸವ ಜಯಂತಿ: ರಾಜ್ಯದ ಸಾಂಸ್ಕೃತಿಕ ನಾಯಕ, ಜಗಜ್ಯೋತಿ ಬಸವಣ್ಣ ಅವರ ಜಯಂತಿಯನ್ನು ಎಲ್ಲೆಡೆ ಸಂಭ್ರಮದಿಂದ ಆಚರಿಸಲಾಯಿತು.

ಬಸವ ಜಯಂತಿ ಅಂಗವಾಗಿ ದೇವಾಲಯಗಳಲ್ಲಿ ವಿಶೇಷ ಪೂಜೆಗಳು ನಡೆದವು. ರಸ್ತೆ ಬದಿಯಲ್ಲಿ, ಉದ್ಯಾನಗಳಲ್ಲಿರುವ ಬಸವೇಶ್ವರರ ಪುತ್ಥಳಿಗಳಿಗೆ ಪೂಜೆ ಸಲ್ಲಿಸಿ ಪುಷ್ಪ ನಮನ ಸಲ್ಲಿಸಲಾಯಿತು. ಹಲವು ಕಡೆಗಳಲ್ಲಿ ಬಸವೇಶ್ವರರ ಛಾಯಾಚಿತ್ರ, ಪ್ರತಿಮೆಗಳ ಮೆರವಣಿಗೆ ನಡೆಸಲಾಯಿತು.

ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಲೋಕಕ್ಕೆ ಮಹತ್ತರ ಕೊಡುಗೆಯನ್ನು ನೀಡಿದ ಕಲ್ಯಾಣ ಕ್ರಾಂತಿಯ ಮೂಲಕ ಸಮಾನತೆಯ ಆಶಯವನ್ನು ಎತ್ತಿ ಹಿಡಿದ ಬಸವಣ್ಣನ ಕೊಡುಗೆ ಅಪಾರ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿ ನೇ.ಭ.ರಾಮಲಿಂಗ ಶೆಟ್ಟಿ ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಏರ್ಪಡಿಸಲಾಗಿದ್ದ ಬಸವ ಜಯಂತಿಯಲ್ಲಿ ಅವರು ಮಾತನಾಡಿದರು. ಪರಿಷತ್ತಿನ ಪ್ರಕಟಣಾ ವಿಭಾಗದ ಸಂಚಾಲಕ ಎನ್.ಎಸ್.ಶ್ರೀಧರ ಮೂರ್ತಿ, ನಟರಾಜ್, ರಾಘವೇಂದ್ರ ಕುಲಕರ್ಣಿ, ಕೇಶವ ಮೂರ್ತಿ, ಶ್ರೀನಿವಾಸ ಮೂರ್ತಿ ಭಾಗವಹಿಸಿದ್ದರು.

ವಿಶ್ವ ಬಸವ ಜಯಂತಿ ಅಂಗವಾಗಿ ಬಸವ ಸಮಿತಿಯು ಬೆಂಗಳೂರಿನ ಬಸವ ಭವನದಲ್ಲಿ ಶುಕ್ರವಾರ ಏರ್ಪಡಿಸಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಶಿಕ್ಷಣ ತಜ್ಞ ಪ್ರಭಾಕರ ಕೋರೆ ಅವರಿಗೆ ಕಾಯಕ ರತ್ನ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು. ಬೇಲಿಮಠದ ಶಿವರುದ್ರ ಸ್ವಾಮೀಜಿ, ಸಚಿವ ಈಶ್ವರ್ ಖಂಡ್ರೆ, ಬಸವ ಸಮಿತಿ ಅಧ್ಯಕ್ಷ ಡಾ. ಅರವಿಂದ ಜತ್ತಿ ಉಪಸ್ಥಿತರಿದ್ದರು

ವಿಜಯನಗರದಲ್ಲಿ ಬಸವ ಉತ್ಸವ

ವಚನಜ್ಯೋತಿ ಬಳಗವು ವಿಜಯನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಬಸವ ಉತ್ಸವದಲ್ಲಿ ಸಾಹಿತಿಗಳು, ಕಲಾವಿದರು, ರಾಜಕಾರಣಿಗಳು ಪಾಲ್ಗೊಂಡು, ಮೆರಣಿಗೆಯಲ್ಲಿ ಹೆಜ್ಜೆ ಹಾಕಿದರು.

'ಎಲ್ಲರನ್ನು ಅಪ್ಪಿಕೊಂಡು ಒಪ್ಪಿಕೊಂಡು ಜೊತೆಗೆ ಕರೆದುಕೊಂಡು ಮುನ್ನಡೆಸಿದ ಬಸವಣ್ಣ ಸಕಲ ಜೀವಾತ್ಮಕ್ಕೂ ಲೇಸನ್ನೇ ಬಯಸಿದವರು' ಎಂದು ವಿಜಯನಗರ ಶಾಸಕ ಎಂ. ಕೃಷ್ಣಪ್ಪ ಬಣ್ಣಿಸಿದರು.

ಬಸವ ಉತ್ಸವಕ್ಕೆ ಚಾಲನೆ ನೀಡಿದ ಬೇಲಿಮಠದ ಶಿವರುದ್ರಸ್ವಾಮೀಜಿ ಮಾತನಾಡಿ, 'ಬಸವಣ್ಣನವರೊಡನೆ ಹೆಜ್ಜೆ ಎಂದರೆ ಕೇವಲ ಮೆರವಣಿಗೆಯಲ್ಲ, ಅದು ನಿರಂತರವಾಗಿ ಬಸವ ತತ್ತ್ವಗಳ ಜೊತೆ ಹೆಜ್ಜೆ ಹಾಕುವುದು, ವಚನ ಸಂದೇಶವನ್ನು ಪರಿಪಾಲಿಸುವುದು' ಎಂದು ಅಭಿಪ್ರಾಯಪಟ್ಟರು.

ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸಿ. ಸೋಮಶೇಖರ್, ವಚನಜ್ಯೋತಿ ಬಳಗ ಅಧ್ಯಕ್ಷ ಪಿನಾಕಪಾಣಿ ಮಾತನಾಡಿದರು.

ಬಸವಣ್ಣನವರೊಂದಿಗೆ ವಿಜಯನಗರದಿಂದ ಹೊರಟ ನಡಿಗೆ ಅರ್ಧ ಬೆಂಗಳೂರು ಸಂಚರಿಸಿ ಸಂಜೆ ಮಹಾತ್ಮ ಗಾಂಧಿ ರಸ್ತೆಯಲ್ಲಿ ವಚನಗಳನ್ನು ಹಾಡಿ, ವಚನ ಜಯಘೋಷಗಳನ್ನು ಮಾಡಿ ಮುಕ್ತಾಯಗೊಳಿಸಲಾಯಿತು.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಶುಕ್ರವಾರ ಕರ್ನಾಟಕ ಪ್ರತಿಭಾವರ್ಧಕ ಅಕಾಡೆಮಿ ಆಯೋಜಿಸಿದ್ದ ಬಸವೇಶ್ವರ ಜಯಂತಿ ಅಂಗವಾಗಿ ಬಿ.ಕೆ. ಸುಮಿತ್ರ ಅವರಿಗೆ 'ಕಾಯಕ ರತ್ನ' ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ವಚನ ಗಾಯಕಿ ಅರುಣ ಚಂದ್ರಶೇಖರ್, ಯಶವಂತ, ಜಸ್ಟಿಸ್ ಶಿವರಾಜ್ ಪಾಟೀಲ, ಶೇಷಾದ್ರಿಪುರಂ ಎಜುಕೇಶನ್ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ವೂಡೇ ಪಿ.ಕೃಷ್ಣ, ಸಾಹಿತಿ ಮಲ್ಲೇಪುರಂ ಜಿ. ವೆಂಕಟೇಶ್, ಶಾಂತ್ ಎ. ತಿಮ್ಮಯ್ಯ ಉಪಸ್ಥಿತರಿದ್ದರು

ನೆಲಮಂಗಲ ಬಸವಣ್ಣದೇವರ ಆಯೋಜಿಸಿದ್ದ ಬಸವಜಯಂತಿಯಲ್ಲಿ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ ಅವರಿಗೆ 'ಪವಾಡ ಶ್ರೀ' ಪ್ರಶಸ್ತಿ ಪ್ರದಾನ ಮಾಡಲಾಯಿತು

ಶಿವರಾಜ ಪಾಟೀಲರಿಗೆ 'ಪವಾಡ ಶ್ರೀ'

ಪ್ರಜಾವಾಣಿ ವಾರ್ತೆ

ನೆಲಮಂಗಲ: 'ಶರಣ ಸಾಹಿತ್ಯ ಸಂಸ್ಕೃತಿಯ ಬಗ್ಗೆ ನಿರರ್ಗಳವಾಗಿ ಮಾತನಾಡುವುದರ ಬದಲು ನಮ್ಮ ನಡೆ ನುಡಿಯಲ್ಲಿ ಕಿಂಚಿತ್ತಾದರೂ ಆದರ್ಶ ಅಳವಡಿಸಿಕೊಂಡು ಇತರರಿಗೆ ಮಾದರಿಯಾಗಬೇಕು' ಎಂದು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ ವಿ.ಪಾಟೀಲ ಕರೆ ನೀಡಿದರು.

ಪಟ್ಟಣದ ಪವಾಡ ಬಸವಣ್ಣದೇವರ ಮಠ ಆಯೋಜಿಸಿದ್ದ ಬಸವ ಜಯಂತಿ ಉತ್ಸವದಲ್ಲಿ 'ಪವಾಡ ಶ್ರೀ' ಪ್ರಶಸ್ತಿ ಸ್ವೀಕರಿಸಿ ಮಾತನಾಡಿದರು.

ಪ್ರಶಸ್ತಿಗಳು ಮುಡಿಗೇರದೆ ಹೃದಯದ ಆಳಕ್ಕಿಳಿದು ವಿನಯವಂತಿಕೆಯ ಸೇವಾ ಭಾವನೆಯನ್ನು ಹೆಚ್ಚಿಸಿ ಆತ್ಮವಿಮರ್ಶೆಯ ಹಬ್ಬವಂತಾಗಬೇಕು ಎಂದರು.

ಪ್ರಶಸ್ತಿ ಪ್ರದಾನ ಮಾಡಿದ ಗೊ.ರು. ಚನ್ನಬಸಪ್ಪ ಅವರು, 'ಶ್ರೇಷ್ಠರನ್ನು ಗೌರವಿಸುವುದು ಶ್ರೇಷ್ಠತೆಯ ಸಂಕೇತ. ನಾನು ಒಳ್ಳೆಯವಾಗುವ ಪ್ರಯತ್ನ ಬಸವ ಜಯಂತಿಯಿಂದಲೇ ಆರಂಭವಾಗಲಿ. ಆತ್ಮನಿರೀಕ್ಷೆಯೊಂದಿಗೆ ಬದಲಾವಣೆ ವೈಯಕ್ತಿಕ ನೆಲೆಯಲ್ಲಿ ಆಗಬೇಕು' ಎಂದರು.

ಬಸವಣ್ಣದೇವರ ಮಠದ ಸಿದ್ಧಲಿಂಗ ಶ್ರೀಗಳು ಪ್ರಾಸ್ತಾವಿಕವಾಗಿ ಮಾತನಾಡಿದರು. ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸಿ.ಸೋಮಶೇಖರ್, ಶಾಸಕ ಎನ್.ಶ್ರೀನಿವಾಸಯ್ಯ ಇದ್ದರು.

820 ವಚನಗಳನ್ನು ಹಾಡಿ ಪ್ರಥಮ ಸ್ಥಾನ ಪಡೆದ ದೇವಿಕಾ ಏಕಾಂತಪ್ಪ (ಚಿತ್ರದುರ್ಗ), 560 ವಚನಗಳನ್ನು ಹಾಡಿ ದ್ವಿತೀಯ ಬಹುಮಾನ ಪಡೆದ ಶಿವರಾಜ ಪಾಟೀಲ(ಬಾಲ್ಕಿ), 550 ವಚನಗಳನ್ನು ಹಾಡಿ ಮೂರನೇ ಬಹುಮಾನ ಪಡೆದ ನಾಗಲಿಂಗಮ್ಮ ಅಂಗಡಿ (ಬೆಳಗಾವಿ) ಅವರಿಗೆ ಸ್ಮರಣಿಕೆ ನೀಡಿ ಗೌರವಿಸಲಾಯಿತು.

ಗದ್ದಿಗೆ ಮಠದ ಮಹಾಂತ ಶ್ರೀಗಳು, ಕೊಡಗು ಕಲ್ಮಠದ ಮಹಾಂತ ಶ್ರೀಗಳು ಸಾನಿಧ್ಯ ವಹಿಸಿದ್ದರು. ಲೇಖಕ ಬಾಲಚಂದ್ರ ಅವರ 'ಜೀವನ ದರ್ಶನ ಮತ್ತು 'ಯುವಜನತೆಗೆ ಸ್ಫೂರ್ತಿ ಕೃತಿಗಳನ್ನು ತೋಟಗಾರಿಕೆ ಜಂಟಿ ನಿರ್ದೇಶಕ ಎಂ.ಜಗದೀಶ್ ಬಿಡುಗಡೆ ಮಾಡಿದರು. ಯೋಜನಾ ಪ್ರಾಧಿಕಾರದ ಅಧ್ಯಕ್ಷ ಎಂ.ನಾರಾಯಣಗೌಡ, ಕನ್ನಡ ಚಳವಳಿ ಮುಖಂಡ ಫಾಲನೇತ್ರ, ನಗರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಸಿ.ಪ್ರದೀಪ್, ನಿವೃತ್ತ ನೌಕರರ ಸಂಘದ ಅಧ್ಯಕ್ಷ ನಾಗರಾಜು ವೇದಿಕೆಯಲ್ಲಿದ್ದರು.

ಬಸವಜಯಂತಿ ಮುನ್ನ ನಡೆದ ವಚನ ಸ್ಪರ್ಧೆಯಲ್ಲಿ 107 ಮಂದಿ ಪಾಲ್ಗೊಂಡು 55 ಸಾವಿರ ವಚನಗಳನ್ನು ವಾಚಿಸಿದರು. 500ಕ್ಕೂ ಹೆಚ್ಚು ವಚನ ವಾಚಿಸಿದ ಸರ್ವರಿಗೂ ಸೂಕ್ತ ಗೌರವದೊಂದಿಗೆ ಪುರಸ್ಕರಿಸಲಾಯಿತು.

ಬಸವ ಜಯಂತಿ ಸಂಭ್ರಮ

ಮಲ್ಲೇಶ್ವರದ ಬಿಜೆಪಿ ಕಾರ್ಯಾಲಯದಲ್ಲಿ ಬಸವಣ್ಣನ ಭಾವಚಿತ್ರಕ್ಕೆ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಪುಷ್ಪಾರ್ಚನೆ ಮಾಡಿದರು

ಪೀಣ್ಯ ದಾಸರಹಳ್ಳಿಯ ಹಾವನೂರು ಬಡಾವಣೆಯಲ್ಲಿ ಭೂಮಿಕಾ ಸೇವಾ ಫೌಂಡೇಶನ್‌ನಿಂದ ನಡೆದ ಬಸವ ಜಯಂತಿಯಲ್ಲಿ ಕನ್ನಡ ಜಾನಪದ ಪರಿಷತ್ ದಾಸರಹಳ್ಳಿ ಘಟಕದ ಅಧ್ಯಕ್ಷ ವೈ.ಬಿ.ಎಚ್. ಜಯದೇವ್, ಫೌಂಡೇಶನ್ ಅಧ್ಯಕ್ಷೆ ಲತಾ ಕುಂದರಗಿ, ಗೌರವಾಧ್ಯಕ್ಷ ಗುರುನಾಥ್, ರಾಜೇಂದ್ರ ಕೊಣ್ಣೂರ, ಗಾಯಕ ಎನ್.ಡಿ. ಕೃಷ್ಣಮೂರ್ತಿ, ಕವಯತ್ರಿಗಳಾದ ಮಮತಾ ವಾರನಹಳ್ಳಿ, ಗೀತಾ ಹಾಜರಿದ್ದರು

ನಿಡವಂದ ಬಸವಣ್ಣ ದೇವಾಲಯದಲ್ಲಿ ಬಸವಣ್ಣ ದೇವರಿಗೆ ಪೂಜೆ ನೆರವೇರಿಸಲಾಯಿತು

ಸೋಂಪುರ: ಬಸವ ಜಯಂತಿ

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: ಸೋಂಪುರ ಹೋಬಳಿ ವ್ಯಾಪ್ತಿಯ ಗ್ರಾಮ ಹಾಗೂ ದೇವಾಲಯಗಳಲ್ಲಿ ಶುಕ್ರವಾರ ಬಸವ ಜಯಂತಿ ನಡೆಯಿತು.

ರೈತ ಸಮುದಾಯ ತಮ್ಮ ಮನೆಗಳ ರಾಸುಗಳ ಮೈ ತೊಳೆದು, ಸಿಂಗರಿಸಿ ಪೂಜೆ ಸಲ್ಲಿಸಿ ಬಸವ ಜಯಂತಿ ಆಚರಿಸಿದರು. ಶಿರಗನಹಳ್ಳಿ, ನಿಡವಂದ, ಮಾದೇನಹಳ್ಳಿ, ಲಕ್ಕೂರು ತೋಟ, ಹೊನ್ನೇನಹಳ್ಳಿ, ತಟ್ಟೆಕೆರೆ, ಗ್ರಾಮಗಳಲ್ಲಿನ ಬಸವಣ್ಣ ದೇವಾಲಯಗಳು ಹಾಗೂ ಉಳಿದ ಗ್ರಾಮಗಳ ವಿವಿಧ ದೇವಾಲಯಗಳಲ್ಲಿ ತಳಿರು ತೋರಣ ಕಟ್ಟಿ, ದೇವರಿಗೆ ಪೂಜೆ ಮಾಡಿ ಹೆಸರು ಬೇಳೆ ಪಾನಕ, ಮಜ್ಜಿಗೆ ಹಂಚಿದರು.

ಹೋಬಳಿಯ ಸರ್ಕಾರಿ ಕಚೇರಿಗಳು, ಶಾಲೆಗಳಲ್ಲಿ ಬಸವಣ್ಣನವರ ಭಾವಚಿತ್ರ ವಿಟ್ಟು ಪೂಜೆ ನಡೆಸಿದರು.

12ನೇ ಶತಮಾನದಲ್ಲಿ ಜನಿಸಿದ ಬಸವಣ್ಣನವರು ಯಾವುದೇ ಜಾತಿ, ಮತ ಪಂಗಡಕ್ಕೆ ಸೇರದೆ ಜಾತಿ ರಹಿತ ಸಮ ಸಮಾಜ ನಿರ್ಮಾಣಕ್ಕೆ ಶ್ರಮಿಸಿದ ಕ್ರಾಂತಿ ಪುರುಷ. ಅವರ ಆದರ್ಶಗಳನ್ನು ಎಲ್ಲ ವರ್ಗದ ಜನರು ಅಳವಡಿಸಿಕೊಂಡರೆ ಸಮಾಜ ಸುಧಾರಣೆಯಾಗುತ್ತದೆ ಎಂದು ಶಿಕ್ಷಕ ಎನ್.ಆರ್.ರಮೇಶ್ ತಿಳಿಸಿದರು.

'ಆದರ್ಶ ತತ್ವ, ಸಿದ್ಧಾಂತ ಅಳವಡಿಸಿಕೊಳ್ಳಿ'

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: 'ಬಸವಣ್ಣನವರು ಸಮಾಜಕ್ಕೆ ಅನೇಕ ಕೊಡುಗೆಗಳನ್ನು ನೀಡಿದ್ದಾರೆ. ಅವರ ಆದರ್ಶ, ತತ್ವ ಸಿದ್ಧಾಂತಗಳನ್ನು ಪ್ರತಿಯೊಬ್ಬರೂ ತಮ್ಮ ನಿತ್ಯ ಜೀವನದಲ್ಲಿ ಅಳವಡಿಸಿಕೊಂಡು ಅವರು ತೋರಿದ ಮಾರ್ಗದಲ್ಲಿ ನಡೆಯಬೇಕಿದೆ' ಎಂದು ಬೆಂಗಳೂರು ಪೂರ್ವ ತಾಲ್ಲೂಕು ವೀರಶೈವ ಲಿಂಗಾಯತ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಮಹೇಂದ್ರ ಮೋದಿ ತಿಳಿಸಿದರು.

ವರ್ತೂರಿನಲ್ಲಿ ಬಸವ ಜಯಂತಿ ಪ್ರಯುಕ್ತ ಬಸವೇಶ್ವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು.

ಬಸವಣ್ಣನವರು ಹಲವು ಸಾಮಾಜಿಕ ಸುಧಾರಣಾ ಕಾರ್ಯಗಳಿಂದಲೇ ಪ್ರಸಿದ್ಧಿಯಾದವರು. ಸಮಾಜದಲ್ಲಿ ಜಾತಿ ವ್ಯವಸ್ಥೆಯಿಂದ ಸಂಪೂರ್ಣವಾಗಿ ಮುಕ್ತವಾಗಿರಬೇಕು. ಸಮಾನತೆ ಇರಬೇಕೆಂದು ಬಯಸಿದ್ದರು ಎಂದರು.

ಕಾಯಕ ಯೋಗಿ ಬಸವಣ್ಣ ಅವರು ತಮ್ಮ ದೂರದೃಷ್ಟಿ ಚಿಂತನೆಯಿಂದ ಅಂದಿನ ಕಾಲದಲ್ಲಿ ಅನುಭವ ಮಂಟಪ ನಿರ್ಮಿಸುವ ಮೂಲಕ ವಿಶ್ವದಲ್ಲೇ ಮೊದಲ ಬಾರಿಗೆ ಪ್ರಜಾಪ್ರಭುತ್ವ ವ್ಯವಸ್ಥೆಗೆ ಅಡಿಪಾಯ ಹಾಕಿದ ಅವರು ನಮ್ಮೆಲ್ಲರಿಗೂ ಪ್ರೇರಣೆ ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಅವರ ಜೀವನ, ಆದರ್ಶ ಹಾಗೂ ತತ್ವ ಸಿದ್ಧಾಂತಗಳನ್ನು ಅಳವಡಿಸಿಕೊಂಡು ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯಬೇಕು ಎಂದು ತಿಳಿಸಿದರು

ಮುಖಂಡರಾದ ವೆಂಕಟೇಶ ರೆಡ್ಡಿ, ಬಿ.ಎಸ್.ಶ್ರೀಧರ್, ಆರ್.ಸಿ.ಬಾಬು, ಕೃಪಾಕರ್, ಕವಿತಾ, ಅನಿತಾ, ಶ್ರೀನಿವಾಸ್, ಬಿ.ವಿ. ಮಂಜುನಾಥ್, ರಾಜೇಶ್ ಇದ್ದರು.

ಬಸವಣ್ಣನವರ ಭಾವಚಿತ್ರಕ್ಕೆ ಬೆಂಗಳೂರು ಪೂರ್ವ ತಾಲ್ಲೂಕು ವೀರಶೈವ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಮಹೇಂದ್ರ ಮೋದಿ ಪುಷ್ಪ ನಮನ ಸಲ್ಲಿಸಿದರು

ಕಾಯಕ ಯೋಗಿಯ ಪ್ರತಿಮೆಗೆ ಪುಷ್ಪನಮನ

ಜಗಜ್ಯೋತಿ ಬಸವಣ್ಣನ ಸ್ಮರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಗಜ್ಯೋತಿ ಬಸವಣ್ಣ ಅವರನ್ನು ಶುಕ್ರವಾರ ಶ್ರದ್ಧಾಭಕ್ತಿಯಿಂದ ಸ್ಮರಣೆ ಮಾಡಲಾಯಿತು.

ದಾಸರಹಳ್ಳಿ ವಾರ್ಡ್ ಬಸವವನ ಉದ್ಯಾನದಲ್ಲಿ ಮಾಜಿ ಸಚಿವ ವಿ.ಸೋಮಣ್ಣ ಅವರು ಬಸವೇಶ್ವರರ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿದರು.

ಬಸವೇಶ್ವರರು ಹಾಕಿಕೊಟ್ಟ ದಾರಿಯಲ್ಲಿ ಸಾಗಿದಾಗ ಮಾತ್ರ ಸಮಾನತೆ ಸಾಧಿಸಬಹುದು. ಜಾತಿ ನಿರ್ಮೂಲನೆ ಮಾಡಿ ಸಮ ಸಮಾಜ ನಿರ್ಮಿಸಬಹುದು ಎಂದು ಸೋಮಣ್ಣ ತಿಳಿಸಿದರು.

ಮಂಡಲ ಅಧ್ಯಕ್ಷ ವಿಶ್ವನಾಥಗೌಡ, ಮಾಜಿ ಪಾಲಿಕೆ ಸದಸ್ಯರಾದ ದಾಸೇಗೌಡ, ಬಿಜೆಪಿ ಮುಖಂಡರಾದ ಶ್ರೀಧರ್, ಎಚ್. ರಮೇಶ್, ವೇಣುಗೋಪಾಲ್, ವಾರ್ಡ್ ಅಧ್ಯಕ್ಷ ಹರೀಶ್ ಉಪಸ್ಥಿತರಿದ್ದರು.

ದಾಸರಹಳ್ಳಿ ವಾರ್ಡ್ ಬಸವವನ ಉದ್ಯಾನದಲ್ಲಿ ಕಾಯಕ ಯೋಗಿ ಬಸವೇಶ್ವರರ ಪ್ರತಿಮೆಗೆ ಮಾಜಿ ಸಚಿವ ವಿ. ಸೋಮಣ್ಣ ಪುಷ್ಪನಮನ ಸಲ್ಲಿಸಿದರು

ಬಿಜೆಪಿ: ಅಣ್ಣ ಬಸವಣ್ಣ 12ನೇ ಶತಮಾನದಲ್ಲೇ ಸಮಸಮಾಜದ ನಿರ್ಮಾಣದ ಕನಸು ಕಂಡವರು. ತುಳಿತಕ್ಕೆ ಒಳಗಾದ ಸಮಾಜಕ್ಕೆ ನ್ಯಾಯ ಕೊಡಬೇಕೆಂಬ ಆಶಯವನ್ನು ಹೊಂದಿ ಕಾರ್ಯ ನಿರ್ವಹಿಸಿದ್ದರು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ನೆನಪು ಮಾಡಿಕೊಂಡರು.

ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಬಸವಣ್ಣನ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು.

'ಬಸವಣ್ಣ ನಿಜಜೀವನದ ಅನುಭವಗಳನ್ನು ವಚನಗಳ ಮೂಲಕ ಸಾಮಾನ್ಯ ಜನರಿಗೂ ತಲುಪುವಂತೆ ಮಾಡಿದ್ದಾರೆ. ವಚನಗಳು ನಮ್ಮ ಜೀವನಕ್ಕೆ ದಾರಿದೀಪ' ಎಂದು ಹೇಳಿದರು.

ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಡಿ. ಲಕ್ಷ್ಮಿನಾರಾಯಣ, ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ. ರಾಜೀವ್, ರಾಜ್ಯ ಕಾರ್ಯದರ್ಶಿ ತಮ್ಮೇಶ್ ಗೌಡ, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಹರೀಶ್, ಮುಖಂಡರಾದ ಚಿ.ನಾ.ರಾಮು, ಕಾರ್ಯಾಲಯ ಸಹ ಕಾರ್ಯದರ್ಶಿ ವಿಶ್ವನಾಥ್ ಭಾಗವಹಿಸಿದ್ದರು.

ಕವಿತಾ ಸೇರಿ ನಾಲ್ವರ ವಿರುದ್ಧ ಹೊಸ ದೋಷಾರೋಪ ಪಟ್ಟಿ ಸಲ್ಲಿಕೆ

ನವದೆಹಲಿ(ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಿಆರ್‌ಎಸ್ ನಾಯಕಿ ಕೆ. ಕವಿತಾ ಮತ್ತು ನಾಲ್ವರನ್ನು ಆರೋಪಿಗಳೆಂದು ಉಲ್ಲೇಖಿಸಿ ಜಾರಿ ನಿರ್ದೇಶನಾಲಯವು ಹೊಸ ದೋಷಾರೋಪ ಪಟ್ಟಿ ಸಲ್ಲಿಸಿದೆ.

'ಸುಮಾರು 200 ಪುಟಗಳ ದೋಷಾರೋಪ ಪಟ್ಟಿಯನ್ನು ಇ.ಡಿಯು ರೋಸ್ ಅವೆನ್ಯೂ ಕೋರ್ಟ್‌ಗೆ ಸಲ್ಲಿಸಿದೆ' ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಗೋವಾದಲ್ಲಿ ಎಎಪಿ ಪರ ಪ್ರಚಾರ ನಡೆಸಿದ್ದ ಚಾರಿಯಟ್ ಪ್ರೊಡಕ್ಷನ್ಸ್ ಮೀಡಿಯಾ ಪ್ರೈ. ಲಿ. ಕಂಪನಿಯ ನೌಕರರಾದ ದಾಮೋದರ ಶರ್ಮ, ಪ್ರಿನ್ಸ್ ಕುಮಾರ್ ಮತ್ತು ಚಂಪ್ರಿತ್ ಸಿಂಗ್ ಹಾಗೂ ಇಂಡಿಯಾ ಅಹೆಡ್ ನ್ಯೂಸ್ ವಾಹಿನಿಯ ಮಾಜಿ ನೌಕರ ಅರವಿಂದ್ ಸಿಂಗ್ ಅವರನ್ನೂ ಆರೋಪಿಗಳೆಂದು ಹೆಸರಿಸಲಾಗಿದೆ.

ಪ್ರಕರಣ ಸಂಬಂಧವಾಗಿ ಇ.ಡಿ ಸಲ್ಲಿಸಿದ 7ನೇ ದೋಷಾರೋಪ ಪಟ್ಟಿ ಇದಾಗಿದ್ದು, ಈವರೆಗೆ ಕೇಜ್ರಿವಾಲ್ ಸೇರಿದಂತೆ 18 ಜನರನ್ನು ಬಂಧಿಸಲಾಗಿದೆ.

ಮೇ 13ರಂದು ದೋಷಾರೋಪ ಪಟ್ಟಿಯ ಆಧಾರದ ಮೇಲೆ ವಿಚಾರಣೆ ನಡೆಯುವ ಸಾಧ್ಯತೆಗಳಿದ್ದು, ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಮೇಲೆಯೂ ಮುಂದಿನ ವಾರ ಇದೇ ರೀತಿಯ ಪ್ರಕರಣ ದಾಖಲಾಗುವ ಸಾಧ್ಯತೆಗಳಿವೆ.

'ದೆಹಲಿ ಅಬಕಾರಿ ನೀತಿಯಡಿಯಲ್ಲಿ ಮದ್ಯ ಮಾರಾಟದ ಪರವಾನಿಗೆ ನೀಡಲು ಎಎಪಿಗೆ ₹100 ಕೋಟಿ ಲಂಚ ನೀಡಿರುವ ಆರೋಪ ಹೊತ್ತಿರುವ 'ಸೌತ್ ಗ್ರೂಪ್'ನಲ್ಲಿ ಕವಿತಾ ಪ್ರಮುಖ ವ್ಯಕ್ತಿ ಆಗಿದ್ದರು' ಎಂದು ಇ.ಡಿ ಆರೋಪಿಸಿದೆ.

'ಸೌತ್ ಗ್ರೂಪ್ ನೀಡಿರುವ ₹100 ಕೋಟಿ ಹಣದಲ್ಲಿ ₹40 ಕೋಟಿ ಹಣವನ್ನು ಎಎಪಿಯು 2022ರ ಗೋವಾ ವಿಧಾನಸಭೆ ಚುನಾವಣೆ ಪ್ರಚಾರಕ್ಕೆ ಬಳಸಿಕೊಂಡಿದೆ' ಎಂದು ಇ.ಡಿ ಆರೋಪಿಸಿದೆ.

ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ

ಅಪ್ಪನೂ... ಅಮ್ಮನೂ ನೀನೇ...

ಮೇ 12. ವಿಶ್ವ ತಾಯಂದಿರ ದಿನ

ಸುಶೀಲಾ ಡೋಣೂರ

ಸಿಂಗಲ್ ಪೇರೆಂಟ್ ಅಥವಾ ಸಿಂಗಲ್ ಮದರ್ ಅಂದ ಕೂಡಲೇ ನೆನಪಾಗೋದು ಅವರ ಒಂಟಿತನ, ಹತಾಶೆ, ಆತಂಕ, ಎದೆಗುದಿ, ಮೈತುಂಬ ಜವಾಬ್ದಾರಿಗಳು, ಆರ್ಥಿಕ ಸಂಕಷ್ಟಗಳು, ಸಮಾಜದ ಹಾಗೂ ಕುಟುಂಬದ ಧೋರಣೆಗಳು, ಮಾನಸಿಕ ಒತ್ತಡಗಳು, ಹೆಜ್ಜೆಹೆಜ್ಜೆಗೆ ಎದುರಾಗುವ ಸವಾಲುಗಳು, ಅನುದಿನವೂ ಕಾಡುವ ಒಂಟಿತನ, ಇದೆಲ್ಲದರ ನಡುವೆ ಅಡಿಗೊಬ್ಬರಂತೆ ಎದುರು ಬರುವ ವ್ಯಾಘ್ರಗಳು... ಇದಿಷ್ಟೇ ಅಲ್ಲವೆ?

ಆರ್ಥಿಕ ಸಂಕಷ್ಟ ಹಾಗೂ ಜವಾಬ್ದಾರಿಗಳ ಹೊರೆಗಳಿಗಿಂತ ಹೆಚ್ಚಾಗಿ ಕಾಡುವುದು ಭಾವನಾತ್ಮಕ ಸಂಗತಿಗಳು. ಎಲ್ಲವನ್ನೂ ಮಕ್ಕಳೆದುರು ಹೇಳಿಕೊಳ್ಳಲಾಗದು. ಸ್ನೇಹಿತರು, ಬಂಧುಗಳು, ಸಹೋದ್ಯೋಗಿಗಳು, ಕುಟುಂಬದವರು ಜೊತೆ ನಿಂತರೂ ಅವರೆದುರಿಗೆಲ್ಲಾ ಭಾವನೆಗಳು ಬಿಚ್ಚಿಕೊಳ್ಳಲಾರವು. ಅಳು ಬಂದರೂ ಮಕ್ಕಳೆದುರು ಕಣ್ಣೀರೂ ಹಾಕುವಂತಿಲ್ಲ; ಚಿಕ್ಕ ಜೀವಗಳು ಅಧೈರ್ಯಗೊಂಡಾವು ಎನ್ನುವ ತಳಮಳ... ಇಂಥದ್ದೊಂದು ಪರಿಸ್ಥಿತಿಯನ್ನು ಗೆಲ್ಲಲು ಧೈರ್ಯ ಮತ್ತು ಆತ್ಮವಿಶ್ವಾಸದಿಂದ ಮಾತ್ರ ಸಾಧ್ಯ.

ಸಿಂಗಲ್ ಪೇರೆಂಟ್ ಅಥವಾ ಏಕಾಂಗಿ ಅಮ್ಮ ಎನ್ನುವ ಕಳವಳದ ನಡುವೆಯೂ ಬದುಕನ್ನು ಹಸನಾಗಿಸಿಕೊಂಡವರೂ ಇದ್ದಾರೆ. ಎಲ್ಲಾ ಜವಾಬ್ದಾರಿಗಳಿಗೆ ಏಕಾಂಗಿಯಾಗಿ ಹೆಗಲು ಕೊಡುವುದರಲ್ಲೂ ಒಂದು ಸಂತೃಪ್ತಿ ಇದೆ ಎನ್ನುವವರೂ ಇದ್ದಾರೆ. ಹೌದು, ಎಲ್ಲಕ್ಕೂ ಜೊತೆ ನಿಲ್ಲುವ ಸಂಗಾತಿಯನ್ನು ಕಳೆದುಕೊಂಡು ಬದುಕು ಅತಂತ್ರವಾದಾಗ ಅಥವಾ ಜೊತೆಗಿದ್ದೂ ಜೊತೆ ನಿಲ್ಲದ ನಿರರ್ಥಕ ಸಂಬಂಧವನ್ನು ಕಳಚಿಕೊಂಡು ಹೊರನಡೆದಾಗ ಬದುಕಲ್ಲಿ ಕಾರ್ಮೋಡ ಕವಿದಂಥ ಅನುಭವವಾಗುವುದು ಸಹಜ. ಆದರೆ, ಅಂತಹ ದುರ್ಗಮ ಹಾದಿಯಲ್ಲಿಯೂ ಬದುಕು ಹೊರೆಯಾಗದಂತೆ, ನಾಳೆಗಳು ಭಾರವಾಗದಂತೆ, ಸೋತರೂ ನೆಲಕಚ್ಚದಂತೆ ಮಾಡುವುದೇ ತಾಯ್ತನ. ತಂದೆಯೂ ತಾನೇ ತಾಯಿಯೂ ತಾನೇ ಆಗಿ ಮಕ್ಕಳ ಪಾಲನೆಯ ಸುಖವನ್ನು ಸಲುಹಲು ಗಟ್ಟಿ ಎದೆ ಬೇಕು. ಅಂತಹ ಸವಾಲನ್ನು ಬದುಕಿನ ಸಂಭ್ರಮವಾಗಿ ಪರಿವರ್ತಿಸಿಕೊಂಡವರು, ಎದುರಾಗುವ ಸವಾಲುಗಳಿಗೆ ಬೆನ್ನುಕೊಡದೇ ಎದೆಗೊಟ್ಟು ನಡೆಯುತ್ತ, ತನ್ನನ್ನೇ ನಂಬಿ ಭೂಮಿಗೆ ಬಂದ ಕಂದನಿಗೆ ಅಪ್ಪನಿಲ್ಲದ ಕೊರತೆ ಕಾಡದಂತೆ ಸಲುಹುತ ಬದುಕನ್ನು ಸುಂದರಗೊಳಿಸಿಕೊಂಡ, ಸಹ್ಯಗೊಳಿಸಿಕೊಂಡ ಅಮ್ಮಂದಿರು ನಮ್ಮ ನಡುವೆ ಸಾಕಷ್ಟು ಜನರಿದ್ದಾರೆ. ಈ ಸಲದ ಅಮ್ಮಂದಿರ ದಿನಕ್ಕೆ ಸಿಂಗಲ್ ಅಮ್ಮನ ಸಂಭ್ರಮದ ನುಡಿಗಳೇ ಅರ್ಪಣೆ.

ಕೊರಗುವುದು ಬಿಟ್ಟು ಮುನ್ನಡೆಯಿರಿ

'ಆ ಎಳೆ ಮಗಿನ್ ಮುಖ ನೋಡಾದ್ರೂ ಅವ್ನ ಜೊತೆ ಅನುಸರಿಸಿಕೊಂಡು ಹೋಗ್ಬಾರ್ದ?' ಊದಿದ ಕಣ್ಣುಗಳನ್ನ ಹೊತ್ತು ವರ್ಷದ ಕೂಸಿನ ಜೊತೆ ಊರಿಗೆ ಮರಳಿದಾಗ ಮೇಲೆ ಹೇಳಿದಂತೆ ಕೇಳಿದ್ದವರೆಷ್ಟೋ...

ಹೌದಲ್ಲಾ, ಎಷ್ಟೋ ಹೆಣ್ಣು ಮಕ್ಕಳು ಈಗ್ಲೂ ಟಾಕ್ಸಿಕ್ ಮ್ಯಾರೇಜ್ ನಲ್ಲಿ ಬದುಕು ಸವೆಸ್ತಾ ಇರೋದು, ಮಗು ಇದೆ ಅನ್ನೋ ಒಂದೇ ಕಾರಣಕ್ಕೆ. ಜನಪ್ರಿಯ ಮಾಧ್ಯಮಗಳೂ ಸಹ ಸಿಂಗಲ್ ಪೇರೆಂಟಿಂಗ್ ಅನ್ನ ಫೈಲ್ಡ್ ಅಂತ ತೋರಿಸಿಕೊಂಡು ಬಂದದ್ದೇ.

ಹಾಗಂತ ಸಿಂಗಲ್ ಪೇರೆಂಟಿಂಗ್ ಹೂವಿನ ಮೇಲೆ ನಡೆದಷ್ಟು ಸುಲಭವಲ್ಲ. ಅದೇ ರೀತಿ ಎಲ್ಲರೂ ತಿಳಿದಂತೆ ಕತ್ತಿಯ ಮೇಲೆ ನಡೆಯುವಷ್ಟು ಕಷ್ಟವೂ ಅಲ್ಲ. ನನ್ನ ಮಗ ಮಾತಾಡಲು ಕಲಿತಾಗ, ಶಾಲೆಗೆ ಸೇರಿದಾಗ ನನಗೆ ಕಾಡುತ್ತಿದ್ದ ಭಯ ಅಂದರೆ ಅವ್ನು ಎಲ್ಲಿ ತನ್ನ ತಂದೆಯ ಬಗ್ಗೆ ಪ್ರಶ್ನೆ ಕೇಳ್ತಾನೆ ಅಂತ.

ಆದ್ರೆ ನನಗೇ ಆಶ್ಚರ್ಯ ಆಗುವಂತೆ ಅವನ ಹೆಸರಿಗೆ ನನ್ನ ಹೆಸರಿನ ಇನಿಶಿಯಲ್ ಸೇರಿಸಿ ನಾನು ಕಾವ್ಯಳ ಮಗ ಅಂತ ಹೆಮ್ಮೆಯಿಂದ ಹೇಳಿದಾಗ ಆದಷ್ಟು ಖುಶಿ ಯಾವುದಕ್ಕೂ ಹೋಲಿಸಲು ಆಗಲ್ಲ. ನಮ್ಮ ಮನೆಯಲ್ಲಿ ನಮ್ಮದೇ ರೂಲ್. ಬೆಳಿಗ್ಗೆ ಎದ್ದು ಅವನು ಬೆಡ್ಶೀಟ್ ಮಡಿಚಿ, ಫ್ರೆಶ್ ಅಪ್ ಆಗಿ ಅವನಷ್ಟೇ ಉದ್ದದ ಬ್ಯಾಗ್ ಹಿಡಿದು ಹಾಲು ತಂದುಕೊಟ್ಟು ಅವನ ಗಿಡಗಳ ಪೋಷಣೆ ಮಾಡಿ ಅಡುಗೆ ಮನೆಯಲ್ಲಿ ನಂಗೆ ಏನಾದ್ರೂ ಹೆಲ್ಪ್ ಬೇಕಾ ಅಂತಾ ಕೇಳುವಾಗ ಎಷ್ಟು ಚಂದವಾಗಿ ಜವಾಬ್ದಾರಿ ನಿಭಾಯಿಸ್ತಾನೆ ಅಂತ ಖುಷಿ ಆಗದೆ ಇರಲ್ಲ. ಅವನಿಗೀಗ ಆರು ವರ್ಷ, ಅವನಲ್ಲಿ ಮೂಡಿರಬಹುದಾದ ಪ್ರಶ್ನೆಗಳನ್ನು ಊಹಿಸಿ ಮನಃಶಾಸ್ತ್ರಜ್ಞರ ಸಹಾಯದಿಂದ ಅವನಿಗೆ ನಮ್ಮ ಅರೇಂಜ್ಮೆಂಟ್‌ನ ಬಗ್ಗೆ ವಿವರಿಸಿದಾಗ ಅವನ ಮುಖದಲ್ಲಿ ಅಮ್ಮನ ಬಗ್ಗೆ ಹೆಮ್ಮೆ ಅಷ್ಟೇ ಕಂಡಿದ್ದು.

ಇಬ್ಬರೂ ಕಿತ್ತಾಡಿ ತಿಂಡಿಯ ಮೆನು ತಯಾರಿಸುವುದು, ತಿಂಗಳಿಗೊಮ್ಮೆ ಮೌಲ್ಯಮಾಪನ ಮಾಡಿಕೊಳ್ಳುವುದು, ಟೆರೇಸ್ ಮೇಲೆ ನಿಂತು ನಕ್ಷತ್ರಗಳನ್ನು ನೋಡುವುದು, ರಾಜನನ್ನ ಹೊಡೆದರೂ ಮುಂದುವರಿಯುವ ಚದುರಂಗದಾಟ, ಪೇಂಟಿಂಗ್ ನೆಪದಲ್ಲಿ ನಡೆಯುವ ಬಣ್ಣದಾಟ ನಮ್ಮ ಅಸಂಖ್ಯ ತರಲೆಗಳು. ತೀರ್ಪುಗಳನ್ನು ಮೀರಿ ಬದುಕುವ ಒಂಟಿ ಅಮ್ಮಂದಿರ ಪಾಲಿಗೆ ಮಕ್ಕಳ ಆ ನಗು ಮುಂದಿನ ದಿನಗಳ ಬಗ್ಗೆ ವಿಶ್ವಾಸ ಮೂಡಿಸುತ್ತೆ.

ಅವನಿಗೆ ತಾನೊಬ್ಬನೇ ಅಲ್ಲ ಅಂತ ಮನದಟ್ಟು ಮಾಡಿಸಲು ಆಗಾಗ ನನ್ನ ಇತರೆ ಸ್ನೇಹಿತರ ಮಕ್ಕಳೊಂದಿಗೆ ಪ್ಲೇ ಡೇಟ್‌ಗೆ ಕರೆದುಕೊಂಡು ಹೋಗುವುದು ಅವನಲ್ಲಿ ಈ ಸಮಾಜದ ಸಿದ್ಧಮಾದರಿಗಳಿಂದ ಮೂಡಬಹುದಾದ ಕಾಂಪ್ಲೆಕ್ಸನ್ನ ತಡೆಯುವಲ್ಲಿ ಸಹಾಯ ಮಾಡಿತ್ತು.

ಹಾಗಂತ ಈ ಸಿಂಗಲ್ ಪೇರೆಂಟಿಂಗ್ ಅನ್ನೋದು ಎಲ್ಲರಿಗೂ ಸುಲಭದ ಹಾದಿಯಲ್ಲ. ಅದರಲ್ಲೂ ಆರ್ಥಿಕವಾಗಿ ಎಷ್ಟೋ ತಾಯಂದಿರಿಗೆ ಇದು ಭಾರ. ನಿಜ, ಆಕೆಗೆ ಎರಡುಪಟ್ಟು ಜವಾಬ್ದಾರಿ ಇರುತ್ತೆ. ಆದ್ರೆ ಆ ಎಲ್ಲಾ ನೋವಿನ ಮಧ್ಯೆ ಮಗುವಿನ ಸಾಂಗತ್ಯ, ತನ್ನನ್ನೇ ನಂಬಿರುವ ಆ ಮುಗ್ಧ ಜೀವದ ನಗು, ತನ್ನ ಮೇಲೆ ಆ ಜೀವ ಇಟ್ಟಿರುವ ವಿಶ್ವಾಸ, ನಂಬಿಕೆ ಮತ್ತೆ ಮರುದಿನ ಪುಟಿದೇಳುವಂತೆ ಮಾಡುತ್ತೆ. ನಿಜ ಹೇಳಬೇಕೆಂದರೆ ಅಂತಹ ತಾಯಂದಿರಿಗೆ ಆಪ್ತ ಸಮಾಲೋಚನೆ ನಡೆಸಿ, ಅವರ ಬದುಕನ್ನ ಕಟ್ಟಿಕೊಳ್ಳಲು ನನ್ನ ಕೈಲಾದಷ್ಟು ಜೊತೆ ನಿಲ್ಲಲು ನನ್ನ ಮಗನೇ ನನಗೆ ಸ್ಫೂರ್ತಿ.

ಕಡೆಯದಾಗಿ ನಾನು ಹೇಳುವುದು ಇಷ್ಟೇ, ನನ್ನ ಬದುಕು ಹೀಗಾಯ್ತಲ್ಲ ಅಂತ ಕೊರಗುವುದು ಯಾವತ್ತೂ ಒಳ್ಳೆಯದಲ್ಲ. ನಮ್ಮನ್ನೇ ನಂಬಿ ಬಂದ ಆ ಮುಗ್ಧ ಜೀವಗಳ ಸುಂದರ ಭವಿಷ್ಯ ರೂಪಿಸುವ ಹೆಮ್ಮೆ ನಮಗಿರಲಿ.

ಸಿಂಗಲ್ ಪೇರೆಂಟಿಂಗ್ ನ ಅಡ್ವಾಂಟೇಜ್ ಎಂದರೆ, ನಮ್ಮ ಮಗುವನ್ನ ನಮಗೆ ಹೇಗೆ ಬೇಕೋ ಹಾಗೆ ಬೆಳೆಸಬಹುದು. ನಮ್ಮ ಮಕ್ಕಳನ್ನ ವಿಶ್ವಮಾನವರಾಗಿ ಬೆಳೆಸುವ ಅತ್ಯುತ್ತಮ ಅವಕಾಶ ಇದು. ನಿಜ ಸಿಂಗಲ್ ಪೇರೆಂಟ್ ಅನ್ನೋ ಪದ ತುಂಬಾ depressing ಆಗಿ ಕೇಳುತ್ತೆ. ಇಷ್ಟೆಲ್ಲಾ ಕಟ್ಟುಪಾಡುಗಳಿರುವ ಸಮಾಜದಲ್ಲಿ, ತಿಂದು ಮುಕ್ಕುವಂತೆ ನೋಡುವ ವ್ಯಾಘ್ರರ ನಡುವೆ ಒಂಟಿಯಾಗಿ ಎಲ್ಲಾ ಜವಾಬ್ದಾರಿಗಳನ್ನು ನಿಭಾಯಿಸಲು ಗಟ್ಟಿತನ ಬೇಕು.ಹಾಗಾಗಿ ನಮ್ಮನ್ನ ನಾವು Empowered Guardians ಅಂತ ಕರೆದುಕೊಳ್ಳೋಣವೇ???

ಕಾವ್ಯಶ್ರೀ

ಸುಗಮ ದಾರಿಗೆ ಕೆಲವು ಸಲಹೆಗಳು

ನಿಮ್ಮ ಹಿಂದಿನ ಸೇವಿಂಗ್ಸ್, ನಿಮಗೆ ಬಂದ ಆಪತ್‌ಧನ, ಪ್ರತಿತಿಂಗಳು ಬರುವ ಆದಾಯ ಹಾಗೂ ಇನ್ನಿತರ ಮೂಲಗಳ ಹಣಕಾಸು ಹರಿವು ಹಾಗೂ ಖರ್ಚಿನ ಲೆಕ್ಕಾಚಾರವನ್ನು ಒಳಗೊಂಡ ಮಾಸಿಕ ಬಜೆಟ್ ಸಿದ್ಧಪಡಿಸಿಕೊಳ್ಳಿ ಮತ್ತು ಅದನ್ನು ಪ್ರತಿತಿಂಗಳೂ ಅಗತ್ಯಕ್ಕನುಗುಣವಾಗಿ ಅಪ್‌ಡೇಟ್ ಮಾಡುತ್ತಿರಿ.

ಮಕ್ಕಳ ಶೈಕ್ಷಣಿಕ ಖರ್ಚುಗಳನ್ನು ಪ್ರತ್ಯೇಕವಾಗಿ ಪಟ್ಟಿ ಮಾಡಿಕೊಳ್ಳಿ.

ಅನೇಕರು ಮಕ್ಕಳು ಬಯಸಿದ್ದನ್ನೆಲ್ಲಾ ಅವರ ಕೈಗಿಡುವ ಮೂಲಕ ಅಪ್ಪ ಜೊತೆಗಿಲ್ಲ ಎನ್ನುವ ಕೊರತೆಯನ್ನು ನೀಗಿಸಲು ನೋಡುತ್ತಾರೆ. ಇದು ತಪ್ಪು. ಮಕ್ಕಳಿಗೆ ಬಯಸಿದ್ದೆಲ್ಲಾ, ಬಯಸಿದೊಡನೆಯೇ ಸಿಗುವಂತೆ ಮಾಡುವುದು ಅಪಾಯಕಾರಿ. ಯಾವುದು ಅಗತ್ಯವಿದೆ, ಯಾವುದು ಅಗತ್ಯವಿಲ್ಲ ಎನ್ನುವುದನ್ನು ಮಕ್ಕಳಿಗೆ ಮನದಟ್ಟು ಮಾಡಿ. ನಿಮ್ಮ ಆರ್ಥಿಕ ಪರಿಸ್ಥಿತಿಯನ್ನು ಅವರಿಗೆ ಅರ್ಥ ಮಾಡಿಸಿ, ಕೊಳ್ಳುಬಾಕತನವನ್ನು ತಪ್ಪಿಸಿ.

ತಂತ್ರಜ್ಞಾನವನ್ನು ಉಪಯೋಗಿಸಿ. ಕರೆಂಟ್ ಬಿಲ್, ನೀರಿನ ಬಿಲ್ ಪಾವತಿ, ದಿನಸಿ, ದೈನಂದಿನ ಅಗತ್ಯ ವಸ್ತುಗಳ ಖರೀದಿ ಮತ್ತಿತರ ಅಗತ್ಯಗಳಿಗೆ ತಂತ್ರಜ್ಞಾನದ ಸಹಾಯ ಪಡೆಯಿರಿ. ಈಗ ಎಲ್ಲವನ್ನೂ ಮೊಬೈಲ್‌ನಲ್ಲಿ ಆಟೊಪೇಗೆ ಹೊಂದಿಸಿ ಇಡಬಹುದು. ಪ್ರತಿ ತಿಂಗಳು ಅಲ್ಲಿಂದಲೇ ತಾನಾಗಿಯೇ ಬಿಲ್ ಪಾವತಿ ಆಗುತ್ತದೆ. ಪ್ರತಿದಿನದ ಅಗತ್ಯ ವಸ್ತುಗಳನ್ನು ಕುಳಿತಲ್ಲಿಂದಲೇ ತರಿಸಿಕೊಳ್ಳಬಹುದು.

ಕಾರ್‌ಪೂಲ್‌ನಂತಹ ಸೇವೆಗಳನ್ನು ಆಯ್ಕೆ ಮಾಡಿಕೊಳ್ಳಿ. ಇತರ ಸಿಂಗಲ್ ಅಮ್ಮಂದಿರೊಂದಿಗೆ ಜವಾಬ್ದಾರಿಯನ್ನು ಹಂಚಿಕೊಳ್ಳಿ. ಒಂದೇ ಶಾಲೆ ಒಂದೇ ಕ್ಲಾಸು ಅಥವಾ ಒಂದೇ ಮಾರ್ಗದಲ್ಲಿ ಓಡಾಡುವ ಮಕ್ಕಳನ್ನು ಪಿಕ್‌ಅಪ್-ಡ್ರಾಪ್ ಮಾಡುವುದನ್ನು ಪರಸ್ಪರ ಹಂಚಿಕೊಳ್ಳಬಹುದು.

ಮಕ್ಕಳಿಗೂ ಜವಾಬ್ದಾರಿಯನ್ನು ಕಲಿಸಿ. ಅವರವರ ಚಿಕ್ಕಪುಟ್ಟ ಕೆಲಸಗಳನ್ನು ಅವರೇ ಮಾಡಿಕೊಳ್ಳುವಂತೆ ಪ್ರೇರೇಪಿಸಿ. ಇದರಿಂದ ಅವರು ಜವಾಬ್ದಾರಿಯುತ ಮಕ್ಕಳಾಗಿ ಬೆಳೆಯುವ ಜೊತೆಗೆ ನಿಮ್ಮ ಹೊರೆಯೂ ಕಡಿಮೆಯಾಗುವುದು.

ಮೀ-ಟೈಮ್ ಮರೆಯದಿರಿ. ಅಮ್ಮನೂ-ಅಪ್ಪನೂ ಆಗಿ ಮಕ್ಕಳನ್ನು ಪೊರೆಯುವುದರಲ್ಲಿಯೇ ನಿಮ್ಮತನವನ್ನು ಕಳೆದುಕೊಳ್ಳಬೇಡಿ. ನಿಮ್ಮ ವೈಯಕ್ತಿಕ ಆಸೆ-ಆಕಾಂಕ್ಷೆ, ಹವ್ಯಾಸಗಳನ್ನೆಲ್ಲ ಬದಿಗೊತ್ತುವುದರಿಂದ ಖಿನ್ನತೆ ಆವರಿಸಿಕೊಳ್ಳಬಹುದು. ಸ್ವತಃ ನೀವು ಸಂತೋಷ ಹಾಗೂ ಚೈತನ್ಯದಿಂದಿರದ ಹೊರತು ನಿಮ್ಮ ಮಕ್ಕಳಿಗೆ ಅಂಥದ್ದೊಂದು ವಾತಾವರಣ ನೀಡಲು ಸಾಧ್ಯವಾಗದು. ನಿಮ್ಮ ಇಷ್ಟದ ಹವ್ಯಾಸಗಳಿಗೆ ಒಂದಷ್ಟು ಸಮಯವನ್ನು ಮೀಸಲಿಡಿ. ನಿಮ್ಮ ಅಂದ-ಚಂದ, ಆರೋಗ್ಯ-ಕ್ಷೇಮವೂ ಮುಖ್ಯ. ನೀವು ಖುಷಿಯಾಗಿದ್ದರೆ ಮಾತ್ರ ನಿಮ್ಮ ಪುಟ್ಟ ಬದುಕು ಹಾಗೂ ನಿಮ್ಮನ್ನೇ ನಂಬಿದ ಆ ಪುಟ್ಟ ಜೀವ (ಜೀವಗಳು) ಖುಷಿಯಿಂದಿರಲು ಸಾಧ್ಯ.

ನಗುವುದನ್ನು ಕಲಿತಾಗಲೇ ಬದುಕು ಚಿಗುರುವುದು

ಸಿಂಗಲ್ ಮಾಮ್ -ಏಕಾಂಗಿ ಅಮ್ಮ ಅನ್ನುವಂತಹ ಪದವೇ ಮನಸಿಗೆ ಏನೊ ಒಂಥರ ಕಸಿವಿಸಿ, ಆದರೆ ಅದನ್ನೇ ಧೈರ್ಯವನ್ನಾಗಿ ಮಾಡಿಕೊಳ್ಳುವುದು ಅನಿವಾರ್ಯತೆ. ಸಿಂಗಲ್ ಮದರ್ ಅಂದಾಗ, ಅವರ ಅನುಪಸ್ಥಿತಿ ನೆನಪಿಗೆ ಬಂದು ವೇದನೆ ಎನಿಸುತ್ತದೆ. ಹಾಗೆಯೇ, ಸಿಂಗಲ್ ಮದರ್ ನಾನೊಬ್ಬಳೇ ಅಲ್ಲ ಎನ್ನುವ ವಾಸ್ತವ ಕಣ್ಣೆದುರಿಗೆ ಬರುತ್ತದೆ.

'ನಾಳೆ ಬೆಳಿಗ್ಗೆ ಅನ್ನುವಷ್ಟರಲ್ಲಿ ಅಲ್ಲಿರ್ತೀನಿ' ಅಂದು ಹೋಗಿದ್ದವರು ಇನ್ನೆಂದೂ ಮತ್ತೆ ಮರಳಿ ಬಾರದ ಲೋಕಕ್ಕೆ ಹೋದರು ಎನ್ನುವುದನ್ನು ಅರ್ಥಮಾಡಿಕೊಳ್ಳಲು, ಒಪ್ಪಿಕೊಳ್ಳಲು ನನ್ನ ಮನಸು ಸಿದ್ಧವಿರಲಿಲ್ಲ. ಆದರೆ, ನಾನು ವಾಸ್ತವಕ್ಕೆ ಮರಳಲೇಬೇಕಾದ ಅಗತ್ಯವಿತ್ತು. ಏಕೆಂದರೆ ಮಡಿಲಲ್ಲಿ ಮೂರೂವರೆ ವರ್ಷದ ನನ್ನ ಪುಟ್ಟ ಜೀವವಿತ್ತು. ಅಪ್ಪ ಇಲ್ಲ ಎನ್ನುವುದನ್ನು ಅರ್ಥಮಾಡಿಕೊಳ್ಳಲಾರದ ಮಗು, ಅವನ ಮುಖದ ಮೇಲೆ ಅಮ್ಮ ಇದ್ದಾಳಲ್ಲ ಎನ್ನುವ ಒಂದು ಆತ್ಮವಿಶ್ವಾಸ, ನಗು ಇತ್ತಲ್ಲ, ಅದೇ ನನ್ನಲ್ಲಿ ಬದುಕುವ ಚೈತನ್ಯವನ್ನು, ಬದುಕಬೇಕು ಎನ್ನುವ ಹಟವನ್ನು ತುಂಬಿದ್ದು. ಏಕಾಂಗಿ ಅಮ್ಮನ ಮೇಲೆ ಎರಡು ಪಟ್ಟು ಜವಾಬ್ದಾರಿಗಳಿರುತ್ತವೆ ನಿಜ. ಆದರೆ ಅದೆಲ್ಲಕ್ಕಿಂತ ಮುಖ್ಯವಾಗಿ ಅಮ್ಮನಿದ್ದಾಳೆ ಎನ್ನುವ ಮಕ್ಕಳ ಆತ್ಮವಿಶ್ವಾಸ ಕುಂದದಂತೆ ಬದುಕುವ ದೊಡ್ಡ ಕೆಲಸ ಅವಳ ಮೇಲಿರುತ್ತದೆ. ಕಂದನ ಏಕೈಕ ಆಸರೆಯಾದ ನಾವೇ ಸೋತು ಹೋದರೆ ಮಕ್ಕಳು ಗೆಲ್ಲಲು ಸಾಧ್ಯವೆ? ಅವರು ಗೆಲ್ಲಬೇಕು ಎಂದರೆ ಮೊದಲು ನಾವು ಸೋಲುವುದನ್ನು ತಪ್ಪಿಸಬೇಕು. ಇದನ್ನು ನೆನಪಿಸಿಕೊಂಡು ನಾನು ನಗುವುದನ್ನು ಕಲಿತೆ, ಗೆಲುವಾಗಿರುವುದನ್ನು ಕಲಿತೆ, ಚೈತನ್ಯವನ್ನು ಮೈದುಂಬಿಕೊಂಡೆ. ಅವರಿಲ್ಲದ ನೋವು ನನ್ನನ್ನೂ, ನನ್ನ ಮಗನನ್ನು ಮೂಲೆಗುಂಪು ಮಾಡದಂತೆ ತಡೆಯುವುದು ನನ್ನ ಜವಾಬ್ದಾರಿಯಾಗಿತ್ತು. ಅವರಿಲ್ಲ ಎನ್ನುವುದನ್ನೇ ಮರೆತೆ, ಅವರು ನನ್ನೊಳಗೇ ಇರುವುದನ್ನೇ ಮುನ್ನೆಲೆ ತಂದುಕೊಂಡು ಜೀವನ ಆರಂಭಿಸಿದಾಗ ಬದುಕು ಎಷ್ಟೊ ಸಹ್ಯವೆನಿಸಲು ಆರಂಭವಾಯ್ತು...

ಏಕಾಂಗಿಯಾಗಿ ಬದುಕು ಜೀಕುವ ಅನಿವಾರ್ಯತೆಗೆ ಬಿದ್ದ ಎಲ್ಲಾ ಅಮ್ಮಂದಿರಿಗೆ ನಾನು ಹೇಳುವುದಿಷ್ಟೆ, ನಾವು ನಗದ ಹೊರತು, ನಮ್ಮ ಮನೆಯಲ್ಲಿ ನಗು ತುಂಬದು, ನಮ್ಮನ್ನೇ ನಂಬಿ ಭೂಮಿಗೆ ಬಂದ ಕಂದನ ಬಾಳಲ್ಲಿಯೂ ನಗು ಚಿಮ್ಮದು. ಹೀಗಾಗಿ, ಮೊದಲು ನಗುವುದನ್ನು ಕಲಿಯಿರಿ, ಬದುಕು ಗೆಲುವಾಗುವುದು.

ಮಂಗಳಾ ಜಮಖಂಡಿ

ಮಕ್ಕಳು ಏನಂತಾರೆ

ತಾಯಂದಿರ ದಿನಕ್ಕೆ ಅಮ್ಮನಿಗೆ ಏನು ಉಡುಗೊರೆ ಅಂಥ ಪ್ರಶ್ನೆ ಮುಂದಿಟ್ಟರೆ, ಸಹಜವಾಗಿ ತೊದಲೇ ಉತ್ತರವಾಗುತ್ತದೆ. ಸದಾ ಮಕ್ಕಳಿಗಾಗಿ ಮಿಡಿಯುವ ಅಮ್ಮನಿಗೆ ಉಡುಗೊರೆಯೊಂದು ಸಾಟಿಯಾಗಬಲ್ಲದೇ?. ಊಹುಂ. ಆದರೂ ಉಡುಗೊರೆ ಕೊಟ್ಟು ಸಂಭ್ರಮಿಸಲು ಈ ದಿನವೊಂದು ನೆಪವಷ್ಟೆ. ಉಡುಗೊರೆಯೆಂದರೆ ಭೌತಿಕವಾಗಿಯೇ ಇರಬೇಕಿಲ್ಲ. ಅಮ್ಮನ ಕನಸುಗಳನ್ನು ಈಡೇರಿಸುವ, ಅವಳ ಹೆಜ್ಜೆಯನ್ನು ಅನುಸರಿಸುವ ರೀತಿಯೂ ಉಡುಗೊರೆಯಾಗಬಹುದು. ಈ ನಿಟ್ಟನಲ್ಲಿ ಮಕ್ಕಳು ಹೇಳಿರುವ ಮಾತುಗಳನ್ನು ರೂಪಾ ಕೆ.ಎಂ.ಕಟ್ಟಿಕೊಟ್ಟಿದ್ದಾರೆ

ಬದುಕಿನ ಸತ್ವ ದಾಟಿಸುವ ಹೊಣೆ

ಅಮ್ಮ ಕೆ.ನೀಲಾ ಅವರೊಂದಿಗೆ ಲವಿತ್ರಾ ವಸ್ತ್ರದ್

ನಾನಾಗ ನಾಲ್ಕನೇ ತರಗತಿಯಲ್ಲಿದ್ದೆ. ಶಾಲೆ ಮುಗಿಸಿಕೊಂಡು ಸಂಜೆ ವಾಪಸ್ ಮನೆಗೆ ಹೋದರೆ ಅವ್ವ ಅಲ್ಲಿರಲಿಲ್ಲ. ಎಂದಿನಂತೆ ಅವ್ವ ಹೋರಾಟದಲ್ಲಿ ಭಾಗಿಯಾಗಿದ್ದು ಗೊತ್ತಿತ್ತು. ಕತ್ತಲಾಗುತ್ತಿದ್ದಂತೆ ಬಂದ ಅಪ್ಪ ನನ್ನನ್ನು ಊರಿನ ಹೊರಗಡೆ ಇರುವ ಸ್ಥಳವೊಂದಕ್ಕೆ ಕರೆದುಕೊಂಡು ಹೋದರು. ಅದು ಕಲಬುರ್ಗಿಯ ಕಾರಾಗೃಹ. ಅವ್ವನನ್ನು ಭೇಟಿಯಾಗುವ ಸಮಯದಲ್ಲಿ ಅವ್ವ ಮತ್ತು ನನ್ನ ನಡುವೆ ಸರಳುಗಳಿದ್ದವು. ನನಗೆ ಆಶ್ಚರ್ಯ, ಕುತೂಹಲ ಎಲ್ಲವೂ ಒಟ್ಟಿಗೆ ಆಯಿತು. ರೈತರು ಬೆಳೆದ ತೊಗರಿಗೆ ನ್ಯಾಯಯುತ ಬೆಲೆ ಸಿಗಬೇಕು ಎಂದು ಹೋರಾಟ ಮಾಡಿದ್ದಕ್ಕೆ ಅವ್ವನನ್ನು ಜೈಲಿಗೆ ಹಾಕಲಾಯಿತು ಎಂದು ಅಪ್ಪ ಹೇಳಿದ್ದ ನೆನಪು. ಅವ್ವ ನಗುತ್ತಲೇ ಜಿಂದಾಬಾದ್ ಹೇಳಿದ್ದಳು. ನ್ಯಾಯದೆಡೆಗೆ ಅವಳಗಿದ್ದ ಕಾಳಜಿ, ಉತ್ಸಾಹ ಕಂಡು ನಾನು ಅವ್ವನೊಂದಿಗೆ ಜೋರು ಧ್ವನಿಯಲ್ಲಿ ಜಿಂದಾಬಾದ್ ಕೂಗಿದ್ದೆ. ಇದು ನನ್ನವ್ವ. ಅವಳನ್ನು ಯಾವಾಗಲೂ ನಾನು ಜನರ ಮಧ್ಯೆ ನೋಡಿದ್ದು. ಮಹಿಳಾಪರ ಹೋರಾಟ, ಕೃಷಿ, ಕೂಲಿಕಾರ್ಮಿಕರಿಗೆ ಸಂಬಂಧಪಟ್ಟ ಸಭೆಯಲ್ಲಿ ಅವ್ವನ ಹಾಜರಾತಿ ಸಾಮಾನ್ಯ. 15 ವರ್ಷದಿಂದ ಉದ್ಯೋಗ ಖಾತ್ರಿಯಡಿ ಜನರಿಗೆ ಸಮರ್ಪಕವಾಗಿ ಕೆಲಸ ಸಿಗಲಿ ಎಂದು ಹೋರಾಟ ನಡೆಸಿದವಳು.

ಘನತೆಯಿಂದ ಸ್ವಾಲವಂಬಿಗಳಾಗಿ ಬದುಕುವುದು ದಿಟದ ಬದುಕು ಎಂಬುದನ್ನು ಅವ್ವನಿಂದ ಕಲಿತಿದ್ದೇನೆ. ವೃತ್ತಿ ಯಾವುದೇ ಇರಲಿ, ಸದಾ ಜನಪರವಾಗಿರಬೇಕು. ಜನರಿಗಾಗಿ ಬದುಕುವುದೇ ನಿಜವಾದ ಸಿದ್ಧಾಂತ ಎಂದು ಹೇಳಿಕೊಟ್ಟ ಅವ್ವನ ಬದುಕಿನ ಸತ್ವವನ್ನು ನನ್ನ ಮಕ್ಕಳಿಗೂ ಬಳುವಳಿಯಾಗಿ ದಾಟಿಸಲು ಬಯಸುತ್ತೇನೆ. ಇದೇ ನಾನು ಅವಳಿಗೆ ಕೊಡಬಹುದಾದ ಅತ್ಯುನ್ನತ ಉಡುಗೊರೆ. ತಾಯಿ ಋಣ, ಅನ್ನದಾತರ ಋಣ ತೀರಿಸಲಾಗದು. ಅವಳಿಗೆ ಹಾಡುಗಳೆಂದರೆ ಬಲುಇಷ್ಟ. ಹಾಡುವ ಮೂಲಕ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

ಲವಿತ್ರಾ ವಸ್ತ್ರದ್, ಚಳವಳಿಗಾರ್ತಿ

ಅಮ್ಮನ ಅಭಿರುಚಿಗೆ ಮರುಚಾಲನೆ ಸಿಗಲಿ



ಅಮ್ಮ ಜಯಶ್ರೀ ಟಿ. ಅವರೊಂದಿಗೆ ಅನುಷಾ

ಅಮ್ಮನಿಗೆ ಮೊದಲಿನಿಂದಲೂ ವಿದ್ಯಾಭ್ಯಾಸದಲ್ಲಿ ಅಪಾರವಾದ ನಂಬಿಕೆ ಇತ್ತು. ಮಗಳು ಚೆನ್ನಾಗಿ ಓದಿ, ಆರ್ಥಿಕವಾಗಿ ಸ್ವತಂತ್ರಳಾಗಿರಬೇಕು ಅನ್ನುವುದು ಅವರ ಜೀವನದ ಬಹುದೊಡ್ಡ ಕನಸು. ಅದನ್ನು ಈಡೇರಿಸಿರುವುದಕ್ಕೆ ಸದ್ಯಕ್ಕೆ ಖುಷಿ ಇದೆ. ಭೌತಿಕ ಉಡುಗೊರೆ ಅಂತ ಬಂದರೆ ಅಮ್ಮನಿಗೆ ಗೃಹೋಪಯೋಗಿ ವಸ್ತುಗಳು, ಮನೆಗೆಲಸಕ್ಕೆ ನೆರವಾಗುವ ಉಪಕರಣಗಳೆಂದರೆ ಎಲ್ಲಿಲ್ಲದ ಆಸಕ್ತಿ. ಅವರ ಅವಶ್ಯಕತೆಗೆ ಅನುಸಾರ ಇಷ್ಟಪಟ್ಟಿದ್ದನ್ನೆಲ್ಲ ಕೊಡಿಸುವ ಆಸೆಯಂತೂ ಇದೆ.

ಅಮ್ಮನಿಗೆ ಕೃತಜ್ಞತೆ ಸಲ್ಲಿಸೋದು ಅಂದರೆ ನಮ್ಮ ಬದುಕಿಗೆ ನಾವೇ ಕೃತಜ್ಞತೆ ಹೇಳುವುದೇ ಆಗಿದೆ. ಯಾಕೆಂದರೆ ಈ ಜೀವ ಮತ್ತು ಜೀವನ ಅವಳ ಕರುಣೆಯ ಒಟ್ಟಂದದ ಫಲ. ನನ್ನ ಬದುಕಿಗೆ ಕಲಾಚೌಕಟ್ಟನ್ನು ಹಾಕಿಕೊಟ್ಟವಳು ಅವಳೇ. ಕಲಾತ್ಮಕ ಆಲೋಚನೆಗಳಿಗೆ ಅಮ್ಮನೇ ಪ್ರೇರಣೆ. ಕಲೆ ಹಾಗೂ ರುಚಿಕಟ್ಟಾದ ಅಡುಗೆ ತಯಾರಿ, ಫ್ಯಾಷನ್ ಪ್ರಜ್ಞೆ ಎಲ್ಲವೂ ಅವಳಿಂದಲೇ ಕಲಿತಿದ್ದು. ಸಂಸಾರದ ಜಂಜಾಟದಲ್ಲಿ ಕಳೆದುಹೋಗಿರುವ ಅಮ್ಮನ ಹವ್ಯಾಸ ಹಾಗೂ ಅಭಿರುಚಿಗಳಿಗೆ ಮತ್ತೆ ಚಾಲನೆ ಸಿಗುವಂತಾದರೆ ಅದಕ್ಕಿಂತ ದೊಡ್ಡ ಖುಷಿ ಬೇರೊಂದಿಲ್ಲ. ಅವಳಿಗಾಗಿ ಕಲಾ ಕಾರ್ಯಾಗಾರ, ಪ್ರದರ್ಶನದಂಥ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಆಸೆಯಿದೆ.

ಅನುಷಾ ಬಡಿಗೇರ್, ಚಿತ್ರಕಲಾವಿದೆ

ಪ್ರಶಸ್ತಿಗಳೆಲ್ಲ ಅಮ್ಮನಿಗೆ ಅರ್ಪಣೆ

ಅಮ್ಮ ಎಂ.ಆರ್. ಕಮಲಾ ಅವರೊಂದಿಗೆ ಸ್ಪರ್ಶಾ

ಅಮ್ಮನಿಗೆ ಭೌತಿಕ ಉಡುಗೊರೆಗಳೆಲ್ಲ ಇಷ್ಟವಾಗದು. ಪ್ರತಿ ತಾಯಿಗೂ ತನ್ನ ಮಗು, ತಾನು ಆಯ್ಕೆ ಮಾಡಿಕೊಂಡ ಕ್ಷೇತ್ರದಲ್ಲಿ ಯಶಸ್ವಿಯಾದರೆ, ಅದರಲ್ಲಿ ಬೆಳವಣಿಗೆ ಕಾಣಲು ಸಾಧ್ಯವಾದರೆ ಅದೇ ತಾಯಿಗೆ ಸಿಗಬಹುದಾದ ದೊಡ್ಡ ಸಮಾಧಾನ. ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಸಂಗೀತಗಾರ್ತಿಯಾಗಿ ಹೆಸರು ಗಳಿಸಬೇಕು ಎಂಬುದು ಅಮ್ಮನ ಆಸೆ. ಫಿಲಂಫೇರ್, ರಾಷ್ಟ್ರೀಯ ಅಥವಾ ರಾಜ್ಯಮಟ್ಟದ ಪ್ರಶಸ್ತಿ ಪಡೆದು, ಅದನ್ನು ಅಮ್ಮನಿಗೆ ಅರ್ಪಣೆ ಮಾಡಲು ಸಾಧ್ಯವಾದರೆ ಅದು ನಾನು ಅವಳಿಗೆ ಕೊಡಬಹುದಾದ ಬಹುದೊಡ್ಡ ಉಡುಗೊರೆ.

ಅಪ್ಪ -ಅಮ್ಮನಿಗೆ ಒಂದು ದಿನದಲ್ಲಿ ಧನ್ಯವಾದ ಹೇಳಿ ಮುಗಿಸಲು ಆಗದು. ಅವರು ತೋರಿಸುವ ಪ್ರೀತಿ, ಕಾಳಜಿಯ ಮುಂದೆ ಎಲ್ಲವೂ ನಗಣ್ಯ.

ಅಮ್ಮ ಕೆಲಸದ ಹುಚ್ಚು ಹಚ್ಚಿಕೊಟ್ಟಿದ್ದಾಳೆ. ಅವಳಿಗೆ ಕೆಲಸದ ಮುಖೇನ ಧನ್ಯವಾದ ಹೇಳಲು ಇಚ್ಛಿಸುತ್ತೇನೆ. ನನ್ನಮ್ಮ ಅವಳಮ್ಮನಿಗಾಗಿ ಬರೆದ 'ಅಮ್ಮಾ ಹಚ್ಚಿದೊಂದು ಹಣತೆ' ಹಾಡನ್ನು ಹಾಡಿ ಧನ್ಯವಾದ ಹೇಳುತ್ತೇನೆ ಅಥವಾ ಅಮ್ಮನಿಗೋಸ್ಕರವೇ ಒಂದು ಹಾಡು ಬರೆದು, ನಾನೇ ಸಂಗೀತ ಸಂಯೋಜಿಸಿ, ಅದನ್ನು ಪ್ರಸ್ತುತ ಪಡಿಸುವ ಮೂಲಕ ಧನ್ಯವಾದ ಹೇಳಲು ಬಯಸುತ್ತೇನೆ.

ಸ್ಪರ್ಶಾ ಆರ್.ಕೆ. ಗಾಯಕಿ

ಕನಸು ಈಡೇರಿಸುವ ಆಸೆ

ಅಮ್ಮ ಯೋಗಾಕ್ಷಿ ತಲಕಳ ಜತೆ ಶ್ರಾವ್ಯ ತಲಕಳ

ನನಗೆ ಯಕ್ಷಗಾನದಲ್ಲಿಯೂ ತಾಯಿಯೇ ಮೊದಲ ಗುರು. ಅಮ್ಮ ಅಂಗನವಾಡಿ ಶಾಲೆಯಲ್ಲಿ ಶಿಕ್ಷಕಿಯಾಗಿದ್ದರಿಂದ ಅಕ್ಷರ ಗುರುವೂ ಹೌದು. ಅಮ್ಮ ಸ್ವತಃ ಸಂಗೀತ, ಯಕ್ಷಗಾನವನ್ನು ಅಭ್ಯಾಸ ಮಾಡಿದ್ದರಿಂದ ಅದರ ಮೇಲೆ ನನಗೂ ಹಾಗೂ ತಂಗಿಗೆ ಒಲವು ಬಂತು. ತರಗತಿಯಲ್ಲಿ ಗೊತ್ತಾಗದೇ ಇದ್ದ ಯಕ್ಷಗಾನದ ಪಟ್ಟುಗಳನ್ನು ಅವರಿಂದ ಕಲಿತಿದ್ದೇನೆ. ಎಲ್ಲಿಯೇ ಬಯಲಾಟ ನಡೆದರೂ ಅಮ್ಮನ ಜತೆ ನಾವೂ ಹೋಗುತ್ತೇವೆ. ಅವಳಿಗೆ ನಾನು ಉತ್ತಮ ಯಕ್ಷಗಾನ ಕಲಾವಿದೆ ಆಗಬೇಕು ಎನ್ನುವ ಆಸೆ. ವೇಷದ ಜತೆಗೆ ಚೆಂಡೆ ಮದ್ದಳೆಯಲ್ಲಿಯೂ ಮುಂದುವರಿಯಬೇಕು ಎನ್ನುವುದು ಅವರ ಮಹಾದಾಸೆ. ನನ್ನ ತಂಗಿ ಚೆಂಡೆ ಅಭ್ಯಾಸ ಮಾಡುತ್ತಿದ್ದಾಳೆ. ನಾನು ಮದ್ದಳೆಯಲ್ಲಿ ತರಬೇತಿ ಪಡೆಯುತ್ತಿದ್ದೇನೆ. ಇಬ್ಬರು ಹಿಮ್ಮೇಳದಲ್ಲಿ ಸಾಧನೆ ಮಾಡಬೇಕು, ಒಳ್ಳೆಯ ಸ್ಥಾನ ತಲುಪಬೇಕು ಎನ್ನುವುದು ಅವರ ಕನಸು. ಅದನ್ನು ಈಡೇರಿಸಿದರೆ ಅದೇ ನಾನು ಅವಳಿಗೆ ಕೊಡಬಹುದಾದ ಉಡುಗೊರೆ.

ಶ್ರಾವ್ಯ ತಲಕಳ, ಯಕ್ಷಗಾನ ಕಲಾವಿದೆ

ಚಿಂತ್ಯಾಕ ಮಾಡ್ತಿದ್ದಿ...?

ರಶ್ಮಿ ಎಸ್.

ಅಯ್ಯೊ... ಮನೆಗೆ ಹೋಗೋದು ಲೇಟಾಯ್ತು, ಮಗನಿಗೆ ಏನಾದರೂ ತೊಗೊಂಡು ಹೋಗ್ತೀನಿ... ತರಬೇತಿಗೆಂದೇ ಬೇರೆ ಊರಿಗೆ ಹೋದರೂ.. ಮಕ್ಕಳು ಕಾಯ್ತಿರ್ತಾರೆ ಬರಿಗೈಲಿ ಹೇಗೆ ಹೋಗೋದು...

ಅದ್ಯಾವ ಕಾಲವಾಗಿತ್ತು, ಒಂದು ಸಿನಿಮಾ ನೋಡಿ.. ಪಾಪ... ಮಕ್ಕಳನ್ನ ಬಿಟ್ಟಂದ್ವಿ... ಪಾಪ್‌ಕಾರ್ನ್ ತಿನ್ನಬೇಕಾದರೆ ಮಗನೇ ನೆನಪಾಗ್ತಾನೆ...

ಹೀಗೆ, ಅನಿವಾರ್ಯ ಇದ್ದಾಗಲೂ, ಆಯ್ಕೆ ಮಾಡಿಕೊಂಡು ಮಕ್ಕಳನ್ನು ಬಿಟ್ಟು ಹೊರಗೆ ಹೋದಾಗಲೂ ಸಣ್ಣದೊಂದು ಪಾಪ ಪ್ರಜ್ಞೆ ಅಮ್ಮನಾದವರಿಗೆ ಕಾಡುತ್ತಲೇ ಇರುತ್ತದೆ. ಈ ಅಪರಾಧಿ ಪ್ರಜ್ಞೆಯನ್ನು ತೊಡೆದುಹಾಕಲು ಉಡುಗೊರೆಗಳ ನೆಪ ಹೂಡುವುದು ಸಹಜ ಮತ್ತು ಸಾಮಾನ್ಯ.

ಆದರೆ ಈ ಗಿಲ್ಟ್ ಸದಾ ಅಮ್ಮನಿಗೇ ಕಾಡುವುದೇಕೆ? ಅಪ್ಪನೂ ಆಚೆ ಹೋಗ್ತಾನೆ. ಬರೋದು ತಡವಾಗುತ್ತದೆ. ಊರಿಗೆ ಹೋಗಿ ಬರ್ತಾರೆ. ಸ್ನೇಹಿತರೊಂದಿಗೆ ಸಮಯ ಕಳೆದುಬರುತ್ತಾರೆ. ಅವರಿಗೆ ಕಾಡದ ಪಾಪ ಪ್ರಜ್ಞೆ ಅಮ್ಮನಿಗೆ ಮಾತ್ರ ಕಾಡುವುದೇಕೆ?

ನಮ್ಮ ಸಾಮಾಜಿಕ ನಿಯಮಗಳು, ಮಕ್ಕಳ ಆರೈಕೆ ಪೊರೆಯುವಿಕೆ, ಅಗತ್ಯದನ್ನು ಪೂರೈಸುವುದು ಅಮ್ಮನ ಜವಾಬ್ದಾರಿ ಎಂಬ ನಿಯಮವನ್ನು ಹೇರಿರುವುದರಿಂದ ತಾಯಂದಿರು ಸಹಜವಾಗಿಯೇ ಈ ಅಪರಾಧಿ ಪ್ರಜ್ಞೆಯಲ್ಲಿ ನರಳುತ್ತಾರೆ. ಬಳಲುತ್ತಾರೆ.

ಮಕ್ಕಳಿಗೆ ಉಡುಗೊರೆ ಕೊಡುವ ಬದಲು ತಡವಾಗಿ ಹೋದಾಗ, ಒಂದ್ಹತ್ತು ನಿಮಿಷ ಅವರೊಂದಿಗೆ ಹೆಚ್ಚು ಸಮಯ ಕಳೆಯಿರಿ. ಮಲಗುವ ಮುನ್ನ ಕತೆ ಓದಿರಿ. ತಡವಾದುದು ಯಾಕೆ ಎಂಬುದನ್ನು ಅವರಿಗೆ ಅರ್ಥವಾಗುವಂತೆ, ಅರ್ಥವಾಗುವಷ್ಟು ತಿಳಿಸಿ. ಮುನಿಸಿದ್ದರೆ ಸಮಾಧಾನಿಸಿ, ಕಚಗುಳಿ ಇಟ್ಟು ಮಲಗಿಸಿ.

ಅಪರಾಧಿ ಪ್ರಜ್ಞೆ ಬೆಳೆಯದಂತೆ ನೋಡಿಕೊಳ್ಳುವಲ್ಲಿ ಸಂಗಾತಿಯ ಪಾತ್ರವೂ ಮಹತ್ತರವಾಗಿದೆ. ದುಡಿಯುವ ಮಹಿಳೆಗೆ ಆಯ್ಕೆಯೇ ಇರುವುದಿಲ್ಲ. ಕೆಲವೊಮ್ಮೆ ತರಬೇತಿ, ಮೀಟಿಂಗು ಎಂದು ಮಕ್ಕಳನ್ನು ಬಿಟ್ಟಿರಲೇಬೇಕಾದ ಅನಿವಾರ್ಯ ಇರುತ್ತದೆ., ಗೃಹಿಣಿಗೂ ದೈನಂದಿನ ಬದುಕಿನಿಂದ ಸಣ್ಣದೊಂದು ಬಿಡುವ ಬೇಕಿರುತ್ತದೆ. ಇಂಥ ಸಂದರ್ಭಗಳಲ್ಲಿ ಸಂಗಾತಿಯು ಮಗುವಿನ ದೇಖರೇಕಿ ಮಾಡಿಕೊಂಡಿದ್ದು, ಅಮ್ಮ ಮನೆಗೆ ಬಂದಾಗ ಬೆಚ್ಚನೆಯ ಸ್ವಾಗತ ದೊರೆತರೆ ಸಾಕು. ತಾಯ್ತನವೆಂಬುದು ಹೊರೆಯಾಗುವುದಿಲ್ಲ.

ಬದಲಾವಣೆ ಬರಬೇಕಿರುವುದು ಹೆಣ್ಣುಮಕ್ಕಳ ಮನಸ್ಥಿತಿಯಲ್ಲಿ ಜೊತೆಗೆ ಪುರುಷರಲ್ಲಿಯೂ. ಮಕ್ಕಳ ಪೋಷಣೆ ಪಾಲಕರು ಇಬ್ಬರಿಗೂ ಸಮವಾಗಿ ಸೇರಿದ್ದು. ದುಡಿಯುವ ಮಹಿಳೆಯೇ ಆಗಿರಲಿ, ಗೃಹಿಣಿಯೇ ಆಗಿರಲಿ, ಪರಿಪೂರ್ಣ ಜವಾಬ್ದಾರಿ ಅಮ್ಮನಿಗೆ ಸೇರಿದ್ದು ಎಂದು ಸುಮ್ಮನಾಗುವಂತಿಲ್ಲ. ವಿಘಟಿತ ಕುಟುಂಬಗಳಲ್ಲಿ ಮಾನಸಿಕ ನೆಮ್ಮದಿ ನೆಲೆಸಬೇಕೆಂದರೆ ಇಂಥ ಸಹಬಾಳ್ವೆ ಅತ್ಯಗತ್ಯ. ತಾಯ್ತನದ ಒತ್ತಡ ನಿರ್ವಹಣೆಗೂ ಇದು ಸಹಕಾರಿಯಾಗಿರುತ್ತದೆ. ತಾಯ್ತನವೆಂಬುದು ಅಮ್ಮನ ಹೊಣೆಗಾರಿಕೆ ಮಾತ್ರವಲ್ಲ ಎಂಬ ಭಾವ ಇಬ್ಬರಲ್ಲಿಯೂ ಒಡಮೂಡಿದರೆ ಈ ಪಾಪಪ್ರಜ್ಞೆಯಿಂದಾಚೆ ಬರಬಹುದು.

ಮಕ್ಕಳೂ ಅಮ್ಮ ಅಪ್ಪನ ಸಮಯದ ಬದಲಿಗೆ ಉಡುಗೊರೆ ಪಡೆಯಬಹುದಾದ ಲಾಲಸೆ ಬೆಳೆಯುವುದರಿಂದ ತಪ್ಪಿಸಬಹುದಾಗಿದೆ. ತಾಯ್ತನ ಕೇವಲ ಹೊತ್ತವರ ಸ್ವತ್ತಲ್ಲ. ಹೆತ್ತವರಿಬ್ಬರ ಪಾಲುದಾರಿಕೆ. ತಾಯ್ತನ ಅನುಭವಿಸಬಹುದಾದ ಎಲ್ಲ ಪುರುಷರಿಗೂ 'ಮದರ್ಸ್ ಡೇ ಶುಭಾಶಯ'ಗಳು.

ಸುಭಾಷಿತ

ಜೀವನವು ಬಸ್ಸಿನ ಪಯಣವಿದ್ದಂತೆ. ಓಡುವಾಗ ಗಾಳಿ ಬಹಳ. ನಿಂತಾಗ ವಿಪರೀತ ಸೆಕೆ.

–ಬೀಚಿ

ಎಸ್‌ಎಸ್‌ಎಲ್‌ಸಿ ಫಲಿತಾಂಶ ಕುಸಿತ ಶಿಕ್ಷಣ ಕ್ಷೇತ್ರದ ಆತ್ಮಾವಲೋಕನ ಅಗತ್ಯ

ಬಾಲಕಿಯರೊಂದಿಗೆ ಗ್ರಾಮೀಣ ಮಕ್ಕಳ ಮೇಲುಗೈ ಹಾಗೂ ಶೇಕಡ 100ರಷ್ಟು ಅಂಕಗಳನ್ನು ಪಡೆಯುವ ಮೂಲಕ ರಾಜ್ಯಕ್ಕೆ ಮೊದಲಿಗಳಾಗಿರುವ ಬಾಗಲಕೋಟೆ ಜಿಲ್ಲೆಯ ಸರ್ಕಾರಿ ಶಾಲೆಯ ವಿದ್ಯಾರ್ಥಿನಿ ಅಂಕಿತಾ ಬಸಪ್ಪ ಕೊಣ್ಣೂರ ಅವರ ವಿಶಿಷ್ಟ ಸಾಧನೆಯಂತಹ ಸಮಾಧಾನಕರ ಸಂಗತಿಗಳ ನಡುವೆಯೂ 2023–24ನೇ ಸಾಲಿನ ಎಸ್‌ಎಸ್‌ಎಲ್‌ಸಿ ಫಲಿತಾಂಶ ನಿರಾಶಾದಾಯಕವಾಗಿದೆ. 8.59 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಶೇ 73.40ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಕಳೆದ ವರ್ಷ ಶೇ 83.89ರಷ್ಟು ಮಕ್ಕಳು ತೇರ್ಗಡೆ ಹೊಂದಿದ್ದರು. ಅದಕ್ಕೆ ಹೋಲಿಸಿದರೆ ಶೇ 10.49ರಷ್ಟು ಫಲಿತಾಂಶ ಕುಸಿತ ಕಂಡಿದೆ. ಮೌಲ್ಯಮಾಪನ ನಂತರದ ಫಲಿತಾಂಶದ ಪ್ರಮಾಣ ಶೇ 53ರಷ್ಟು ಇತ್ತು. ವಿದ್ಯಾರ್ಥಿಗಳ ಹಿತಾಸಕ್ತಿ ದೃಷ್ಟಿಯಿಂದ ನಿಯಮವನ್ನು ಸಡಿಲಿಸಿ ಗರಿಷ್ಠ 20 ಕೃಪಾಂಕಗಳನ್ನು ನೀಡಿದ ನಂತರ ಫಲಿತಾಂಶದ ಪ್ರಮಾಣ ಶೇ 73.40ರಷ್ಟಾಗಿದೆ. ಕೃಪಾಂಕ ನಿಯಮ ಬದಲಾಗದೇ ಹೋಗಿದ್ದಲ್ಲಿ ಫಲಿತಾಂಶ ಕುಸಿತದ ಪ್ರಮಾಣವು ಕಳೆದ ವರ್ಷಕ್ಕೆ ಹೋಲಿಸಿದರೆ ಶೇ 30ರಷ್ಟಾಗುತ್ತಿತ್ತು. ಕೃಪಾಂಕಗಳ ಆಧಾರದಲ್ಲಿಯೇ 1.69 ಲಕ್ಷ ವಿದ್ಯಾರ್ಥಿಗಳು ಉತ್ತೀರ್ಣರಾಗಿರುವುದು ಪ್ರಾಥಮಿಕ ಶಿಕ್ಷಣದ ಬುನಾದಿ ಭದ್ರಪಡಿಸಬೇಕಾದ ಅಗತ್ಯವನ್ನು ಹೇಳುತ್ತದೆ. ಪರೀಕ್ಷಾ ಕೇಂದ್ರಗಳಲ್ಲಿ ಇದೇ ಮೊದಲ ಬಾರಿಗೆ ಸಿ.ಸಿ. ಟಿ.ವಿ ಕ್ಯಾಮೆರಾ ಮೂಲಕ ವೆಬ್‌ಕಾಸ್ಟಿಂಗ್ ಅಳವಡಿಸಿದ್ದುದನ್ನು ಫಲಿತಾಂಶ ಕುಸಿತಕ್ಕೆ ಕಾರಣವನ್ನಾಗಿ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ನೀಡಿದೆ. ಪರೀಕ್ಷೆಯಲ್ಲಿ ಅಕ್ರಮಗಳು ನುಸುಳದಂತೆ ಮಾಡಿರುವುದು ಒಳ್ಳೆಯ ಬೆಳವಣಿಗೆ. ಸರ್ಕಾರಕ್ಕೆ ಇಚ್ಛಾಶಕ್ತಿ ಇದ್ದಲ್ಲಿ ಎಲ್ಲ ಪರೀಕ್ಷೆಗಳನ್ನು ಹೀಗೆ ಕಟ್ಟುನಿಟ್ಟಾಗಿ ನಡೆಸಬಹುದು ಎಂಬುದಕ್ಕೆ ಈ ಸಲದ ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಿದರ್ಶನವಾಗಿದೆ. ಆದರೆ, ಪರೀಕ್ಷಾ ಅಕ್ರಮಗಳಿಗೆ ಸಂಪೂರ್ಣ ಕಡಿವಾಣ ಹಾಕಿರುವುದರಿಂದ ಫಲಿತಾಂಶ ವ್ಯತ್ಯಯಗೊಂಡಿದೆ ಎನ್ನುವ ವಾದವನ್ನು ಒಪ್ಪುವುದಾದಲ್ಲಿ, ಹಿಂದಿನ ವರ್ಷಗಳ ಉತ್ತಮ ಫಲಿತಾಂಶ ಪ್ರಶ್ನಾರ್ಹ ಆಗುತ್ತದೆ ಹಾಗೂ ಶಿಕ್ಷಣ ವ್ಯವಸ್ಥೆಯ ಟೊಳ್ಳುತನವನ್ನು ಸೂಚಿಸುತ್ತದೆ. ಫಲಿತಾಂಶ ಪಟ್ಟಿಯಲ್ಲಿನ ಜಿಲ್ಲೆಗಳ ಸಾಧನೆಯ ಕ್ರಮಾಂಕದಲ್ಲಿ ಆಗಿರುವ ಬದಲಾವಣೆಯೂ ಈವರೆಗಿನ ಪರೀಕ್ಷಾ ಫಲಿತಾಂಶಗಳನ್ನು ಅನುಮಾನದಿಂದ ನೋಡಲು ಒತ್ತಾಯಿಸುವಂತಿದೆ. ಕಳೆದ ವರ್ಷದ ಫಲಿತಾಂಶ ಪಟ್ಟಿಯಲ್ಲಿ 1 ಹಾಗೂ 2ನೇ ಸ್ಥಾನದಲ್ಲಿದ್ದ ಚಿತ್ರದುರ್ಗ ಜಿಲ್ಲೆ ಹಾಗೂ ಮಂಡ್ಯ ಜಿಲ್ಲೆ ಈ ಬಾರಿ 21 ಹಾಗೂ 19ನೇ ಸ್ಥಾನಕ್ಕೆ ಕುಸಿದಿದ್ದರೆ, 14ನೇ ಸ್ಥಾನದಲ್ಲಿದ್ದ ಉಡುಪಿ ಮೊದಲ ಸ್ಥಾನಕ್ಕೆ ಜಿಗಿದಿದೆ. 17 ಹಾಗೂ 28ನೇ ಸ್ಥಾನದಲ್ಲಿದ್ದ ದಕ್ಷಿಣ ಕನ್ನಡ, ಶಿವಮೊಗ್ಗ ಜಿಲ್ಲೆಗಳು ಕ್ರಮವಾಗಿ 2 ಮತ್ತು 3ನೇ ಸ್ಥಾನ ಪಡೆದುಕೊಂಡಿವೆ. ಶೂನ್ಯ ಫಲಿತಾಂಶ ದಾಖಲಿಸಿರುವ 78 ಶಾಲೆಗಳಲ್ಲಿ 44 ಕಲ್ಯಾಣ ಕರ್ನಾಟಕ ಜಿಲ್ಲೆಗಳಿಗೆ ಸೇರಿವೆ. ಕಲಬುರಗಿ ಜಿಲ್ಲೆಯಲ್ಲಿಯೇ 18 ಶಾಲೆಗಳು ಸೊನ್ನೆ ಸುತ್ತಿವೆ. ಒಂದೇ ವರ್ಷದಲ್ಲಿ ಇಷ್ಟೊಂದು ಏರುಪೇರು ಉಂಟಾಗಿದ್ದೇಕೆ ಎಂಬುದನ್ನು ವಿಶ್ಲೇಷಣೆಗೆ ಒಳಪಡಿಸಬೇಕಾಗಿದೆ.

ಪ್ರಾಥಮಿಕ ಹಂತದಲ್ಲಿಯೇ ಶಿಕ್ಷಕರ ಕೌಶಲ ಮತ್ತು ಬೋಧನೆಯ ಗುಣಮಟ್ಟ ಸುಧಾರಣೆಯ ಕಡೆ ಗಮನಹರಿಸಬೇಕಾದ ಜರೂರು ಇದೆ

ಫಲಿತಾಂಶವನ್ನು ಉತ್ತಮಗೊಳಿಸಿಕೊಳ್ಳಲು ಮತ್ತೂ ಎರಡು ಪರೀಕ್ಷೆಗಳನ್ನು ನಡೆಸುತ್ತಿರುವುದು ಸ್ವಾಗತಾರ್ಹ. ಮೊದಲ ಪರೀಕ್ಷೆಗೆ ಅನಿವಾರ್ಯ ಕಾರಣಗಳಿಂದ ಹಾಜರಾಗಲು ಸಾಧ್ಯವಾಗದವರು ಹಾಗೂ ಪರೀಕ್ಷೆ ಬರೆದೂ ಅನುತ್ತೀರ್ಣರಾದವರಿಗೆ ಈ ಎರಡು ಅವಕಾಶಗಳು ಜೀವದಾನದಂತೆಯೂ ಪರಿಣಮಿಸಬಹುದು. ಪರೀಕ್ಷಾ ಅಕ್ರಮಕ್ಕೆ ಕಡಿವಾಣ ಹಾಕಿದ್ದರಿಂದ ಫಲಿತಾಂಶ ಕುಸಿದಿದೆ ಎನ್ನುವ ಕಾರಣ ಮೇಲ್ನೋಟಕ್ಕೆ ಸರಿಯೆನ್ನಿಸಿದರೂ, ವಿದ್ಯಾರ್ಥಿಗಳ ಕಳಪೆ ಸಾಧನೆಗೆ ಬೇರೆ ಕಾರಣಗಳೂ ಇವೆ. ಕಳೆದ ಕೆಲವು ವರ್ಷಗಳಿಂದ ಪ್ರಾಥಮಿಕ ಶಿಕ್ಷಣ ವ್ಯವಸ್ಥೆ ಹಾಗೂ ಸರ್ಕಾರಿ ಶಾಲೆಗಳನ್ನು ನಿರಂತರವಾಗಿ ನಿರ್ಲಕ್ಷಿಸಿದ್ದರ ಫಲವಾಗಿ ಪ್ರಸಕ್ತ ಫಲಿತಾಂಶವನ್ನು ಗಮನಿಸಬಹುದು. ಒಂದೆಡೆ, ಸರ್ಕಾರಿ ಶಾಲೆಗಳಲ್ಲಿನ ಮೂಲಭೂತ ವ್ಯವಸ್ಥೆಗಳ ಕೊರತೆ ಹೆಚ್ಚುತ್ತಲೇ ಇದ್ದರೆ, ಇನ್ನೊಂದೆಡೆ, ಶಿಕ್ಷಕರ ಮೇಲಿನ ಪಠ್ಯೇತರ ಹೊರೆಯೂ ಹೆಚ್ಚಾಗುತ್ತಿದೆ. ಶಿಕ್ಷಕರ ಸಂಪೂರ್ಣ ಸಾಮರ್ಥ್ಯವನ್ನು ಮಕ್ಕಳಿಗೆ ದೊರಕಿಸಿಕೊಡುವ ಇಚ್ಛಾಶಕ್ತಿಯನ್ನು ಸರ್ಕಾರ ಪ್ರದರ್ಶಿಸಬೇಕು. ಸರ್ಕಾರಿ ಶಾಲೆಗಳು ಹಾಗೂ ಖಾಸಗಿ ಶಾಲೆಗಳ ಮಕ್ಕಳ ನಡುವಿನ ಸಾಧನೆಯ ಅಂತರ ಹೆಚ್ಚುತ್ತಿರುವುದಕ್ಕೂ ಸವಲತ್ತುಗಳ ಕೊರತೆ ಹಾಗೂ ಶಿಕ್ಷಕರ ಕೊರತೆಯೇ ಪ್ರಮುಖ ಕಾರಣಗಳಾಗಿವೆ. ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವ ದಿಸೆಯಲ್ಲಿ ಅಗತ್ಯ ಉಪಕ್ರಮಗಳನ್ನು ಕೈಗೊಳ್ಳಬೇಕು. ಪ್ರಾಥಮಿಕ ಹಂತದಲ್ಲಿಯೇ ಶಿಕ್ಷಕರ ಕೌಶಲ ಮತ್ತು ಬೋಧನೆಯ ಗುಣಮಟ್ಟ ಸುಧಾರಣೆಯ ಕಡೆಗೆ ಗಂಭೀರವಾಗಿ ಗಮನಹರಿಸಬೇಕಾದ ಜರೂರು ಇದೆ. ಈ ದಿಸೆಯಲ್ಲಿ ಎಚ್ಚರಿಕೆಯ ಕರೆಗಂಟೆಯಾಗಿಯೂ ಈ ಬಾರಿಯ ಫಲಿತಾಂಶವನ್ನು ನೋಡಬೇಕಾಗಿದೆ. ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಸುಧಾರಣೆ ತರುವ ದಿಸೆಯಲ್ಲಿ ಪ್ರಸಕ್ತ ಎಸ್‌ಎಸ್‌ಎಲ್‌ಸಿ ಫಲಿತಾಂಶ ಆತ್ಮಾವಲೋಕನಕ್ಕೆ ಕಾರಣವಾಗಬೇಕು.

ದಿನದ ಟ್ವೀಟ್

ಜಗತ್ತೇ ಇತ್ತ ನೋಡು...

ಪೂರ್ವ ಅಫ್ಗಾನಿಸ್ತಾನದಲ್ಲಿನ ಪ್ರದೇಶವೊಂದರ ಹೆಣ್ಣುಮಕ್ಕಳು ಪ್ರತಿ ಬೆಳಿಗ್ಗೆ ಬೆಟ್ಟ ಹತ್ತಿ ತಮ್ಮ ತರಗತಿಗೆ ಹೋಗುತ್ತಾರೆ. ಆದರೆ ಅವರಿಗೆ 11 ವರ್ಷ ವಯಸ್ಸಾಗುತ್ತಿದ್ದಂತೆ ಮನೆಯಲ್ಲೇ ಉಳಿಯಲು ತಿಳಿಸಲಾಗುತ್ತದೆ. ಹದಿಹರೆಯದ ಹೆಣ್ಣುಮಕ್ಕಳು ಶಾಲೆಗೆ ಹೋಗುವುದನ್ನು ತಾಲಿಬಾನ್ ನಿಷೇಧಿಸಿ 966 ದಿನಗಳಾದವು. ವಿಶ್ವವಿದ್ಯಾಲಯಕ್ಕೆ ಮಹಿಳೆಯರ ಪ್ರವೇಶವನ್ನು ನಿಷೇಧಿಸಿ 507 ದಿನಗಳು ಸಂದವು.

ಶಬ್ನಂ ನಾಸಿಮಿ, ಸಾಮಾಜಿಕ ಕಾರ್ಯಕರ್ತೆ

ಕಿಡಿನುಡಿ

ನೀವು ಭಾರತದಲ್ಲಿ ವಾಸಿಸುತ್ತಿದ್ದು, ನಿಮ್ಮ ಬದುಕನ್ನು ಪ್ರೀತಿಸುವವರಾಗಿದ್ದರೆ ಮತ್ತು ಆರ್ಥಿಕವಾಗಿ ಅನುಕೂಲವಂತರಾಗಿದ್ದರೆ... ರಸ್ತೆಗಳಲ್ಲಿ ನಡೆದಾಡಬೇಡಿ, ಓಡಬೇಡಿ, ಸೈಕಲ್, ದ್ವಿಚಕ್ರ ವಾಹನವನ್ನು ಬಳಸಬೇಡಿ. ಇಲ್ಲಿ ಯಾರೂ ಯಾರ ಬಗ್ಗೆಯೂ ಕಾಳಜಿ ವಹಿಸುವುದಿಲ್ಲ. ಕರ್ಕಶ ಶಬ್ದ, ಗುಂಡಿಗಳು, ಕಣ್ಣುಕುಕ್ಕುವ ಹೈಬೀಮ್ ದೀಪ, ವೇಗ ನಿಯಂತ್ರಕಗಳು, ತಪ್ಪು ಮಾರ್ಗದಲ್ಲಿ ಸಂಚರಿಸುವ ವಾಹನಗಳು, ಸಣ್ಣ ಅಂಗಡಿಗಳಿಂದ ಒತ್ತುವರಿಯಾಗಿರುವ ಪಾದಚಾರಿ ಮಾರ್ಗಗಳು... ನಡೆಯಲು, ಓಡಲು ಮತ್ತು ಸೈಕ್ಲಿಂಗ್‌ಗಾಗಿ ಉದ್ಯಾನಗಳನ್ನು ಬಳಸಿ. ನಾಲ್ಕು ಚಕ್ರದ ವಾಹನ ಕೊಳ್ಳಿ ಅಥವಾ ಸಾರ್ವಜನಿಕ ಸಾರಿಗೆ ಬಳಸಿ.

ಡಾ. ಶ್ರದ್ಧೇಯ ಕಟಿಯಾರ್, ವೈದ್ಯ

25 ವರ್ಷಗಳ ಹಿಂದೆ

ಮಂಗಳವಾರ, 11-5-1999

- **ಜಯಾ ರಾಜಕೀಯ ವಿಷಕನ್ಯೆ: ಮಹಾಜನ್ ಬಣ್ಣನೆ**

ನವದೆಹಲಿ, ಮೇ 10 (ಪಿಟಿಐ)– ತಮ್ಮೊಂದಿಗೆ ಹೊಂದಾಣಿಕೆ ಮಾಡಿಕೊಂಡವರನ್ನೇ ಕಚ್ಚುವ ಎಐಎಡಿಎಂಕೆ ನಾಯಕಿ ಜಯಲಲಿತಾ 'ರಾಜಕೀಯ ವಿಷಕನ್ಯೆ' ಎಂದು ಕೇಂದ್ರ ಸಚಿವ ಪ್ರಮೋದ್ ಮಹಾಜನ್ ಅವರು ಬಣ್ಣಿಸಿದ್ದಾರೆ.

'ಜಯಲಲಿತಾ ರಾಜಕೀಯ ಹೊಂದಾಣಿಕೆ ಮಾಡಿಕೊಂಡವರಿಗೆಲ್ಲ ಬೆನ್ನ ಹಿಂದೆ ಚೂರಿ ಹಾಕಿದ್ದಾರೆ. ಅದು ಅವರ ಸ್ವಭಾವ' ಎಂದು ಮಹಾಜನ್ ಖಾಸಗಿ ಟಿ.ವಿ ಚಾನೆಲ್‌ವೊಂದಕ್ಕೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

'ವಿಷಕನ್ಯೆ ಎಂದು ತಿಳಿದೂ ಅವರೊಂದಿಗೆ ಏಕೆ ಹೊಂದಾಣಿಕೆ ಮಾಡಿಕೊಂಡಿರಿ?' ಎಂದು ಕೇಳಿದ ಪ್ರಶ್ನೆಗೆ 'ಆ ಸಂದರ್ಭದಲ್ಲಿ ಅದು ರಾಜಕೀಯವಾಗಿ ಅನಿವಾರ್ಯವಾಗಿತ್ತು' ಎಂದರು.

- **ಇಂಡಿಯನ್ ಏರ್‌ಲೈನ್ಸ್ ಖಾಸಗೀಕರಣಕ್ಕೆ ಕ್ರಮ**

ನವದೆಹಲಿ, ಮೇ 10 (ಯುಎನ್‌ಐ, ಪಿಟಿಐ)– ಸರ್ಕಾರಿ ಸ್ವಾಮ್ಯದ ಇಂಡಿಯನ್ ಏರ್‌ಲೈನ್ಸ್ ಸಂಸ್ಥೆಯನ್ನು ಖಾಸಗೀಕರಣಗೊಳಿಸುವ ಮಹತ್ವದ ನಿರ್ಣಯವನ್ನು ಹಣಕಾಸು ವ್ಯವಹಾರಗಳ ಸಂಸದೀಯ ಸಮಿತಿ ಇಂದು ತೆಗೆದುಕೊಂಡಿದೆ.

ಇಂಡಿಯನ್ ಏರ್‌ಲೈನ್ಸ್ ಸಂಸ್ಥೆಯ ಖಾಸಗೀಕರಣಕ್ಕೆ ಕೇಳ್ಕರ್ ಸಮಿತಿ ಶಿಫಾರಸು ಮಾಡಿತ್ತು. ಸಮಿತಿಯ ಸಭೆಯ ನಂತರ ಈ ವಿಷಯವನ್ನು ಪತ್ರಕರ್ತರಿಗೆ ತಿಳಿಸಿದ ಅಧಿಕೃತ ವಕ್ತಾರರು 'ಈ ಹಿನ್ನೆಲೆಯಲ್ಲಿ ಸರ್ಕಾರವು 325 ಕೋಟಿ ರೂ.ಗಳ ಪಾಲು ಬಂಡವಾಳವನ್ನು ನೀಡಲು ಒಪ್ಪಿಗೆ ಸೂಚಿಸಿದೆ' ಎಂದರು.

50 ವರ್ಷಗಳ ಹಿಂದೆ

ಶನಿವಾರ, 11-5-1974

- **ಮಿತ-ಹಿತ**

ಬೆಂಗಳೂರು, ಮೇ 10– 'ಪ್ರಮಾಣವರಿತು ಮಾತನಾಡಿದರೆ ಒಳ್ಳೆಯದು'.

ಈ ಮಾತಿಗೆ ಮುನ್ನ ಮಾಡಿದ್ದ ಪ್ರಾರ್ಥನೆ: 'ಉತ್ಪ್ರೇಕ್ಷೆ ಬೇಡ'.

ಶುಕ್ರವಾರ ವಿಧಾನಸಭೆಯಲ್ಲಿ ಈ ಮನವಿ ಮಾಡಿದವರು ಮುಖ್ಯಮಂತ್ರಿ ಅರಸು ಅವರು.

ಇವರ ಮನವಿ 'ಲಂಚ ಇದೆ' ಎಂದು ಎಲ್ಲರೂ ಹೇಳುವ ಮಾತಿಗೆ ಸಂಬಂಧಿಸಿದ್ದು.

'ಲಂಚದಿಂದ ದೂರ ಯಾರಿದ್ದಾರೆ ಎಂಬುದನ್ನು ಹುಡುಕಬೇಕಾಗುತ್ತದೆ. ಮಾತನಾಡುವವರು ಆದಿಯಾಗಿ ಯಾರಿಗೂ ಹೇಳೋ ಧೈರ್ಯ ಇಲ್ಲ. ಸುಮ್ಮನೆ ಮಾತನಾಡಿದರೆ ಪ್ರಯೋಜನವಿಲ್ಲ. ಒಂದು ಸಮಯ ಸಿಕ್ಕಿದರೆ ಬಲಿ ಹಾಕಿ ಅನ್ನೋರಿಗಿಂತ ಬಿಡಿಸೋರೇ ಹೆಚ್ಚು'– ಲಂಚ ಕಡಿಮೆ ಮಾಡುವ ದೃಷ್ಟಿಯಿಂದಲೂ ಉತ್ಪ್ರೇಕ್ಷಿತ ಮಾತು ಬೇಡವೆಂಬುದೇ ಅವರ ಮನವಿ.

ಆರೈಕೆಯ ಸಾಕಾರಮೂರ್ತಿಗಳಾದ ಈ ಇಬ್ಬರನ್ನೂ ಆಸ್ಥೆಯಿಂದ ನೆನೆಯಬೇಕಾದ ಹೊತ್ತಿದು

ಪೊರೆವ ದಾದಿಯೂ ಸಲಹುವ ತಾಯಿಯೂ

ವಿಶ್ಲೇಷಣೆ

ಡಾ. ಕೆ.ಎಸ್.ಪವಿತ್ರ

ಅದೊಂದು ಆಶುಭಾಷಣ ಸ್ಪರ್ಧೆ. ವೈದ್ಯಕೀಯ ವಿದ್ಯಾರ್ಥಿಗಳಿಗೆ ಕನ್ನಡ ಸಂಘ ಆಯೋಜಿಸಿದ್ದ ಆಶುಭಾಷಣ ಸ್ಪರ್ಧೆಯಲ್ಲಿ ಒಬ್ಬ ವಿದ್ಯಾರ್ಥಿಗೆ ಬಂದ ವಿಷಯ 'ದೇವರು ಹೆಣ್ಣೇ, ಗಂಡೇ?!' ಆ ವಿದ್ಯಾರ್ಥಿ ಮಾತನಾಡಿದ್ದು ಹೀಗೆ: 'ರೋಗಿಗಳಿಗೆ ಶುಶ್ರೂಷೆ ಮಾಡುವ ದಾದಿಯರನ್ನೂ ಮಕ್ಕಳಿಗೆ ಆರೈಕೆ ಮಾಡುವ ಅಮ್ಮನನ್ನೂ ನಾವು ನೋಡಿದರೆ, ದೇವರೆಂಬುದು ಹೆಣ್ಣೇ ಎಂಬುದು ನಮಗೆ ಸ್ಪಷ್ಟವಾಗುತ್ತದೆ!' ಆ ವಿದ್ಯಾರ್ಥಿ ಹೇಳಿದ, ಆರೈಕೆಯ ಮೂರ್ತಿವೆತ್ತ ಎರಡು ಸಂಕೇತಗಳಾದ ತಾಯಿ ಮತ್ತು ದಾದಿ ಇಬ್ಬರನ್ನೂ ನೆನೆಸಿಕೊಳ್ಳುವ ಸಂದರ್ಭ ಒಂದೇ ದಿನ (ಮೇ 12) ಬಂದಿರುವುದು ಈ ಬಾರಿಯ ವಿಶೇಷ!

ನಾವೆಲ್ಲರೂ ವಿವಿಧ ಕಾಯಿಲೆಗಳಿಂದ ನರಳುತ್ತೇವೆ. ಪರಿಣತ ವೈದ್ಯರ ಚಿಕಿತ್ಸೆ ಹಾಗೂ ಕೈಗುಣದಿಂದ ಗುಣಮುಖರಾದೆವು ಎಂದುಕೊಳ್ಳುತ್ತೇವೆ. ನಮ್ಮ ಗುಣವಾಗುವಿಕೆಯನ್ನು ಇತರರೊಂದಿಗೆ ಹಂಚಿಕೊಳ್ಳುವಾಗ ಇಂತಹ 'ವೈದ್ಯರಿಂದ' ನಾವು ಆರಾಮ ಆಗುವಂತೆ ಆಯಿತು ಎಂದು ಹೇಳುತ್ತೇವೆ. ಆದರೆ ದಾದಿಯರ ಬಗ್ಗೆ?! ಶುಶ್ರೂಷೆಯ ನಂತರ ನೆನಪಿಸಿಕೊಳ್ಳದ, ಆದರೆ ಶುಶ್ರೂಷೆಯ ಸಮಯದಲ್ಲಿ ಅಪಾರ ಸಾಂತ್ವನವೀಯುವ ವ್ಯಕ್ತಿ ಮಾತ್ರ ವೈದ್ಯರ ಹಿಂದೆಯೇ ಇರುವ ದಾದಿ. ಆರೈಕೆ ಮಾಡುವಲ್ಲಿ ಕೈ ಮುಂದು ಎಂಬ ಕಾರಣಕ್ಕೆ ನರ್ಸಿಂಗ್ ವೃತ್ತಿಯಲ್ಲಿ ಇಂದಿಗೂ ಮಹಿಳೆಯರದೇ ಮೇಲುಗೈ.

ಆರೈಕೆಯೊಂದೇ ಚಿಕಿತ್ಸೆಯಾಗಿರುವ ಇಳಿವಯಸ್ಸಿನ ಕಾಯಿಲೆಗಳಲ್ಲಿ ಇಂದು ದಾದಿಯರ ಕೆಲಸ ನಾವು ಗಮನಿಸಲೇಬೇಕಾದಷ್ಟು ಮುಖ್ಯವಾಗಿಬಿಟ್ಟಿದೆ. ದಾದಿಯರ ಸಂಘಟನೆ ಗಟ್ಟಿಯಾಗಿಯೇ ಬೆಳೆದುನಿಂತಿದೆ. ಪ್ರತಿವರ್ಷ ಮೇ 12ರಂದು ಅಂತರರಾಷ್ಟ್ರೀಯ ದಾದಿಯರ ದಿನವನ್ನು ಅಂತರರಾಷ್ಟ್ರೀಯ ದಾದಿಯರ ಪರಿಷತ್ತು ಆಚರಿಸುತ್ತಾ ಬಂದಿದೆ.

ಈ ಬಾರಿ ದಾದಿಯರ ದಿನದ ಧ್ಯೇಯವಾಕ್ಯ 'ಅವರ್ ನರ್ಸಸ್, ಅವರ್ ಫ್ಯೂಚರ್, ದಿ ಎಕನಾಮಿಕ್ ಪವರ್ ಆಫ್ ಕೇರ್' (ನಮ್ಮ ದಾದಿಯರು, ನಮ್ಮ ಭವಿಷ್ಯ, ಆರೈಕೆಯ ಆರ್ಥಿಕ ಬಲ). ದಾದಿಯರ ಪರಿಷತ್ತು ಇಡೀ ಜಗತ್ತಿನ 2.8 ಕೋಟಿ ದಾದಿಯರ ಆಶೋತ್ತರಗಳನ್ನು ಪ್ರತಿನಿಧಿಸುತ್ತದೆ ಎನ್ನುವುದು ಗಮನಾರ್ಹ ಸಂಗತಿ.

ಆರ್ಥಿಕತೆಗೂ ಆರೈಕೆಗೂ ಸಂಬಂಧ ಇದೆಯೇ?! ಹೌದು, ಆರ್ಥಿಕತೆಗೂ ಆರೋಗ್ಯಕ್ಕೂ ಆರೈಕೆಗೂ ನಿಕಟವಾದ ಸಂಬಂಧ ಇದೆ. ಆರ್ಥಿಕ ಬಿಕ್ಕಟ್ಟು ಉದ್ಭವಿಸಿದ ಕಾರಣದಿಂದ ಖರ್ಚಿನಲ್ಲಿ ಕಡಿತ ಮಾಡುವ ತುರ್ತು ಎದುರಾದಾಗಲೆಲ್ಲ ಆರೋಗ್ಯ ಕ್ಷೇತ್ರಕ್ಕೆ ಬಜೆಟ್‌ನಲ್ಲಿ ಸರ್ಕಾರ ತೆಗೆದಿರಿಸುವ ಮೊತ್ತ ಇಳಿಕೆಯಾಗುತ್ತದೆ. ಆರೋಗ್ಯ ಕ್ಷೇತ್ರಕ್ಕೆ ಬಜೆಟ್‌ನಲ್ಲಿ ಮೀಸಲಿಡುವ ಮೊತ್ತದಲ್ಲಿನ ಕಡಿತದಿಂದ ದೊಡ್ಡ ಪೆಟ್ಟು ಬೀಳುವುದು ನರ್ಸಿಂಗ್ ಕ್ಷೇತ್ರಕ್ಕೆ. ಕಡಿಮೆ ಮಾನವ ಸಂಪನ್ಮೂಲ, ಕಡಿಮೆ ಸೌಲಭ್ಯಗಳ ನಡುವೆಯೇ ತಮ್ಮ ಮಾನವೀಯ ಮುಖವನ್ನು ಕಳೆದುಕೊಳ್ಳದೆ ಶುಶ್ರೂಷಕರು ನಿರಂತರವಾಗಿ ಕೆಲಸ ಮಾಡುತ್ತಲೇ ಸಾಗಬೇಕಾಗುತ್ತದೆ.

ವೃದ್ಧಾಪ್ಯದ ಆರೈಕೆಯ ಅಗತ್ಯ ಇರುವ ಮನೆಗಳು, ಯುದ್ಧದ ಸ್ಥಳಗಳು, ಜೈಲುಗಳು ಮತ್ತು ಆಸ್ಪತ್ರೆಗಳು ಶುಶ್ರೂಷಕಿಯರ ಅಗತ್ಯವನ್ನು ಎತ್ತಿ ತೋರುವ ನಾಲ್ಕು ತಾಣಗಳು. ಎಲ್ಲವೂ ಜನರು ಸಾವನ್ನು ನಿರೀಕ್ಷಿಸಬಹುದಾದ ತಾಣಗಳೇ. ರೋಗಿಗಳು ಹಾಗೂ ಅವರ ಆತ್ಮೀಯರ ನೋವು, ಆತಂಕ, ನರಳುವಿಕೆಯನ್ನು ಹತ್ತಿರದಿಂದ ನೋಡುವ, ಅವರೊಂದಿಗೆ ವೈದ್ಯರಿಗಿಂತ ಹೆಚ್ಚು ಹೊತ್ತು ಕಳೆಯುವ ದಾದಿಯರಿಗೆ ಸಾವು ನೋವನ್ನು ನಿಭಾಯಿಸುವ ಸಾಮರ್ಥ್ಯವೂ ಹೆಚ್ಚೇ.

ದೊಡ್ಡ ಆಸ್ಪತ್ರೆಗಳಲ್ಲಿರುವ ಹಿರಿಯ ಮೇಟ್ರನ್‌ಗಳು ರೋಗಿಗಳ, ಅವರ ಮನೆಯವರ ನೋವು, ದೂರುಗಳನ್ನು ಕೇಳುವ ರೀತಿ, ಅವರನ್ನು ಸಮಾಧಾನಪಡಿಸುವ ವಿಧಾನ, ಜೋರು ಮಾಡಿ, ಅನುನಯಿಸಿ ಊಟ-ತಿಂಡಿ, ಔಷಧಿಗಳನ್ನು ಅವರು ತೆಗೆದುಕೊಳ್ಳುವಂತೆ ಮಾಡುವ ಸಾಮರ್ಥ್ಯವು ವೈದ್ಯಕೀಯ ಜಗತ್ತಿನಲ್ಲಿ ವೈದ್ಯರ ತಂಡ ಸದಾ ಆಶಿಸುವ ಬಹುದೊಡ್ಡ ಬೆಂಬಲ.

ನಮ್ಮ ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಇಂದು ನಾವು ಒಂದು ಸಂಕೀರ್ಣ ಕಾಲಘಟ್ಟದಲ್ಲಿ ಇದ್ದೇವೆ. ದೀರ್ಘಾಯುಷ್ಯದ ಹಂಬಲದಲ್ಲಿ ಹೇಗಾದರೂ ಜೀವ ಉಳಿಸಿಕೊಳ್ಳುವ, ನಮ್ಮ ಆತ್ಮೀಯರನ್ನು ಹೇಗಾದರೂ ಬದುಕಿಸಿಕೊಳ್ಳಲು ಹಾತೊರೆಯುವ ನಮಗೆ, ಜೀವನದ ಗುಣಮಟ್ಟದ ಬಗೆಗೆ ದೂರದೃಷ್ಟಿಯಿಲ್ಲ. ತಂತ್ರಜ್ಞಾನ-ಆಧುನಿಕ ಯಂತ್ರಜ್ಞಾನ ಒಂದೆಡೆ ಜೀವ ಉಳಿಸುವುದರೊಂದಿಗೆ, ಮತ್ತೊಂದೆಡೆ, ನೋವು-ಸಾವಿನ ಪ್ರಕ್ರಿಯೆಗಳನ್ನು ದೀರ್ಘವಾಗಿಸಲು ಸಹ ಬಲ್ಲವು. ಇಂತಹ ಸಂದರ್ಭದಲ್ಲಿ ರೋಗಿಯ ಹಾಸಿಗೆಯ ಪಕ್ಕದಲ್ಲಿ ನಿಂತು, ತಮ್ಮ ಜ್ಞಾನವನ್ನು ಬಳಸಿ ದಾದಿಯರು ನಮಗೆ ನೀಡಬಹುದಾದ ಪಾಠಗಳು ಒಂದೆರಡಲ್ಲ. ರೋಗಿಯೊಂದಿಗೆ ಹೇಗೆ ಮಾತನಾಡಬೇಕು, ಸಾಯುವ ಸಮಯದಲ್ಲಿ ಅವರಿಗೆ ಏನು ಹೇಳಬೇಕು, ಆತ್ಮೀಯರಿಗೆ ಯಾವಾಗ ನಿದ್ರೆ ಮಾಡುವಂತೆ ಹೇಳಬಹುದು ಇವೆಲ್ಲ ಶುಶ್ರೂಷಕಿಯರು ತಮ್ಮ ಅನುಭವದಿಂದ ಕಂಡುಕೊಳ್ಳುವ ಅಂಶಗಳು.

ಜಾಗತಿಕವಾಗಿ ಆರೋಗ್ಯ ಸೇವೆಗಳಲ್ಲಿ ಆರೈಕೆದಾರರ ಕೊರತೆಯು 2030ರ ವೇಳೆಗೆ ವಿಪರೀತ ಎನ್ನುವ ಮಟ್ಟಕ್ಕೆ ಏರುತ್ತದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಅಂದಾಜು ಮಾಡಿದೆ. ಇದರಲ್ಲಿ ದಾದಿಯರು ಹಾಗೂ ಶುಶ್ರೂಷಕರ ಕೊರತೆಯೇ ಅಧಿಕ. ಅನುಭವಿ ಶುಶ್ರೂಷಕರು ನಿವೃತ್ತಿ ಹೊಂದುವುದು, ಹೊಸ-ವೃತ್ತಿಪರ ತರಬೇತಿ ಹೊಂದಿದ ಶುಶ್ರೂಷಕರು ವಿವಿಧ ಕಾರಣಗಳಿಂದ ಕ್ಷೇತ್ರದಲ್ಲಿ ಉಳಿಯದಿರುವುದು, ಆರೈಕೆ ಮಾಡುವ ಕಷ್ಟಕ್ಕೆ ಹೆದರಿ ಹೆಚ್ಚು ಜನ ನರ್ಸಿಂಗ್ ಕ್ಷೇತ್ರವನ್ನು ಆರಿಸಿಕೊಳ್ಳದಿರುವುದು ಅದಕ್ಕೆ ಕಾರಣಗಳು.

ಶುಶ್ರೂಷಕರ ಕಾರ್ಯವೈಖರಿಗೆ ಅನುಗುಣವಾಗಿ, ಅವರ ಮೇಲೆ ಇರುವ ಮಾನಸಿಕ, ದೈಹಿಕ ಒತ್ತಡಗಳೆರಡೂ ಗಣನೀಯವಾಗಿ ಹೆಚ್ಚು ಎಂದು ಅಧ್ಯಯನಗಳು ನಿರೂಪಿಸಿವೆ. ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿರುವ ನರ್ಸಿಂಗ್ ಕ್ಷೇತ್ರದಲ್ಲಿ ರಾತ್ರಿ ಪಾಳಿ, ಕೌಟುಂಬಿಕ ಜೀವನವನ್ನು ಜೊತೆಜೊತೆಗೆ ನಿರ್ವಹಿಸಬೇಕಾದ ಹೊಣೆಯು ನರ್ಸಿಂಗ್ ತರಬೇತಿಯನ್ನು ಪಡೆದಿರುವುದರ ನಡುವೆಯೂ ಬಹಳಷ್ಟು ಮಹಿಳೆಯರಿಗೆ ಅದನ್ನು ವೃತ್ತಿಯಾಗಿ ಮುಂದುವರಿಸಲು ಅಡ್ಡಿಗಳಾಗುತ್ತವೆ ಎನ್ನುವುದು ಗಮನಾರ್ಹ.

ಭಾವನಾತ್ಮಕ ದಣಿವು, ಆರೈಕೆ ಮಾಡುವಾಗಿನ ಆಯಾಸವನ್ನು ಶುಶ್ರೂಷಕಿಯರು ತಮ್ಮ ವೃತ್ತಿಯ ಭಾಗವಾಗಿ ಅನುಭವಿಸುವುದು ಸಹಜವೇ ಆಗಿರಬಹುದು. ಆದರೂ ಅದು ಅವರ ವೈಯಕ್ತಿಕ ಜೀವನಕ್ಕೆ, ಕ್ರಮೇಣ ಆರೈಕೆ ಮಾಡುವ ಅವರ ವೃತ್ತಿಪರತೆಯ ಗುಣಮಟ್ಟದ ಇಳಿಕೆಗೆ ದಾರಿಯಾಗಬಹುದು. ದಿನನಿತ್ಯ ಭಯ, ಕೋಪ, ಶೋಕವನ್ನು ವೃತ್ತಿ ಬದುಕಿನಲ್ಲಿ ಹತ್ತಿರದಿಂದ ನೋಡುವ ಮನಸ್ಸು ಕ್ರಮೇಣ ಅವುಗಳನ್ನು ನಿಭಾಯಿಸಲು ಕರುಣೆ, ಆತ್ಮವಿಶ್ವಾಸ, ವೃತ್ತಿಪರತೆಯ ಮುಖವಾಡಗಳನ್ನು 'ಮಾಸ್ಕ್'ನಂತೆ ಮತ್ತೆ ಮತ್ತೆ ಧರಿಸಬೇಕಾಗಬಹುದು. ಸಹಜವಾಗಿ ಇದು ಮನಸ್ಸನ್ನು ನಿರ್ಲಿಪ್ತ, ನಿರ್ವಿಕಾರ ಸ್ಥಿತಿಯತ್ತ ತಳ್ಳಿ ಅನಾರೋಗ್ಯದತ್ತ ಸಾಗುವಂತೆ ಮಾಡಬಹುದು.

ಸಾಮಾನ್ಯವಾಗಿ ದೈಹಿಕ ಆರೋಗ್ಯ, ಸೋಂಕನ್ನು ನಿರ್ವಹಿಸುವ ಬಗೆ, ಸೋಂಕು ತಗುಲದಂತೆ ಎಚ್ಚರ ವಹಿಸುವುದರ ಕುರಿತು ನರ್ಸಿಂಗ್ ತರಬೇತಿಯಲ್ಲಿ ಮತ್ತೆ ಮತ್ತೆ ಹೇಳಲಾಗುತ್ತದೆ. ಆದರೆ ಭಾವನಾತ್ಮಕ ದಣಿವು, ಭಾವನೆಗಳನ್ನು ನಿರ್ವಹಿಸುವ ಬಗ್ಗೆ ತರಬೇತಿ ನೀಡುವುದು ಅಪರೂಪವೇ!

ಆರೈಕೆ ಮಾಡುವ ದಾದಿಯರ ಕೆಲಸಕ್ಕೆ ಗೌರವ ಮತ್ತು ಸರಿಯಾದ ಆರ್ಥಿಕ ಮನ್ನಣೆ ಎರಡೂ ಅಗತ್ಯ. ದಾದಿಯು ತಾಯಿಯ ರೂಪ ತಾಳುವುದೂ ತಾಯಿಯು ದಾದಿಯ ಪಾತ್ರ ನಿರ್ವಹಿಸುವುದೂ ಮತ್ತೆ ಮತ್ತೆ ನಾವು ಕಾಣುವ ಸಂಗತಿಗಳಷ್ಟೆ. ಮಗುವಿಗೆ ಜ್ವರ ಬಂದಾಗ ರಾತ್ರಿಯಿಡೀ ಎಚ್ಚರವಿದ್ದು ಮಗುವಿನ ಆರೈಕೆ ಮಾಡುವ ತಾಯಿ, ಇಡೀ ವಾರ್ಡು ಮಲಗಿರುವಾಗ ಕಿರುದೀಪದ ಬೆಳಕಿನಲ್ಲಿ ಕಾಣುವ ದಾದಿ ಎರಡೂ ಮನಸ್ಸಿಗೆ ಸಾಂತ್ವನ, ಸುರಕ್ಷತೆಯ ಭಾವ ನೀಡುವ ಮುಖಗಳೇ!

ಇಬ್ಬರನ್ನೂ ನೆನೆದು, ಮಾನವೀಯತೆಯ ಪಾಠವನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳಬೇಕಾದದ್ದು ಈ ಹೊತ್ತಿನ ಆರೋಗ್ಯದ ಅಗತ್ಯ.

ಲೇಖಕಿ: ಮನೋವೈದ್ಯೆ

ಚುರುಮುರಿ

ತಿರುಪಿನ ಚೆಂಬು

• ತುರುವೇಕೆರೆ ಪ್ರಸಾದ್

ಪದ್ದಮ್ಮ ಹಳೆ ಬೆಳ್ಳಿ ಸಾಮಾನನ್ನ ಹರಡ್ಕೊಂಡು ಸ್ಟಾಕ್ ಚೆಕ್ ಮಾಡ್ತಿದ್ರು. 'ರೀ, ನಮ್ ಮದುವೇಲಿ ನಿಮ್ ಮನೆ ಕಡೆಯಿಂದ ಒಂದು ಗಿಂಡಿ ತರ ಕೊಟ್ಟಿದ್ರಲ್ಲ ಚಿಕ್ಕ ಚೆಂಬು, ಅದು ಕಾಣುಸ್ತಾನೇ ಇಲ್ಲರೀ' ಪರ್ಮೇಶಿನ ಕೇಳುದ್ರು.

'ನೀವಿನ್ನೇನು ಕಾಶಿಯಾತ್ರೆಗೆ ದೊಡ್ಡ ಹಂಡೆ ಕೊಟ್ಟಿದ್ರಾ? ಒಳಲೆ ಅಂತ ಚೆಂಬಲ್ಲಿ ಕಾಲು ನೆನೆಯೋದಿರಲಿ, ಉಂಗುಷ್ಟನೂ ನೆನೀತಿರಲಿಲ್ಲ. ಅದನ್ನೂ ನಿಮ್ ಮಾವ ಹೊಡ್ಕಂಡು ಹೋದ್ರಲ್ಲ...'

'ಆ ವಿಷಯ ಬಿಡಿ, ಈಗ ನನ್ ಚೆಂಬಿನ ವಿಷಯಕ್ಕೆ ಬನ್ನಿ. ಎಲ್ಲಾದ್ರೂ ತಗಂಡು ಹೋಗಿ ಅಡ ಇಟ್ಟು ಬಂದ್ರೋ ಹೇಗೆ?'

'ಅಯ್ಯೋ! ಇಡೀ ರಾಜ್ಯದಲ್ಲಿ ಚೆಂಬು ಕೊಡೋಕೆ ಪೈಪೋಟಿ ನಡೀತಿದೆ. ಅಂಥಾದ್ರಲ್ಲಿ ನನಗೊಂದು ಚೆಂಬು ಸಿಗಲ್ವಾ? ನಿನ್ ಚೆಂಬು ತಗಂಡು ಹೋಗಿ ಯಾಕ್ ಅಡ ಇಡ್ಲಿ?' ಎಂದ ಪರ್ಮೇಶಿ.

'ರೀ, ಅವರೆಲ್ಲಾ ಬೆಳ್ಳಿ ಚೆಂಬು ಎಲ್ರೀ ಕೊಡ್ತಾರೆ? ಅವರು ಕೊಡೋದೇನಿದ್ರೂ ತಗಡು ಇಲ್ಲ ಪ್ಲಾಸ್ಟಿಕ್ ಚೆಂಬು' ಅಂದ್ರು ಪದ್ದಮ್ಮ.

'ಯಾವುದಾದ್ರೇನು? ಸಮಯಕ್ಕೆ ಕೈಗೊಂದು ಚೆಂಬು, ತಲೆಗೊಂದು ದಿಂಬು ಸಿಕ್ರೆ ಸಾಕು, ಎಲ್ಲಿ ಹೋದ್ರೂ ಸುಖನೇ!'

'ಈ ವೇದಾಂತ ಎಲ್ಲಾ ಬಿಟ್ಟು ನನ್ ಬೆಳ್ಳಿಚೆಂಬು ಎಲ್ಲಿ ಅಂತ ಹೇಳಿ'.

'ಅಲ್ವೇ, ಮಗಳ ಮದ್ವೆಗೆ ಹೊಸ ಬೆಳ್ಳಿ ಚೆಂಬು ಯಾಕ್ ಮಾಡುಸ್ಬೇಕು ಅಂತ ನಿನ್ ಮದುವೆಗೆ ಕೊಟ್ಟಿದ್ದ ಗಿಂಡಿಯಂಥ ಚೆಂಬನ್ನೇ ಅಲ್ವಾ ನೀನು ಅಳಿಮಯ್ಯಂಗೆ ಕೊಟ್ಟಿದ್ದು'.

'ಅಯ್ಯೋ ಹೌದಲ್ವಾ? ಮರ್ತೇಹೋಗಿತ್ತು ನೋಡಿ. ರೀ, ನನಗೂ ಒಂದು ಒಳ್ಳೇ ಚೆಂಬು ಮಾಡಿಸ್ಕೊಟ್ಟಿಡಿ. ನಿಮ್ ನೆನಪಲ್ಲಿ ಇಟ್ಕೊತೀನಿ'.

'ಅಯ್ಯೋ! ನಾನ್ಯಾಕೇ ಮಾಡಿಸ್ಕೊಡ್ಬೇಕು? ಮುಂದೆ ನೆಕ್ಸ್ಟ್ ಎಲೆಕ್ಷನ್ ಹೊತ್ತಿಗೆ ರಾಜಕೀಯದವರೇ ನಿಜವಾಗ್ಲೂ ಮನೆಮನೆಗೆ ಚೆಂಬು ಹಂಚೋ ಯೋಜನೆ ತಂದರೂ ತಂದಾರು'.

'ರೀ ಅದೆಲ್ಲಾ ನಡ್ಯಲ್ಲ, ಇಷ್ಟು ದಿವಸ ಕಳಸಗಿತ್ತಿ ಅಂತ ನಮ್ ಕೈಗೆ ಚೆಂಬು ಕೊಟ್ಟು ನೀವು ಪೂರ್ಣ ಕುಂಭ ಸ್ವಾಗತ ಮಾಡಿಸ್ಕೊಂಡು ಮೆರೆದದ್ದು ಸಾಕು. ಇನ್ಮೇಲೆ ಏನಿದ್ರೂ ನಿಮ್ಮ ಕೈಗೆ ರೈಲ್‌ಚೆಂಬು ಬರುತ್ತೆ'.

'ಅರ್ಥ ಆಯ್ತು ಬಿಡು. ರಾಜಕೀಯ ಅಂದ್ರೆ ತಿರುಪಿರಲ್ಲ, ಸಂಸಾರ ಅಂದ್ರೆ ಪೂರಾ ತಿರುಪು' ಮುಖ ಹುಳ್ಳಗೆ ಮಾಡಿದ ಪರ್ಮೇಶಿ.

ಸಂಗತ

ಹಾರುಹಾದಿ ನಿರ್ವಿಘ್ನವಾಗಿರಲಿ

ಎಗ್ಗಿಲ್ಲದೆ ಮೊಬೈಲ್ ಟವರ್‌ಗಳನ್ನು ನಿರ್ಮಿಸದಿದ್ದರೆ, ಕಟ್ಟಡಗಳಿಗೆ ದೀಪಾಲಂಕಾರ ಕೈಬಿಟ್ಟರೆ ಆದೇ ವಲಸೆ ಹಕ್ಕಿಗಳಿಗೆ ನಾವು ನೀಡುವ ಮಹತ್ತರ ಬಳುವಳಿ

• ಯೋಗಾನಂದ

ಪಕ್ಷಿಗಳ ವಲಸೆ ಶತಮಾನಗಳಿಂದಲೂ ಜನಸಂಸ್ಕೃತಿಯ ಕಲ್ಪನೆಗಳನ್ನು ಸೆರೆಹಿಡಿದಿರುವ ನೈಸರ್ಗಿಕ ವಿದ್ಯಮಾನ. ಖಗಮೃಗ ಲೋಕದ ವಿಸ್ಮಯಗಳಲ್ಲೊಂದಾದ ಅದು, ಭೂಗೋಳದ ಉತ್ತರ ಅಥವಾ ದಕ್ಷಿಣಕ್ಕೆ ಒಂದು ನಿರ್ದಿಷ್ಟ ಹಾರುಹಾದಿಯ ನಿಯಮಿತ ಯಾನ. ನಮಗೆ ತಿಳಿದಿರುವ 10 ಸಾವಿರ ಪಕ್ಷಿ ಪ್ರಭೇದಗಳಲ್ಲಿ ಅರ್ಧದಷ್ಟು ವಲಸೆಯವೆ. ವಲಸೆ ಹಕ್ಕಿಗಳು ಪರೋಕ್ಷವಾಗಿ ಪರಿಸರ ವ್ಯವಸ್ಥೆಯನ್ನು, ಜನರನ್ನು ಹಾಗೂ ದೇಶ ದೇಶಗಳನ್ನು ಒಗ್ಗೂಡಿಸುತ್ತವೆ. ಮನುಷ್ಯರು ಮತ್ತು ಪ್ರಕೃತಿಯನ್ನು ಬೆಸೆಯುವ ಅವು ವಿಶ್ವಶಾಂತಿ ಹಾಗೂ ಭೂಗ್ರಹದ ಸಮಗ್ರತೆಯ ದ್ಯೋತಕಗಳು.

ಪರಿಸರದ ಆಣತಿಯೊ, ಸಂತಾನೋತ್ಪತ್ತಿಗೆ ಸೂಕ್ತ ತಾಣದ ಹುಡುಕಾಟವೊ ಅಥವಾ ಬದುಕುಳಿಯುವ ತಂತ್ರವೊ ಹಕ್ಕಿಗಳ ಖಂಡಾಂತರ ಸಮೂಹ ಪ್ರಯಾಣ ಮನುಷ್ಯನ ಗ್ರಹಿಕೆಗೆ ಒಗಟು. ಪರಿಸರ ಮತ್ತು ವಿಕಸನದ ದೃಷ್ಟಿಯಿಂದ ಒಂದು ಪ್ರದೇಶದಿಂದ ಸಾವಿರಾರು ಕಿ.ಮೀ. ದೂರದ ಇನ್ನೊಂದು ಪ್ರದೇಶಕ್ಕೆ ಪಕ್ಷಿಗಳ ವಲಸೆ ಅತ್ಯಗತ್ಯ. ಅವು ಕಾಲಾನುಸಾರದ ಅತಿಥಿಗಳು. ಕನಿಷ್ಠ 4 ಸಾವಿರ ಪಕ್ಷಿ ಪ್ರಭೇದಗಳು ವಲಸೆ ಕೈಗೊಳ್ಳುತ್ತವೆ. ವಲಸೆ ಅವುಗಳ ಪಾಲಿಗೆ ದೀರ್ಘ ಹಾರಾಟಕ್ಕೂ ಮಿಗಿಲಾಗಿ ಅಕ್ಷರಶಃ ಬದುಕಿನ ಹೋರಾಟ.

'ಹಾರುತಿರುವ ಹಕ್ಕಿಗಳೇ, ಯಾರ ತಡೆಯೂ ನಿಮಗಿಲ್ಲ...' ಎಂಬ ಈ ಹಳೆಯ ಸಿನಿಮಾ ಹಾಡನ್ನು ಪರಿಷ್ಕರಿಸಬೇಕಾದ ಸಂದರ್ಭ ಬಂದಿದೆ! ಏಕೆಂದರೆ ಪಕ್ಷಿಗಳ ವಲಸೆಗೆ ಈಗ ಸಂಚಕಾರ ಒದಗಿದೆ. ಜೀವವೈವಿಧ್ಯದ ಆಹಾರ ಸರಪಳಿಯಲ್ಲಿ ಕೀಟಗಳ ಪಾತ್ರ ಬಹು ನಿರ್ಣಾಯಕ. ವಲಸೆ ಪಕ್ಷಿಗಳ ಪ್ರಧಾನ ಆಹಾರವಾದ ಕೀಟಗಳ ಸಂಖ್ಯೆ ಕ್ರಮೇಣ ಕ್ಷೀಣಿಸುತ್ತಿದೆ. ತಮ್ಮ ದೂರ ಹಾರಾಟ ಮಾರ್ಗದ ಅಲ್ಲಲ್ಲಿ ನೀರು, ಆಹಾರ ಅನ್ವೇಷಣಾರ್ಥ ನಿಲುಗಡೆ ಪಕ್ಷಿಗಳಿಗೆ ಅನಿವಾರ್ಯ. ಹೊಲ, ಗದ್ದೆ, ಜೌಗುಪ್ರದೇಶ, ಅರಣ್ಯ ಹೀಗೆ ವಿವಿಧ ಆವಾಸಗಳಲ್ಲಿ ಅವು ಕೀಟಗಳ ಬೇಟೆಗೆ ಹಪಹಪಿಸುತ್ತವೆ. ಹಲವು ಪಕ್ಷಿಗಳ ವಲಸೆಯ ಅವಧಿಯು ಅವು ನಿಲ್ಲುವ ಸ್ಥಳಗಳಲ್ಲಿನ ಆಹಾರ ಮತ್ತು ನೀರಿನ ಸಮೃದ್ಧಿಯ ದಿನಮಾನಗಳಿಗೆ ಸರಿಹೊಂದುವುದು ವಿಶೇಷ.

ಪಕ್ಷಿಗಳ ಸಮೂಹ ವಲಸೆಯಿಂದ ತಕ್ಕಮಟ್ಟಿಗೆ ನೊಣ, ಸೊಳ್ಳೆ, ಜೀರುಂಡೆ, ಚಿಟ್ಟೆಯಂಥ ಕೀಟಗಳ ನಿಯಂತ್ರಣವಾಗುತ್ತದೆ. ಅಳಿಲು, ಇಲಿ, ಹೆಗ್ಗಣಗಳ ಸಂಖ್ಯೆ ಗಮನಾರ್ಹವಾಗಿ ಇಳಿಮುಖವಾಗುತ್ತದೆ. ಅಲ್ಲದೆ ಸಸ್ಯಗಳ ಪರಾಗಸ್ಪರ್ಶ ಹಾಗೂ ವನ್ಯಮೃಗಗಳಿಗೆ ಆಹಾರ ಮೂಲವೂ ಪ್ರಾಪ್ತವಾಗುತ್ತದೆ. ಪಕ್ಷಿಗಳು ತಮ್ಮ ವಲಸೆಯ ಹಾದಿಯಲ್ಲಿ ಬೀಜಗಳನ್ನು ಪ್ರಸರಿಸಿ ಜೀವವೈವಿಧ್ಯವನ್ನು ಉತ್ತೇಜಿಸುತ್ತವೆ. ಪಕ್ಷಿಗಳ ವಲಸೆ ಸ್ಥಗಿತವಾದರೆ ಮಿಡತೆಗಳ ಹಾವಳಿ ಕಟ್ಟಿಟ್ಟ ಬುತ್ತಿ! ಪಕ್ಷಿಗಳ ದೇಶಾಂತರ ಸಂಚಾರ ಎನ್ನುವುದೇ ಪಕ್ಷಿವೀಕ್ಷಕರಿಗೆ ಪುಳಕ, ಮನರಂಜನೆ. ಆಗಸದಲ್ಲಿ ಹಕ್ಕಿಗಳು ಶಿಸ್ತಾಗಿ ಹಾರುತ್ತಾ ಬಿಡಿಸುವ ಬಗೆ ಬಗೆ ಚಿತ್ತಾರ ಕಣ್ಣಿಗೆ ಹಬ್ಬ. ಜೊತೆಗೆ ತಮ್ಮ ಮನೆಯ ಹಿತ್ತಿಲನ್ನು ವರ್ಷಪೂರ್ತಿ ಪಕ್ಷಿ ಪ್ರಭೇದಗಳನ್ನು ಆಕರ್ಷಿಸುವಂತೆ ವಿನ್ಯಾಸಗೊಳಿಸುವ ಉತ್ಸಾಹಿಗಳೆಷ್ಟೊ?

ಮೇ 11 'ವಿಶ್ವ ವಲಸೆ ಹಕ್ಕಿಗಳ ದಿನ'. ಈ ಬಾರಿ 'ಕೀಟಗಳನ್ನು ಉಳಿಸಿ, ಪಕ್ಷಿಗಳನ್ನು ಸಂರಕ್ಷಿಸಿ' ಎಂಬುದು ಧ್ಯೇಯವಾಕ್ಯ. ಹಮ್ಮಿಂಗ್ ವಲಸೆ ಹಕ್ಕಿಗಳಲ್ಲೇ ಅತಿ ಚಿಕ್ಕದು. ಬರೀ 28 ಗ್ರಾಂ ತೂಕದ ಅದು ತಾಸಿಗೆ 48 ಕಿ.ಮೀ. ವೇಗದಲ್ಲಿ, ತನಗೆ ಅಗತ್ಯವಿದ್ದರೆ ನೂರು ಕಿ.ಮೀ. ತನಕ ತಡೆರಹಿತವಾಗಿ ಹಾರಬಲ್ಲದು. ಕೆಲವು ಹಕ್ಕಿಗಳು ದಿನಕ್ಕೆ 8 ತಾಸುಗಳಂತೆ ಹಾರಿ 533 ತಾಸುಗಳು ಕ್ರಮಿಸಿ ನಿಮ್ಮ ಹಿತ್ತಿಲನ್ನು ತಲುಪಿರುತ್ತವೆ. ದಣಿದ ಅತಿಥಿಗಳಿಗೆ ಕಾಳು, ನೀರಿತ್ತು ನಿಮ್ಮ ಉಪಚಾರವಿರಲಿ. ತಂಗಲು ಅರ್ಹ ತಾಣಗಳ ಕಣ್ಮರೆ, ಗಗನಚುಂಬಿ ಕಟ್ಟಡಗಳ ಮೆರೆತ ಹಾಗೂ ಮಳೆ, ಮಾರುತಗಳ ಅಬ್ಬರವು ಪಕ್ಷಿಗಳ ವಲಸೆಗೆ ಅಡೆತಡೆಗಳಾಗಿವೆ.

ಎಗ್ಗಿಲ್ಲದೆ ಮೊಬೈಲ್ ಟವರ್‌ಗಳನ್ನು ನಿರ್ಮಿಸದಿದ್ದರೆ, ಕಟ್ಟಡಗಳಿಗೆ ದೀಪಾಲಂಕಾರ ಕೈಬಿಟ್ಟರೆ ಅದೇ ವಲಸೆ ಹಕ್ಕಿಗಳಿಗೆ ನಾವು ನೀಡುವ ಮಹತ್ತರ ಬಳುವಳಿ. ಏಕೆಂದರೆ, ಖಂಡಾಂತರ ಹೊರಟ ಹಕ್ಕಿಗಳು ಟವರ್, ಥಳಥಳ ಬಂಗಲೆಗಳ ದುರ್ದೆಸೆಯಿಂದ ದಿಕ್ಕೆಡುತ್ತವೆ. ವರ್ಷಕ್ಕೆ ಸರಾಸರಿ 65 ಕೋಟಿ ಹಕ್ಕಿಗಳು ಬಹುಮಹಡಿ ಕಟ್ಟಡಗಳಿಗೆ ಬಡಿದು ಅಸುನೀಗುತ್ತವೆ.

ವಲಸೆ ಹಕ್ಕಿಗಳು ದೇಶಗಳ ಗಡಿಗಳನ್ನು ಗುರುತಿಸಲಾರವು. ಹಾಗಾಗಿ, ಅವುಗಳ ರಕ್ಷಣೆಗೆ ಅಂತರರಾಷ್ಟ್ರೀಯ ಮಟ್ಟದ ಸಹಕಾರ ಅಗತ್ಯ. ಗಡಿ, ಪ್ರಾಂತ್ಯ, ದೇಶವೆಂಬ ತರತಮವಿಲ್ಲದೆ ಪಕ್ಷಿಗಳು ವಿಶ್ರಮಿಸಿಕೊಳ್ಳಬಹುದಾದ ನೆಲಹರವುಗಳನ್ನು ನೀರು, ನೆರಳಿನಿಂದ ಅಭಿವೃದ್ಧಿಪಡಿಸುವುದು, ಹಾರುಹಾದಿಗಳನ್ನು ವಿಘ್ನರಹಿತವಾಗಿಸುವುದು ಮಹತ್ತರ ಹೆಜ್ಜೆಗಳು.

ಆಹಾರಕ್ಕೆ, ಗರಿಗಳಿಗೆ ಮತ್ತು ವೈಜ್ಞಾನಿಕ ಸಂಗ್ರಹಕ್ಕಾಗಿ ಲಕ್ಷಾಂತರ ಪಕ್ಷಿಗಳನ್ನು ಕೊಲ್ಲಲಾಗುತ್ತದೆ. ಸೆಪ್ಟೆಂಬರ್- ಅಕ್ಟೋಬರ್‌ನಲ್ಲಂತೂ 29 ದೇಶಗಳಿಂದ ಭಾರತಕ್ಕೆ ಪ್ರತಿವರ್ಷ ಗುಂಪು ಗುಂಪಾಗಿ ಪಕ್ಷಿಗಳು ಹಾರಿ ಬರುತ್ತವೆ. ಹಾರಲಾಗದ ಪೆಂಗ್ವಿನ್‌ಗಳು ಸಹ ಹತ್ತಾರು ಕಿ.ಮೀ. ನಡೆದೇ ವಲಸೆ ಹೋಗುತ್ತವೆ. ವಲಸೆ ಬಂದ ಸ್ಥಳದಲ್ಲಿ ದಿನಗಳೆದಂತೆ ಅವು ಸ್ಥಳೀಯ ಹಕ್ಕಿಗಳೊಂದಿಗೆ ನೀರು, ಹುಲ್ಲಿಗಾಗಿಯೂ ಸೆಣಸಾಡಬೇಕು, ಜೊತೆಗೆ ಆಯಾಸ, ಅನಾರೋಗ್ಯ. ಪಕ್ಷಿಗಳ ಸ್ಮರಣಶಕ್ತಿ ಮತ್ತೆ ಸ್ವಸ್ಥಾನಕ್ಕೆ ಹಾರುವಷ್ಟು ಪ್ರಖರವೆಂಬ ಮಾತಿರಲಿ, ವಲಸೆ ಹಕ್ಕಿಗಳಿಗೆ ಸರ್ವವಿಧಗಳಲ್ಲೂ ಮನುಷ್ಯನ ಸಹಾಯಹಸ್ತ ಬೇಕು.

ವಾಚಕರ ವಾಣಿ

ಸರ್ಕಾರಿ ಶಾಲೆಗೆ ಹೆಮ್ಮೆ ತಂದ ವಿದ್ಯಾರ್ಥಿನಿ

ಮೊರಾರ್ಜಿ ದೇಸಾಯಿ ವಸತಿಶಾಲೆ ಎಂದರೆ ಸರಿಯಾದ ಸೌಲಭ್ಯವಿಲ್ಲ, ಕ್ಲಾಸ್ ರೂಂ, ಬೆಂಚ್, ಊಟ ಸರಿಯಿಲ್ಲ, ಸರಿಯಾದ ಶಿಕ್ಷಣ ಸಿಗುವುದಿಲ್ಲ ಎನ್ನುವವರು ಬಾಯಿಯ ಮೇಲೆ ಕೈ ಇಟ್ಟುಕೊಳ್ಳುವಂತೆ ಮಾಡಿದ್ದಾಳೆ ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿರುವ, ಬಾಗಲಕೋಟೆ ಜಿಲ್ಲೆ ಮುಧೋಳ ತಾಲ್ಲೂಕಿನ ವಜ್ಜರಮಟ್ಟಿಯ ಅಂಕಿತಾ ಬಸಪ್ಪ ಕೊಣ್ಣೂರ. ಈ ವಸತಿ ಶಾಲೆಗಳಲ್ಲಿ ಮಕ್ಕಳಿಗೆ ಪುಸ್ತಕ, ಸಮವಸ್ತ್ರ, ಊಟ, ವಸತಿ ಎಲ್ಲವೂ ಉಚಿತವಾಗಿ ಸಿಗುತ್ತವೆ. ಕೆಲವು ಕಡೆ ಹಾಸ್ಟೆಲ್‌ಗೆ ಸ್ವಂತ ಕಟ್ಟಡ ಇರದಿದ್ದರೂ ಅಲ್ಲಿಯ ಶಿಕ್ಷಕರು ಹೆಚ್ಚು ಶ್ರಮವಹಿಸಿ ಮಕ್ಕಳಿಗೆ ಬೋಧನೆ ಮಾಡುತ್ತಾರೆ. ಅವರ ನಿರಂತರ ಶ್ರಮದಿಂದ ಪ್ರತಿವರ್ಷವೂ ಎಲ್ಲ ಮೊರಾರ್ಜಿ ದೇಸಾಯಿ ವಸತಿಶಾಲೆಗಳು ಒಳ್ಳೆಯ ಫಲಿತಾಂಶ ನೀಡುತ್ತಾ ಬಂದಿವೆ. ಸರ್ಕಾರಿ ಹುದ್ದೆ ಮಾತ್ರ ಬೇಕು, ಸರ್ಕಾರಿ ಶಾಲೆಯಲ್ಲಿ ಶಿಕ್ಷಣ ಬೇಡ ಎನ್ನುವ ಮನಃಸ್ಥಿತಿಯವರು ಅಂಕಿತಾಳ ಸಾಧನೆಯನ್ನು ಗಮನಿಸಬೇಕು.

ಭೂಮಿಕಾ ರಂಗಪ್ಪ ದಾಸರಡ್ಡಿ, ಬಿದರಿ

ಪಟಾಕಿ ಅವಘಡ: ಪರಿಣಾಮದ ಅರಿವಾಗಲಿ

ತಮಿಳುನಾಡಿನ ಶಿವಕಾಶಿಯಲ್ಲಿ ನಡೆದಿರುವ ಪಟಾಕಿ ಸ್ಫೋಟದಲ್ಲಿ 8 ಜನರು ಸಾವಿಗೀಡಾಗಿರುವುದು ವರದಿಯಾಗಿದೆ (ಪ್ರ.ವಾ., ಮೇ 10). ಶಿವಕಾಶಿಯು ಪಟಾಕಿ ತಯಾರಿಕೆಗೆ ದೇಶದಾದ್ಯಂತ ಹೆಸರುವಾಸಿಯಾಗಿದೆ ಹಾಗೂ ಇದೇ ಸ್ಥಳದಲ್ಲಿ ಮೇಲಿಂದ ಮೇಲೆ ಇಂತಹ ಅವಘಡಗಳು ಘಟಿಸುತ್ತಲೇ ಇರುತ್ತವೆ. ಇಲ್ಲಿ ಅಸುನೀಗಿದ ಕೂಲಿಕಾರ್ಮಿಕರ ಸಾವಿಗೆ ಬೆಲೆ ಇಲ್ಲವೇ? ಸರ್ಕಾರವಾಗಲೀ ಜನಸಾಮಾನ್ಯರಾಗಲೀ ಈ ಸಾವುಗಳ ಹೊಣೆ ಹೊರುವರೇ? ಯಾರದೋ ಹುಟ್ಟುಹಬ್ಬಕ್ಕೋ ಇನ್ನಾರದೋ ಸಾವಿಗೋ ಮತ್ತ್ಯಾರದೋ ಮದುವೆಗೋ ಇಲ್ಲವೇ ಚುನಾವಣಾ ಪ್ರಚಾರಕ್ಕೋ ಗೆಲುವಿಗೋ ಹಬ್ಬ ಹರಿದಿನಕ್ಕೋ ಒಟ್ಟಿನಲ್ಲಿ ಪಟಾಕಿಗಳ ಸದ್ದಂತೂ ವರ್ಷಪೂರ್ತಿ ಅನುರಣಿಸುತ್ತಲೇ ಇರುತ್ತದೆ. ಇಷ್ಟೊಂದು ಪಟಾಕಿಗಳನ್ನು ತಯಾರಿಸಲು ಬಳಸಲಾಗುವ ರಾಸಾಯನಿಕಗಳು, ಅವುಗಳನ್ನು ತಯಾರಿಸುವವರ ಸ್ಥಿತಿಗತಿ, ಇವೇ ಪಟಾಕಿಗಳು ನಾಳೆ ನಮ್ಮ ಕೈಸೇರಿ ಉರಿದಾಗ ಅವು ಹೊರಬಿಡುವ ಹೊಗೆ, ದೂಳು, ಕರ್ಕಶ ಶಬ್ದ ತಂದೊಡ್ಡುವ ಅನಾಹುತಗಳ ಬಗ್ಗೆ ಕಿಂಚಿತ್ತೂ ಯೋಚಿಸದೇ ಇರುವ ಸಮಾಜದಲ್ಲಿ ನಾವೆಲ್ಲಾ ಬದುಕುತ್ತಿದ್ದೇವೆ.

ಒಂದು ಪಟಾಕಿ ಸುಟ್ಟರೆ ಏಕಕಾಲದಲ್ಲಿ ಜಲ, ನೆಲ, ವಾಯು ಹಾಗೂ ಶಬ್ದ ಮಾಲಿನ್ಯ ಉಂಟಾಗುತ್ತದೆ. ಇವುಗಳಿಂದ ಹೊರಹೊಮ್ಮುವ ದಟ್ಟಹೊಗೆಯು ಎಳೆಯ ಮಕ್ಕಳು ಹಾಗೂ ವೃದ್ಧರಿಗೆ ಅತೀವವಾದ ಉಸಿರಾಟದ ತೊಂದರೆಗಳನ್ನು ನೀಡುತ್ತದೆ. ಇವುಗಳ ಕಿವಿಗಡಚಿಕ್ಕುವ ಶಬ್ದವಂತೂ ಹಲವಾರು ಜನರ ಶ್ರವಣ ಸಾಮರ್ಥ್ಯ ಹಾಗೂ ರಕ್ತದೊತ್ತಡವನ್ನು ಏರುಪೇರಾಗಿಸುತ್ತದೆ. ಇವು ಉರಿದಾಗ ಸುತ್ತಲೂ ಸಿಂಪಡಣೆಗೊಳ್ಳುವ ರಾಸಾಯನಿಕಗಳು ಭೂಮಿಗಿಳಿದು ನೆಲಮಾಲಿನ್ಯಕ್ಕೂ ಜಲಮಾಲಿನ್ಯಕ್ಕೂ ಕಾರಣವಾಗುತ್ತವೆ. ಇಷ್ಟೇ ಅಲ್ಲದೆ ಇವು ವಾತಾವರಣ ಹಾಗೂ ಪ್ರಾಣಿ-ಪಕ್ಷಿಗಳ ಮೇಲೆ ಬೀರುವ ಪರಿಣಾಮವಂತೂ ಅತ್ಯಂತ ಭೀಕರ ಆಗಿರುತ್ತದೆ. ಇಷ್ಟೆಲ್ಲಾ ತೊಂದರೆ ಕೊಡುವ ಈ ಪಟಾಕಿಗಳನ್ನು ಆಳುವ ವರ್ಗದವರು ನಿಷೇಧಿಸದೇ ಇರುವುದು ಹಾಗೂ ಜನಸಾಮಾನ್ಯರು ಬಳಸುವುದನ್ನು ನಿಲ್ಲಿಸದೇ ಇರುವುದು ದುರಂತವೇ ಸರಿ.

ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಹಿಂದೆ-ಮುಂದೆ?!

ಈ ಬಾರಿಯ
ಎಸ್‌ಎಸ್‌ಎಲ್‌ಸಿ
ಪರೀಕ್ಷಾ ಫಲಿತಾಂಶದಲ್ಲೂ
ಬಾಲಕಿಯರದೇ ಮೇಲುಗೈ!
ಹೌದು, ಹುಡುಗಿಯರು
ಯಾವಾಗಲೂ ಮುಂದೆ...
ಅವರನ್ನು ಹಿಂಬಾಲಿಸುವ
ಹುಡುಗರು ಪ್ರತಿ ಬಾರಿ
ಪರೀಕ್ಷಾ ಫಲಿತಾಂಶದಲ್ಲೂ
ಹಿಂದೆ ಹಿಂದೆ...!

ಮ.ಗು.ಬಸವಣ್ಣ
ನಂಜನಗೂಡು

ಕುಟುಂಬದ ಪಾತ್ರ ನಿರ್ಣಾಯಕ

'ಒಮ್ಮೆ ಆಳವಾಗಿ ಆಲೋಚಿಸಿದ್ದರೆ...?' ಎನ್ನುವ ಲೇಖನದಲ್ಲಿ (ಪ್ರ.ವಾ., ಮೇ 10) ಡಾ. ಎಚ್.ಎಸ್. ಅನುಪಮಾ ಅವರು ವ್ಯಕ್ತಿಯನ್ನು ರೂಪಿಸುವುದರಲ್ಲಿ ಸಮಾಜದ ಪಾತ್ರವನ್ನು ಸರಿಯಾಗಿ ಗುರುತಿಸಿದ್ದಾರೆ. ಸಮಾಜವು ವ್ಯಕ್ತಿಯೊಬ್ಬನ ಬದುಕಿನಲ್ಲಿ ಹೆಚ್ಚು ಪ್ರಭಾವಶಾಲಿಯಾಗುವುದು ಆತನ 10-12ನೇ ವಯಸ್ಸಿನ ನಂತರ. ಅಲ್ಲಿಯವರೆಗೆ ಕೌಟುಂಬಿಕ ವಾತಾವರಣ ಮಾತ್ರ ಮಗುವಿನ ವ್ಯಕ್ತಿತ್ವವನ್ನು ರೂಪಿಸುತ್ತದೆ. ಮಗುವನ್ನು ರೂಪಿಸುವ ಪ್ರಕ್ರಿಯೆಯಲ್ಲಿ ಅದರ ಬದುಕಿನ ಮೊದಲ ಏಳೆಂಟು ವರ್ಷಗಳು ಅತಿ ಮುಖ್ಯವಾದವು ಎಂದು ವೈಜ್ಞಾನಿಕ ಸಂಶೋಧನೆಗಳು ತೋರಿಸಿವೆ. ನಮಗೆಲ್ಲಾ ವಿವೇಚನೆಯನ್ನು ಬಳಸುವುದಕ್ಕೆ ಹಾಗೂ ಮಾತು, ವರ್ತನೆಯ ಮೇಲೆ ಹಿಡಿತ ಸಾಧಿಸುವುದಕ್ಕೆ ಬಾಲ್ಯದಲ್ಲಿ ಸೂಕ್ತವಾದ ಕೌಟುಂಬಿಕ ವಾತಾವರಣದ ಅಗತ್ಯವಿದೆ. ಇಂತಹ ವಾತಾವರಣದಲ್ಲಿ ಮಾತ್ರ ತುಡಿತಗಳ ಮೇಲೆ ಹಿಡಿತ ಸಾಧಿಸಲು ಅಗತ್ಯವಾದ ಮಿದುಳಿನ ಸಂಕೀರ್ಣ ಸಂಪರ್ಕ ಜಾಲಗಳು ಸಮರ್ಥವಾಗಿ ಬೆಳವಣಿಗೆ ಆಗುತ್ತವೆ. ಅಂತಹ ಸಂಪರ್ಕ ಜಾಲಗಳ ಬೆಳವಣಿಗೆ ಆಗದಿದ್ದಾಗ, ವಯಸ್ಕನಾದ ಮೇಲೆ ಬರೀ ಬುದ್ಧಿಯನ್ನು ಬಳಸಿ ಹಿಡಿತ ಸಾಧಿಸುವುದು ಆ ವ್ಯಕ್ತಿಗೆ ಬಹಳ ಕಷ್ಟವಾಗುತ್ತದೆ.

ನರವಿಜ್ಞಾನಿ ಮತ್ತು ಮಕ್ಕಳ ಮನೋವೈದ್ಯ ಡಾ. ಬ್ರೂಸ್ ಪೆರಿ ಮತ್ತು ಟಿ.ವಿ. ನಿರೂಪಕಿ ಓಪ್ರಾ ವಿನ್‌ಫ್ರೇ ಅವರು ಬರೆದಿರುವ ಪುಸ್ತಕ 'ವಾಟ್ ಹ್ಯಾಪನ್ಡ್ ಟು ಯೂ?'ದಲ್ಲಿ ಮಗುವಿನ ಮನೋದೈಹಿಕ ಬೆಳವಣಿಗೆಯ ಕುರಿತು ವೈಜ್ಞಾನಿಕವಾಗಿ ಚರ್ಚಿಸಲಾಗಿದೆ.

ಗ್ರೀಕ್ ತತ್ವಶಾಸ್ತ್ರಜ್ಞ ಅರಿಸ್ಟಾಟಲ್ 'ಏಳು ವರ್ಷದ ಮಗುವನ್ನು ನನಗೆ ತೋರಿಸಿ. ಅದರಲ್ಲಿ ಇರುವ ವಯಸ್ಕನನ್ನು ನಾನು ತೋರಿಸುತ್ತೇನೆ' ಎಂದು ಒಮ್ಮೆ ಹೇಳಿದ್ದ. ಇಂದಿನ ಮಕ್ಕಳಲ್ಲಿ ತುಡಿತಗಳನ್ನು ನಿರ್ವಹಿಸುವ ಶಕ್ತಿ ಕಡಿಮೆ ಆಗುತ್ತಿರುವುದು ಸಂಶೋಧನೆಗಳಿಂದ ತಿಳಿದುಬಂದಿದೆ. ಈ ಕುರಿತು ನಾವೆಲ್ಲಾ ಎಚ್ಚೆತ್ತುಕೊಳ್ಳಬೇಕಾಗಿದೆ.

ನಡಹಳ್ಳಿ ವಸಂತ್, ಶಿವಮೊಗ್ಗ

ಜಾತಿ ಪ್ರಾಬಲ್ಯ

ಬಾಯಿ ಬಿಟ್ಟರೆ
'ಇವನಾರವ...' ವಚನ
ಹೇಳುವವರು ಕೇಳುತ್ತಾರೆ
ಕೈ-ಕುಲುಕಿ...
ನೀವು ಯಾರ ಪೈಕಿ?!

ವಿಜಯಮಹಾಂತೇಶ್ ಬಂಗಾರಗುಂಡ್
ಬಾಗಲಕೋಟೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.



ಹರಿಯಾಣ: ಬದಲಾಗುತ್ತಿದೆಯೇ ರಾಜಕೀಯ ಸಮೀಕರಣ...

ಹರಿಯಾಣದ ಬಿಜೆಪಿ ಸರ್ಕಾರಕ್ಕೆ ಬೆಂಬಲ ನೀಡಿದ್ದ ಮೂವರು ಪಕ್ಷೇತರ ಶಾಸಕರು ಬೆಂಬಲ ವಾಪಸ್ ಪಡೆದದ್ದು ಈಗಾಗಲೇ ಹಳೆಯ ವಿಚಾರ. ಸರ್ಕಾರ ಅಲ್ಪಮತಕ್ಕೆ ಜಾರಿದ್ದರೂ, ಅದು ಇನ್ನೂ ನಾಲ್ಕು ತಿಂಗಳವರೆಗೆ ಸುರಕ್ಷಿತ. ಬಿಜೆಪಿ ಸರ್ಕಾರ ಸುರಕ್ಷಿತ ಎಂದಾದರೂ, ಈ ಕ್ಷಿಪ್ರ ಬೆಳವಣಿಗೆ ಬೇರೆಯದ್ದೇ ರಾಜಕೀಯ ಸಮೀಕರಣವನ್ನು ಸೂಚಿಸುತ್ತಿದೆ ಎಂಬುದು ತಜ್ಞರ ಅಭಿಪ್ರಾಯ. ಈ ಸಮೀಕರಣ ಪರಿಣಾಮಕಾರಿಯೇ ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಲು ಲೋಕಸಭಾ ಚುನಾವಣೆಯ ಫಲಿತಾಂಶದವರೆಗೂ ಕಾಯಬೇಕು. ಆದರೆ ಈ ಬೆಳವಣಿಗೆಯು ಲೋಕಸಭಾ ಚುನಾವಣೆಯಲ್ಲಿ ಮತದಾನವನ್ನು ಪ್ರಭಾವಿಸುತ್ತದೆ ಎಂದೇ ಹೇಳಲಾಗುತ್ತಿದೆ

ಆಧಾರ: ಪಿಟಿಐ, ಜೆಜೆಪಿ, ಕಾಂಗ್ರೆಸ್, ಬಿಜೆಪಿ ಮತ್ತು ಸಿಪಿಎಂನ ಟ್ವೀಟ್‌ಗಳು, ಪತ್ರಿಕಾ ಪ್ರಕಟಣೆಗಳು

ಚಿತ್ರಗಳು: ಪಿಟಿಐ

ಪ್ರಜಾವಾಣಿ ವಾರ್ತೆ

ಪ್ರಜಾ ಮತ | ಜನತಂತ್ರದ ಹಬ್ಬ | ಲೋಕಸಭಾ ಚುನಾವಣೆ - 2024

ಹರಿಯಾಣದ ಬಿಜೆಪಿ ಸರ್ಕಾರ ಅಸ್ಥಿರವಾಗಿದೆ. ಸರಳ ಬಹುಮತವನ್ನು ಕಳೆದುಕೊಂಡು ಅಲ್ಪಮತಕ್ಕೆ ಜಾರಿದೆ. ಇದೇ ವರ್ಷದ ಮಾರ್ಚ್‌ನಲ್ಲೂ ಇಂಥದ್ದೇ ಸ್ಥಿತಿಯನ್ನು ರಾಜ್ಯ ಬಿಜೆಪಿ ಸರ್ಕಾರ ಎದುರಿಸಿತ್ತು. ಆಗ ಸರ್ಕಾರ ಬೀಳುವ ಸ್ಥಿತಿ ಎದುರಾಗಿತ್ತು. ಈಗಲೂ ಅಂಥದ್ದೇ ಸ್ಥಿತಿ ಬಂದಿದೆ. ಆದರೆ ತಾಂತ್ರಿಕ ಕಾರಣದಿಂದ ಸರ್ಕಾರ ಉಳಿದುಕೊಂಡಿದೆ. ಆ ತಾಂತ್ರಿಕ ಕಾರಣದಿಂದ ಇನ್ನೂ ನಾಲ್ಕು ತಿಂಗಳವರೆಗೆ ಸರ್ಕಾರ ಉಳಿಯಬಹುದು. ಅಷ್ಟರ ವೇಳೆಗೆ ರಾಜ್ಯ ವಿಧಾನಸಭೆಗೆ ಚುನಾವಣೆ ಘೋಷಣೆಯಾಗಲಿದೆ. ಹೀಗಾಗಿ ಹರಿಯಾಣದಲ್ಲಿ ಸರ್ಕಾರ ಬದಲಾಗುವ ಯಾವ ಸಾಧ್ಯತೆಯೂ ಈಗ ಇಲ್ಲ. ಆದರೆ ಈ ಎಲ್ಲಾ ಬೆಳವಣಿಗೆಗಳಿಗೆ ಕಾರಣ ಲೋಕಸಭಾ ಚುನಾವಣೆ ಎಂದರೆ ತಪ್ಪಾಗಲಾರದು.

ಇದೇ ಮಾರ್ಚ್‌ನಲ್ಲಿ ಬಿಜೆಪಿ ಸರ್ಕಾರ ಅಲ್ಪಮತಕ್ಕೆ ಜಾರಿದ್ದು ಲೋಕಸಭಾ ಚುನಾವಣೆಯ ಕಾರಣದಿಂದಲೇ. 2019ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಗೆ ಪೂರ್ಣ ಬಹುಮತವೇನೂ ದೊರೆತಿರಲಿಲ್ಲ. 90 ಶಾಸಕರ ವಿಧಾನಸಭೆಯಲ್ಲಿ ಸರ್ಕಾರ ರಚಿಸಲು 46 ಶಾಸಕರ ಅಗತ್ಯವಿತ್ತು. ಆದರೆ ಬಿಜೆಪಿ ಗೆದ್ದಿದ್ದು 41ರಲ್ಲಿ ಮಾತ್ರ. ಇನ್ನೊಂದೆಡೆ ಕಾಂಗ್ರೆಸ್ 30 ಕ್ಷೇತ್ರಗಳಿಂದ ಆರಿಸಿಬಂದಿತ್ತು. ಆಗ ಬಿಜೆಪಿ ನೆರವಿಗೆ ಬಂದಿದ್ದು ಜೆಜೆಪಿ. ದುಷ್ಯಂತ್ ಸಿಂಗ್ ಚೌಟಾಲಾ ಅವರ ಜೆಜೆಪಿಯ 10 ಶಾಸಕರು ಬಿಜೆಪಿಗೆ ಬೆಂಬಲ ಘೋಷಿಸಿದ್ದರಿಂದ, ಬಿಜೆಪಿ ಸರ್ಕಾರ ರಚಿಸಿತು.

ಕೃಷಿ ಪ್ರಧಾನ ಸಮುದಾಯದ ಜಾಟರ ಮತಗಳನ್ನೇ ನೆಚ್ಚಿಕೊಂಡಿರುವ ಜೆಜೆಪಿಗೆ ಕೇಂದ್ರ ಸರ್ಕಾರದ ಮೂರು ಕೃಷಿ ಕಾಯ್ದೆಗಳು ಇರುಸುಮುರುಸು ಉಂಟುಮಾಡಿದರೂ, ಮೈತ್ರಿ ಮುರಿದುಬೀಳುವ ಹಂತಕ್ಕೆ ಅದು ಹೋಗಲಿಲ್ಲ. ಆದರೆ ಎರಡೂ ಪಕ್ಷಗಳ ನಡುವಣ ಸಂಬಂಧ ಹಳಸಿತ್ತು. ಪ್ರತಿಭಟನೆಗಾಗಿ ದೆಹಲಿಯತ್ತ ಹೊರಟಿದ್ದ ರೈತರನ್ನು ಹರಿಯಾಣ ಸರ್ಕಾರ ನಡೆಸಿಕೊಂಡ ರೀತಿ, ಜೆಜೆಪಿಯ ಮತಬುಟ್ಟಿಯನ್ನು ಸಡಿಲಗೊಳಿಸಿತ್ತು. ಅದು ಮುಂದಿನ ಚುನಾವಣೆಗಳಲ್ಲಿ ಜೆಜೆಪಿಗೆ ಮುಳುವಾಗುವ ಸಂಭವವಿತ್ತು ಎಂದೇ ಆಗ ರಾಜಕೀಯ ತಜ್ಞರು ವಿಶ್ಲೇಷಿಸಿದ್ದರು.

ಅಂತಹ ಪರಿಸ್ಥಿತಿಯ ಮಧ್ಯೆಯೇ ಲೋಕಸಭೆ ಚುನಾವಣೆ ಎದುರಾಯಿತು. ಈ ಬಾರಿ ಎನ್‌ಡಿಎಯ ಬಲ 400 ಸ್ಥಾನಗಳ ಗಡಿದಾಟುವ ಗುರಿ ಹಾಕಿಕೊಂಡಿದ್ದ ಬಿಜೆಪಿ ಎಲ್ಲಾ ರಾಜ್ಯಗಳಲ್ಲಿ ಸಣ್ಣ–ಪುಟ್ಟ ಪಕ್ಷಗಳ ಜತೆಗೂ ಮೈತ್ರಿಗೆ ಮುಂದಾಗಿತ್ತು. 2019ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಮತ್ತು ಜೆಜೆಪಿ ಪ್ರತ್ಯೇಕವಾಗಿಯೇ ಸ್ಪರ್ಧಿಸಿದ್ದವು. ರಾಜ್ಯ ವಿಧಾನಸಭೆಯಲ್ಲಿರುವ ಮೈತ್ರಿಯನ್ನು ಲೋಕಸಭೆಗೂ ವಿಸ್ತರಿಸಲು ಬಿಜೆಪಿ ಯತ್ನಿಸಿತು. ಹರಿಯಾಣದಲ್ಲಿರುವ 10 ಕ್ಷೇತ್ರಗಳ ಪೈಕಿ 9ರಲ್ಲಿ ಬಿಜೆಪಿ, 1ರಲ್ಲಿ ಜೆಜೆಪಿ ಸ್ಪರ್ಧಿಸುವ ಪ್ರಸ್ತಾವವನ್ನು ಇರಿಸಿತು. ಆ ಪ್ರಸ್ತಾಪವನ್ನು ಕಡಾಖಂಡಿತವಾಗಿ ತಿರಸ್ಕರಿಸಿದ ಜೆಜೆಪಿ ರಾಜ್ಯ ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ವಾಪಸ್ ಪಡೆಯಿತು. ಅಲ್ಪಮತಕ್ಕೆ ಜಾರಿದ ಸರ್ಕಾರವನ್ನು, ಆರು ಪಕ್ಷೇತರರು ಎಚ್‌ಎಲ್‌ಪಿಯ ಒಬ್ಬ ಶಾಸಕನ ಬೆಂಬಲ ಪಡೆದು ಬಿಜೆಪಿ ಉಳಿಸಿಕೊಂಡಿತು. ಆಗ ಬಿಜೆಪಿ ಸರ್ಕಾರವು ವಿಶ್ವಾಸಮತ ಸಾಬೀತುಪಡಿಸುವಂತೆ ಕಾಂಗ್ರೆಸ್ ಒತ್ತಾಯಿಸಿತ್ತು. ಮುಖ್ಯಮಂತ್ರಿಯನ್ನು ಬದಲಿಸಿದ ಬಿಜೆಪಿ, ಮಾರ್ಚ್ 12ರಂದು ವಿಧಾನಸಭೆಯಲ್ಲಿ ಬಹುಮತವನ್ನು ಸಾಬೀತು ಮಾಡಿತು.



ಪ್ರಜಾವಾಣಿ ಗ್ರಾಫಿಕ್ಸ್

ಹೀಗೆ ಒಮ್ಮೆ ಬಹುಮತ ಸಾಬೀತು ಮಾಡಿದ ನಂತರ ಮುಂದಿನ ಆರು ತಿಂಗಳವರೆಗೆ, ಮತ್ತೆ ಬಹುಮತ ಸಾಬೀತು ಮಾಡುವ ಅವಶ್ಯಕತೆ ಇರುವುದಿಲ್ಲ. ಅಂತಹ ಒಂದು ರಕ್ಷಣೆಯನ್ನು ಕಾನೂನು ಯಾವುದೇ ಸರ್ಕಾರಕ್ಕೂ ನೀಡಿದೆ. ಈಗ ಮತ್ತೆ ಅಲ್ಪಮತಕ್ಕೆ ಜಾರಿದ್ದರೂ ಬಿಜೆಪಿ ಸರ್ಕಾರಕ್ಕೆ ರಕ್ಷಣೆ ಇರುವುದು ಈ ಕಾನೂನಿನಿಂದಲೇ.

ಹೀಗಾಗಿಯೇ ಕಾಂಗ್ರೆಸ್ ಈಗ ವಿಶ್ವಾಸಮತ ಸಾಬೀತುಪಡಿಸುವಂತೆ ಆಗ್ರಹಿಸುತ್ತಿಲ್ಲ. ಬದಲಿಗೆ ನೈತಿಕತೆ ಆಧಾರದಲ್ಲಿ ಬಿಜೆಪಿಯೇ ಸರ್ಕಾರವನ್ನು ತ್ಯಾಗ ಮಾಡಬೇಕು ಮತ್ತು ರಾಷ್ಟ್ರಪತಿ ಆಳ್ವಿಕೆ ಜಾರಿಗೆ ತರಬೇಕು ಎಂದು ಹೇಳಿಬಿಟ್ಟಿದೆ. ಇನ್ನೊಂದೆಡೆ ವಿಶ್ವಾಸಮತ ಸಾಬೀತಿಗೆ ಆಗ್ರಹಿಸಿ ಜೆಜೆಪಿ ರಾಜ್ಯಪಾಲರಿಗೆ ಪತ್ರ ಬರೆದಿತ್ತು. ಆರು ತಿಂಗಳ ಅವಧಿವರೆಗೆ ಅದು ಸಾಧ್ಯವಿಲ್ಲ ಎಂದು ರಾಜ್ಯಪಾಲ ಭಂಡಾರು ದತ್ತಾತ್ರೇಯ ಅವರು ಸ್ಪಷ್ಟಪಡಿಸಿಯೂ ಆಯಿತು. ಮಾಜಿ ಮುಖ್ಯಮಂತ್ರಿ ಮನೋಹರಲಾಲ್ ಖಟ್ಟರ್, 'ನಮ್ಮ ಸರ್ಕಾರ ಅಪಾಯದಲ್ಲಿ ಇಲ್ಲ. ಜೆಜೆಪಿಯ ಮೂವರು ಶಾಸಕರು ನಮ್ಮ ಸಂಪರ್ಕದಲ್ಲಿ ಇದ್ದಾರೆ. ನಾವು ಸುಲಭವಾಗಿ ಬಹುಮತ ಸಾಬೀತು ಮಾಡುತ್ತೇವೆ' ಎಂದು ಹೇಳಿಕೆ ನೀಡಿದರು.

ಆದರೆ ಈ ಎಲ್ಲಾ ಬೆಳವಣಿಗೆಗಳಿಗಿಂತ ಈಗ ಹೆಚ್ಚು ಚರ್ಚಿತವಾಗುತ್ತಿರುವ ವಿಷಯವೆಂದರೆ, ಮೂವರು ಪಕ್ಷೇತರ ಶಾಸಕರು ಬಿಜೆಪಿ ತೊರೆದದ್ದು ಏಕೆ ಎಂಬುದು. 'ರಾಜ್ಯದಲ್ಲಿ ಬಿಜೆಪಿ ದುರ್ಬಲವಾಗುತ್ತಿರುವುದನ್ನು ಇದು ಸೂಚಿಸುತ್ತದೆ. ಲೋಕಸಭೆ ಚುನಾವಣೆಯಲ್ಲೂ ಬಿಜೆಪಿ ವಿರುದ್ಧದ ಗಾಳಿ ಜೋರಾಗಿದೆ. ಅದು ಹರಿಯಾಣದಲ್ಲೂ ಬೀಸುತ್ತಿದೆ. ಬಿಜೆಪಿಯೇತರ ಪಕ್ಷಗಳಿಗೆ ಇದು ಅರಿವಾಗಿದೆ. ಹೀಗಾಗಿಯೇ ಅವು ಬಿಜೆಪಿಯಿಂದ ದೂರ ಸರಿಯುತ್ತಿವೆ' ಎಂದು ಸಿಪಿಎಂ ಹರಿಯಾಣ ಘಟಕ ವಿಶ್ಲೇಷಿಸಿದೆ. ಇದು ಎಷ್ಟರಮಟ್ಟಿಗೆ ನಿಜ ಎಂಬುದನ್ನು ಲೋಕಸಭಾ ಚುನಾವಣೆಯ ಫಲಿತಾಂಶವಷ್ಟೇ ಹೇಳಬಲ್ಲದು.

ಗುರುಗ್ರಾಮದ ಮಹಿರಾ ಹೋಮ್ಸ್ ಕಂಪನಿಯ 5,000 ಫ್ಲ್ಯಾಟ್‌ಗಳು ಅನರ್ಹ ಎಂದು ರೇರಾ ಘೋಷಿಸಿದೆ. ಫ್ಲ್ಯಾಟ್ ಖರೀದಿದಾರರ ನೆರವಿಗೆ ಬಿಜೆಪಿ ಸರ್ಕಾರ ಬರುತ್ತಿಲ್ಲ ಎಂದು ಆ ಜನರು ಮತದಾನ ಬಹಿಷ್ಕರಿಸಿದ್ದಾರೆ. ಸರ್ಕಾರದ ಆಡಳಿತ ವೈಖರಿಯ ವಿರುದ್ಧ ರಾಜ್ಯದಾದ್ಯಂತ ಇಂತಹ ಹಲವು ಪ್ರತಿಭಟನೆಗಳು ನಡೆಯುತ್ತಿವೆ

ಆಡಳಿತ ವಿರೋಧಿ ಅಲೆಯೇ...

ಲೋಕಸಭಾ ಚುನಾವಣೆಗೆ ಮೊದಲ ಹಂತದಲ್ಲಿ ಮತದಾನ ನಡೆಯುವುದಕ್ಕೂ ಮುನ್ನ ಸಾಮಾಜಿಕ ಜಾಲತಾಣಗಳಲ್ಲಿ ಒಂದು ವಿಡಿಯೊ ವ್ಯಾಪಕವಾಗಿ ಹರಿದಾಡಿತ್ತು. ಬಿಜೆಪಿ ಬಾವುಟ ಇರುವ ಕಾರುಗಳ ಮೇಲೆ ಜನರು ದಾಳಿ ನಡೆಸುತ್ತಿರುವ ವಿಡಿಯೊ ಅದಾಗಿತ್ತು. 'ಬಿಜೆಪಿ ಆಡಳಿತದ ಬಗ್ಗೆ ಜನರು ಬೇಸತ್ತು ಹೋಗಿದ್ದಾರೆ. ಬಿಜೆಪಿ ಅಭ್ಯರ್ಥಿಯನ್ನು ಅಟ್ಟಾಡಿಸಿ ಹೊಡೆಯುತ್ತಿದ್ದಾರೆ' ಎಂದು ಆ ವಿಡಿಯೊಕ್ಕೆ ವಿವರಣೆ ನೀಡಲಾಗಿತ್ತು. ಅದು ಹಳೆಯ ವಿಡಿಯೊ, ಅದನ್ನು ಈಗ ತಪ್ಪು ಮಾಹಿತಿಯೊಂದಿಗೆ ಹಂಚಿಕೊಳ್ಳಲಾಗುತ್ತಿದೆ ಎಂದು ಕೇಂದ್ರ ಸರ್ಕಾರದ ಪಿಐಬಿ ಫ್ಯಾಕ್ಟ್‌ಚೆಕ್ ಘಟಕವು ಫ್ಯಾಕ್ಟ್‌ಚೆಕ್ ಪ್ರಕಟಿಸಿತ್ತು. ಆದರೆ ಆನಂತರದ ದಿನಗಳಲ್ಲಿ ಅಂತಹ ಹತ್ತಾರು ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಬಂದವು. ಮತ ಕೇಳಲು ಬಂದ ಬಿಜೆಪಿ ಅಭ್ಯರ್ಥಿಗಳನ್ನು ಪ್ರಶ್ನಿಸುವ, ಅವರ ವಾಹನಗಳ ಮೇಲೆ ದಾಳಿ ನಡೆಸುವ, ಅವರನ್ನು ಅಟ್ಟಾಡಿಸಿಕೊಂಡು ಹೋಗುವ, ಅಭ್ಯರ್ಥಿಗಳ ಮೇಲೆ ದಾಳಿ ನಡೆಸುವ ವಿಡಿಯೊಗಳೂ ಬಂದವು. ಆ ಎಲ್ಲಾ ವಿಡಿಯೊಗಳು ಹರಿಯಾಣದ್ದು ಎಂಬ ವಿವರಣೆ ಹೊಂದಿದ್ದವು. ಈ ವಿಡಿಯೊಗಳನ್ನು ಯಾವ ಫ್ಯಾಕ್ಟ್‌ಚೆಕ್ ಸಹ ನಿರಾಕರಿಸಲಿಲ್ಲ. ಆದರೆ ಇವು ನಿಜವಾದ ವಿಡಿಯೊಗಳು ಎಂದು 'ಇಂಡಿಯಾ' ಮೈತ್ರಿಕೂಟದ ಮಿತ್ರಪಕ್ಷಗಳು ಹೇಳಿದವು. ಜೆಜೆಪಿಯೂ ಇದೇ ಮಾತನ್ನು ಹೇಳುತ್ತಿದೆ. 'ಬಿಜೆಪಿ ಪರವಾಗಿ ಮತ ಕೇಳಲು ಹೋದವರಿಗೆ ಜನರಿಂದ ಏಟು ಬೀಳುತ್ತಿದೆ. ರೈತರು ಮತ್ತು ಜಾಟರನ್ನು ಸರ್ಕಾರ ನಡೆಸಿಕೊಂಡ ರೀತಿಯ ಬಗ್ಗೆ ಜನರಿಗೆ ಸಿಟ್ಟಿದೆ. ಅದನ್ನು ಈ ರೀತಿ ಹೊರಹಾಕುತ್ತಿದ್ದಾರೆ' ಎಂದು ಜೆಜೆಪಿಯ ಚೌಟಾಲಾ ಹೇಳಿಕೆ ನೀಡಿದ್ದರು. ಆ ಪ್ರಕಾರ ಜಾಟರು ಪ್ರಧಾನವಾಗಿರುವ ಗ್ರಾಮಗಳಲ್ಲಿ ಬಿಜೆಪಿ ಅಭ್ಯರ್ಥಿಗಳಿಗೆ ಪ್ರವೇಶ ನಿರ್ಬಂಧಿಸಲಾಗಿದೆ. ಮತ ಕೇಳಲು ಬರುವ ಅಭ್ಯರ್ಥಿಗಳನ್ನು ಜನರು ತರಾಟೆಗೆ ತೆಗೆದುಕೊಳ್ಳುತ್ತಿದ್ದಾರೆ. ಆದರೆ ಇದನ್ನು ಬಿಜೆಪಿಯ ಮಾಧ್ಯಮಗಳು ತೋರಿಸುವುದಿಲ್ಲ ಎಂದೂ ಅವರು ಹೇಳಿದ್ದರು.

ನಾಯಬ್ ಸಿಂಗ್ ಸೈನಿ ಮುಖ್ಯಮಂತ್ರಿಯಾಗಿದ್ದರೂ, ಮಾಜಿ ಮುಖ್ಯಮಂತ್ರಿ ಮನೋಹರ್ ಲಾಲ್ ಖಟ್ಟರ್ ಈಗಲೂ ಆಡಳಿತದ ಮೇಲೆ ನಿಯಂತ್ರಣ ಹೊಂದಿದ್ದಾರೆ ಎನ್ನಲಾಗುತ್ತಿದೆ. ಸೈನಿ ಸರ್ಕಾರ ಇಕ್ಕಟ್ಟಿಗೆ ಸಿಲುಕಿಕೊಂಡಾಗಲೆಲ್ಲಾ ಖಟ್ಟರ್ ಅವರೇ ರಾಜಕೀಯವಾಗಿಯೂ, ಸಾರ್ವಜನಿಕವಾಗಿಯೂ ಆ ಪರಿಸ್ಥಿತಿಗಳನ್ನು ನಿರ್ವಹಿಸುತ್ತಿದ್ದಾರೆ

'ಇಂಡಿಯಾ' ಮೈತ್ರಿಕೂಟದಲ್ಲಿರುವ ಎಡಪಕ್ಷಗಳೂ ಇದನ್ನೇ ಹೇಳುತ್ತಿವೆ. 'ಬಿಜೆಪಿ ಅಭ್ಯರ್ಥಿಗಳಿಗೆ ಜನರು ಕಪ್ಪುಬಾವುಟ ತೋರಿಸುತ್ತಿದ್ದಾರೆ. 2019ರಲ್ಲಿ ಪುಲ್ವಾಮಾ ದಾಳಿಯ ಅಲೆಯಲ್ಲಿ ಬಿಜೆಪಿ ಹತ್ತೂ ಕ್ಷೇತ್ರಗಳನ್ನು ಗೆದ್ದುಕೊಂಡುಬಿಟ್ಟಿತು. ನಂತರದ ಕೆಲವೇ ತಿಂಗಳಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ 75 ಸ್ಥಾನ ಗೆಲ್ಲುತ್ತೇವೆ ಎಂದು ಘೋಷಿಸಿಕೊಂಡಿತ್ತು. ಆದರೆ ಗೆದ್ದಿದ್ದು 41 ಮಾತ್ರ. ಈಗ ಪುಲ್ವಾಮದಂತಹ ಅಲೆ ಇಲ್ಲ. ಬದಲಿಗೆ ರೈತ ಹೋರಾಟ, ಎಂಎಸ್‌ಪಿಗೆ ಕಾನೂನು ಬೆಂಬಲ ಮತ್ತು ಅಗ್ನಿವೀರ ಯೋಜನೆಯ ಅಲೆ ಬಿಜೆಪಿಗೆ ವಿರುದ್ಧವಾಗಿ ಬೀಸುತ್ತಿದೆ. 10 ಕ್ಷೇತ್ರಗಳ ಪೈಕಿ ಬಿಜೆಪಿ ಐದು ಕ್ಷೇತ್ರಗಳನ್ನಾದರೂ ಕಳೆದುಕೊಳ್ಳಲಿದೆ. ಅಷ್ಟು ಆಡಳಿತ ವಿರೋಧಿ ಅಲೆ ಇದೆ' ಎಂದು ಸಿಪಿಎಂ ಹೇಳಿದೆ. ಬಿಜೆಪಿ ವಿರುದ್ಧ ಇರುವ ಆಡಳಿತ ವಿರೋಧಿ ಅಲೆಯ ಪರಿಣಾಮವಾಗಿಯೇ ಪಕ್ಷೇತರ ಶಾಸಕರು ಬಿಜೆಪಿಯ ಸಖ್ಯ ತೊರೆದಿದ್ದಾರೆ ಎಂದು ಹೇಳಲಾಗುತ್ತಿದೆ.


ಮನೋಹರ್ ಲಾಲ್ ಖಟ್ಟರ್

ಕಾಂಗ್ರೆಸ್ ಅಭ್ಯರ್ಥಿ ದೀಪಿಂದರ್ ಸಿಂಗ್ ಹೂಡಾ ಪ್ರಚಾರ ರ‍್ಯಾಲಿ. ಇಂಡಿಯಾ' ಮೈತ್ರಿಕೂಟದ ಭಾಗವಾಗಿ ಕಾಂಗ್ರೆಸ್ 9ರಲ್ಲಿ, ಎಎಪಿ 1 ಕ್ಷೇತ್ರದಲ್ಲಿ ಕಣಕ್ಕೆ ಇಳಿದಿವೆ. ಈ ಎರಡೂ ಪಕ್ಷಗಳ ಪರವಾಗಿ ಎಡಪಕ್ಷಗಳೂ ಪ್ರಚಾರ ನಡೆಸುತ್ತಿವೆ.

ಜೆಜೆಪಿಗೆ ಅಸ್ತಿತ್ವದ ಕಳವಳ

ಹರಿಯಾಣದಲ್ಲಿ ಜೆಜೆಪಿ ಅತ್ಯಂತ ಪ್ರಮುಖ ಪ್ರಾದೇಶಿಕ ಪಕ್ಷ. ಜಾಟರ ಮತಗಳನ್ನೇ ನೆಚ್ಚಿಕೊಂಡಿರುವ ಈ ಪಕ್ಷಕ್ಕೆ ರೈತರ ಬೆಂಬಲವೂ ಇದೆ. ಐದು ಲೋಕಸಭಾ ಕ್ಷೇತ್ರಗಳಲ್ಲಿ ಜಾಟರು ನಿರ್ಣಾಯಕ ಸ್ಥಾನದಲ್ಲಿದ್ದಾರೆ. ಕೃಷಿ ಕಾಯ್ದೆಗಳ ವಿರುದ್ಧ ಪಂಜಾಬ್ ಮತ್ತು ಹರಿಯಾಣದ ರೈತರು ಹೋರಾಟ ಆರಂಭಿಸಿದ ಹೊಸದರಲ್ಲಿ ಜೆಜೆಪಿಯು ಕೇಂದ್ರದ ಬಿಜೆಪಿ ಪರವಾಗಿಯೇ ಇತ್ತು. ಆದರೆ ಹೋರಾಟ ತೀವ್ರಗೊಂಡ ಬಳಿಕ ಮತ್ತು ರೈತರ ಹೋರಾಟಕ್ಕೆ ಸರ್ಕಾರವು ಸ್ಪಂದಿಸದೇ ಇದ್ದಾಗ ಜೆಜೆಪಿ ತನ್ನ ನಿಲುವನ್ನು ಬದಲಿಸಿತ್ತು. ರೈತ ಹೋರಾಟದಲ್ಲಿ ಭಾಗಿಯಾಗಿದ್ದ ಜಾಟರನ್ನು ರಾಜ್ಯ ಬಿಜೆಪಿ ನಾಯಕರು ಅವಹೇಳನ ಮಾಡಿದ್ದರು. ಬಿಜೆಪಿಯೊಂದಿಗೆ ಮೈತ್ರಿಯಲ್ಲಿದ್ದ ಜೆಜೆಪಿಗೆ ಈ ಎಲ್ಲವೂ ಮುಳುವಾಗಿದ್ದವು. ಅದರ ಜತೆಯಲ್ಲಿ ಕೇವಲ ಒಂದು ಕ್ಷೇತ್ರದಲ್ಲಿ ಸ್ಪರ್ಧಿಸಿ ಎಂದು ಬಿಜೆಪಿ ಪ್ರಸ್ತಾಪ ಮುಂದಿರಿಸಿದಾಗ, ಜೆಜೆಪಿಗೆ ಕಾಡಿದ್ದು ಅಸ್ತಿತ್ವದ ಪ್ರಶ್ನೆ.

ತಕ್ಷಣವೇ ಮೈತ್ರಿಯಿಂದ ಹೊರಬಂದ ಜೆಜೆಪಿ ಲೋಕಸಭೆಯಲ್ಲಿ ಸ್ವತಂತ್ರವಾಗಿ ಸ್ಪರ್ಧಿಸುವುದಾಗಿ ಘೋಷಿಸಿತು. ಜೆಜೆಪಿ ಮುಖ್ಯಸ್ಥ ದುಷ್ಯಂತ್ ಸಿಂಗ್ ಚೌಟಾಲಾ, 'ಸ್ವಾಭಿಮಾನಕ್ಕೆ ಧಕ್ಕೆ ಮಾಡಿಕೊಂಡು ಮೈತ್ರಿಯಲ್ಲಿ ಇರಲು ಸಾಧ್ಯವಿಲ್ಲ. ಹೀಗಾಗಿ ಉಪಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೇನೆ. ಜಾಟರಿಗೆ ಮತ್ತು ರೈತರಿಗೆ ಅವಮಾನ ಮಾಡಿದ ಬಿಜೆಪಿಗೆ ಲೋಕಸಭಾ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಬೇಕು' ಎಂದು ಘೋಷಿಸಿದರು. ಅಂತೆಯೇ ಎಲ್ಲಾ 10 ಕ್ಷೇತ್ರಗಳಲ್ಲೂ ತಮ್ಮ ಪಕ್ಷದ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿದರು. ಒಟ್ಟು, ಜಾಟ್ ಸಮುದಾಯದ ಮತಗಳು ಬಿಜೆಪಿಯಿಂದ ದೂರ ಸರಿದಿವೆ ಎಂಬುದನ್ನೇ ಇದು ಸೂಚಿಸುತ್ತದೆ. ಇದು ಬಿಜೆಪಿಗೆ ಮುಳುವಾಗುವ ಸಾಧ್ಯತೆ ಇದೆ ಎಂದೇ ವಿಶ್ಲೇಷಿಸಲಾಗುತ್ತಿದೆ.

ಜೆಜೆಪಿ ನಾಯಕ ದುಷ್ಯಂತ್ ಸಿಂಗ್ ಚೌಟಾಲಾ

ರಿಷಿ

ರಾಮಾಯಣದ ಎಳೆಯಲ್ಲಿ 'ರಾಮನ ಅವತಾರ'

ನಾವು ನೋಡಿದ ಸಿನಿಮಾ

ಅಯೋಧ್ಯೆ ಆಳಬೇಕಿದ್ದ ಶ್ರೀರಾಮನಿಗೆ ವನವಾಸವಾಯಿತು. ವನವಾಸದಲ್ಲಿದ್ದ ಸಂದರ್ಭದಲ್ಲಿ ಸೀತೆಯ ಅಪಹರಣವಾಯಿತು. ಸೀತೆಯ ಅಪಹರಣ ರಾವಣನ ವಧೆಗೆ ಕಾರಣವಾಯಿತು. ರಾಮಾಯಣದ ಈ ಸರಣಿ ಘಟನೆಗಳನ್ನೇ ಆಧಾರವಾಗಿಟ್ಟುಕೊಂಡು 'ರಾಮನ ಅವತಾರ'ವೆಂಬ ಹೊಸ ಎಳೆ ಸೃಷ್ಟಿಸಿದ್ದಾರೆ ನಿರ್ದೇಶಕ ವಿಕಾಸ್ ಪಂಪಾಪತಿ.

ಊರಿನಲ್ಲಿರೋ 'ರಾಮ'ನಿಗೆ(ರಿಷಿ) 'ಪೂರ್ಣಿ'ಯ(ಶುಭ್ರ ಅಯ್ಯಪ್ಪ) ಮೇಲೆ ಪ್ರೀತಿ. ಬೆಂಗಳೂರಿನಲ್ಲಿ ಕೆಲಸ ಸಿಕ್ಕಿದಾಗ 'ರಾಮ'ನ ಪ್ರೀತಿಗೆ ಎಳ್ಳುನೀರು ಬಿಟ್ಟು 'ಪೂರ್ಣಿ' ಊರು ತೊರೆಯುತ್ತಾಳೆ. ಊರಿನಲ್ಲೇ ಯುವಜನತೆಗೆ ಕೆಲಸ ನೀಡುತ್ತೇನೆ ಎಂದು ಪ್ರತಿಜ್ಞೆ ತೆಗೆದುಕೊಳ್ಳುವ 'ರಾಮ' ಚುನಾವಣೆಗೆ ನಿಲ್ಲುತ್ತಾನೆ. ಚುನಾವಣೆಗಾಗಿ ಊರಿನವರಿಂದಲೇ ಸಂಗ್ರಹಿಸಿದ ₹30 ಲಕ್ಷ ಹಣವನ್ನು 'ರಾಮ'ನ ಸ್ನೇಹಿತ ಕದ್ದೊಯ್ಯುತ್ತಾನೆ. ಇದರಿಂದ ಊರು ಬಿಟ್ಟು ಮಂಗಳೂರು ಸೇರಿಕೊಳ್ಳುವ 'ರಾಮ'ನಿಗೆ ಸೀತೆ ಸಿಗುತ್ತಾಳೆ. ಮುಂದೆ 'ರಾಮ'ನ ಬದುಕಿನಲ್ಲಾಗುವ ಸರಣಿ ಘಟನೆಗಳೇ ಸಿನಿಮಾದ ಕಥೆ.

'ಆಪರೇಷನ್ ಅಲಮೇಲಮ್ಮ'ದಂತಹ ಹಾಸ್ಯಪ್ರಧಾನ ಸಿನಿಮಾ ಹಾಗೂ 'ಕವಲುದಾರಿ'ಯಂತಹ ಥ್ರಿಲ್ಲರ್ ಸಿನಿಮಾಗಳಲ್ಲಿ ನಟಿಸಿ ಸೈ ಎನಿಸಿಕೊಂಡಿದ್ದ ನಟ ರಿಷಿ, 'ರಾಮನ ಅವತಾರ'ವೆತ್ತಿ ಪ್ರೇಕ್ಷಕರನ್ನು ಕೊಂಚ ನಗಿಸುತ್ತಾರೆ. ರಿಷಿಯ ಹಾವಭಾವಕ್ಕೆ ತಕ್ಕಂತೆ ನಗು ಉಕ್ಕಿಸುವ ಸಂಭಾಷಣೆಗಳ ಕೊರತೆ ಆರಂಭದಿಂದಲೇ ಕಾಡುತ್ತದೆ. ಗಟ್ಟಿಯಾದ ಚಿತ್ರಕಥೆಯ ಕೊರತೆ ಇಡೀ ಸಿನಿಮಾದ ಅವಧಿ ಹೆಚ್ಚಿಸಿದೆ. ಕೆಲವಡೆ ತರ್ಕಕ್ಕೆ ಸಿಗದ ದೃಶ್ಯಗಳೂ ಇವೆ. ಯೂಟ್ಯೂಬ್ ಸರಣಿಗಳಲ್ಲಿ ಪಂಚಿಂಗ್ ಡೈಲಾಗ್ಸ್ ಮುಖಾಂತರ ನಗಿಸುತ್ತಿದ್ದ ನಿರ್ದೇಶಕರು ಈ ಸಿನಿಮಾದಲ್ಲಿ ಅದನ್ನು ಅಳವಡಿಸುವಲ್ಲಿ ವಿಫಲವಾದಂತೆ ಭಾಸವಾಗುತ್ತದೆ. ಸರಳವಾದ ಕಥಾಹಂದರ ಹೊಂದಿರುವ ಸಿನಿಮಾದಲ್ಲಿ ಅನಗತ್ಯವಾದ ಹಲವು ದೃಶ್ಯಗಳನ್ನು ಕಾಣಬಹುದು. ಕ್ಲೈಮ್ಯಾಕ್ಸ್ ದೃಶ್ಯ ಎಳೆದಾಡಿದಂತಿದೆ.

ನಟನೆಯಲ್ಲಿ ರಿಷಿ 'ರಾಮ'ನಾಗಿ ಜೀವಿಸಿದ್ದಾರೆ.

ರಾಮನ ಅವತಾರ

- **ನಿರ್ಮಾಣ:** ಅಮರೇಜ್ ಸೂರ್ಯವಂಶಿ
- **ನಿರ್ದೇಶನ:** ವಿಕಾಸ್ ಪಂಪಾಪತಿ
- **ತಾರಾಗಣ:** ರಿಷಿ, ಪ್ರಣೀತಾ ಸುಭಾಷ್, ಶುಭ್ರ ಅಯ್ಯಪ್ಪ, ಅರುಣ್ ಸಾಗರ್

ಸಂಭಾಷಣೆಯ ಕೊರತೆಯ ನಡುವೆಯೂ ತಮ್ಮ ಮುಗ್ಧ ನಗು, ಹಾವಭಾವದಿಂದ ಪ್ರೇಕ್ಷಕರಿಗೆ ಮನರಂಜನೆ ನೀಡುತ್ತಾರೆ. ಭಾವನಾತ್ಮಕ ಸನ್ನಿವೇಶಗಳಲ್ಲಿ ಭಾವು-ಕರಾಗಿಸಿದ್ದಾರೆ. ಶುಭ್ರ ಅವರ ಪಾತ್ರ ಸಂಕ್ಷಿಪ್ತವಾಗಿದೆ. ಪ್ರಣೀತಾ ಸುಭಾಷ್ ಈ ಸಿನಿಮಾ ಮುಖಾಂತರ ಸಿನಿಪಯಣದ ಎರಡನೇ ಇನಿಂಗ್ಸ್ ಆರಂಭಿಸಿದ್ದಾರೆ. 'ರೀಟ'ಳಾಗಿ ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ಮಂಗಳೂರು ಕನ್ನಡ ಮಾತನಾಡುತ್ತಾ ಅರುಣ್ ಸಾಗರ್ ಖಳನಟನಾಗಿ ಮಿಂಚಿದ್ದಾರೆ. ಭಿನ್ನವಾದ ಕೇಶವಿನ್ಯಾಸ ಅವರ ಪಾತ್ರಕ್ಕೆ ಹಿಡಿಸಿದೆ. ಆದರೆ ಇವರೆಲ್ಲರನ್ನೂ ಅಚ್ಚುಕಟ್ಟಾಗಿ ಕಟ್ಟಿಕೊಡುವಲ್ಲಿ ಚಿತ್ರಕಥೆಯು ಸೋತಿದೆ ಎಂದರೆ ತಪ್ಪಲ್ಲ. ಹಾಡುಗಳು ಇಂಪಾಗಿವೆ.

ಅಭಿಲಾಷ್ ಪಿ.ಎಸ್.

ಪದಬಂಧ 5677

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಸೋಲು ಹೀಗೆ ಬಂದಿದೆಯಲ್ಲಾ? (4)
3. ವಾದ ಕೊನೆಗಿಟ್ಟು ಜ್ಞಾನ ಬೋಧಿಸುವುದು (4)
5. ಸಮಾಧಾನ ಈ ರೀತಿ ಬಂದಿದೆ (3)
6. ಅತಿಯಾದ ಬಯಕೆ (3)
8. ಮರದ ಹತ್ತಿರ ಹೆಡ್ಡನಿದ್ದಾನೆ (3)
9. ವಿನಿಯೋಗದಲ್ಲಿ ವಿರಹವೇ? (3)
10. ಮಲಗುವಾಗ ಕಾಣಿಸಿದ ಸೇವಕ (3)
12. ಕುಣಿಯುತ್ತಾ ಹಾಕಿದ ಜೀರುಗಂಟು (3)
14. ಕರದಲ್ಲಿರುವ ಮೃತದೇಹ (4)
15. ವಾಡಿಕೆಯಂತೆ ಹಾಲು ಮಾರುವವ ಬಂದಿದ್ದಾನೆ (4)

ಮೇಲಿಂದ ಕೆಳಕ್ಕೆ

1. ಉತ್ತಮ ಕುಲದಲ್ಲಿ ಹುಟ್ಟಿದವನು (4)
2. ವರ್ತಕನ ರೂಢಿ (3)
3. ನಾದಿನಿ ಹಾಕಿರುವ ಅಡಿಪಾಯ (3)
4. ದರದೊಳಗಿರುವ ಅಗತ್ಯ (4)
7. ಕೈ ಮೊದಲಿದ್ದಾಗ ಕಾಣಿಸಿದ ಉತ್ಸವ (3)
8. ಹೀಗೆ ತಪ್ಪಿಸಿಕೊಳ್ಳು (3)
9. ಗಣಪತಿಯ ಇನ್ನೊಂದು ಹೆಸರು (4)
11. ಲಗ್ನವಾಗುತ್ತಿರುವ ಗಂಡು (4)
12. ವಠಾರದವರು ಹಿಡಿದಿರುವ ಕೊಡಲಿ (3)
13. ಕೇಡನ್ನು ಮಾಡುವವನು (3)

1			2	■	3			4
	■	■		■		■	■	
	■	■	5			■	■	
6		7	■	■	■	8		
■	■		■	■	■		■	■
9			■	■	■	10		11
	■	■	12		13	■	■	
	■	■		■		■	■	
14				■	15			

5676ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

2.ಎಡಬಿಡಂಗಿ 4.ತಾರ್ಕಿಕ
5.ಡಮರು 7.ರೆಮ
10.ಮಂದ್ರ 11.ಕ್ಷಿತಿಜ
12.ನಾನಾ 13.ಲವ
15.ಲಕುನ 18.ಯಿಡಾಕ
19.ವನಸಂಚಾರ

ಮೇಲಿಂದ ಕೆಳಕ್ಕೆ:

1.ತಂಬಿಗೆ 2.ಎಕರೆ
3.ಗಿಡ 4.ತಾರಾಮಂಡಲ
6.ರುದ್ರನಾಟಕ 8.ಮಕ್ಷಿಕ
9.ಗಂಜಲ 14.ವಯಿರ
16.ನವ 17.ವ್ಯಾಸಂಗ

ಸುಡೊಕು 6062

7	5			1			8	
		6			9			7
4			7				9	6
	7			2	1			8
	6	4	9		8		7	
8		1				9		4
	8			9			4	
1		2				7		3
	4		1		7		2	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6061 ಸುಡೊಕು

5	2	1	4	7	3	9	6	8
7	9	8	6	1	2	3	4	5
4	6	3	5	9	8	7	2	1
1	4	9	2	3	5	6	8	7
2	3	7	1	8	6	4	5	9
8	5	6	7	4	9	2	1	3
6	7	5	9	2	1	8	3	4
3	1	4	8	6	7	5	9	2
9	8	2	3	5	4	1	7	6

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಮೇ 11, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಶುಕ್ಲ ಚತುರ್ಥಿ ಗಂ. 26-05 ನಕ್ಷತ್ರ: ಮೃಗಶಿರ ಗಂ. 10-15 ಯೋಗ: ಸುಕರ್ಮ ಗಂ. 10-03 ಕರಣ: ವಣಿಜ ಗಂ. 14-22, ಮೇಷ ಮಾಸದ 28 ನೇ ದಿನ, ಮಳೆನಕ್ಷತ್ರ: ಭರಣಿ 4.

ರಾಹುಕಾಲ : ಬೆಳಿಗ್ಗೆ 09-00 - 10-30

ಸೂರ್ಯೋದಯ : 06-09 ಸೂರ್ಯಾಸ್ತ : 06-44

ಮುಸ್ಲಿಂ ದಿನಾಂಕ : 01 ಜುಲ್ಕಾಯಿದ್

ಅದೃಷ್ಟ ಸಂಖ್ಯೆ : 1, 6

ಮೇಷ: ಇಷ್ಟು ದಿನ ನೀವು ಲೀಲಾಜಾಲವಾಗಿ ಮಾಡುತ್ತಿದ್ದ ಕೆಲಸಗಳು ಇವತ್ತಿನ ಕಾರ್ಯ ಒತ್ತಡದಿಂದ ಕೈಕಟ್ಟುವಂತಾಗುತ್ತದೆ. ಹೂವು ಬೆಳೆಗಾರರು ಹುಳಗಳ ಕಾಟಕ್ಕೆ ಕಷ್ಟಕ್ಕೆ ಒಳಪಡುವಂಥ ಸಾಧ್ಯತೆಗಳು ಹೆಚ್ಚಾಗಿವೆ.

ವೃಷಭ: ನಿಯಮಿತ ಯೋಗಾಸನ ಹಾಗೂ ಪ್ರಾಣಾಯಮದ ಅಭ್ಯಾಸದಿಂದಾಗಿ ದಿನವು ಲವಲವಿಕೆಯಿಂದಿರಿ. ನಿರ್ಜಲೀಕರಣದಿಂದಾಗಿ ಚರ್ಮವು ಸುಕ್ಕುಗಟ್ಟಿ-ದಂತಾಗಬಹುದು. ಎಚ್ಚರವಹಿಸಿರಿ.

ಮಿಥುನ: ವಿದ್ಯಾರ್ಥಿಗಳು ಸೋಂಬೇರಿತನವನ್ನು ಬಿಟ್ಟು ಅಧ್ಯಯನವನ್ನು ಮಾಡುವುದು ಶ್ರೇಯಸ್ಸಿನ ಪಥದಲ್ಲಿ ಕರೆದುಕೊಂಡು ಹೋಗುತ್ತದೆ. ಅನಿರೀಕ್ಷಿತ ಉಡುಗೊರೆ ದೊರೆಯುವ ಸಂಭವವಿದೆ.

ಕರ್ಕಾಟಕ: ಜೀವನದಲ್ಲಾದ ಕಹಿ ಘಟನೆಗಳನ್ನು ಮರೆತು ನಿತ್ಯದ ಬದುಕನ್ನು ಸರಾಗವಾಗಿ ನಡೆಸುವಿರಿ. ಕಲಾವಿದರಿಗೆ ಒಳ್ಳೆಯ ಅವಕಾಶಗಳು ಕೂಡಿ ಬರುವ ಸಾಧ್ಯತೆಗಳಿವೆ. ರಾಜಕಾರಣದಿಂದ ಅನುಕೂಲವಾಗುತ್ತದೆ.

ಸಿಂಹ: ಮೊದಲು ಕೊಟ್ಟ ಮಾತಿನಂತೆ ಕಾರಣಾಂತರದಿಂದ ನಡೆದುಕೊಳ್ಳಲಾಗದೆ ಮನಸ್ಸಿಗೆ ನೋವಾಗಬಹುದು. ಸುಸ್ಥಿರವಾಗಿರುವ ಆಸ್ತಿಯ ಮೇಲೆ ಇತರರ ಕಣ್ಣು ಬೀಳದಂತೆ ಎಚ್ಚರವಹಿಸುವುದು ಮುಖ್ಯ.

ಕನ್ಯಾ: ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಇತರರ ವಿಷಯಗಳಲ್ಲಿ ಮೂಗು ತೂರಿಸದೆ ಅಧ್ಯಯನದಲ್ಲಿ ಗಮನವಿಡಿ. ನಿಮ್ಮ ಸಾಲ ವಸೂಲಿ ಕಾರ್ಯಕ್ರಮಕ್ಕೆ ಆತಂಕಗಳು ಎದುರಾಗುವ ಸಂಭವವಿದೆ.

ತುಲಾ: ಆದರ್ಶಗಳನ್ನೆ ದರ್ಪಣದಂತೆ ಅನುಸರಿಸುತ್ತಿರುವ ಸಂತತಿಯನ್ನು ಕಂಡು ಹೆಮ್ಮೆ ಎಂದೆನಿಸುತ್ತದೆ. ಬಟ್ಟೆ ಅಂಗಡಿಯವರಿಗೆ ಲಾಭದಾಯಕ ದಿನವಾಗಲಿದೆ. ಪರಿಶ್ರಮಕ್ಕೆ ತಕ್ಕ ಫಲ ದೊರಕಿ ಸಂತಸ ಹೊಂದುವಿರಿ.

ವೃಶ್ಚಿಕ: ಕೆಲಸದ ಗಡಿಬಿಡಿಯಿಂದಾಗಿ ಕೈಕಾಲುಗಳನ್ನು ಪೆಟ್ಟು ಮಾಡಿಕೊಳ್ಳುತ್ತಿ-ರುವ ಸಂಭವವಿದೆ. ನಿಮ್ಮಲ್ಲಿ ನೈತಿಕ ಧೈರ್ಯ ಹೆಚ್ಚುವುದು. ಕೆಲಸದಲ್ಲಿ ಮಕ್ಕಳ ಸಹಕಾರದಿಂದ ಕೆಲಸಗಳು ಅಚ್ಚುಕಟ್ಟಾಗಿ ಮುಗಿಯುವುದು.

ಧನು: ಧರ್ಮದ ವಿರುದ್ಧವಾಗಿ ಇರುವ ಆಚರಣೆಗಳನ್ನು ಮುಂದಿನ ಸಂತತಿಯವರೆ ವಿರೋಧಿಸುತ್ತಾರೆ. ಇಷ್ಟರ ತನಕ ಬಾರದೆ ಇದ್ದ ಸಂಬಂಧಿಕರ ಇಂದಿನ ಆಗಮನವು ಆಶ್ಚರ್ಯದ ಜೊತೆ ಸಂತಸವನ್ನು ತರುತ್ತದೆ.

ಮಕರ: ವಿದ್ಯಾವಂತರಾಗಿ ಅವಿವೇಕದ ಕೆಲಸಗಳನ್ನು ಮಾಡಿಕೊಂಡು ಕುಟುಂಬದವರೆದುರು ತಲೆ ತಗ್ಗಿಸುವಂತೆ ಮಾಡಿಕೊಳ್ಳಬೇಡಿ. ಕೆಲಸದ ಒತ್ತಡದಿಂದ ಶಿರೋವೇದನೆ ಬರಬಹುದು.

ಕುಂಭ: ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸಿ ಧನ್ಯತಾ ಭಾವ ಉಂಟಾಗುತ್ತದೆ. ಬಂಧು ಮಿತ್ರರ ಜೊತೆಯ ಒಡನಾಟ ಸಂತೋಷ ತರುವುದು. ಅಜೀರ್ಣ ಹಾಗೂ ಪಿತ್ತದ ಸಮಸ್ಯೆಗಳು ಕಾಡುವ ಸಾಧ್ಯತೆ ಇದೆ.

ಮೀನ: ಬದಲಾಗದೆ ಇರುವ ಮೊಂಡು ತೀರ್ಮಾನಗಳ ಬಗ್ಗೆ ಕುಟುಂಬದವರಿಂದ ಅಸಮಾಧಾನ ವ್ಯಕ್ತವಾಗಬಹುದು. ತಾಯಿಯ ಬುದ್ಧಿಯ ಮಾತುಗಳನ್ನು ತಪ್ಪಾಗಿ ತೆಗೆದುಕೊಳ್ಳುವುದು ಸರಿಯಲ್ಲ.

ಆಡಳಿತಾರೂಢ ಬಿಜೆಪಿ ಕಣಕ್ಕಿಳಿಸಿರುವ ಅಭ್ಯರ್ಥಿಗಳಲ್ಲಿ ಪಕ್ಷಾಂತರಿಗಳ ಪ್ರಮಾಣ ಶೇ 30

ಲೋಕ ಟಿಕೆಟ್: ಜಿಗಿತ ವೀರರಿಗೆ ಶುಕ್ರದೆಸೆ

● ಮಂಜುನಾಥ ಹೆಬ್ಬಾರ್

ನವದೆಹಲಿ: ಯಾವುದೇ ಚುನಾವಣೆ ಸಮಯದಲ್ಲಿ ಜಿಗಿತವೀರರು ಬೀಸುವ ಗಾಳಿಯತ್ತ ವಾಲುವುದು ಸಹಜ. ಎದುರಾಳಿ ಪಕ್ಷದ ಪ್ರಮುಖ ನಾಯಕರನ್ನು ತಮ್ಮತ್ತ ಸೆಳೆಯಲು ರಾಜಕೀಯ ಪಕ್ಷಗಳು ತಂತ್ರಗಾರಿಕೆ ನಡೆಸುತ್ತವೆ. ಬೇಲಿ ಮೇಲೆ ಕುಳಿತವರಿಗೆ ಬಲೆ ಬೀಸಿ ಸೆಳೆದುಕೊಳ್ಳಲು ಪಕ್ಷಗಳಲ್ಲಿ ಪೈಪೋಟಿ ನಡೆದಿವೆ. ಈ ಸಲದ ಲೋಕಸಭಾ ಚುನಾವಣೆಯಲ್ಲಿ ಟಿಕೆಟ್ ಮೇಲೆ ಕಣ್ಣಿಟ್ಟು ಜಿಗಿತ ವೀರರು ದೊಡ್ಡ ಪ್ರಮಾಣದಲ್ಲಿ ಆಡಳಿತ ಪಕ್ಷದ ಕಡೆಗೆ ಗುಳೆ ಹೋಗಿದ್ದಾರೆ. ಏಳು ಹಂತದ ಚುನಾವಣೆಯ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಬಹುತೇಕ ಪೂರ್ಣಗೊಂಡರೂ ಪಕ್ಷಾಂತರ ಪರ್ವ ಇನ್ನೂ ನಿಂತಿಲ್ಲ.

ಲೋಕಸಭಾ ಚುನಾವಣೆಯಲ್ಲಿ ಆಡಳಿತಾರೂಢ ಬಿಜೆಪಿಯು 438 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಅವರಲ್ಲಿ 135 ಮಂದಿ ಪಕ್ಷಾಂತರಿಗಳು. ಅವರ ಪ್ರಮಾಣ ಶೇ 30ರಷ್ಟು. ಅಂದರೆ, ಪ್ರತಿ ಮೂರು ಅಭ್ಯರ್ಥಿಗಳಲ್ಲಿ ಒಬ್ಬರು ನೆಗೆತ ಶೂರರು. ಭ್ರಷ್ಟಾಚಾರದ ಆರೋಪ ಎದುರಿಸುತ್ತಿರುವ ವಿರೋಧ ಪಕ್ಷಗಳ ಹಲವು ನಾಯಕರನ್ನು ಬರ ಮಾಡಿಕೊಂಡು ಕೇಸರಿ ಪಾಳಯವು ಟಿಕೆಟ್ ಕೊಟ್ಟಿದೆ. ಕೇಂದ್ರ ತನಿಖಾ ಸಂಸ್ಥೆಗಳ ತನಿಖೆಯಿಂದ ಪಾರಾಗಿ 'ಸ್ವಚ್ಛ'ವಾಗಲು ಬಿಜೆಪಿ ಸೇರಿದವರ ಸಂಖ್ಯೆಯೂ ದೊಡ್ಡದಿದೆ. ಜತೆಗೆ, ಕಮಲ ಪಾಳಯವು ಹಲವು 'ಗೆಲ್ಲುವ ಕುದುರೆ'ಗಳಿಗೆ 'ಆಪರೇಷನ್' ಮಾಡಿ ಅವರನ್ನು ಅಖಾಡಕ್ಕೆ ಇಳಿಸಿದೆ.

ಬಿಜೆಪಿಗೆ ಹೋಲಿಸಿದರೆ ಈ ಸಲ ಕಾಂಗ್ರೆಸ್‌ಗೆ ಬಂದವರು ಕಡಿಮೆ. ಕಮಲ ಪಾಳಯವು ಟಿಕೆಟ್ ನಿರಾಕರಿಸಿದ ಬಳಿಕ ಅನ್ಯ ಮಾರ್ಗ ಕಾಣದೆ 'ಕೈ' ಪಾಳಯಕ್ಕೆ ಸೇರ್ಪಡೆಯಾಗಿ ಸ್ಪರ್ಧಿಸಿದವರು ಇದ್ದಾರೆ. ಕಾಂಗ್ರೆಸ್ ಪಕ್ಷವು 327 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಆಖೈರುಗೊಳಿಸಿದೆ. ಅವರಲ್ಲಿ 62 ಮಂದಿ ಜಿಗಿತ ವೀರರು.

ಬಿಜೆಪಿಯ 135 'ಪಕ್ಷಾಂತರಿ' ಅಭ್ಯರ್ಥಿಗಳ ಪೈಕಿ 43 ಮಂದಿ ಈ ಹಿಂದೆ 'ಕೈ'ಪಾಳಯದಲ್ಲಿ ಇದ್ದವರು. ಬಿಜೆಪಿಯಿಂದ ವಲಸೆ ಬಂದ 22 ಅಭ್ಯರ್ಥಿಗಳಿಗೆ ಕಾಂಗ್ರೆಸ್ ಈ ಸಲ ಟಿಕೆಟ್ ಕೊಟ್ಟಿದೆ.

ಕಮಲ ಪಾಳಯದ 'ಆಪರೇಷನ್' ಘಟಕ: ಲೋಕಸಭಾ ಚುನಾವಣೆಯಲ್ಲಿ ಪಕ್ಷವನ್ನು ಸಜ್ಜುಗೊಳಿಸಲು ಬಿಜೆಪಿಯು ಈ ವರ್ಷದ ಜನವರಿಯಲ್ಲೇ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಿಗೆ ವಿವಿಧ ಜವಾಬ್ದಾರಿಗಳನ್ನು ಹಂಚಿಕೆ ಮಾಡಿತ್ತು. ವಿವಿಧ ಪಕ್ಷಗಳ ನಾಯಕರನ್ನು ಮನವೊಲಿಸಿ ಪಕ್ಷಕ್ಕೆ ಸೇರ್ಪಡೆ ಮಾಡಿಕೊಳ್ಳುವ ಹೊಣೆಯನ್ನು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ವಿನೋದ್ ತಾವಡೆ ಅವರಿಗೆ ಪಕ್ಷ ವಹಿಸಿತ್ತು. ಅವರು ಕಳೆದ ಮೂರು ತಿಂಗಳಲ್ಲಿ ಚಾಚೂ ತಪ್ಪದೇ ಈ ಕೆಲಸ ನಿರ್ವಹಿಸಿದರು. ಅವರು ಪಕ್ಷಕ್ಕೆ ಸೇರಿಸಿಕೊಂಡ ನಾಯಕರ ಸಂಖ್ಯೆ ನೂರಕ್ಕೂ ಅಧಿಕ.

ಪಕ್ಷಾಂತರಿಗಳ ಟಿಕೆಟ್ ಪ್ರವರ

	ಲೋಕಸಭಾ ಚುನಾವಣೆಗೆ ಕಣಕ್ಕಿಳಿಸಿದ ಅಭ್ಯರ್ಥಿಗಳು	2014ರ ನಂತರ ಸೇರ್ಪಡೆಯಾಗಿ ಟಿಕೆಟ್ ಪಡೆದವರು	2014ಕ್ಕೆ ಮೊದಲು ಸೇರ್ಪಡೆಯಾಗಿ ಟಿಕೆಟ್ ಗಿಟ್ಟಿಸಿದವರು	ಮೊದಲಿನಿಂದಲೂ ಪಕ್ಷದಲ್ಲಿದ್ದು ಟಿಕೆಟ್ ಪಡೆದವರು
ಕಾಂಗ್ರೆಸ್	327	55	7	265
ಬಿಜೆಪಿ	438	100	35	303

ಮೊದಲು 'ಕೈ'ಗೆ ಈಗ 'ಕಮಲ'ಕ್ಕೆ

1984ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ದಾಖಲೆಯ 404 ಸೀಟುಗಳನ್ನು ಗೆದ್ದುಕೊಂಡಿತ್ತು. ಆ ಚುನಾವಣೆಯಲ್ಲಿ ಬಿಜೆಪಿ ಗೆದ್ದ ಸ್ಥಾನಗಳು ಕೇವಲ ಎರಡು. 1984ರವರೆಗೆ ಕಾಂಗ್ರೆಸ್‌ಗೆ ಸೇರ್ಪಡೆಯಾಗಲು ನಾಯಕರು ದುಂಬಾಲು ಬೀಳುತ್ತಿದ್ದರು. ಚುನಾವಣೆಯಲ್ಲಿ ಪಕ್ಷದ 'ಸ್ಟ್ರೈಕ್ ರೇಟ್' ಸಹ ಚೆನ್ನಾಗಿತ್ತು. 1989ರ ನಂತರ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷವು ಬಹುಮತಕ್ಕೆ ಬೇಕಿರುವ ಸ್ಥಾನಗಳನ್ನು ಗಳಿಸಿಯೇ ಇಲ್ಲ. ಸಹಜವಾಗಿ ಪಕ್ಷದ 'ಸ್ಟ್ರೈಕ್ ರೇಟ್' ಸಹ ಕಡಿಮೆಯಾಯಿತು.

ಸಹಜವಾಗಿ ಕಾಂಗ್ರೆಸ್ ಕಡೆಗೆ ವಲಸೆ ಹೋಗಲು ಮನಸ್ಸು ಮಾಡುವವರ ಸಂಖ್ಯೆಯೂ ಕಡಿಮೆಯಾಯಿತು. ಇನ್ನೊಂದೆಡೆ, 'ಕಮಂಡಲ ಚಳವಳಿ'ಯ ಪರಿಣಾಮವಾಗಿ ಬಿಜೆಪಿ ಏರು ಹಾದಿಯಲ್ಲಿ ಸಾಗಿತು. ಬಿಜೆಪಿಗೆ ಜಿಗಿಯುವವರ ಸಂಖ್ಯೆಯೂ ಹೆಚ್ಚಾಯಿತು. ಕಳೆದೊಂದು ದಶಕದಲ್ಲಿ ಕಾಂಗ್ರೆಸ್‌ನ ನೂರಾರು ನಾಯಕರು ಕಮಲ ಪಾಳಯಕ್ಕೆ ಸೇರಿಕೊಂಡಿದ್ದಾರೆ. ಪ್ರಾದೇಶಿಕ ಪಕ್ಷಗಳ ಹಲವು ನಾಯಕರು 'ಕಮಲ'ದ ಕೊಳದಲ್ಲಿ 'ಸ್ವಚ್ಛ'ಗೊಂಡಿದ್ದಾರೆ. ಜತೆಗೆ, ಅಧಿಕಾರದ ಸುಖವನ್ನೂ ಅನುಭವಿಸಿದ್ದಾರೆ.

ಚುಟುಕು

ಪಂಜಾಬ್: ಪ್ರಮುಖರ ನಾಮಪತ್ರ

ಚಂಡೀಗಢ (ಪಿಟಿಐ): ತರಣ್‌ಜಿತ್ ಸಿಂಗ್ ಸಂಧು, ಚರಣ್‌ಜಿತ್ ಸಿಂಗ್ ಚನ್ನಿ, ಸುಖ್‌ಜಿಂದರ್ ರಾಂಧವಾ, ರವನೀತ್ ಸಿಂಗ್ ಬಿಟ್ಟೂ, ಗುರ್ಮೀತ್ ಸಿಂಗ್ ಖುದಿಯಾನ್ ಮೊದಲಾದ ಪಂಜಾಬ್‌ನ ಪ್ರಮುಖ ರಾಜಕಾರಣಿಗಳು ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಶುಕ್ರವಾರ ನಾಮಪತ್ರ ಸಲ್ಲಿಸಿದರು.

ಅಸ್ಸಾಂನ ದಿಬ್ರುಗಢ ಜೈಲಿನಲ್ಲಿರುವ ಮೂಲಭೂತವಾದಿ ಧರ್ಮಪ್ರಚಾರಕ ಅಮೃತ್‌ಪಾಲ್ ಸಿಂಗ್ ಅವರು ಖಡೂರ್ ಸಾಹಿಬ್ ಕ್ಷೇತ್ರದಿಂದ ಪಕ್ಷೇತರರಾಗಿ ಸ್ಪರ್ಧಿಸಲು ನಾಮಪತ್ರ ಸಲ್ಲಿಸಿದರು.

ಹೋಶಿಯಾರ್‌ಪುರ ಕ್ಷೇತ್ರದಿಂದ ಸ್ಪರ್ಧಿಸುತ್ತಿರುವ ಎಎಪಿಯ ರಾಜಕುಮಾರ್ ಚಬ್ಬೇವಾಲ್ ಮತ್ತು ಕಾಂಗ್ರೆಸ್‌ನ ಯಾಮಿನಿ ಗೋಮರ್ ಅವರೂ ಉಮೇದುವಾರಿಕೆ ಸಲ್ಲಿಸಿದರು.

ಫತೇಗಢ ಸಾಹಿಬ್: ಬಿಜೆಪಿ ಅಭ್ಯರ್ಥಿಯಾಗಿ ಗೇಜಾ ರಾಮ್

ಚಂಡೀಗಢ (ಪಿಟಿಐ): ಪಂಜಾಬ್‌ನ ಫತೇಗಢ ಸಾಹಿಬ್ ಲೋಕಸಭಾ ಕ್ಷೇತ್ರಕ್ಕೆ ಬಿಜೆಪಿಯು ಗೇಜಾ ರಾಮ್ ವಾಲ್ಮೀಕಿ ಅವರನ್ನು ಅಭ್ಯರ್ಥಿಯಾಗಿ ಘೋಷಿಸಿದೆ.

ವಾಲ್ಮೀಕಿ ಅವರು ಪಂಜಾಬ್‌ನ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷರಾಗಿದ್ದಾರೆ. ಈ ಕ್ಷೇತ್ರದಿಂದ ಎಎಪಿಯು ಗುರುಪ್ರೀತ್ ಸಿಂಗ್ ಅವರನ್ನು ಹಾಗೂ ಕಾಂಗ್ರೆಸ್ ಪಕ್ಷವು ಅಮರ್ ಸಿಂಗ್ ಅವರನ್ನು ಅಖಾಡಕ್ಕಿಳಿಸಿದೆ. ಬಿಕ್ರಮ್‌ಜಿತ್ ಸಿಂಗ್ ಖಾಲ್ಸಾ ಅವರು ಶಿರೋಮಣಿ ಅಕಾಲಿ ದಳದಿಂದ ಸ್ಪರ್ಧಿಸುತ್ತಿದ್ದಾರೆ.

ಪಂಜಾಬ್‌ನ 13 ಲೋಕಸಭಾ ಕ್ಷೇತ್ರಗಳಲ್ಲೂ ಬಿಜೆಪಿಯು ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಪಂಜಾಬ್‌ನಲ್ಲಿ ಜೂನ್ 1ರಂದು ಮತದಾನ ನಡೆಯಲಿದೆ.

ಎಂಥಾ ಮಾತು!

ವಿರೋಧ ಪಕ್ಷಗಳ ಅದರಲ್ಲೂ ಕಾಂಗ್ರೆಸ್‌ನ ಮುಖಂಡರು ಪಾಕಿಸ್ತಾನವನ್ನು ಬೆಂಬಲಿಸುವ ಹೇಳಿಕೆ ನೀಡುತ್ತಿದ್ದಾರೆ. ಸನಾತನ ಧರ್ಮವನ್ನು ಹತ್ತಿಕ್ಕಲು ಮತ್ತು ಹಿಂದೂಗಳನ್ನು ಅವಹೇಳನ ಮಾಡಲು ಪ್ರಯತ್ನಿಸುತ್ತಿದ್ದಾರೆ. ಹೆಚ್ಚು ಹೆಂಡತಿಯರು ಮತ್ತು ಮಕ್ಕಳನ್ನು ಹೊಂದಿರುವವರಿಗೆ ಹೆಚ್ಚಿನ ಸಂಪನ್ಮೂಲಗಳನ್ನು ನೀಡಲು ಬಯಸುತ್ತಾರೆ. ಕಾಂಗ್ರೆಸ್ ಪಕ್ಷವು ಒಲೈಕೆ ರಾಜಕಾರಣ ಮಾಡುತ್ತದೆ ಮತ್ತು ಮತ ಪಡೆಯಲು ಪಾಕಿಸ್ತಾನದ ಬೆಂಬಲ ಕೋರುತ್ತಿದೆ. ಇವರು ನಮ್ಮ ಸೇನೆಯನ್ನು ದುರ್ಬಲಗೊಳಿಸಲು ಹಾಗೂ ಅಣ್ವಸ್ತ್ರಗಳನ್ನು ನಾಶಗೊಳಿಸಲು ಬಯಸುತ್ತಿದ್ದಾರೆ

ಅನುರಾಗ್ ಠಾಕೂರ್, ಕೇಂದ್ರ ಸಚಿವ



ಮೂರು ಹಂತಗಳ ಮತದಾನ ನಡೆದ ಬಳಿಕ ಬಿಜೆಪಿ ಮುಖಂಡರ ಆತ್ಮವಿಶ್ವಾಸ ಕುಗ್ಗಿ ಹೋಗಿದೆ. ಈ ಕಾರಣಕ್ಕೆ ಅವರು ಕೀಳುಮಟ್ಟದ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಅಯೋಧ್ಯೆಯಲ್ಲಿ ಮಸೀದಿ ನಿರ್ಮಾಣವಾಗದಿರಲು ಬಿಜೆಪಿಯನ್ನು 400 ಕ್ಷೇತ್ರಗಳಲ್ಲಿ ಗೆಲ್ಲಿಸಿ ಎಂದು ಆ ಪಕ್ಷದ ಮುಖಂಡರು ಹೇಳುತ್ತಿದ್ದಾರೆ. ಸುಪ್ರೀಂಕೋರ್ಟ್ ತೀರ್ಪು ನೀಡಿದ್ದ ವೇಳೆ ಅವರಿಗೆ ಈ ವಿಚಾರದಲ್ಲಿ ಯಾವುದೇ ತಕರಾರುಗಳಿರಲಿಲ್ಲ. ಎಷ್ಟು ಸುಳ್ಳು ಹೇಳುತ್ತೀರಿ ಮತ್ತು ಜನರನ್ನು ದಾರಿ ತಪ್ಪಿಸುತ್ತಿದ್ದೀರಿ?

ಭೂಪೇಶ್ ಬಘೇಲ್, ಕಾಂಗ್ರೆಸ್ ಮುಖಂಡ

ಕ್ಷೇತ್ರ ಮಹಾತ್ಮೆ

ಒಡಿಶಾದ ಕಾಶ್ಮೀರ ಎಂದೇ ಪ್ರಸಿದ್ಧವಾಗಿರುವ ಗುಡ್ಡಗಾಡು ಪ್ರದೇಶಗಳನ್ನು ಹೊಂದಿರುವ ಕೊರಾಪುಟ್ ಲೋಕಸಭಾ ಕ್ಷೇತ್ರದಲ್ಲಿ ತ್ರಿಕೋನ ಸ್ಪರ್ಧೆಗೆ ಕಣ ಸಜ್ಜಾಗಿದೆ. ಆಡಳಿತಾರೂಢ ಬಿಜು ಜನತಾ ದಳವು (ಬಿಜೆಡಿ) ಕೌಶಲ್ಯ ಹಿಕಾಕ ಅವರನ್ನು ಕಣಕ್ಕಿಳಿಸಿದರೆ, ಕಾಂಗ್ರೆಸ್ ಪಕ್ಷವು ಸಪ್ತಗಿರಿ ಉಲಕ ಅವರನ್ನು ಅಖಾಡಕ್ಕಿಳಿಸಿದೆ. ಇವರಿಬ್ಬರಿಗೆ ಪ್ರತಿಸ್ಪರ್ಧಿಯಾಗಿ ಬಿಜೆಪಿಯು ಕಲಿರಾಮ್ ಮಾಝಿ ಅವರನ್ನು ಸ್ಪರ್ಧೆಗಿಳಿಸಿದೆ. 2019ರ ಚುನಾವಣೆಯಲ್ಲಿ ಕಾಂಗ್ರೆಸ್‌ನ ಸಪ್ತಗಿರಿ ಅವರು ಕೇವಲ 3,613 ಮತಗಳ ಅಂತರದಿಂದ ಕೌಶಲ್ಯ ಅವರನ್ನು ಪರಾಭವಗೊಳಿಸಿದ್ದರು. ಬುಡಕಟ್ಟು ಜನರ ಪ್ರಾಬಲ್ಯವಿರುವ ಈ ಕ್ಷೇತ್ರದಲ್ಲಿ ಕುಡಿಯುವ ನೀರಿನ ಸಮಸ್ಯೆ, ರೈತರ ಸಮಸ್ಯೆಗಳೇ ಪ್ರಮುಖ ಚರ್ಚಾ ವಿಷಯವಾಗಿವೆ. ಕಳೆದ ಚುನಾವಣೆಯಲ್ಲಿ ಬಿಜೆಪಿಯು ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತ್ತು. ಕೌಶಲ್ಯ ಅವರು ಆಡಳಿತಾರೂಢ ಸರ್ಕಾರದ ಸಾಧನೆಗಳನ್ನು ಮತ್ತು ಅಭಿವೃದ್ಧಿ ಕಾರ್ಯಗಳನ್ನು ಮುಂದಿಟ್ಟುಕೊಂಡು ಜನರ ಬಳಿಗೆ ತೆರಳುತ್ತಿದ್ದಾರೆ. ರಾಮಮಂದಿರ ನಿರ್ಮಾಣ ಮತ್ತು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಪ್ರಮುಖ ನಿರ್ಧಾರಗಳನ್ನು ಪ್ರಮುಖ ಚುನಾವಣಾ ವಿಚಾರವಾಗಿಸಿ ಬಿಜೆಪಿ ಅಭ್ಯರ್ಥಿ ಮತಯಾಚಿಸುತ್ತಿದ್ದಾರೆ. ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸುವ ಭರವಸೆಯನ್ನೂ ನೀಡುತ್ತಿದ್ದಾರೆ. ಬಿಜೆಡಿಯ ಭದ್ರಕೋಟೆಯಾಗಿದ್ದ ಈ ಕ್ಷೇತ್ರವನ್ನು ಮರಳಿ ಪಕ್ಷದ ತೆಕ್ಕೆಗೆ ಪಡೆಯಲು ಆಡಳಿತಾರೂಢ ಪಕ್ಷದ ಮುಖಂಡರು ಅವಿರತವಾಗಿ ಶ್ರಮಿಸುತ್ತಿದ್ದಾರೆ.

48 ಗಂಟೆ ಒಳಗೆ ಮತದಾನದ ಮಾಹಿತಿಗೆ ಅರ್ಜಿ

ನವದೆಹಲಿ (ಪಿಟಿಐ): ಲೋಕಸಭೆ ಚುನಾವಣೆಯ ಪ್ರತಿ ಹಂತದ ಮತದಾನ ಮುಗಿದ 48 ಗಂಟೆಗಳ ಒಳಗೆ ಮತಗಟ್ಟೆವಾರು ಮತದಾನದ ಸಂಪೂರ್ಣ ಅಂಕಿ ಅಂಶಗಳನ್ನು ತನ್ನ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲು ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಲು ಕೋರಿ ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್(ಎಡಿಆರ್), ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ.

2019ರಲ್ಲಿ ತಾನು ಸಲ್ಲಿಸಿದ್ದ ಪಿಐಎಲ್‌ಗೆ ಸಂಬಂಧಿಸಿದಂತೆ ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುವ ಎಡಿಆರ್, ಎಲ್ಲ ಮತಗಟ್ಟೆಗಳಲ್ಲಿ ದಾಖಲಾದ ಮತದಾನದ ಮಾಹಿತಿಯನ್ನು ತಕ್ಷಣವೇ ಅಪ್‌ಲೋಡ್ ಮಾಡುವಂತೆ ಆಯೋಗಕ್ಕೆ ನಿರ್ದೇಶನ ನೀಡಬೇಕೆಂದು ಕೋರಿದೆ.

ಲೋಕಸಭಾ ಚುನಾವಣೆಯ ಮೊದಲ ಎರಡು ಹಂತಗಳ ಮತದಾನವು ಏ.19 ಮತ್ತು ಏ.26ರಂದು ನಡೆದಿವೆ. ಆದರೆ ಚುನಾವಣಾ ಆಯೋಗವು ಮತದಾನದ ಅಂಕಿ–ಅಂಶವನ್ನು ಏ.30 ರಂದು ಪ್ರಕಟಿಸಿದೆ. ಅಂದರೆ ಮೊದಲ ಹಂತದ ಮತದಾನ ನಡೆದ 11 ದಿನಗಳ ಹಾಗೂ ಎರಡನೇ ಹಂತದ ಮತದಾನ ನಡೆದ ನಾಲ್ಕು ದಿನಗಳ ಬಳಿಕ ದತ್ತಾಂಶವನ್ನು ಪ್ರಕಟಿಸಲಾಗಿದೆ.

'ಅನುಮಾನ, ಅರಾಜಕತೆ ಸೃಷ್ಟಿಸುವ ಯತ್ನ'

ಮತದಾನ ಪ್ರಮಾಣ: ಎಐಸಿಸಿ ಅಧ್ಯಕ್ಷ ಖರ್ಗೆ ಪತ್ರಕ್ಕೆ ಚುನಾವಣಾ ಆಯೋಗ ತೀವ್ರ ಆಕ್ಷೇಪ

ನವದೆಹಲಿ (ಪಿಟಿಐ): ಮತದಾನ ಪ್ರಮಾಣದ ಮಾಹಿತಿ ನೀಡುವ ಬಗ್ಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ವಿರೋಧ ಪಕ್ಷಗಳ ನಾಯಕರಿಗೆ ಬರೆದಿದ್ದ ಪತ್ರಕ್ಕೆ ಚುನಾವಣಾ ಆಯೋಗವು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದು, ಅದು 'ಪಕ್ಷಪಾತದ ನಿರೂಪಣೆ' ಸೃಷ್ಟಿಸುವ ಪ್ರಯತ್ನ ಎಂದು ಅಸಮಾಧಾನ ವ್ಯಕ್ತಪಡಿಸಿದೆ.

ಖರ್ಗೆ ಅವರ ಪತ್ರವು ಚುನಾವಣಾ ಪ್ರಕ್ರಿಯೆಯ ಮೇಲೆ ನಡೆದ ಆಕ್ರಮಣ ಎಂದು ಆಯೋಗ ವ್ಯಾಖ್ಯಾನಿಸಿದೆ.

ಮತದಾನ ಪ್ರಮಾಣವನ್ನು ಬಿಡುಗಡೆ ಮಾಡುವಲ್ಲಿನ ವಿಳಂಬದ ಆರೋಪವನ್ನು ಐದು ಪುಟಗಳ ಅನುಬಂಧಸಹಿತ ಉತ್ತರದ ಮೂಲಕ ನಿರಾಕರಿಸಿರುವ ಚುನಾವಣಾ ಆಯೋಗವು, 'ಅದು ಆಧಾರವಿಲ್ಲದ, ಅವಾಸ್ತವಿಕವಾದ ಮತ್ತು ಗೊಂದಲ ಮೂಡಿಸುವ ಪ್ರಜ್ಞಾಪೂರ್ವಕ ಪ್ರಯತ್ನ' ಎಂದಿದೆ.

'ಖರ್ಗೆ ಅವರಿಗೆ ವಿರೋಧ ಪಕ್ಷಗಳ ನಾಯಕರೊಂದಿಗೆ ವಿಷಯ ಪ್ರಸ್ತಾಪಿಸಲು ಅವಕಾಶವಿದೆ. ಆದರೆ, ಅದನ್ನು ಸಾರ್ವಜನಿಕಗೊಳಿಸಿದ್ದು ಅವರ ಉದ್ದೇಶದ ಬಗ್ಗೆ ಪ್ರಶ್ನೆಗಳನ್ನು ಮೂಡಿಸುತ್ತಿದೆ. ಖರ್ಗೆ ಅವರು ಈ ಬಗ್ಗೆ ಎಚ್ಚರಿಕೆ ವಹಿಸಬೇಕು ಮತ್ತು ಅಂತಹ ಹೇಳಿಕೆಗಳನ್ನು ನೀಡಬಾರದು' ಎಂದು ಆಯೋಗವು ಸಲಹೆ ನೀಡಿದೆ.

ಚುನಾವಣೆ ನಡೆಯುತ್ತಿರುವ ಹಂತದಲ್ಲಿ ಖರ್ಗೆ ಅವರು ಪತ್ರವನ್ನು ಸಾರ್ವಜನಿಕಗೊಳಿಸಿರುವುದು 'ಅತ್ಯಂತ ಅನಪೇಕ್ಷಿತ'ವಾಗಿತ್ತು. ಅದು ತಪ್ಪು ಮಾರ್ಗದರ್ಶನ ಮತ್ತು ಮುಕ್ತ ಹಾಗೂ ಸುಸೂತ್ರ ಚುನಾವಣಾ ಪ್ರಕ್ರಿಯೆಗೆ ತಡೆ ಒಡ್ಡುವಂಥದ್ದಾಗಿತ್ತು ಎಂದು ಆಯೋಗ ಅಭಿಪ್ರಾಯಪಟ್ಟಿದೆ.

'ರಾಷ್ಟ್ರೀಯ ಪಕ್ಷವೊಂದರ ಅಧ್ಯಕ್ಷರು ಚುನಾವಣಾ ಪ್ರಕ್ರಿಯೆ ಮತ್ತು ಅದರ ಹಂತಗಳ ವಿಶ್ವಾಸಾರ್ಹತೆ ಪ್ರಶ್ನಿಸಿ ನೀಡಿರುವ ಹೇಳಿಕೆಗಳು ಮತದಾರರ ಭಾಗವಹಿಸುವಿಕೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವಂಥವಾಗಿವೆ ಮತ್ತು ಅವರನ್ನು ಮತದಾನದಿಂದ ದೂರ ಉಳಿಯುವಂತೆ ಮಾಡಬಲ್ಲ ಮಾರ್ಗವಾಗಿವೆ. ಹಾಗೆಯೇ ಚುನಾವಣಾ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ಅಪಾರ ಪ್ರಮಾಣದ ಸಿಬ್ಬಂದಿಯ ಆತ್ಮಸ್ಥೈರ್ಯ ಕುಗ್ಗಿಸುತ್ತವೆ' ಎಂದು ತಿಳಿಸಿದೆ.

ಖರ್ಗೆ ಅವರು ತಮ್ಮ ಪತ್ರದಲ್ಲಿ, 'ಮತದಾನ ಪ್ರಮಾಣ ಬಿಡುಗಡೆಯ ವಿಳಂಬವು ಅಂತಿಮ ಫಲಿತಾಂಶವನ್ನು ತಿರುಚುವ ಪ್ರಯತ್ನವೇ' ಎಂದು ಪ್ರಶ್ನಿಸಿದ್ದರು.

'ಪತ್ರದಲ್ಲಿನ ಅಂಶಗಳು ಚುನಾವಣಾ ನಿರ್ವಹಣೆಯಂತಹ ಸೂಕ್ಷ್ಮ ವಿಚಾರದ ಬಗ್ಗೆ ಅಪಸ್ವರ ಮೂಡಿಸುವಂತಿದ್ದು, ಮತದಾರರು ಮತ್ತು ರಾಜಕೀಯ ಪಕ್ಷಗಳಲ್ಲಿ ಅನುಮಾನ ಹುಟ್ಟಿಸಬಲ್ಲವು, ಅರಾಜಕತೆ ಸೃಷ್ಟಿಸಬಲ್ಲವು. ಚುನಾವಣಾ ಆಯೋಗಕ್ಕೆ ಅಂಥ ಯಾವುದೇ ಉದ್ದೇಶವಿಲ್ಲ' ಎಂದು ಸ್ಪಷ್ಟೀಕರಣ ನೀಡಿದೆ.

'ಚುನಾವಣೆಯಲ್ಲಿ ಸ್ಪರ್ಧಿಸಿರುವ ಎಲ್ಲ ಅಭ್ಯರ್ಥಿಗಳ ಬಳಿಯೂ ಬೂತ್ ಮಟ್ಟದ ಮತದಾನ ಪ್ರಮಾಣವು ಲಭ್ಯವಿದ್ದು, ಆರೋಪಗಳನ್ನು ಮಾಡುವ ಮುನ್ನ ಕಾಂಗ್ರೆಸ್ ಆ ದತ್ತಾಂಶವನ್ನು ವಿಶ್ಲೇಷಿಸಬೇಕು' ಎಂದು ತಿಳಿಸಿದೆ.

ಆಯೋಗದ ವರ್ತನೆಗೆ ಕಾಂಗ್ರೆಸ್ ವಿಷಾದ

ನವದೆಹಲಿ (ಪಿಟಿಐ): ಮತದಾನ ಪ್ರಮಾಣ ಬಿಡುಗಡೆಯಲ್ಲಿನ ವಿಳಂಬದ ಬಗ್ಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ವಿರೋಧ ಪಕ್ಷಗಳ ನಾಯಕರಿಗೆ ಬರೆದಿದ್ದ ಪತ್ರದ ವಿಚಾರದಲ್ಲಿ ಚುನಾವಣಾ ಆಯೋಗವು ನಡೆದುಕೊಂಡ ರೀತಿಗೆ ಕಾಂಗ್ರೆಸ್ ಪಕ್ಷ ವಿಷಾದ ವ್ಯಕ್ತಪಡಿಸಿದೆ.

'ಎಕ್ಸ್'ನಲ್ಲಿ ಈ ಬಗ್ಗೆ ಪೋಸ್ಟ್ ಮಾಡಿರುವ ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, 'ವ್ಯಾಪಕವಾಗಿ ಕಳವಳಕ್ಕೆ ಕಾರಣವಾಗಿದ್ದ 'ಅತ್ಯಂತ ಸಮರ್ಥನೀಯ' ವಿಚಾರಗಳನ್ನು ಎಐಸಿಸಿ ಅಧ್ಯಕ್ಷರು ಪ್ರಸ್ತಾಪಿಸಿದ್ದರು' ಎಂದು ಹೇಳಿದ್ದಾರೆ.

ಚುನಾವಣಾ ಆಯೋಗದ ಪ್ರತಿಕ್ರಿಯೆಯು ಸರಳವಾಗಿ ಹೇಳಬೇಕೆಂದರೆ 'ವಿವರಣೆಗೆ ನಿಲುಕುವುದಿಲ್ಲ' ಎಂದಿದ್ದಾರೆ.

ಚುನಾವಣಾ ಆಯೋಗವು ಸಾಂವಿಧಾನಿಕ ಸಂಸ್ಥೆಯಾಗಿದೆ. ಅದು ನಿಷ್ಪಕ್ಷಪಾತದಿಂದಿರಬೇಕಾದ ಮತ್ತು ಎಲ್ಲ ರಾಜಕೀಯ ಪಕ್ಷಗಳಿಗೂ ಸಮಾನ ಸ್ಪರ್ಧೆಯ ಅವಕಾಶವನ್ನು ಖಚಿತಪಡಿಸಬೇಕಾದ ಸಂಸ್ಥೆಯಾಗಿದೆ ಎಂದು ಹೇಳಿದ್ದಾರೆ.

'ಪತ್ರದ ವಿಚಾರ ಮತ್ತು ಉದ್ದೇಶ ಎರಡೂ ಸುಕುಮಾರ್ ಸೇನ್, ಟಿ.ಎನ್.ಶೇಷನ್. ಜೆ.ಎಂ. ಲಿಂಗ್ಡೋ ಅವರಂಥ ಪ್ರತಿಭಾಶಾಲಿಗಳು ಆಡಳಿತ ನಡೆಸಿದ ಆಯೋಗದ ಜನಪ್ರಿಯತೆಯ ಮೇಲಿನ ಶಾಶ್ವತ ಮಚ್ಚೆ' ಎಂದು ಅಭಿಪ್ರಾಯಪಟ್ಟಿದ್ದಾರೆ.

ಆಯೋಗ ವಿಮರ್ಶೆಗೆ ಅತೀತವಲ್ಲ: ಕಾಂಗ್ರೆಸ್ ನಾಯಕ ಪಿ.ಚಿದಂಬರಂ ಈ ಬಗ್ಗೆ ಪ್ರತಿಕ್ರಿಯಿಸಿದ್ದು, 'ಚುನಾವಣಾ ಆಯೋಗವು ವಿಮರ್ಶೆಗೆ ಅತೀತವಲ್ಲ. ಆರ್‌ಬಿಐ, ಸಿಎಜಿ, ಹಣಕಾಸು ಆಯೋಗ ಮತ್ತು ಇತರ ಸಂಸ್ಥೆಗಳನ್ನು ವಿಮರ್ಶೆಗೊಳಪಡಿಸಬಹುದಾದರೆ, ಚುನಾವಣಾ ಆಯೋಗವು ವಿಮರ್ಶಾತೀತ ಎಂದು ಏಕೆ ಭಾವಿಸುತ್ತಿದೆ' ಎಂದು ಪ್ರಶ್ನಿಸಿದ್ದಾರೆ.

ನವನೀತ್ ಕೌರ್ ವಿರುದ್ಧ ಪ್ರಕರಣ

ನವನೀತ್ ಕೌರ್

ಹೈದರಾಬಾದ್ (ಪಿಟಿಐ): ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಸಂಬಂಧ ಬಿಜೆಪಿ ನಾಯಕಿ ನವನೀತ್ ಕೌರ್ ವಿರುದ್ಧ ಹೈದರಾಬಾದ್ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಹೈದರಾಬಾದ್‌ನ ಶಾದ್ ನಗರದಲ್ಲಿ ಮೇ 8ರಂದು ಅವರು 'ಕಾಂಗ್ರೆಸ್‌ಗೆ ಹಾಕುವ ಮತ, ಪಾಕಿಸ್ತಾನಕ್ಕೆ ಹಾಕುವ ಮತ' ಎಂದು ಹೇಳಿದ್ದರು ಎನ್ನಲಾಗಿದೆ. ಈ ಸಂಬಂಧ ಚುನಾವಣಾ ಆಯೋಗದ ಫ್ಲೈಯಿಂಗ್ ಸ್ಕ್ವಾಡ್‌ನ ಅಧಿಕಾರಿಯೊಬ್ಬರು ಮೇ 9ರಂದು ದೂರು ನೀಡಿದ್ದರು.

ಮತಬೇಟೆ

ಪಶ್ಚಿಮ ಬಂಗಾಳದ ಜಾದವಪುರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಅನಿರ್ಬನ್ ಗಂಗೂಲಿ ಪರ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಅವರು ಶುಕ್ರವಾರ ನಡೆಸಿದ ರೋಡ್ ಶೋನಲ್ಲಿ ಪಕ್ಷದ ಕಾರ್ಯಕರ್ತರು ಭಾಗವಹಿಸಿದರು –ಪಿಟಿಐ ಚಿತ್ರ

ಅಮೇಠಿ: ಕಾಂಗ್ರೆಸ್ ಅಭ್ಯರ್ಥಿ ಪರ ಪ್ರಿಯಾಂಕಾ ಪ್ರಚಾರ

'ದೇವರ ಹೆಸರಲ್ಲಿ ಬಿಜೆಪಿ ಮತಯಾಚನೆ'

ರಾಯ್‌ಬರೇಲಿ (ಪಿಟಿಐ): ಹಣದುಬ್ಬರ ಮತ್ತು ನಿರುದ್ಯೋಗ ಸಮಸ್ಯೆಯ ಬಗ್ಗೆ ಮಾತನಾಡುವುದನ್ನು ಬಿಟ್ಟು ಬಿಜೆಪಿಯು ದೇವರ ಹೆಸರಿನಲ್ಲಿ ಮತ ಯಾಚಿಸುತ್ತಿದೆ ಎಂದು ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಶುಕ್ರವಾರ ಆರೋಪಿಸಿದರು.

ಉತ್ತರ ಪ್ರದೇಶದ ಅಮೇಠಿ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕಿಶೋರಿ ಲಾಲ್ ಶರ್ಮಾ ಪರ ಪ್ರಚಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ತಮ್ಮ ಸರ್ಕಾರವು 10 ವರ್ಷಗಳಲ್ಲಿ ಮಾಡಿದ ಕೆಲಸವನ್ನು 70 ವರ್ಷಗಳಲ್ಲಿ ಯಾರೂ ಮಾಡಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಸುದ್ದಿ ವಾಹಿನಿಗಳಲ್ಲಿ ಹೇಳುತ್ತಿದ್ದಾರೆ. ಆದರೆ ನಿಜವಾಗಿಯೂ ಪರಿಸ್ಥಿತಿ ಬೇರೆಯೇ ಇದೆ' ಎಂದು ಹೇಳಿದರು.

'ದೇವರು ಮತ್ತು ಧರ್ಮಕ್ಕೆ ನಾವೂ ಗೌರವ ನೀಡುತ್ತೇವೆ. ಆದರೆ ದೇವರ ಹೆಸರಿನಲ್ಲಿ ರಾಜಕೀಯ ಮಾಡುವುದು ತಪ್ಪು' ಎಂದರು.

'ನೀವು ಯಾವುದೇ ಅಭಿವೃದ್ಧಿ ಕೆಲಸವನ್ನು ಮಾಡದೆ, 10 ವರ್ಷಗಳಲ್ಲಿ ಯಾರ ಜೀವನ ಮಟ್ಟದಲ್ಲಿ ಸುಧಾರಣೆ ಕಂಡಿದೆ? ದೊಡ್ಡ ಬಂಡವಾಳಶಾಹಿಗಳ ಸಂಪತ್ತು ವೃದ್ಧಿಸಿದೆ. ಉದ್ಯಮಿಗಳ ₹16 ಲಕ್ಷ ಕೋಟಿ ಸಾಲ ಮನ್ನಾ ಮಾಡಲಾಗಿದೆ. ಆದರೆ ರೈತರ ಸಾಲ ಮನ್ನಾ ಮಾಡಲಿಲ್ಲ' ಎಂದು ಹೇಳಿದರು.

ಜನರಿಗಾಗಿ ಕೆಲಸ ಮಾಡಲು ಕಾಂಗ್ರೆಸ್ ಬಯಸುತ್ತಿದೆ. ಪಕ್ಷವು ಸುಳ್ಳು ಭರವಸೆಗಳನ್ನು ನೀಡುವುದಿಲ್ಲ ಎಂದರು. ಶರ್ಮಾ ಅವರು ಕೇಂದ್ರ ಸಚಿವೆ ಸ್ಮೃತಿ ಇರಾನಿ ಅವರ ವಿರುದ್ಧ ಸ್ಪರ್ಧಿಸುತ್ತಿದ್ದಾರೆ. ಅಮೇಠಿ ಕ್ಷೇತ್ರಕ್ಕೆ ಮೇ 20ರಂದು ಮತದಾನ ನಡೆಯಲಿದೆ.

ಸಂಸ್ಕಾರವಿಲ್ಲದ ಮಾತು: ಕಿಶೋರಿಲಾಲ್ ಶರ್ಮಾ ಅವರನ್ನು ರಾಯ್‌ಬರೇಲಿಯ ಬಿಜೆಪಿ ಅಭ್ಯರ್ಥಿ ದಿನೇಶ್ ಪ್ರತಾಪ್ ಸಿಂಗ್ ಅವರು, 'ಪ್ರಿಯಾಂಕಾ ಗಾಂಧಿಯ ಚಪ್ರಾಸಿ' ಎಂದು ಕರೆದಿರುವುದಕ್ಕೆ ಪ್ರತಿಕ್ರಿಯಿಸಿರುವ ಅವರು, ಆಡಳಿತಾರೂಢ ಪಕ್ಷದ ಮುಖಂಡ ಸಂಸ್ಕಾರವಿಲ್ಲದ ಮಾತುಗಳನ್ನಾಡಿದ್ದಾರೆ ಎಂದು ಟೀಕಿಸಿದರು.

'ಶರ್ಮಾ ಅವರಿಗಿಂತ ಉತ್ತಮ ಅಭ್ಯರ್ಥಿ ಅಮೇಠಿ ಕ್ಷೇತ್ರಕ್ಕೆ ಸಿಗಲ್ಲ. 40 ವರ್ಷಗಳಿಂದ ಕ್ಷೇತ್ರಕ್ಕಾಗಿ ದುಡಿದಿರುವ ಅವರು ನಮ್ಮ ಕುಟುಂಬದವರಂತೆ ಇದ್ದಾರೆ' ಎಂದು ಪಿಟಿಐ ಸುದ್ದಿ ಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಹೇಳಿದರು.

'ಪ್ರಧಾನಿ ಮೋದಿ, ಶಾಗೆ ಆತಂಕ'

ಮಲ್ಲಿಕಾರ್ಜುನ ಖರ್ಗೆ

ಹೈದರಾಬಾದ್ (ಪಿಟಿಐ): ಲೋಕಸಭೆ ಚುನಾವಣೆಯ ಮೂರನೇ ಹಂತದ ಮತದಾನದ ಬಳಿಕ ಪ್ರಧಾನಿ ನರೇಂದ್ರ ಮೋದಿ ಮತ್ತು ಅವರ ಸಂಪುಟ ಸಹೋದ್ಯೋಗಿ ಅಮಿತ್ ಶಾ 'ಆತಂಕ'ಕ್ಕೆ ಒಳಗಾಗಿದ್ದು, ಕಾಂಗ್ರೆಸ್ ಪಕ್ಷವನ್ನು ನಿಂದಿಸಲು ಪ್ರಾರಂಭಿಸಿದ್ದಾರೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಾಗ್ದಾಳಿ ನಡೆಸಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ನಾಯಕರು ಅಭಿವೃದ್ಧಿ ವಿಚಾರ ಮುಂದಿಟ್ಟುಕೊಂಡು ಮತ ಕೇಳುವ ಬದಲು ಕಾಂಗ್ರೆಸ್ ನಾಯಕರನ್ನು ದೂಷಿಸುತ್ತಿದ್ದಾರೆ. ಮಾತ್ರವಲ್ಲ, ಕಾಂಗ್ರೆಸ್ ನಾಯಕರ ಹೇಳಿಕೆಗಳನ್ನು ತಿರುಚುವ ಕೆಲಸ ಮಾಡುತ್ತಿದ್ದಾರೆ ಎಂದು ದೂರಿದರು.

'ಅದಾನಿ ಮತ್ತು ಅಂಬಾನಿ ಅವರು ಕಾಂಗ್ರೆಸ್‌ಗೆ ಟೆಂಪೊ ತುಂಬಾ ಹಣ ನೀಡುತ್ತಿದ್ದಾಗ ಮೋದಿ ಅವರು ಏನು ಮಾಡುತ್ತಿದ್ದರು' ಎಂದು ಪ್ರಶ್ನಿಸಿದ ಅವರು, ಚುನಾವಣೆಯಲ್ಲಿ ಸೋಲು ಎದುರಾಗುವ ಆತಂಕದಲ್ಲಿ ಇದೀಗ ತಮ್ಮ ಪ್ರಣಾಳಿಕೆಯನ್ನು ಬಿಟ್ಟು, ಕಾಂಗ್ರೆಸ್ ವಿರುದ್ಧ ಸುಳ್ಳು ಆರೋಪಗಳನ್ನು ಮಾಡುತ್ತಿದ್ದಾರೆ ಎಂದರು.

'ಟೆಂಪೊದಲ್ಲಿ ಹಣ ಕೊಂಡೊಯ್ಯುತ್ತಿದ್ದಾಗ ನೀವು ಸುಮ್ಮನೆ ನೋಡುತ್ತಾ ನಿಂತಿದ್ದೀರಾ? ಹಣ ಯಾರ ಮನೆಗೆ ಹೋಗಿದೆ ಎಂಬುದನ್ನು ಪತ್ತೆಹಚ್ಚಿ ವಶಕ್ಕೆ ತೆಗೆದುಕೊಳ್ಳಿ. ನಿಮ್ಮ ಸಿಬಿಐ, ಐ.ಟಿ, ಇ.ಡಿ ಎಲ್ಲಿವೆ? ಇಂತಹ ಬಾಲಿಶ ಮಾತುಗಳು ಪ್ರಧಾನಿ ಹುದ್ದೆಯಲ್ಲಿರುವವರಿಗೆ ಸರಿ ಹೊಂದುವುದಿಲ್ಲ' ಎಂದು ಹೇಳಿದರು.

ಕಾಂಗ್ರೆಸ್ ಕೂಡ ತಪ್ಪು ಮಾಡಿದೆ: ರಾಹುಲ್

ಲಖನೌ (ಪಿಟಿಐ): ಕಾಂಗ್ರೆಸ್ ಕೂಡ ತಪ್ಪುಗಳನ್ನು ಮಾಡಿದೆ ಮತ್ತು ಅದು ಭವಿಷ್ಯದಲ್ಲಿ ತನ್ನ ರಾಜಕಾರಣ ಬದಲಿಸಿಕೊಳ್ಳಬೇಕಾದ ಅಗತ್ಯವಿದೆ ಎಂದು ಪಕ್ಷದ ನಾಯಕ ರಾಹುಲ್ ಗಾಂಧಿ ಶುಕ್ರವಾರ ಅಭಿಪ್ರಾಯಪಟ್ಟಿದ್ದಾರೆ.

'ಮುಂದಿನ ದಿನಗಳಲ್ಲಿ ಕಾಂಗ್ರೆಸ್ ತನ್ನ ರಾಜಕಾರಣವನ್ನು ಬದಲಿಸಿಕೊಳ್ಳಬೇಕಿದೆ. ಅದು ಆಗಲೇಬೇಕು. ಕಾಂಗ್ರೆಸ್ ಕೂಡ ತಪ್ಪು ಮಾಡಿದೆ ಎಂದು ನಾನು ಪಕ್ಷ ಸೇರಿದಾಗಿನಿಂದಲೂ ಹೇಳುತ್ತಿದ್ದೇನೆ' ಎಂದರು.

ಲಖನೌದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದ ಅವರು, 'ನಾನು ಪ್ರಧಾನಿಯವರೊಂದಿಗೆ ಚರ್ಚೆಗೆ ಸಿದ್ಧ. ಆದರೆ, ಅದಕ್ಕೆ ಪ್ರಧಾನಿ ಸಿದ್ಧರಿಲ್ಲ' ಎಂದು ಹೇಳಿದರು.

ಕನೌಜ್ ವರದಿ: ಉತ್ತರ ಪ್ರದೇಶದಲ್ಲಿ 'ಇಂಡಿಯಾ' ಮೈತ್ರಿಕೂಟದ ಪರ ಅಲೆ ಬೀಸುತ್ತಿದ್ದು, ನರೇಂದ್ರ ಮೋದಿ ಅವರು ಮತ್ತೊಂದು ಅವಧಿಗೆ ದೇಶದ ಪ್ರಧಾನಿಯಾಗುವುದಿಲ್ಲ ಎಂದು ರಾಹುಲ್ ಗಾಂಧಿ ಪ್ರತಿಪಾದಿಸಿದರು.

ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ಸ್ಪರ್ಧಿಸಿರುವ ಕನೌಜ್ ಕ್ಷೇತ್ರದಲ್ಲಿ ಶುಕ್ರವಾರ ಚುನಾವಣಾ ರ‍್ಯಾಲಿಯಲ್ಲಿ ಪಾಲ್ಗೊಂಡ ಅವರು, 'ಮೋದಿ ಅವರು ಭಾರತದ ಪ್ರಧಾನಿಯಾಗುವುದು ಮುಗಿದ ಅಧ್ಯಾಯ. ನಾನು ಹೇಳುವುದನ್ನು ನೀವು ಬರೆದಿಟ್ಟುಕೊಳ್ಳಿ' ಎಂದರು.

ಎನ್‌ಸಿಪಿ ಶರದ್ ಪವಾರ್ ಬಣ ಮತ್ತು ಶಿವಸೇನಾ ಯುಬಿಟಿಗೆ ಪ್ರಧಾನಿ ಮೋದಿ ಸಲಹೆ

'ಕಾಂಗ್ರೆಸ್ ಜತೆ ಸಾಯುವುದಕ್ಕಿಂತ ಮೈತ್ರಿ ಬದಲಿಸಿ'

ನಂದೂರ್‌ಬಾರ್ (ಪಿಟಿಐ): ಕಾಂಗ್ರೆಸ್ ಜತೆ ಸಾಯುವುದಕ್ಕಿಂತ ಲೋಕಸಭಾ ಚುನಾವಣೆಯ ನಂತರ ಏಕನಾಥ್ ಶಿಂದೆ ಮತ್ತು ಅಜಿತ್ ಪವಾರ್ ಅವರೊಂದಿಗೆ ಸೇರಿಕೊಳ್ಳಿ ಎಂದು ಎನ್‌ಸಿಪಿ (ಶರದ್ ಪವಾರ್ ಬಣ) ಮತ್ತು ಶಿವಸೇನಾಗೆ (ಯುಬಿಟಿ) ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಸಲಹೆ ನೀಡಿದ್ದಾರೆ.

'ಮುಂದಿನ ಕೆಲ ವರ್ಷಗಳಲ್ಲಿ ಹಲವು ಪ್ರಾದೇಶಿಕ ಪಕ್ಷಗಳು ಕಾಂಗ್ರೆಸ್‌ನೊಂದಿಗೆ ಹೆಚ್ಚು ಗುರುತಿಸಿಕೊಳ್ಳಲಿವೆ ಅಥವಾ ತಮಗೆ ಉತ್ತಮ ಎನಿಸಿದರೆ ಅವು ಕಾಂಗ್ರೆಸ್‌ನೊಂದಿಗೆ ವಿಲೀನವಾಗುವ ಆಯ್ಕೆಯನ್ನೂ ಪರಿಗಣಿಸಬಹುದು' ಎಂದು ಶರದ್ ಪವಾರ್ ಇತ್ತೀಚೆಗೆ ಹೇಳಿದ್ದರು.

ಮಹಾರಾಷ್ಟ್ರದ ನಂದೂರ್‌ಬಾರ್ ಜಿಲ್ಲೆಯಲ್ಲಿ ನಡೆದ ಚುನಾವಣಾ ರ‍್ಯಾಲಿಯಲ್ಲಿ ಅದಕ್ಕೆ ಪ್ರತಿಕ್ರಿಯಿಸಿದ ಮೋದಿ, '40–50 ವರ್ಷಗಳಿಂದ ಸಕ್ರಿಯರಾಗಿರುವ ಹಿರಿಯ ನಾಯಕರೊಬ್ಬರು ಬಾರಾಮತಿ ಕ್ಷೇತ್ರದಲ್ಲಿ ಮತದಾನದ ಬಳಿಕ ಚಿಂತೆಗೊಳಗಾಗಿದ್ದು, ಜೂನ್ ನಾಲ್ಕರ ನಂತರ ಸಣ್ಣ ಪಕ್ಷಗಳು ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಕಾಂಗ್ರೆಸ್ ಜತೆ ವಿಲೀನಗೊಳ್ಳಲಿವೆ ಎಂದಿದ್ದಾರೆ. ಅದರ ಅರ್ಥ ನಕಲಿ ಎನ್‌ಸಿಪಿ ಮತ್ತು ಶಿವಸೇನಾ ಪಕ್ಷಗಳು ಕಾಂಗ್ರೆಸ್‌ನೊಂದಿಗೆ ವಿಲೀನಗೊಳ್ಳಲು ನಿರ್ಧರಿಸಿವೆ' ಎಂದು ಹೇಳಿದರು.

ಅವರು ಸರ್ಕಾರಿ ಇಫ್ತಾರ್ ಆಯೋಜಿಸುತ್ತಾರೆ ಮತ್ತು ಭಯೋತ್ಪಾದಕರ ಸಮಾಧಿಗಳನ್ನು ಅಲಂಕರಿಸುತ್ತಾರೆ ಎಂದು ಪ್ರಧಾನಿ ಟೀಕಿಸಿದರು.

ಶಿವಸೇನಾ (ಯುಬಿಟಿ) ಮುಖಂಡ ಸಂಜಯ್ ರಾವುತ್ ಆಡಿದ್ದಾರೆ ಎನ್ನಲಾದ 'ಮೊಘಲ್ ದೊರೆ ಔರಂಗಜೇಬ್‌ನಂತೆ ಮೋದಿ ಅವರನ್ನು ಮಹಾರಾಷ್ಟ್ರದಲ್ಲಿ ಹೂಳುತ್ತೇವೆ' ಎಂಬ ಮಾತಿಗೆ ಪ್ರತಿಕ್ರಿಯಿಸಿದ ಪ್ರಧಾನಿ, 'ನಕಲಿ ಶಿವಸೇನಾದವರು ನನ್ನನ್ನು ಜೀವಂತವಾಗಿ ಹೂಳುವ ಬಗ್ಗೆ ಮಾತನಾಡುತ್ತಿದ್ದಾರೆ. ಅವರು ಜನರ ಬೆಂಬಲ ಕಳೆದುಕೊಂಡಿದ್ದಾರೆ ಮತ್ತು ಅವರ ರಾಜಕೀಯ ಅಂತ್ಯ ಸಮೀಪಿಸಿದೆ. ಭಾರತದ ಜನರೇ ನನಗೆ ಶ್ರೀರಕ್ಷೆ. ಅವರು ನನ್ನನ್ನು ಜೀವಂತವಾಗಿ ಸಮಾಧಿ ಮಾಡಲು ಸಾಧ್ಯವಿಲ್ಲ' ಎಂದು ಹೇಳಿದರು.

ಮಹಾರಾಷ್ಟ್ರದ ನಂದೂರ್‌ಬಾರ್‌ನಲ್ಲಿ ನಡೆದ ಲೋಕಸಭಾ ಚುನಾವಣೆಯ ಪ್ರಚಾರ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಸನ್ಮಾನಿಸಲಾಯಿತು. ಮುಖ್ಯಮಂತ್ರಿ ಏಕನಾಥ ಶಿಂದೆ ಪಾಲ್ಗೊಂಡಿದ್ದರು–ಪಿಟಿಐ ಚಿತ್ರ

'ಬಿಜೆಪಿ ಅಧಿಕಾರ ಉಳಿಸಿಕೊಳ್ಳಲ್ಲ'

ನಾಗ್ಪುರ (ಪಿಟಿಐ): ಎನ್‌ಸಿಪಿ (ಶರದ್ ಪವಾರ್ ಬಣ) ಮತ್ತು ಶಿವಸೇನಾಗೆ (ಯುಬಿಟಿ) ಪ್ರಧಾನಿ ನರೇಂದ್ರ ಮೋದಿ ಸಲಹೆ ನೀಡಿರುವುದು ಅವರು ಲೋಕಸಭಾ ಚುನಾವಣೆಯ ನಂತರ ಅಧಿಕಾರ ಉಳಿಸಿಕೊಳ್ಳುವುದು ಖಾತರಿಯಿಲ್ಲ ಎನ್ನುವುದನ್ನು ಸೂಚಿಸುತ್ತದೆ ಎಂದು ಮಹಾರಾಷ್ಟ್ರ ರಾಜ್ಯ ಕಾಂಗ್ರೆಸ್ ಘಟಕದ ಅಧ್ಯಕ್ಷ ನಾನಾ ಪಟೋಲೆ ಶುಕ್ರವಾರ ಪ್ರತಿಕ್ರಿಯಿಸಿದ್ದಾರೆ.

ಬಿಜೆಪಿಯು ಕೇಂದ್ರದಲ್ಲಿ ಅಧಿಕಾರ ಉಳಿಸಿಕೊಳ್ಳುವುದಿಲ್ಲ ಎಂದು ಕಾಂಗ್ರೆಸ್ ಪಕ್ಷವು ಹೇಳುತ್ತಾ ಬಂದಿದ್ದು, ಪ್ರಧಾನಿ ಅವರ ಸಲಹೆಯು ಅದನ್ನು ದೃಢಪಡಿಸುವಂತಿದೆ ಎಂದಿದ್ದಾರೆ.

'ಮೊದಲು ನೀವು ಅವರ (ಎನ್‌ಸಿಪಿ ಶರದ್ ಪವಾರ್ ಬಣ ಮತ್ತು ಶಿವಸೇನಾ ಯುಬಿಟಿ) ಮನೆಗಳನ್ನು ಒಡೆದಿರಿ, ನಂತರ ಅವರನ್ನು ಬ್ಲ್ಯಾಕ್‌ಮೇಲ್ ಮಾಡಿದಿರಿ. ಈಗ ನಮ್ಮ ಮೈತ್ರಿಕೂಟಕ್ಕೆ ಸೇರಿಕೊಳ್ಳಿ ಎಂದು ಸೂಚಿಸುತ್ತಿದ್ದೀರಿ. ನೀವು ಸ್ವಂತ ಬಲದ ಮೇಲೆ ಅಧಿಕಾರಕ್ಕೆ ಬರುವುದಿಲ್ಲ ಮತ್ತು ನಿಮಗೆ ಅವರ ಬೆಂಬಲ ಬೇಕು ಎಂಬುದು ಇದರ ಅರ್ಥ' ಎಂದು ಹೇಳಿದರು.

ಲೈಂಗಿಕ ದೌರ್ಜನ್ಯ, ಅತ್ಯಾಚಾರ ಆರೋಪ ಪ್ರಕರಣ • ಎಚ್‌.ಡಿ. ರೇವಣ್ಣ ಮನೆಯಲ್ಲಿ ಎಸ್‌ಐಟಿ ಮಹಜರು

ಪ್ರಜ್ವಲ್ ವಿರುದ್ಧ ಮೂರನೇ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಪ್ರಜ್ವಲ್ ರೇವಣ್ಣ

ಬೆಂಗಳೂರು: 'ಮಹಿಳೆಯೊಬ್ಬರ ಮೇಲೆ ಅತ್ಯಾಚಾರ ಎಸಗಿ, ಅದರ ವಿಡಿಯೊ ಚಿತ್ರೀಕರಣ ಮಾಡಿಟ್ಟುಕೊಂಡು ಬೆದರಿಕೆಯೊಡ್ಡುತ್ತಿದ್ದ' ಆರೋಪದಡಿ ಹಾಸನ ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ಮತ್ತೊಂದು ಎಫ್‌ಐಆರ್ ದಾಖಲಾಗಿದ್ದು, ಇದು ಅವರ ಮೇಲಿನ 3ನೇ ಪ್ರಕರಣವಾಗಿದೆ.

ಜೆಡಿಎಸ್ ಶಾಸಕ ಎಚ್‌.ಡಿ. ರೇವಣ್ಣ ಹಾಗೂ ಪ್ರಜ್ವಲ್ ವಿರುದ್ಧ ಹೊಳೆನರಸೀಪುರ ಟೌನ್ ಠಾಣೆಯಲ್ಲಿ ಮೊದಲ ಎಫ್‌ಐಆರ್ ದಾಖಲಾಗಿತ್ತು. ಇದಾದ ನಂತರ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆಯೊಬ್ಬರು ನೀಡಿದ್ದ ದೂರಿನಡಿ ಪ್ರಜ್ವಲ್ ವಿರುದ್ಧ ಎರಡನೇ ಎಫ್‌ಐಆರ್ ದಾಖಲಾಗಿತ್ತು.

ಅತ್ಯಾಚಾರ ಸಂತ್ರಸ್ತೆಯನ್ನು ಅಪಹರಿಸಿದ್ದ ಆರೋಪದಡಿ ಎಚ್‌.ಡಿ. ರೇವಣ್ಣ ಹಾಗೂ ಇತರರ ವಿರುದ್ಧ ಕೆ.ಆರ್.ನಗರ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣ ದಾಖಲಾಗಿದ್ದು, ಇದರ ತನಿಖೆಯನ್ನೂ ಎಸ್‌ಐಟಿ ಅಧಿಕಾರಿಗಳು ಚುರುಕುಗೊಳಿಸಿದ್ದಾರೆ.

ಸಿಐಡಿ ಠಾಣೆಯಲ್ಲಿ ಎಫ್‌ಐಆರ್: 'ಪ್ರಕರಣದ ಸಂತ್ರಸ್ತೆಯೊಬ್ಬರು ಎಸ್‌ಐಟಿ ಅಧಿಕಾರಿಗಳ ಬಳಿ ಹೇಳಿಕೆ ನೀಡಿದ್ದಾರೆ. ಅದೇ ಹೇಳಿಕೆ ಆಧರಿಸಿ ಪ್ರಜ್ವಲ್ ವಿರುದ್ಧ ಸಿಐಡಿ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಪ್ರಜ್ವಲ್ ವಿರುದ್ಧ ಸಿಐಡಿ ಠಾಣೆಯಲ್ಲಿ ದಾಖಲಾಗಿರುವ ಎರಡನೇ ಪ್ರಕರಣ ಇದಾಗಿದೆ' ಎಂದು ಮೂಲಗಳು ಹೇಳಿವೆ.

'ಐಪಿಸಿ 376 –2ಎನ್ (ಮಹಿಳೆ ಮೇಲೆ ಬಲವಂತದಿಂದ ನಿರಂತರ ಅತ್ಯಾಚಾರ), ಐಪಿಸಿ 354–ಎ (ಲೈಂಗಿಕ ಕಿರುಕುಳ), ಐಪಿಸಿ 354–ಬಿ (ಮಹಿಳೆಯನ್ನು ಬಲವಂತದಿಂದ ವಿವಸ್ತ್ರಗೊಳಿಸಿ ಚಿತ್ರೀಕರಣ ಮಾಡಿಕೊಳ್ಳುವುದು) ಹಾಗೂ ಐಪಿಸಿ 506 (ಜೀವ ಬೆದರಿಕೆ) ಆರೋಪದಡಿ ಪ್ರಜ್ವಲ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಆರೋಪ ಸಾಬೀತಾದರೆ, ಗರಿಷ್ಠ 10 ವರ್ಷ ಶಿಕ್ಷೆ ವಿಧಿಸಲು ನ್ಯಾಯಾಲಯಕ್ಕೆ ಅವಕಾಶವಿದೆ' ಎಂದು ತಿಳಿಸಿವೆ.

ರೇವಣ್ಣ ಮನೆಯಲ್ಲಿ ಮಹಜರು: ಅತ್ಯಾಚಾರ ಸಂತ್ರಸ್ತೆಯನ್ನು ಅಪಹರಿಸಿದ್ದ ಪ್ರಕರಣದ ತನಿಖೆ ನಡೆಸುತ್ತಿರುವ ಎಸ್‌ಐಟಿ ಅಧಿಕಾರಿಗಳು, ಆರೋಪಿ ಎಚ್‌.ಡಿ. ರೇವಣ್ಣ ಅವರ ಬಸವನಗುಡಿ ಮನೆಯಲ್ಲಿ ಶುಕ್ರವಾರ ಎರಡನೇ ಸುತ್ತಿನ ಮಹಜರು ನಡೆಸಿದರು.

ಜಿ.ದೇವರಾಜೇಗೌಡ ಪೊಲೀಸರ ವಶಕ್ಕೆ

ಚಿತ್ರದುರ್ಗ: ಪ್ರಜ್ವಲ್ ರೇವಣ್ಣ ಅವರದ್ದು ಎನ್ನಲಾದ ಅಶ್ಲೀಲ ವಿಡಿಯೊಗಳ ಪೆನ್‌ಡ್ರೈವ್ ಹಂಚಿಕೆ ಮಾಡಿದ ಪ್ರಕರಣದಲ್ಲಿ ಬಿಜೆಪಿ ಮುಖಂಡ ಜಿ.ದೇವರಾಜೇಗೌಡ ಅವರನ್ನು ಹಿರಿಯೂರು ಗ್ರಾಮಾಂತರ ಠಾಣೆಯ ಪೊಲೀಸರು ಶುಕ್ರವಾರ ರಾತ್ರಿ ವಶಕ್ಕೆ ಪಡೆದಿದ್ದಾರೆ.

ಬೆಂಗಳೂರಿನಿಂದ ಚಿತ್ರದುರ್ಗ ಕಡೆಗೆ ಕಾರಿನಲ್ಲಿ ಬರುತ್ತಿದ್ದ ಅವರನ್ನು ಹಿರಿಯೂರು ತಾಲ್ಲೂಕಿನ ಕೆ.ಆರ್. ಹಳ್ಳಿ ಗೇಟ್ ಬಳಿ ಪೊಲೀಸರು ವಶಕ್ಕೆ ಪಡೆದರು. ಬಳಿಕ ಗ್ರಾಮಾಂತರ ಪೊಲೀಸ್ ಠಾಣೆಗೆ ಕರೆದೊಯ್ದು ವಿಚಾರಣೆಗೆ ಒಳಪಡಿಸಲಾಯಿತು. ವಿಚಾರಣೆಗೆ ಹಾಜರಾಗಲು ದೇವರಾಜೇಗೌಡ ಅವರಿಗೆ ಎಸ್‌ಐಟಿ ನೋಟಿಸ್ ನೀಡಿತ್ತು. ಬಳಿಕ ಅವರು ತಲೆಮರೆಸಿಕೊಂಡಿದ್ದರು.

ಲೈಂಗಿಕ ದೌರ್ಜನ್ಯದ ದೂರು(ಹಾಸನ ವರದಿ): ಜಿ. ದೇವರಾಜೇಗೌಡ ವಿರುದ್ಧ ಮಹಿಳೆಯೊಬ್ಬರು ಲೈಂಗಿಕ ದೌರ್ಜನ್ಯದ ದೂರು ದಾಖಲಿಸಿದ್ದಾರೆ.

'ನಿವೇಶನ ಮಾರಿಸಿಕೊಡುವ ನೆಪದಲ್ಲಿ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ' ಎಂದು ಏಪ್ರಿಲ್ 1 ರಂದು ಹೊಳೆನರಸೀಪುರ ನಗರ ಠಾಣೆಯಲ್ಲಿ ಸಂತ್ರಸ್ತ ಮಹಿಳೆ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ.

ಪ್ರಕರಣಕ್ಕೆ ಸಂಬಂಧಿಸಿ ದೇವರಾಜೇಗೌಡ, ಹಾಸನದ ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ ಮೇ 8 ರಂದು ಜಾಮೀನು ಅರ್ಜಿ ಸಲ್ಲಿಸಿದ್ದಾರೆ. ವಿಚಾರಣೆಯನ್ನು ಮೇ 15ಕ್ಕೆ ಮುಂದೂಡಲಾಗಿದೆ.

ಈ ಮಧ್ಯೆ ದೇವರಾಜೇಗೌಡರು, ಮಹಿಳೆ ಹಾಗೂ ಆಕೆಯ ಪತಿ ವಿರುದ್ಧ ಹನಿ ಟ್ರ್ಯಾಪ್ ಆರೋಪದಲ್ಲಿ ಬೆಂಗಳೂರಿನ ಹೆಬ್ಬಾಳ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

'ವಿಡಿಯೊ ಅಳಿಸಲು ಸಂತ್ರಸ್ತೆಯರ ಮನವಿ'

ಲೈಂಗಿಕ ದೌರ್ಜನ್ಯದ ಸಂತ್ರಸ್ತೆಯರ ದೂರು ಆಲಿಸಲು ಎಸ್‌ಐಟಿ ಅಧಿಕಾರಿಗಳು ಸಹಾಯವಾಣಿ (6360938947) ಆರಂಭಿಸಿದ್ದಾರೆ. ನಿತ್ಯವೂ ಸಹಾಯವಾಣಿಗೆ ಕರೆ ಮಾಡುತ್ತಿರುವ ಹಲವು ಸಂತ್ರಸ್ತೆಯರು ಹಾಗೂ ಅವರ ಸಂಬಂಧಿಕರು, 'ದಯವಿಟ್ಟು ವಿಡಿಯೊಗಳನ್ನು ಅಳಿಸಿ ಹಾಕಿ. ನಮ್ಮ ಮರ್ಯಾದೆ ಕಾಪಾಡಿ' ಎಂದು ಮನವಿ ಮಾಡುತ್ತಿದ್ದಾರೆ.

ಸಹಾಯವಾಣಿಗೆ ಬರುವ ಕರೆಗಳನ್ನು ಸ್ವೀಕರಿಸಲು ಪ್ರತ್ಯೇಕ ಸಿಬ್ಬಂದಿಯನ್ನು ನಿಯೋಜನೆ ಮಾಡಲಾಗಿದೆ. ನಿತ್ಯವೂ 10ರಿಂದ 20 ಕರೆಗಳು ಬರುತ್ತಿದ್ದು, ಪ್ರತಿಯೊಬ್ಬರ ಮಾತುಗಳನ್ನು ಸಿಬ್ಬಂದಿ ಆಲಿಸುತ್ತಿದ್ದಾರೆ. ಜೊತೆಗೆ, ಸಂತ್ರಸ್ತೆಯರ ಒಪ್ಪಿಗೆ ಪಡೆದು ಹೇಳಿಕೆ ದಾಖಲಿಸಿಕೊಳ್ಳುತ್ತಿದ್ದಾರೆ. ಹೇಳಿಕೆ ನೀಡಲು ಇಚ್ಛಿಸದ ಸಂತ್ರಸ್ತೆಯರಿಗೆ ಸಿಬ್ಬಂದಿ ಧೈರ್ಯ ತುಂಬುತ್ತಿದ್ದಾರೆ. ಯಾವುದೇ ಸಮಯದಲ್ಲಾದರೂ ಕರೆ ಮಾಡಿ ಹೇಳಿಕೆ ನೀಡುವಂತೆ ಕೋರುತ್ತಿದ್ದಾರೆ.

ಸಂತ್ರಸ್ತೆಯೊಬ್ಬರ ಕುಟುಂಬಸ್ಥರು, 'ವಿಡಿಯೊಗಳಿಂದ ಮನೆಯಿಂದ ಹೊರಗೆ ಹೋಗಲು ಆಗುತ್ತಿಲ್ಲ. ರಸ್ತೆ ಹಾಗೂ ಮಾರುಕಟ್ಟೆಯಲ್ಲೆಲ್ಲ ಅವಮಾನ ಮಾಡುತ್ತಿದ್ದಾರೆ. ಹಲವರ ಮೊಬೈಲ್ ಹಾಗೂ ಕಂಪ್ಯೂಟರ್‌ಗಳಲ್ಲಿ ವಿಡಿಯೊಗಳಿವೆ. ಅಂಥವರನ್ನು ಗುರುತಿಸಿ ಕ್ರಮ ಕೈಗೊಳ್ಳಿ' ಎಂದು ಕೋರಿದ್ದಾರೆ.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಎಸ್‌ಎಸ್‌ಎಲ್‌ಸಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಚೆಕ್ ಅಥವಾ ಡಿ.ಡಿ.ರೂಪದಲ್ಲಿ ಹಣವನ್ನು 'Deccan Herald-Prajavani relief Trust'ಗೆ ಕಳುಹಿಸಬಹುದು. ದಾನಿಗಳು ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು dept.finc@printersmysore.co.inಗೆ ಮೇಲ್ ಕಳುಹಿಸುವುದು ಕಡ್ಡಾಯ. ಆಧಾರ್/ಪ್ಯಾನ್ ಹೊಂದಿಲ್ಲದ ದಾನಿಗಳು ತಾವು ನೆಲಸಿರುವ ದೇಶದಲ್ಲಿನ ತೆರಿಗೆದಾತರ ಗುರುತಿನ ಸಂಖ್ಯೆ/ಪಾಸ್‌ಪೋರ್ಟ್ ಸಂಖ್ಯೆ/ಮತದಾರರ ಗುರುತಿನ ಸಂಖ್ಯೆ/ಚಾಲನಾ ಪರವಾನಗಿ ಸಂಖ್ಯೆ ಇದರಲ್ಲಿ ಯಾವುದಾದರೂ ಒಂದನ್ನು ನೀಡುವುದು ಕಡ್ಡಾಯ.

ಆನ್‌ಲೈನ್/ಚೆಕ್ ಮೂಲಕವೂ ಹಣ ವರ್ಗಾಯಿಸಬಹುದು. ₹1,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಸೆಕ್ಷನ್ 80 ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

'Deccan Herald-Prajavani Relief Trust'
Canara Bank, Cantonment Branch
A/c no. - 0404101200385
IFSC code - CNRB0000404
MICR Code - 560015009

ಸೂಚನೆ
ದಾನಿಗಳು ಲಕೋಟೆ ಮೇಲೆ ಶೈಕ್ಷಣಿಕ ನೆರವಿಗೆ ಕೊಡುಗೆ ಎಂದು ನಮೂದಿಸಬೇಕು

ವಿಳಾಸ
ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್
ನಂ. 75, ಮಹಾತ್ಮ ಗಾಂಧಿ ರಸ್ತೆ
ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2023-24ರ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬಹುದು. ಜತೆಗೆ ವಿಳಾಸ, ಮೊಬೈಲ್ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು. ಲಕೋಟೆಯ ಮೇಲೆ '**ಶೈಕ್ಷಣಿಕ ನೆರವಿಗೆ ಅರ್ಜಿ**' ಎಂದು ಬರೆಯಬೇಕು.

'ಪ್ರಜ್ವಲ್ ಪ್ರಕರಣ: ಡಿಕೆಶಿ, ನನ್ನ ಪಾತ್ರವಿಲ್ಲ'

ನಮ್ಮ ಪೊಲೀಸರ ಮೇಲೆ ವಿಶ್ವಾಸವಿದೆ, ಸಿಬಿಐಗೆ ವಹಿಸುವ ಅಗತ್ಯವಿಲ್ಲ: ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದನೆ

ಪ್ರಜಾವಾಣಿ ವಾರ್ತೆ

ಮೈಸೂರು: 'ಹಾಸನ ಸಂಸದ ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ನನ್ನ ಪಾತ್ರ ಏನೂ ಇಲ್ಲ. ಪ್ರಕರಣವನ್ನು ಸಿಬಿಐಗೆ ವಹಿಸುವ ಅಗತ್ಯವೂ ಇಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದಿಸಿದರು.

ಇಲ್ಲಿನ ವಿಮಾನನಿಲ್ದಾಣದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಎಸ್‌ಐಟಿಗೆ ತನಿಖೆ ಜವಾಬ್ದಾರಿ ವಹಿಸಿದ್ದೇವೆ. ನಮ್ಮ ಪೊಲೀಸರ ಬಗ್ಗೆ ವಿಶ್ವಾಸವಿದೆ. ಅವರು ಕಾನೂನು ಪ್ರಕಾರ ತನಿಖೆ ನಡೆಸಿ ವರದಿ ಸಲ್ಲಿಸುವ ನಂಬಿಕೆ ಇದೆ' ಎಂದರು.

'ಅಧಿಕಾರದಲ್ಲಿದ್ದಾಗ ಒಂದೇ ಒಂದು ಪ್ರಕರಣವನ್ನೂ ಸಿಬಿಐಗೆ ವಹಿಸದ ಬಿಜೆಪಿಯವರು, ಅದನ್ನು 'ಕರಪ್ಷನ್ ಬ್ಯೂರೊ ಆಫ್ ಇನ್‌ವೆಸ್ಟಿಗೇಷನ್' ಎಂದು ಕರೆಯುತ್ತಿದ್ದರು. ಮಾಜಿ ಪ್ರಧಾನಿ ಎಚ್‌.ಡಿ. ದೇವೇಗೌಡರು, ಚೋರ್ ಬಚಾವ್ ಸಂಸ್ಥೆ ಎನ್ನುತ್ತಿದ್ದರು. ಈಗ ಅವರೆಲ್ಲರಿಗೂ ಸಿಬಿಐ ಬಗ್ಗೆ ದಿಢೀರ್ ಪ್ರೀತಿ ಬಂದುಬಿಟ್ಟಿರುವುದರ ಅರ್ಥವೇನು?' ಎಂದು ತಿರುಗೇಟು ನೀಡಿದರು.

'ಎಸ್‌ಐಟಿ ತನಿಖೆಯಲ್ಲಿ ಸರ್ಕಾರ ಹಸ್ತಕ್ಷೇಪ ಮಾಡುವುದಿಲ್ಲ. ಕಾನೂನಿಗೆ ವಿರುದ್ಧವಾಗಿ ಮಾಡುವಂತೆ ಪೊಲೀಸರಿಗೆ ಹೇಳಿಲ್ಲ. ಇದು, ಅಂತರ-ರಾಷ್ಟ್ರೀಯ ಮಟ್ಟದ ಪ್ರಕರಣವೇನಲ್ಲ. ನಮ್ಮ ಪೊಲೀಸರ ಮೇಲೆ ಬಿಜೆಪಿ ಹಾಗೂ ಜೆಡಿಎಸ್‌ನವರಿಗೆ ನಂಬಿಕೆ ಇಲ್ಲವೇ? ಅಪರಾಧ ಪ್ರಕರಣಗಳ ತನಿಖೆ ನಡೆಸುವವರಾರು' ಎಂದು ಕೇಳಿದರು.

ಪ್ರಜ್ವಲ್ ಪ್ರಕರಣಕ್ಕೆ ಅಂತರರಾಷ್ಟ್ರೀಯ ಸಂಪರ್ಕವಿದೆ ಎಂಬುದೆಲ್ಲಾ ನಿಜವಲ್ಲ. ಸಿಬಿಐಗೆ ವಹಿಸಲಿ ಎಂದೇ ವಿರೋಧಪಕ್ಷದವರು ಹಾಗೆನ್ನುತ್ತಿದ್ದಾರಷ್ಟೇ

ಸಿದ್ದರಾಮಯ್ಯ, ಮುಖ್ಯಮಂತ್ರಿ

'ಡಿ.ಕೆ. ರವಿ ಸಾವು, ಲಾಟರಿ, ಜಾರ್ಜ್, ಪರೇಶ್ ಮೇಸ್ತ ಪ್ರಕರಣಗಳನ್ನು ನಾವು ಸಿಬಿಐಗೆ ವಹಿಸಿದ್ದೆವು. ಅವೆಲ್ಲವೂ ಏನಾದವು? ಒಂದರಲ್ಲಾದರೂ ಶಿಕ್ಷೆ ಆಗಿದೆಯೇ? ಹಾಗೆಂದು ಸಿಬಿಐ ಮೇಲೆ ನನಗೆ ನಂಬಿಕೆ ಇಲ್ಲವೆನ್ನುವುದಿಲ್ಲ. ಆದರೆ, ನಮ್ಮ ಪೊಲೀಸರ ಮೇಲೆ ನಂಬಿಕೆ ಇದೆ' ಎಂದು ಪ್ರತಿಕ್ರಿಯಿಸಿದರು.

'ಜೆಡಿಎಸ್ ಶಾಸಕ ಎಚ್‌.ಡಿ. ರೇವಣ್ಣ ಬಂಧನ ಪ್ರಕರಣದಲ್ಲಿ ಯಾವ ಹಸ್ತಕ್ಷೇಪವೂ ಇಲ್ಲ. ಏನೂ ಅಪರಾಧ ಮಾಡಿಲ್ಲವೆಂದಾದರೆ, ಅವರೇಕೆ ನಿರೀಕ್ಷಣಾ ಜಾಮೀನಿಗೆ ಅರ್ಜಿ ಸಲ್ಲಿಸಿದ್ದರು, ನ್ಯಾಯಾಲಯವೇಕೆ ಜಾಮೀನು ಕೊಡಲಿಲ್ಲ, ಅವರ ಅರ್ಜಿ ತಿರಸ್ಕೃತಗೊಂಡಿದ್ದೇಕೆ' ಎಂದು ಕೇಳಿದರು.

ಆಯೋಗ ಎಸ್‌ಐಟಿ ಬಳಿ ಮಾಹಿತಿ ಪಡೆಯಲಿ: ಪರಮೇಶ್ವರ್

ಬೆಂಗಳೂರು: 'ಹಾಸನದ ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಪ್ರಕರಣದಲ್ಲಿ ಸಂತ್ರಸ್ತೆಗೆ ಯಾರಾದರೂ ಬೆದರಿಕೆ ಹಾಕಿದ್ದರೆ ರಾಷ್ಟ್ರೀಯ ಮಹಿಳಾ ಆಯೋಗವು ನೇರವಾಗಿ ವಿಶೇಷ ತನಿಖಾ ತಂಡದಿಂದ (ಎಸ್‌ಐಟಿ) ಮಾಹಿತಿ ಪಡೆಯಲಿ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಎಸ್‌ಐಟಿ ಅಧಿಕಾರಿಗಳು ಒತ್ತಡ ಹೇರುತ್ತಿದ್ದಾರೆ ಮತ್ತು ಬೆದರಿಕೆ ಹಾಕಿದ್ದಾರೆ ಎಂದು ಸಂತ್ರಸ್ತೆಯೊಬ್ಬರು ರಾಷ್ಟ್ರೀಯ ಮಹಿಳಾ ಆಯೋಗಕ್ಕೆ ದೂರು ನೀಡಿರುವ ಕುರಿತು ಸುದ್ದಿಗಾರರಿಗೆ ಶುಕ್ರವಾರ ಪ್ರತಿಕ್ರಿಯಿಸಿದ ಅವರು, 'ಅಂತಹ ಯಾವುದೇ ಬೆಳವಣಿಗೆ ನಡೆದಿದ್ದರೆ ಆಯೋಗವು ಎಸ್‌ಐಟಿ ಗಮನಕ್ಕೆ ತರಲಿ. ಎಸ್‌ಐಟಿ ಅಧಿಕಾರಿಗಳು ಸೂಕ್ತ ಕ್ರಮ ಜರುಗಿಸುತ್ತಾರೆ' ಎಂದರು.

'ಪ್ರಕರಣದ ತನಿಖೆಯಲ್ಲಿ ಏನು ಅಗತ್ಯವಿದೆಯೊ ಎಲ್ಲವನ್ನೂ ಎಸ್‌ಐಟಿ ಮಾಡುತ್ತದೆ. ವಿಡಿಯೊ ಹರಿಬಿಟ್ಟಿರುವುದು, ವಕೀಲ ದೇವರಾಜೇಗೌಡ ವಿರುದ್ಧದ ಆರೋಪವೂ ಸೇರಿದಂತೆ ಎಲ್ಲವನ್ನೂ ತನಿಖೆ ನಡೆಸುತ್ತದೆ. ತನಿಖೆಯ ಕುರಿತು ನಿತ್ಯವೂ ಮಾಹಿತಿ ಹಂಚಿಕೊಳ್ಳಲು ಸಾಧ್ಯವಿಲ್ಲ. ಎಚ್‌.ಡಿ. ಕುಮಾರಸ್ವಾಮಿಯವರ ಆರೋಪಗಳಿಗೆಲ್ಲ ಉತ್ತರ ಕೊಡುವುದಿಲ್ಲ' ಎಂದು ಹೇಳಿದರು.

ದಿಕ್ಕು ತಪ್ಪಿಸುವ ಯತ್ನ: ಖಂಡ್ರೆ

'ಪ್ರಜ್ವಲ್ ರೇವಣ್ಣ ವಿರುದ್ಧದ ಪ್ರಕರಣದಲ್ಲಿ ಎಸ್‌ಐಟಿ ನಿಷ್ಪಕ್ಷಪಾತವಾಗಿ ತನಿಖೆ ನಡೆಸುತ್ತಿದೆ. ಆದರೆ, ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್‌.ಡಿ. ಕುಮಾರಸ್ವಾಮಿ ಅವರು ಜನರ ದಿಕ್ಕು ತಪ್ಪಿಸಲು ಸುಳ್ಳು ಆರೋಪಗಳನ್ನು ಮಾಡುತ್ತಿದ್ದಾರೆ' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, 'ಪ್ರಜ್ವಲ್ ರೇವಣ್ಣ ವಿರುದ್ಧದ ಪ್ರಕರಣದಲ್ಲಿ ಯಾರದ್ದೋ ಕೈವಾಡ ಇದೆ ಎನ್ನುವ ಪ್ರಶ್ನೆ ಇಲ್ಲ. ದಾಖಲೆಗಳ ಆಧಾರದಲ್ಲಿ ತನಿಖೆ ನಡೆಯುತ್ತದೆ. ಈ ರಾಷ್ಟ್ರದಲ್ಲಿ ಕಾನೂನು ಎಲ್ಲರಿಗೂ ಒಂದೇ. ಅದರಂತೆ ಕ್ರಮ ಆಗುತ್ತದೆ' ಎಂದರು.

'ದೇವರಾಜೇಗೌಡ ವಿರುದ್ಧ ದೂರು ಬಂದರೆ ಆ ಬಗ್ಗೆಯೂ ಎಸ್‌ಐಟಿ ಅಧಿಕಾರಿಗಳು ತನಿಖೆ ನಡೆಸುತ್ತಾರೆ. ವಿಡಿಯೊ ಪ್ರಸಾರ ಮಾಡುತ್ತಿರುವುದು, ಪ್ರಕರಣದ ಕುರಿತು ಹೇಳಿಕೆಗಳನ್ನು ನೀಡುತ್ತಿರುವುದು ಎಲ್ಲವನ್ನೂ ಎಸ್‌ಐಟಿ ಗಮನಿಸುತ್ತಿದೆ. ಕಾನೂನಿನ ವ್ಯಾಪ್ತಿಯಲ್ಲಿ ಸೂಕ್ತ ಕ್ರಮ ಜರುಗಿಸುತ್ತದೆ' ಎಂದರು.

ಲೋಕದ ಡೊಂಕು ನೀವೇಕೆ ತಿದ್ದುವಿರಿ: ಎಚ್‌ಡಿಕೆಗೆ ಡಿ.ಕೆ. ಶಿವಕುಮಾರ್ ಪ್ರಶ್ನೆ

ಬೆಂಗಳೂರು: 'ಲೋಕದ ಡೊಂಕನ್ನು ನೀವೇಕೆ ತಿದ್ದುವಿರಿ? ಮೊದಲು ನಿಮ್ಮ ಮನೆಯಲ್ಲಿರುವ ಡೊಂಕನ್ನು ತಿದ್ದಿಕೊಳ್ಳಿ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್‌.ಡಿ. ಕುಮಾರಸ್ವಾಮಿ ಅವರನ್ನು ಉದ್ದೇಶಿಸಿ ಹೇಳಿದರು.

ಕುಮಾರಸ್ವಾಮಿ ಅವರು ರಾಜ್ಯಪಾಲರನ್ನು ಭೇಟಿ ಮಾಡಿರುವ ಕುರಿತು ಸುದ್ದಿಗಾರರಿಗೆ ಶುಕ್ರವಾರ ಪ್ರತಿಕ್ರಿಯಿಸಿದ ಅವರು, 'ಲೋಕದ ಡೊಂಕ ನೀವೇಕೆ ತಿದ್ದುವಿರಿ? ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ, ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ ಎಂಬ ಬಸವಣ್ಣನವರ ವಚನವನ್ನು ಅವರು ಅರ್ಥ ಮಾಡಿಕೊಳ್ಳಬೇಕು' ಎಂದರು.

'ಬೇರೆಯವರ ಸಂಗತಿ ಕುಮಾರಸ್ವಾಮಿ ಅವರಿಗೆ ಏಕೆ ಬೇಕು? ಮೊದಲು ಅವರ ಮನೆಯನ್ನು ಸರಿ ಮಾಡಿಕೊಳ್ಳಲಿ. ಅದನ್ನು ಬಿಟ್ಟು ಬೇರೆಯವರ ಬಗ್ಗೆ ಏಕೆ ಮಾತನಾಡುತ್ತೀರಾ? ರಾಜ್ಯಪಾಲರ ಬಳಿ ಹೋಗಿರುವ ಅವರಿಗೆ ಒಳ್ಳೆಯದಾಗಲಿ' ಎಂದು ಹೇಳಿದರು.

ಪೊಲೀಸರು ಉತ್ತರ ನೀಡುತ್ತಾರೆ: ಪ್ರಜ್ವಲ್ ರೇವಣ್ಣ ಪ್ರಕರಣದಲ್ಲಿ ಯಾವುದೇ ಸಂತ್ರಸ್ತೆ ದೂರು ನೀಡಿಲ್ಲ ಎಂಬ ರಾಷ್ಟ್ರೀಯ ಮಹಿಳಾ ಆಯೋಗದ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ಶಿವಕುಮಾರ್, 'ಈಗಲಾದರೂ ಆಯೋಗ ಈ ಪ್ರಕರಣದ ಬಗ್ಗೆ ಪ್ರತಿಕ್ರಿಯೆ ನೀಡಿದೆ ಎಂಬುದೇ ಸಮಾಧಾನದ ಸಂಗತಿ. ಆಯೋಗದ ಹೇಳಿಕೆ ಕುರಿತು ಉತ್ತರ ನೀಡುವುದು ನನ್ನ ಕೆಲಸವಲ್ಲ. ಪೊಲೀಸ್ ಇಲಾಖೆ ಮತ್ತು ತನಿಖಾ ತಂಡದ ಅಧಿಕಾರಿಗಳು ಆಯೋಗಕ್ಕೆ ಉತ್ತರ ನೀಡುತ್ತಾರೆ' ಎಂದರು.

ಪ್ರಜಾವಾಣಿ

ಪತ್ರಿಕೆ ಚಂದಾದಾರಿಕೆ/ವಿತರಣೆಗೆ ಸಂಬಂಧಿಸಿದ ಸಮಸ್ಯೆಗಳಿಗೆ ಸಂಪರ್ಕಿಸಿ

(ವಿಳಂಬವಾಗಿ ಪತ್ರಿಕೆ ತಲುಪುವುದು, ಪತ್ರಿಕೆ ತಲುಪದೇ ಇರುವುದು, ನಿಯಮಿತವಾಗಿ ಪತ್ರಿಕೆ ಪೂರೈಕೆ ಆಗದಿರುವುದು)

: 9008366666

: support@deccanherald.co.in

ಅಶ್ಲೀಲ ವಿಡಿಯೊ ಹಂಚಿಕೆ ಪ್ರಕರಣ ಸಂಸೆ ಗ್ರಾಮದ ಪ್ರಜ್ವಲ್ ಬಂಧನ

ಪ್ರಜಾವಾಣಿ ವಾರ್ತೆ

ಕಳಸ (ಚಿಕ್ಕಮಗಳೂರು): ಅಶ್ಲೀಲ ವಿಡಿಯೊಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡುತ್ತಿದ್ದ ಆರೋಪದಲ್ಲಿ ಮೂಡಿಗೆರೆ ತಾಲ್ಲೂಕಿನ ಸಂಸೆ ಗ್ರಾಮದ ಬಸರೀಕಲ್ಲು ಪ್ರದೇಶದ ಸಿ.ಪ್ರಜ್ವಲ್ (25) ಎಂಬಾತನನ್ನು ಕುದುರೆಮುಖ ಪೊಲೀಸರು ಬಂಧಿಸಿದ್ದಾರೆ.

ಟೆಲಿಗ್ರಾಮ್, ಇನ್‌ಸ್ಟಾಗ್ರಾಮ್, ಫೇಸ್‌ಬುಕ್‌ಗಳಲ್ಲಿ 'ಟ್ರೋಲ್ ದುಶ್ಯಾಸನ' ಎಂಬ ಪೇಜ್ ಮತ್ತು ಚಾನಲ್ ಮೂಲಕ ನಗ್ನ ಮತ್ತು ಅರೆನಗ್ನ ವಿಡಿಯೊಗಳನ್ನು ಅಪ್‌ಲೋಡ್ ಮಾಡಲಾಗುತ್ತಿತ್ತು. ಈ ಬಗ್ಗೆ ಬಂದ ಮಾಹಿತಿ ಆಧರಿಸಿ ಪೇಜ್‌ನ ಅಡ್ಮಿನ್ ಪ್ರಜ್ವಲ್ ವಿರುದ್ಧ ಐ.ಟಿ ಕಾಯ್ದೆ 67 ಮತ್ತು 67(ಎ) ಪ್ರಕಾರ ಪ್ರಕರಣ ದಾಖಲಿಸಲಾಗಿದೆ ಎಂದು ಕುದುರೆಮುಖ ಪೊಲೀಸರು ತಿಳಿಸಿದ್ದಾರೆ.

ವಿಡಿಯೊ ಜತೆಗೆ ಮಹಿಳೆಯರ ಖಾಸಗಿತನ ಮತ್ತು ಗೌರವಕ್ಕೆ ಧಕ್ಕೆ ತರುವ ರೀತಿಯ ಸಾಲುಗಳು ಮತ್ತು ಚಿತ್ರಗಳನ್ನು ಅಪ್‌ಲೋಡ್ ಮಾಡಿರುವುದು ಕಂಡು ಬಂದಿದೆ ಎಂದು ವಿವರಿಸಿದ್ದಾರೆ.

'ನಿರ್ದಿಷ್ಟ ವಿಡಿಯೊ ಹಂಚಿಕೆ ಮಾಡಿದ್ದಾರೆ ಎಂದಲ್ಲ. ಚಾನಲ್ ಮಾಡಿಕೊಂಡು ಬೇರೆ ಬೇರೆ ಅಶ್ಲೀಲ ವಿಡಿಯೊ ಹಂಚುತ್ತಿದ್ದರು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಕ್ರಮ ಅಮಟೆ ತಿಳಿಸಿದ್ದಾರೆ.

ಇನ್ನೂ ನಾಲ್ಕು ದಿನ ಧಾರಾಕಾರ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಮಲೆನಾಡು, ದಕ್ಷಿಣ ಒಳನಾಡು ಹಾಗೂ ಉತ್ತರ ಒಳನಾಡಿನ ಕೆಲವು ಜಿಲ್ಲೆಗಳಲ್ಲಿ ಇದೇ 11ರಿಂದ 14ರ ವರೆಗೆ ಗುಡುಗು ಸಹಿತ ಧಾರಾಕಾರ ಮಳೆ ಮುಂದುವರಿಯುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಮೇ 11ರಂದು ಉತ್ತರ ಕನ್ನಡ, ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಕೊಡಗು, ಮೇ 12ರಂದು ಬೀದರ್, ಕಲಬುರಗಿ, ಬೆಳಗಾವಿ, ಉತ್ತರ ಕನ್ನಡ, ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಕೊಡಗು, ಮೇ 13ರಂದು ಬೀದರ್, ಕಲಬುರಗಿ, ಬೆಳಗಾವಿ, ಉತ್ತರ ಕನ್ನಡ, ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಕೊಡಗು, ರಾಮನಗರ, ಮೈಸೂರು, ಮಂಡ್ಯ ಹಾಗೂ ಮೇ 14ರಂದು ವಿಜಯಪುರ ಜಿಲ್ಲೆಗೆ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ.

ಉಳಿದ ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ತಿಳಿಸಿದೆ. ಭಾರಿ ಮಳೆಯ ಮುನ್ಸೂಚನೆ ನೀಡಿರುವ ಕೆಲವು ಸ್ಥಳಗಳಲ್ಲಿ ಗಂಟೆಗೆ 30ರಿಂದ 40 ಕಿ.ಮೀ ಹಾಗೂ ಮತ್ತೆ ಕೆಲವು ಕಡೆ 40ರಿಂದ 50 ಕಿ.ಮೀ ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆಯಿದೆ.

ರಾಜ್ಯದ ಹಲವೆಡೆ ಧಾರಾಕಾರ ಮಳೆಯಾಗುತ್ತಿರುವ ಪರಿಣಾಮ ಗರಿಷ್ಠ ತಾಪಮಾನವು 2 ರಿಂದ 3 ಡಿಗ್ರಿ ಸೆಲ್ಸಿಯಸ್‌ನಷ್ಟು ಇಳಿಕೆಯಾಗಲಿದೆ.

ಬೆಂಗಳೂರು ನಗರದಲ್ಲಿ ಮುಂದಿನ ಎರಡು ದಿನ ಮೋಡ ಕವಿದ ವಾತಾವರಣ ಇರಲಿದೆ. ಕೆಲವು ಪ್ರದೇಶದಲ್ಲಿ ಸಂಜೆ ಅಥವಾ ರಾತ್ರಿ ವೇಳೆ ಮಳೆ ಮುಂದುವರಿಯುವ ಸಾಧ್ಯತೆಯಿದೆ.

ನಗರದಲ್ಲಿ ಗರಿಷ್ಠ ತಾಪಮಾನ 32 ಡಿಗ್ರಿ ಸೆಲ್ಸಿಯಸ್, ಕನಿಷ್ಠ 21 ಡಿಗ್ರಿ ಸೆಲ್ಸಿಯಸ್ ದಾಖಲಾಗುವ ಸಾಧ್ಯತೆಯಿದೆ. ರಾಜ್ಯದಲ್ಲೇ ಗರಿಷ್ಠ ತಾಪಮಾನ ಶುಕ್ರವಾರ 40.6 ಡಿಗ್ರಿ ಸೆಲ್ಸಿಯಸ್ ಬಾಗಲಕೋಟೆ ಜಿಲ್ಲೆಯಲ್ಲಿ ದಾಖಲಾಗಿತ್ತು.

ಮಳೆ ಪ್ರಮಾಣ: ಕಳೆದ 24 ಗಂಟೆಯಲ್ಲಿ ಬೆಂಗಳೂರು ನಗರ ಜಿಲ್ಲೆಯಲ್ಲಿ 7 ಸೆಂ.ಮೀ, ಮೈಸೂರು ಜಿಲ್ಲೆಯ ಹುಣಸೂರಿನಲ್ಲಿ 5 ಸೆಂ.ಮೀ, ಗದಗ ಜಿಲ್ಲೆಯ ಬೆಳಟ್ಟಿ, ಕೊಡಗಿನ ಕುಶಾಲನಗರ, ರಾಮನಗರ ಜಿಲ್ಲೆಯ ಮಾಗಡಿ, ತುಮಕೂರು ಜಿಲ್ಲೆಯ ಬರಗೂರಿನಲ್ಲಿ ತಲಾ 4 ಸೆಂ.ಮೀ, ಮಂಡ್ಯದ ಮದ್ದೂರು, ಕೊಡಗಿನ ನಾಪೋಕ್ಲು, ಮೈಸೂರಿನ ಸರಗೂರು, ಹಾಸನದ ಸಕಲೇಶಪುರ, ಚಿತ್ರದುರ್ಗದ ನಾಯಕನಹಟ್ಟಿ 2, ಯಾದಗಿರಿಯ ನಾರಾಯಣಪುರದಲ್ಲಿ 1 ಸೆಂ.ಮೀ ಮಳೆ ಸುರಿದಿತ್ತು.

ನಂಜನಗೂಡು ತಾಲ್ಲೂಕಿನ ನಗರ್ಲೆ ಗ್ರಾ.ಪಂ. ವ್ಯಾಪ್ತಿಯ ಬಸವನಪುರ ಗ್ರಾಮದಲ್ಲಿ ಗುರುವಾರ ರಾತ್ರಿ ಬಿದ್ದ ಮಳೆಗೆ ಬೃಹತ್ ಅರಳಿ ಮರ ಉರುಳಿ ಬಿದ್ದಿದೆ

ನೆಟ್ಟಾರು ಹತ್ಯೆ: ಇಬ್ಬರು ಎನ್‌ಐಎ ವಶಕ್ಕೆ

ಪ್ರಜಾವಾಣಿ ವಾರ್ತೆ

ಹಾಸನ: ದಕ್ಷಿಣ ಕನ್ನಡ ಜಿಲ್ಲೆಯ ಬಿಜೆಪಿ ಮುಖಂಡ ಬೆಳ್ಳಾರೆ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣ ಸಂಬಂಧ, ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಆನೆಮಹಲ್‌ನಲ್ಲಿ ಶುಕ್ರವಾರ ರಾಷ್ಟ್ರೀಯ ತನಿಖಾ ಏಜೆನ್ಸಿ (ಎನ್‌ಐಎ) ತಂಡವು ಇಬ್ಬರನ್ನು ವಶಕ್ಕೆ ಪಡೆದಿದೆ.

ಆರೋಪಿಗಳಾದ ಸುಳ್ಯದ ಮೊಹಮ್ಮದ್ ಮುಸ್ತಾಫಾ ಅಲಿಯಾಸ್ ಮುಸ್ತಾಫ್ ಪೈಚಾರು, ಸೋಮವಾರಪೇಟೆಯ ಇಲಿಯಾಸ್ ಎಂಬುವವರನ್ನು ಅಧಿಕಾರಿಗಳು ಬೆಂಗಳೂರಿಗೆ ಕರೆದೊಯ್ದರು.

ಇಬ್ಬರಿಗೂ ಆಶ್ರಯ ನೀಡಿದ್ದ ಆರೋಪದ ಮೇಲೆ ಆನೆಮಹಲ್‌ನ ಸಿರಾಜ್ ಎಂಬುವವರನ್ನು ಸ್ಥಳೀಯ ಪೊಲೀಸರ ವಶಕ್ಕೆ ನೀಡಲಾಗಿದೆ.

ಶುಂಠಿ ಬೆಳೆಯಲು ಸಿರಾಜ್ ಅವರಿಂದ ಜಮೀನು ಪಡೆದಿದ್ದ ಆರೋಪಿಗಳು ಆನೆಮಹಲ್‌ನಲ್ಲಿಯೇ ಉಳಿದುಕೊಂಡಿದ್ದರು. ಆ ಬಗ್ಗೆ ಸ್ಪಷ್ಟ ಮಾಹಿತಿ ಪಡೆದ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ,ಈ ಆರೋಪಿಗಳನ್ನು ವಶಕ್ಕೆ ಪಡೆದರು.

ಬಹುಮಾನ ಘೋಷಿಸಿದ್ದ ಎನ್‌ಐಎ

ಮಂಗಳೂರು: ಪ್ರವೀಣ್ ನೆಟ್ಟಾರು ಹತ್ಯೆಗೆ ಸಂಬಂಧಿಸಿ ವಶಕ್ಕೆ ಪಡೆದ ಇಬ್ಬರಲ್ಲಿ ಸುಳ್ಯದ ಮೊಹಮ್ಮದ್ ಮುಸ್ತಾಫಾ ಅಲಿಯಾಸ್ ಮುಸ್ತಾಫ್ ಪೈಚಾರುಗೆ ಎನ್‌ಐಎ ಲುಕ್ ಔಟ್ ನೋಟಿಸ್ ಹೊರಡಿಸಿತ್ತು. ಈತನ ಪತ್ತೆಗೆ ನೆರವಾದವರಿಗೆ ₹5 ಲಕ್ಷ ಬಹುಮಾನ ನೀಡುವುದಾಗಿ 2022 ನವೆಂಬರ್ ಹಾಗೂ 2023 ಜನವರಿಯಲ್ಲಿ ಎರಡು ಬಾರಿ ಪ್ರಕಟಣೆ ಹೊರಡಿಸಿತ್ತು.

ಹತ್ಯೆ ಪ್ರಕರಣದಲ್ಲಿ ಈ ಇಬ್ಬರು ಮುಖ್ಯ ಆರೋಪಿಗಳು ಎನ್ನಲಾಗುತ್ತಿದ್ದು, ಹತ್ಯೆ ಸಂಚಿನ ಬಗ್ಗೆ ಮಹತ್ವದ ಮಾಹಿತಿ ಲಭ್ಯವಾಗುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

2022ರ ಜುಲೈ 26ರಂದು ಬೆಳ್ಳಾರೆಯಲ್ಲಿ ಅಂಗಡಿ ಎದುರು ಪ್ರವೀಣ್ ನೆಟ್ಟಾರು ಹತ್ಯೆ ನಡೆದಿತ್ತು. ಈ ಪ್ರಕರಣದ ಸಂಬಂಧ ಈಗಾಗಲೇ 10ಕ್ಕೂ ಹೆಚ್ಚು ಆರೋಪಿಗಳನ್ನು ಬಂಧಿಸಲಾಗಿದೆ.

ದಾಭೋಲ್ಕರ್ ಹತ್ಯೆ: ಅಪರಾಧಿಗಳಿಗೆ ಶಿಕ್ಷೆ

ಒಂದನೇ ಪುಟದಿಂದ...

'ಈ ಪ್ರಕರಣದಲ್ಲಿ ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ (ಯುಎಪಿಎ), ಭಯೋತ್ಪಾದನೆ ನಿಗ್ರಹ ಕಾಯ್ದೆಯ ಕೆಲ ಸೆಕ್ಷನ್‌ಗಳಡಿ ಆರೋಪಗಳನ್ನು ಹೊರಿಸಲಾಗಿತ್ತು. ಆದರೆ, ಸಂಬಂಧಪಟ್ಟ ಅಧಿಕಾರಿಯ ನಿರ್ಲಕ್ಷ್ಯದಿಂದಾಗಿ ಈ ಆರೋಪಗಳನ್ನು ರುಜುವಾತುಪಡಿಸಲಾಗಿಲ್ಲ' ಎಂದು ನ್ಯಾಯಾಲಯ ಹೇಳಿದೆ.

'ಪ್ರಕರಣದಲ್ಲಿ ತಾವ್ಡೆ ಪ್ರಮುಖ ಸಂಚುಕೋರ ಎಂದು ಆರೋಪಿಸಲಾಗಿತ್ತು. ಅವರ ಮೇಲೆ ಸಂಶಯ ಪಡುವುದಕ್ಕೆ ಸಾಕಷ್ಟು ಅವಕಾಶವೂ ಇತ್ತು. ಆದರೆ, ಈ ಸಂಶಯವನ್ನು ಸಾಕ್ಷ್ಯವನ್ನಾಗಿ ಪರಿವರ್ತಿಸುವಲ್ಲಿ ಪ್ರಾಸಿಕ್ಯೂಷನ್ ವಿಫಲವಾಯಿತು. ಈ ಕಾರಣದಿಂದಲೇ ಅವರನ್ನು ಎಲ್ಲ ಆರೋಪಗಳಿಂದ ಮುಕ್ತರನ್ನಾಗಿ ಮಾಡಲಾಯಿತು' ಎಂದೂ ಹೇಳಿದೆ.

'ಭಾವೆ ಮತ್ತು ಪುಣಾಳೇಕರ್ ವಿರುದ್ಧ ಸಂಶಯ ಹೊಂದಲು ಅವಕಾಶವಿದ್ದರೂ ಸಾಕ್ಷ್ಯಗಳು ಇರಲಿಲ್ಲ. ಸಾಕ್ಷ್ಯಗಳ ಕೊರತೆ ಕಾರಣದಿಂದಾಗಿ ಅವರನ್ನು ಕೂಡ ಆರೋಪಮುಕ್ತಗೊಳಿಸಲಾಗಿದೆ' ಎಂದು ನ್ಯಾಯಾಧೀಶ ಜಾಧವ ಹೇಳಿದರು.

'ಅಂದುರೆ ಹಾಗೂ ಕಳಸ್ಕರ್ ವಿರುದ್ಧ ಐಪಿಸಿ ಸೆಕ್ಷನ್ 302 (ಕೊಲೆ), 34 (ಒಂದೇ ಉದ್ದೇಶದಿಂದ ಕೃತ್ಯ ಎಸಗಲು ಹಲವರು ಒಟ್ಟುಗೂಡಿರುವುದು) ಅಡಿ ಮಾಡಲಾಗಿದ್ದ ಆರೋಪಗಳನ್ನು ಯಾವುದೇ ಸಂಶಯಕ್ಕೆ ಆಸ್ಪದವಿಲ್ಲದಂತೆ ಸಾಬೀತುಪಡಿಸಲಾಗಿದೆ' ಎಂದೂ ತಿಳಿಸಿದರು.

ಇದಕ್ಕೂ ಮುನ್ನ, 'ಈ ಪ್ರಕರಣದಲ್ಲಿ ಅಪರಾಧಿಗಳಿಗೆ ಮರಣದಂಡನೆ ಹಾಗೂ ಜೀವಾವಧಿ ಶಿಕ್ಷೆ ನೀಡುವುದಕ್ಕೆ ಅವಕಾಶ ಇದೆ. ಈ ಕುರಿತು, ಪ್ರಾಸಿಕ್ಯೂಷನ್ ಮತ್ತು ಪ್ರತಿವಾದಿಗಳ ಪರ ವಕೀಲರು ವಾದ ಮಂಡಿಸಬಹುದು' ಎಂದು ನ್ಯಾಯಾಧೀಶರು ಹೇಳಿದರು.

ಆರೋಪಿಗಳ ಪರ ವಾದ ಹಾಜರಿದ್ದ ವಕೀಲ ವೀರೇಂದ್ರ ಈಚಲಕರಂಜಿಕರ್, 'ಅಪರೂಪದಲ್ಲಿಯೇ ಅಪರೂಪ ಎಂಬ ವರ್ಗದಡಿ ಈ ಪ್ರಕರಣ ಬರುವುದಿಲ್ಲ' ಎಂದು ನ್ಯಾಯಾಲಯಕ್ಕೆ ತಿಳಿಸಿದರು.

'ಅಪರಾಧಿಗಳಿಗೆ ಮರಣದಂಡನೆ ವಿಧಿಸುವಂತೆ ಕೋರುವುದಿಲ್ಲ' ಎಂದು ಸರ್ಕಾರಿ ವಕೀಲ ಪ್ರಕಾಶ ಸೂರ್ಯವಂಶಿ ಹೇಳಿದರು.

ಎರಡೂ ಕಡೆಯವರ ವಾದಗಳನ್ನು ಆಲಿಸಿದ ನ್ಯಾಯಾಧೀಶರು, ಶಿಕ್ಷೆ ಪ್ರಕಟಿಸಿ ಆದೇಶಿಸಿದರು.

'ವಿಷಾದನೀಯ': 'ಪ್ರಕರಣದ ವಿಚಾರಣೆ ವೇಳೆ, ದಾಭೋಲ್ಕರ್ ಅವರ ಹತ್ಯೆಯನ್ನು ಸಮರ್ಥಿಸಿ ಕೆಲ ಹೇಳಿಕೆಗಳನ್ನು ನೀಡಿರುವುದು ವಿಷಾದನೀಯ' ಎಂದು ನ್ಯಾಯಾಧೀಶರು ಹೇಳಿದರು.

'ಯಾವುದೇ ವ್ಯಕ್ತಿಯನ್ನು ಕೊಲೆ ಮಾಡುವುದು ದುರದೃಷ್ಟಕರ ಸಂಗತಿ. ಕೊಲೆಯನ್ನು ಸಮರ್ಥಿಸಿ ಪ್ರತಿವಾದಿಗಳ ಪರ ವಕೀಲರೂ ಕೆಲ ಹೇಳಿಕೆ ನೀಡಿದ್ದು ಸಹ ವಿಷಾದನೀಯ. ಈ ಬಗ್ಗೆ ಆರೋಪಿಗಳ ಪರ ವಕೀಲರು ಅವಲೋಕನ ಮಾಡಬೇಕು' ಎಂದು ಅಭಿಪ್ರಾಯಪಟ್ಟರು.

ಪುತ್ರಿ ಪ್ರತಿಕ್ರಿಯೆ: ತಂದೆಯ ಹತ್ಯೆ ಪ್ರಕರಣ ಕುರಿತ ತೀರ್ಪಿಗೆ ಪ್ರತಿಕ್ರಿಯಿಸಿರುವ ದಾಭೋಲ್ಕರ್ ಪುತ್ರಿ ಮುಕ್ತಾ, 'ಕೊಲೆಯ ಪ್ರಮುಖ ಸಂಚುಕೋರರು ಮುಕ್ತರಾಗಿದ್ದಾರೆ. ಶಿಕ್ಷಿತರು ಈ ನ್ಯಾಯಾಲಯದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಬಹುದು' ಎಂದರು.

ಪುತ್ರ ಹಾಮಿದ್ ದಾಭೋಲ್ಕರ್, 'ಹತ್ಯೆ ಪ್ರಮುಖ ಸಂಚುಕೋರರನ್ನು ಶಿಕ್ಷೆಗೆ ಗುರಿಪಡಿಸದಿದ್ದರೆ ಇಂತಹ ಘಟನೆಗಳು ನಡೆಯುತ್ತಲೇ ಇರುತ್ತವೆ' ಎಂದು ಪ್ರತಿಕ್ರಿಯಿಸಿದರು.

'ದಾಭೋಲ್ಕರ್ ಅವರನ್ನು ಅವರು ತಳೆದಿದ್ದ ವೈಚಾರಿಕ ನಿಲುವುಗಳ ಕಾರಣದಿಂದಾಗಿ ಹತ್ಯೆ ಮಾಡಲಾಗಿದೆ ಎಂಬುದು ಆರೋಪಪಟ್ಟಿಯಿಂದ ಗೊತ್ತಾಗುತ್ತದೆ' ಎಂದೂ ಹಾಮಿದ್ ಹೇಳಿದರು.

ಪ್ರಕರಣದ ವಿಚಾರಣೆ ವೇಳೆ, ಪ್ರಾಸಿಕ್ಯೂಷನ್ 20 ಸಾಕ್ಷಿಗಳನ್ನು ಹಾಗೂ ಪ್ರತಿವಾದಿಗಳ ಪರ ವಕೀಲರು ಇಬ್ಬರು ಸಾಕ್ಷಿಗಳನ್ನು ಪ್ರಶ್ನಿಸಿದ್ದರು.

ಜಯಬಸವ ದೇವರು ಎಂಬುದಾಗಿ ನಾಮಕರಣ, ಆದಿಚುಂಚನಗಿರಿ ಗುರುಕುಲದಲ್ಲಿ ಶಿಕ್ಷಣ

ಮಾದಾರ ಚನ್ನಯ್ಯ ಗುರುಪೀಠಕ್ಕೆ ವಟು ಸ್ವೀಕಾರ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಇಲ್ಲಿನ ಮಾದಾರ ಚನ್ನಯ್ಯ ಗುರುಪೀಠಕ್ಕೆ ಪೀಠಾಧ್ಯಕ್ಷ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, 9 ವರ್ಷದ ಬಾಲಕನನ್ನು ವಟುವಾಗಿ ಸ್ವೀಕರಿಸಿದರು. ಪೂರ್ವಾಶ್ರಮದಲ್ಲಿ ಲಕನ್ ಎಂದು ಗುರುತಿಸಿಕೊಂಡಿದ್ದ ವಟುವಿಗೆ ಜಯಬಸವ ದೇವರು ಎಂಬುದಾಗಿ ನಾಮಕರಣ ಮಾಡಲಾಯಿತು.

ಮಠದ ಬಸವಾದಿ ಶರಣರ ಧರ್ಮಸಂಸತ್ ಸಭಾಭವನದಲ್ಲಿ ಶುಕ್ರವಾರ ವಟು ಸ್ವೀಕಾರದ ಧಾರ್ಮಿಕ ಕೈಂಕರ್ಯಗಳು ನೆರವೇರಿದವು.

ವಿಭೂತಿ ಧಾರಣೆ, ಇಷ್ಟಲಿಂಗ ಪೂಜೆ, ಪಾದಪೂಜೆ ಸೇರಿ ಬಸವ ತತ್ವದ ಪ್ರಕಾರ ಧಾರ್ಮಿಕ ವಿಧಿವಿಧಾನಗಳು ನಡೆದವು. ರಾಜ್ಯದ ಹಲವು ಮಠಾಧೀಶರು ಈ ಕ್ಷಣಕ್ಕೆ ಸಾಕ್ಷಿಯಾದರು.

ಚಿತ್ರದುರ್ಗದ ಮಾದಾರ ಚನ್ನಯ್ಯ ಗುರುಪೀಠಕ್ಕೆ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಅವರು ವಟು ಸ್ವೀಕರಿಸಿದರು. ವಟು ಜಯಬಸವ ದೇವರು ಅವರ ಪೂರ್ವಾಶ್ರಮದ ತಂದೆ ಮಹಾಲಿಂಗ, ತಾಯಿ ಸವಿತಾ, ಶಾಂತವೀರ ಸ್ವಾಮೀಜಿ, ಈಶ್ವರಾನಂದಪುರಿ ಸ್ವಾಮೀಜಿ, ಪುರುಷೋತ್ತಮಾನಂದಪುರಿ ಸ್ವಾಮೀಜಿ, ಶಿವಲಿಂಗಾನಂದ ಸ್ವಾಮೀಜಿ ಪಾಲ್ಗೊಂಡಿದ್ದರು

ಮುಂದಿನ ದಿನಗಳಲ್ಲಿ ವಟು ಮಠದ ಉತ್ತರಾಧಿಕಾರಿಯಾಗುವ ಸಾಧ್ಯತೆ ಇದೆ.

ಬಾಗಲಕೋಟೆ ಜಿಲ್ಲೆಯ ಮಹಾಲಿಂಗಪುರದ ಮಹಾಲಿಂಗ ಹಾಗೂ ಸವಿತಾ ದಂಪತಿಯ ನಾಲ್ವರು ಮಕ್ಕಳಲ್ಲಿ ಬಸವಲಿಂಗ ದೇವರು ದ್ವಿತೀಯ ಪುತ್ರ. ನಾಲ್ಕನೇ ತರಗತಿಯ ವಟುವಿನ ಮುಂದಿನ ವ್ಯಾಸಂಗ ಆದಿಚುಂಚನಗಿರಿ ಮಠದ ಗುರುಕುಲದಲ್ಲಿ ನಡೆಯಲಿದೆ.

'ಮಠದ ಬೆಳವಣಿಗೆಯಲ್ಲಿ ಇದೊಂದು ಸ್ಮರಣೀಯ ದಿನ. ಬಸವ ಜಯಂತಿ ದಿನವೇ ವಟು ಸ್ವೀಕರಿಸಿರುವುದು ಭಕ್ತರಲ್ಲಿ ಸಂತಸವುಂಟು ಮಾಡಿದೆ. ಆದಿಚುಂಚನಗಿರಿಯ ನಿರ್ಮಲಾನಂದನಾಥ ಸ್ವಾಮೀಜಿ ಮಾರ್ಗದರ್ಶನದಲ್ಲಿ ವಟು ಅಧ್ಯಯನ ನಡೆಯಲಿದೆ. ಮುರುಘಾ ಮಠ ಹಾಗೂ ಬಸವ ತತ್ವದ ಪರಂಪರೆ ಮುಂದುವರಿಯಲಿದೆ' ಎಂದು ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ತಿಳಿಸಿದರು.

'ಮಠಾಧೀಶರಿಗೆ ಅಗತ್ಯ ಇರುವ ಎಲ್ಲ ಶಿಕ್ಷಣವನ್ನು ವಟುವಿಗೆ ನೀಡುವ ಜವಾಬ್ದಾರಿ ಮಠದ ಮೇಲಿದೆ. ಅಧ್ಯಯನದ ಬಳಿಕ ಇವರನ್ನು ಪೀಠದ ಉತ್ತರಾಧಿಕಾರಿಯಾಗಿ ಮಾಡುವ ತೀರ್ಮಾನ ಮಠದ ಟ್ರಸ್ಟ್ ಆಡಳಿತ ಮಂಡಳಿ ಹಾಗೂ ಸಮಾಜದ ಮುಖಂಡರಿಗೆ ಬಿಟ್ಟಿದ್ದು' ಎಂದು ಹೇಳಿದರು.

ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಕುಂಚಿಟಿಗ ಮಹಾಸಂಸ್ಥಾನ ಮಠದ ಶಾಂತವೀರ ಸ್ವಾಮೀಜಿ, ಭಗೀರಥ ಗುರುಪೀಠದ ಪುರುಷೋತ್ತಮಾನಂದಪುರಿ ಸ್ವಾಮೀಜಿ, ಕನಕ ಗುರುಪೀಠದ ಈಶ್ವರಾನಂದಪುರಿ ಸ್ವಾಮೀಜಿ, ಕಬೀರಾನಂದ ಆಶ್ರಮದ ಶಿವಲಿಂಗಾನಂದ ಸ್ವಾಮೀಜಿ, ಮಾತಂಗಮುನಿ ಮಠದ ಮಾತಂಗಮುನಿ ಸ್ವಾಮೀಜಿ, ಮೇದಾರ ಗುರುಪೀಠದ ಕೇತೇಶ್ವರ ಸ್ವಾಮೀಜಿ, ಸಿದ್ಧಾರೂಢ ಆಶ್ರಮದ ಜಯದೇವ ಸ್ವಾಮೀಜಿ ಇದ್ದರು.

ಷೇರುಪೇಟೆ ವಹಿವಾಟು ▲ 260

ಹಿಂದಿನ ಅಂತ್ಯ	72,404
ಇಂದಿನ ಅಂತ್ಯ	72,664

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	21,957
ಇಂದಿನ ಅಂತ್ಯ	22,055
▲	97
ದಿನದ ಗರಿಷ್ಠ	22,131

ವಿನಿಮಯ ದರ

$ ಡಾಲರ್	83.51
£ ಪೌಂಡ್	104.64
€ ಯುರೊ	90.03
¥ ಯೆನ್ (100ಕ್ಕೆ)	54

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹590
12 ಕ್ಕೆ	₹80
ಮೈಸೂರು	
100ಕ್ಕೆ	₹595

ಖಾದ್ಯ ತೈಲ ಮುಂಬೈ (10 ಕೆಜಿಗೆ)
(ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1520 (1515)
ಸೋಯಾ (ರಿಫೈನ್ಡ್)	₹900 (915)
ಸೂರ್ಯಕಾಂತಿ (ರಿಫೈನ್ಡ್)	₹905 (915)
ಪಾಮೋಲಿನ್	₹880 (890)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹300-499
ದ್ವಿತಳಿ (ಬಿ.ವಿ)	₹260-595

ಏರ್ ಇಂಡಿಯಾಗೆ ₹30 ಕೋಟಿ ನಷ್ಟ

ಇನ್ನೆರಡು ದಿನದಲ್ಲಿ ವಿಮಾನ ಸೇವೆ ಯಥಾಸ್ಥಿತಿ ಸಾಧ್ಯತೆ

ಮುಂಬೈ/ ನವದೆಹಲಿ (ಪಿಟಿಐ): ಕ್ಯಾಬಿನ್ ಸಿಬ್ಬಂದಿಯ ಅಲಭ್ಯತೆಯಿಂದಾಗಿ ಮೂರನೇ ದಿನವಾದ ಶುಕ್ರವಾರವೂ ಟಾಟಾ ಸಮೂಹದ ಒಡೆತನಕ್ಕೆ ಸೇರಿದ ಏರ್ ಇಂಡಿಯಾ ಎಕ್ಸ್‌ಪ್ರೆಸ್ ಕಂಪನಿಯ 75 ವಿಮಾನಗಳ ಹಾರಾಟ ರದ್ದಾಗಿದೆ.

ಸಿಬ್ಬಂದಿ ಮತ್ತು ಕಂಪನಿಯ ಪ್ರತಿನಿಧಿಗಳ ನಡುವೆ ಗುರುವಾರ ನಡೆದ ಸಂಧಾನ ಸಭೆಯು ಫಲಪ್ರದವಾಗಿದೆ. ಅನಾರೋಗ್ಯದ ರಜೆ ಮೇಲೆ ತೆರಳಿದ್ದ ಸಿಬ್ಬಂದಿಗೆ ಮತ್ತೆ ಕರ್ತವ್ಯಕ್ಕೆ ಹಾಜರಾಗಲು ಸೂಚಿಸಲಾಗಿದೆ. ಹಾಗಾಗಿ, ಭಾನುವಾರದ ವೇಳೆಗೆ ವಿಮಾನ ಸೇವೆಯು ಯಥಾಸ್ಥಿತಿಗೆ ಮರಳುವ ಸಾಧ್ಯತೆಯಿದೆ ಎಂದು ಕಂಪನಿಯ ಅಧಿಕಾರಿಗಳು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

'ಮಂಗಳವಾರ ರಾತ್ರಿಯಿಂದ ವಿಮಾನ ಸೇವೆಯಲ್ಲಿ ವ್ಯತ್ಯಯವಾಗಿದೆ. ಪ್ರಯಾಣಿಕರಿಗೆ ಪರಿಹಾರ ನೀಡುವುದು ಸೇರಿ ಕಂಪನಿಯ ಆದಾಯದಲ್ಲಿ ₹30 ಕೋಟಿ ನಷ್ಟವಾಗಿದೆ' ಎಂದು ಅಧಿಕಾರಿಗಳು ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಆದರೆ, ಈ ಬಗ್ಗೆ ಕಂಪನಿಯ ಅಧಿಕೃತ ವಕ್ತಾರರು ಯಾವುದೇ ಮಾಹಿತಿ ನೀಡಿಲ್ಲ.

ಪ್ರತಿದಿನ ಏರ್ ಇಂಡಿಯಾ ಎಕ್ಸ್‌ಪ್ರೆಸ್‌ಗೆ ಸೇರಿದ 380 ವಿಮಾನಗಳು ಕಾರ್ಯಾಚರಣೆ ನಡೆಸುತ್ತವೆ. ಈ ಪೈಕಿ 120 ಅಂತರರಾಷ್ಟ್ರೀಯ ಮಾರ್ಗದಲ್ಲಿ ಹಾರಾಟ ನಡೆಸಿದರೆ, ಉಳಿದ 260 ವಿಮಾನಗಳು ದೇಶೀಯ ಮಾರ್ಗದಲ್ಲಿ ಸಂಚರಿಸುತ್ತವೆ.

ಕರ್ತವ್ಯಕ್ಕೆ ಮರಳುತ್ತಿರುವ ಸಿಬ್ಬಂದಿ: ಕರ್ತವ್ಯಕ್ಕೆ ಹಾಜರಾಗುತ್ತಿರುವ ಸಿಬ್ಬಂದಿಗೆ ಕಂಪನಿಯಿಂದ ಯಥಾಪ್ರಕಾರ ಸಹಕಾರ ದೊರೆಯಲಿದೆ. ಇದಕ್ಕೆ ಮೊದಲು ಅವರು ಫಿಟ್ನೆಸ್ ಪ್ರಮಾಣ ಪತ್ರ ಸಲ್ಲಿಸುವುದು ಕಡ್ಡಾಯ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸಾಮಾನ್ಯವಾಗಿ ಸಂಜೆ ವೇಳೆ ಅಂತರರಾಷ್ಟ್ರೀಯ ಮಾರ್ಗದ ವಿಮಾನಗಳ ಕಾರ್ಯಾಚರಣೆ ಆರಂಭವಾಗುತ್ತದೆ. ಹಾಗಾಗಿ, ಶನಿವಾರದಿಂದ ಹೆಚ್ಚಿನ ಸಂಖ್ಯೆಯಲ್ಲಿ ಕ್ಯಾಬಿನ್ ಸಿಬ್ಬಂದಿ ಕರ್ತವ್ಯ ಮರಳುವ ನಿರೀಕ್ಷೆಯಿದೆ ಎಂದು ಹೇಳಿದ್ದಾರೆ.

ಏರ್ ಇಂಡಿಯಾ ಎಕ್ಸ್‌ಪ್ರೆಸ್ ಜೊತೆಗೆ ಎಐಎಕ್ಸ್ ಕನೆಕ್ಟ್ ಕಂಪನಿಯನ್ನು (ಏರ್‌ಏಷ್ಯಾ ಇಂಡಿಯಾ) ವಿಲೀನಗೊಳಿಸುವ ಪ್ರಕ್ರಿಯೆ ನಡೆಯುತ್ತಿದೆ. ಈ ಎರಡು ಕಂಪನಿಗಳ ವಿಲೀನದಿಂದ ಒಟ್ಟು ಸಿಬ್ಬಂದಿ ಸಂಖ್ಯೆ 6 ಸಾವಿರ ದಾಟಲಿದೆ. ಈ ಪೈಕಿ 2 ಸಾವಿರ ಕ್ಯಾಬಿನ್ ಸಿಬ್ಬಂದಿ ಇದ್ದಾರೆ.

ಬಿಒಬಿಗೆ ₹4,886 ಕೋಟಿ ಲಾಭ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಆಫ್ ಬರೋಡಾ (ಬಿಒಬಿ) 2023–24ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹4,886 ಕೋಟಿ ನಿವ್ವಳ ಲಾಭ ಗಳಿಸಿದೆ.

2022–23ರ ಹಣಕಾಸು ವರ್ಷದ ಇದೇ ತ್ರೈಮಾಸಿಕದಲ್ಲಿ ₹4,775 ಕೋಟಿ ಲಾಭ ಗಳಿಸಿತ್ತು. ಈ ಲಾಭ ಪ್ರಮಾಣಕ್ಕೆ ಹೋಲಿಸಿದರೆ ಶೇ 2.3ರಷ್ಟು ಹೆಚ್ಚಳವಾಗಿದೆ ಎಂದು ಬ್ಯಾಂಕ್, ಷೇರುಪೇಟೆಗೆ ಶುಕ್ರವಾರ ತಿಳಿಸಿದೆ. ಈ ತ್ರೈಮಾಸಿಕದಲ್ಲಿ ವರಮಾನವು ₹29,323 ಕೋಟಿಯಿಂದ ₹33,775 ಕೋಟಿಗೆ ಹೆಚ್ಚಳವಾಗಿದೆ. ಬಡ್ಡಿ ವರಮಾನವು ₹25,857 ಕೋಟಿಯಿಂದ ₹29,583 ಕೋಟಿಗೆ ಏರಿಕೆ ಆಗಿದೆ.

ವಸೂಲಾಗದ ಸಾಲದ ಸರಾಸರಿ ಪ್ರಮಾಣ (ಎನ್‌ಪಿಎ) ಶೇ 3.79ರಿಂದ ಶೇ 2.92ಕ್ಕೆ ಕುಗ್ಗಿದೆ. ನಿವ್ವಳ ಎನ್‌ಪಿಎ ಶೇ 0.89ರಿಂದ ಶೇ 0.68ಕ್ಕೆ ಇಳಿದಿದೆ. ಭವಿಷ್ಯದಲ್ಲಿ ಎದುರಾಗಬಹುದಾದ ಆರ್ಥಿಕ ನಷ್ಟ ಭರಿಸಲು ವಸೂಲಾಗದ ಸಾಲಗಳಿಗೆ ತೆಗೆದಿರಿಸಬೇಕಿರುವ ಮೊತ್ತವು ₹1,421 ಕೋಟಿಯಿಂದ ₹1,302 ಕೋಟಿಗೆ ಇಳಿದಿದೆ ಎಂದು ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

10-5-2024

ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	11000-11100
ದಪ್ಪ ಮಧ್ಯಪ್ರದೇಶ(ಹೊಸ)	10000-10100
ದಪ್ಪ ಗುಜರಾತ್(ಹೊಸ)	10800-10900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1530 (1510)
ಒಂದು ವಾರದ ಡೆಲಿವರಿ	1525 (1515)
ಸೋಯಾ ಕಚ್ಚಾ	850 (865)
ಪಾಮ್ ವಾರದ ಡೆಲಿವರಿ	878 (892)
ಸೂರ್ಯಕಾಂತಿ ಎಣ್ಣೆ ಕಚ್ಚಾ	845 (850)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹72,800 (71,100)
ಬೆಳ್ಳಿ ಕೆ.ಜಿ ₹84,150 (82,400)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹14750
ಎಸಿ	₹8680
ಆರ್‌ಪಿ	₹14900
ಆರ್‌ಸಿ	₹8580

ವಿದೇಶಿ ಹೂಡಿಕೆದಾರರಿಂದ ಬಂಡವಾಳ ಹಿಂತೆಗೆತ ಅಬಾಧಿತ

ಸೆನ್ಸೆಕ್ಸ್, ನಿಫ್ಟಿ ಚೇತರಿಕೆ

ಮುಂಬೈ (ಪಿಟಿಐ): ಲೋಕಸಭಾ ಚುನಾವಣಾ ಫಲಿತಾಂಶದ ಅನಿಶ್ಚಿತತೆಯಿಂದಾಗಿ ಕುಸಿತ ಕಂಡಿದ್ದ ದೇಶದ ಷೇರು ಸೂಚ್ಯಂಕಗಳು ಶುಕ್ರವಾರ ಚೇತರಿಕೆಯ ಹಳಿಗೆ ಮರಳಿವೆ.

ಆದರೂ, ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಬಂಡವಾಳ ಹಿಂತೆಗೆತ ಮುಂದುವರಿದಿದೆ. ಇದರ ನಡುವೆಯೂ ದೇಶೀಯ ಹೂಡಿಕೆದಾರರು ದಿನದ ವಹಿವಾಟಿನಲ್ಲಿ ಅಲ್ಪ ಗಳಿಕೆ ಕಂಡಿದ್ದಾರೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

'ವಿದೇಶದ ಮಾರುಕಟ್ಟೆಗಳಲ್ಲಿ ಸಕಾರಾತ್ಮಕ ವಹಿವಾಟು ನಡೆದಿರುವುದು ದೇಶೀಯ ಷೇರುಪೇಟೆಗಳ ಮೇಲೆ ಪರಿಣಾಮ ಬೀರಿದೆ' ಎಂದು ಮೆಹ್ತಾ ಸೆಕ್ಯುರಿಟೀಸ್‌ನ ಹಿರಿಯ ಉಪಾಧ್ಯಕ್ಷ (ಸಂಶೋಧನೆ) ಪ್ರಶಾಂತ್ ತಾಪ್ಸೆ ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 260 ಅಂಶ ಏರಿಕೆ ಕಂಡು, 72,644ರಲ್ಲಿ ಸ್ಥಿರಗೊಂಡಿತು. ದಿನದ ವಹಿವಾಟಿನಲ್ಲಿ 542 ಅಂಶ ಏರಿಕೆ ಕಂಡಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 97 ಅಂಶ ಏರಿಕೆ ಕಂಡು, 22,055ರಲ್ಲಿ ವಹಿವಾಟನ್ನು ಮುಕ್ತಾಯಗೊಳಿಸಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಪವರ್ ಗ್ರಿಡ್, ಎನ್‌ಟಿಪಿಸಿ, ಜೆಎಸ್‌ಡಬ್ಲ್ಯು ಸ್ಟೀಲ್, ಏಷ್ಯನ್ ಪೇಂಟ್ಸ್, ಭಾರ್ತಿ ಏರ್‌ಟೆಲ್, ಹಿಂದುಸ್ತಾನ್ ಯೂನಿಲಿವರ್ ಹಾಗೂ ಟಾಟಾ ಮೋಟರ್ಸ್ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಟಿಸಿಎಸ್, ಕೋಟಕ್ ಮಹೀಂದ್ರ ಬ್ಯಾಂಕ್, ಇನ್ಫೊಸಿಸ್, ವಿಪ್ರೊ, ಮಹೀಂದ್ರ ಆ್ಯಂಡ್ ಮಹೀಂದ್ರ, ಎಚ್‌ಡಿಎಫ್‌ಸಿ ಬ್ಯಾಂಕ್‌ನ ಷೇರಿನ ಮೌಲ್ಯ ಕುಸಿದಿದೆ.

ಸೋಲ್, ಟೋಕಿಯೊ, ಶಾಂಘೈ ಹಾಗೂ ಹಾಂಗ್‌ಕಾಂಗ್ ಮಾರುಕಟ್ಟೆಯಲ್ಲೂ ಸಕಾರಾತ್ಮಕ ವಹಿವಾಟು ನಡೆದಿದೆ. ಯುರೋಪ್ ಮಾರುಕಟ್ಟೆಗಳು ಗಳಿಕೆ ಕಂಡಿವೆ.

ಬ್ರೆಂಟ್ ಕಚ್ಚಾ ತೈಲದ ಬೆಲೆಯಲ್ಲಿ ಶೇ 0.41ರಷ್ಟು ಏರಿಕೆಯಾಗಿದ್ದು, ಪ್ರತಿ ಬ್ಯಾರಲ್ 84.22 ಡಾಲರ್‌ಗೆ ತಲುಪಿದೆ.

ಗುರುವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಒಟ್ಟು 6,994 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ ಎಂದು ಷೇರುಪೇಟೆಯ ಅಂಕಿ ಅಂಶಗಳು ತಿಳಿಸಿವೆ.

ಬಿಪಿಸಿಎಲ್ ಷೇರಿನ ಮೌಲ್ಯ ಏರಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್‌ನ (ಬಿಪಿಸಿಎಲ್) ಷೇರಿನ ಮೌಲ್ಯದಲ್ಲಿ ಶೇ 4.50ರಷ್ಟು ಏರಿಕೆಯಾಗಿದೆ.

ಬಿಎಸ್‌ಇಯಲ್ಲಿ ಷೇರಿನ ಮೌಲ್ಯ ಶೇ 4.44ರಷ್ಟು ಏರಿಕೆಯಾಗಿದ್ದು, ಪ್ರತಿ ಷೇರಿನ ಬೆಲೆ ₹618.60ಕ್ಕೆ ತಲುಪಿದೆ. ವಹಿವಾಟಿನ ಒಂದು ಹಂತದಲ್ಲಿ ಶೇ 4.98ರಷ್ಟು ಏರಿಕೆಯಾಗಿತ್ತು.

ಎನ್‌ಎಸ್‌ಇಯಲ್ಲಿ ಷೇರಿನ ಮೌಲ್ಯವು ಶೇ 4.50ರಷ್ಟು ಏರಿಕೆಯಾಗಿದ್ದು, ಪ್ರತಿ ಷೇರಿನ ಬೆಲೆಯು ₹618.80 ಆಗಿದೆ.

ಒಂದೇ ದಿನ ಕಂಪನಿಯ ಮಾರುಕಟ್ಟೆ ಮೌಲ್ಯಕ್ಕೆ (ಎಂ–ಕ್ಯಾಪ್) ₹5,705 ಕೋಟಿ ಸೇರ್ಪಡೆಯಾಗಿದೆ. ಒಟ್ಟು ಎಂ–ಕ್ಯಾಪ್ ₹1.34 ಲಕ್ಷ ಕೋಟಿ ಮುಟ್ಟಿದೆ.

2023–24ರ ಪೂರ್ಣ ಆರ್ಥಿಕ ವರ್ಷದಲ್ಲಿ ಕಂಪನಿಯು ₹26,858 ಕೋಟಿ ನಿವ್ವಳ ಲಾಭಗಳಿಸಿದೆ. ಪ್ರತಿ ಷೇರಿಗೆ ಲಾಭಾಂಶದ ರೂಪದಲ್ಲಿ ಉಚಿತವಾಗಿ ಒಂದು ಷೇರು ವಿತರಿಸಲು ಕಂಪನಿಯ ಆಡಳಿತ ಮಂಡಳಿ ಅನುಮೋದನೆ ನೀಡಿದೆ. ಹಾಗಾಗಿ, ಷೇರಿನ ಮೌಲ್ಯದಲ್ಲಿ ಹೆಚ್ಚಳವಾಗಿದೆ.

ಚಿನ್ನದ ಆಮದು ಶೇ 30ರಷ್ಟು ಏರಿಕೆ

ನವದೆಹಲಿ (ಪಿಟಿಐ): ದೇಶೀಯ ಮಟ್ಟದಲ್ಲಿ ಹೆಚ್ಚಿದ ಬೇಡಿಕೆಯಿಂದಾಗಿ 2023–24ನೇ ಹಣಕಾಸು ವರ್ಷದಲ್ಲಿ ದೇಶದ ಚಿನ್ನದ ಆಮದು ಪ್ರಮಾಣದಲ್ಲಿ ಶೇ 30ರಷ್ಟು ಏರಿಕೆಯಾಗಿದ್ದು, ಒಟ್ಟು ಮೌಲ್ಯವು ₹3.80 ಲಕ್ಷ ಕೋಟಿಗೆ ಮುಟ್ಟಿದೆ.

2022–23ನೇ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಚಿನ್ನದ ಆಮದು ಮೌಲ್ಯವು ₹2.92 ಲಕ್ಷ ಕೋಟಿ ಆಗಿತ್ತು. ಮಾರ್ಚ್‌ನಲ್ಲಿ ₹12,779 ಕೋಟಿ ಮೌಲ್ಯದ ಚಿನ್ನವನ್ನು ಆಮದು ಮಾಡಿಕೊಳ್ಳಲಾಗಿದೆ. ಆದರೆ, ಕಳೆದ ವರ್ಷದ ಮಾರ್ಚ್‌ಗೆ ಹೋಲಿಸಿದರೆ ಶೇ 53ರಷ್ಟು ಕುಸಿದಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ತಿಳಿಸಿದೆ.

ಜಾಗತಿಕ ಮಟ್ಟದಲ್ಲಿ ಸ್ವಿಟ್ಜರ್ಲೆಂಡ್ ಹೆಚ್ಚು ಪ್ರಮಾಣದಲ್ಲಿ ಚಿನ್ನ ಆಮದು ಮಾಡಿಕೊಳ್ಳುವ ರಾಷ್ಟ್ರವಾಗಿದ್ದು, ಶೇ 40ರಷ್ಟು ಪಾಲನ್ನು ಹೊಂದಿದೆ. ನಂತರದ ಸ್ಥಾನದಲ್ಲಿ ಯುಎಇ (ಶೇ 16ರಷ್ಟು) ಮತ್ತು ದಕ್ಷಿಣ ಆಫ್ರಿಕಾ (ಶೇ 10ರಷ್ಟು) ಇವೆ.

ಸುದ್ದಿ 2 ನಿಮಿಷ

ಟಾಟಾ ಮೋಟರ್ಸ್ ಲಾಭ ಮೂರು ಪಟ್ಟು ಹೆಚ್ಚಳ

ನವದೆಹಲಿ (ಪಿಟಿಐ): ದೇಶದ ಪ್ರಮುಖ ವಾಹನ ತಯಾರಿಕಾ ಕಂಪನಿ ಟಾಟಾ ಮೋಟರ್ಸ್, 2023–24ನೇ ಹಣಕಾಸು ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹17,528 ಕೋಟಿ ನಿವ್ವಳ ಲಾಭ ಗಳಿಸಿದೆ.

2022–23ರ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹5,496 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದಲ್ಲಿ ಮೂರು ಪಟ್ಟು ಏರಿಕೆಯಾಗಿದೆ. ವರಮಾನವು ₹1.05 ಲಕ್ಷ ಕೋಟಿಯಿಂದ ₹1.19 ಲಕ್ಷ ಕೋಟಿಗೆ ಹೆಚ್ಚಳವಾಗಿದೆ ಎಂದು ಕಂಪನಿಯು, ಷೇರುಪೇಟೆಗೆ ಮಾಹಿತಿ ನೀಡಿದೆ.

ಪ್ರಮುಖವಾಗಿ, ಜಾಗ್ವರ್ ಲ್ಯಾಂಡ್ ರೋವರ್ (ಜೆಎಲ್‌ಆರ್) ಮಾರಾಟ ಉತ್ತಮವಾಗಿರುವುದೇ ಲಾಭ ಹೆಚ್ಚಳಕ್ಕೆ ಕಾರಣವಾಗಿದೆ ಎಂದು ತಿಳಿಸಿದೆ.

ಜಾಗ್ವರ್ ಲ್ಯಾಂಡ್ ರೋವರ್ ವರಮಾನದಲ್ಲಿ ಶೇ 11ರಷ್ಟು ಏರಿಕೆಯಾಗಿದ್ದು, ₹82,661 ಕೋಟಿಗೆ ಮುಟ್ಟಿದೆ. ಜೆಎಲ್‌ಆರ್‌ನ ತೆರಿಗೆ ನಂತರದ ಲಾಭವು ₹2,709 ಕೋಟಿಯಿಂದ ₹14,647 ಕೋಟಿಗೆ ಹೆಚ್ಚಳವಾಗಿದೆ ಎಂದು ತಿಳಿಸಿದೆ.

2023–24ರ ಪೂರ್ಣ ಹಣಕಾಸು ವರ್ಷದಲ್ಲಿ ಕಂಪನಿಯು ₹31,806 ಕೋಟಿ ಲಾಭ ಗಳಿಸಿದೆ. ಹಿಂದಿನ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹2,689 ಕೋಟಿ ಲಾಭ ಗಳಿಸಿತ್ತು. ವರಮಾನವು ₹3.45 ಲಕ್ಷ ಕೋಟಿಯಿಂದ ₹4.37 ಲಕ್ಷ ಕೋಟಿಗೆ ಏರಿಕೆಯಾಗಿದೆ.

'ಭಾರತದಲ್ಲಿ ಕಂಪನಿಯ ವ್ಯವಹಾರವು ಸಾಲ ಮುಕ್ತವಾಗಿದೆ. 2024-25ನೇ ಆರ್ಥಿಕ ವರ್ಷದಲ್ಲಿ ಇಡೀ ಕಂಪನಿಯನ್ನು ಸಾಲ ಮುಕ್ತವಾಗಿಸುವ ಹಾದಿಯಲ್ಲಿದ್ದೇವೆ. ಹಾಗಾಗಿ, ಮುಂದಿನ ವರ್ಷಗಳಲ್ಲಿ ಉತ್ತಮ ಸಾಮರ್ಥ್ಯ ತೋರಲಿದ್ದೇವೆ' ಎಂದು ಕಂಪನಿಯ ಮುಖ್ಯ ಹಣಕಾಸು ಅಧಿಕಾರಿ ಪಿ.ಬಿ. ಬಾಲಾಜಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

TATA MOTORS

ಕೈಗಾರಿಕಾ ಉತ್ಪಾದನೆ ಶೇ 4.9ರಷ್ಟು ದಾಖಲು

ನವದೆಹಲಿ (ಪಿಟಿಐ): ದೇಶದ ಕೈಗಾರಿಕಾ ಉತ್ಪಾದನೆಯು ಮಾರ್ಚ್ ತಿಂಗಳಿನಲ್ಲಿ ಶೇ 4.9ರಷ್ಟು ಬೆಳವಣಿಗೆ ದಾಖಲಿಸಿದೆ.

ಕೈಗಾರಿಕಾ ಉತ್ಪಾದನೆ ಸೂಚ್ಯಂಕ (ಐಐಪಿ) ಆಧಾರದ ಮೇಲೆ ಲೆಕ್ಕ ಹಾಕುವ ಈ ಬೆಳವಣಿಗೆಯು 2023ರ ಮಾರ್ಚ್‌ನಲ್ಲಿ ಶೇ 1.9ರಷ್ಟು ಪ್ರಗತಿ ಕಂಡಿತ್ತು ಎಂದು ಶುಕ್ರವಾರ ಬಿಡುಗಡೆಯಾಗಿರುವ ರಾಷ್ಟ್ರೀಯ ಸಾಂಖ್ಯಿಕ ಕಚೇರಿಯ ವರದಿ ತಿಳಿಸಿದೆ.

ಮಾರ್ಚ್‌ನಲ್ಲಿ ತಯಾರಿಕಾ ವಲಯವು ಶೇ 5.2ರಷ್ಟು ಬೆಳವಣಿಗೆ ಕಂಡಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಬೆಳವಣಿಗೆಯು ಶೇ 1.5ರಷ್ಟಿತ್ತು. ಗಣಿಗಾರಿಕೆ ಶೇ 1.2ರಷ್ಟು ಹಾಗೂ ಇಂಧನ ವಲಯದ ಉತ್ಪಾದನೆಯು ಶೇ 8.6ರಷ್ಟು ಹೆಚ್ಚಳವಾಗಿದೆ.

2023–24ನೇ ಆರ್ಥಿಕ ವರ್ಷದಲ್ಲಿ ಕೈಗಾರಿಕಾ ಉತ್ಪಾದನೆಯು ಶೇ 5.8ರಷ್ಟು ಬೆಳವಣಿಗೆ ಕಂಡಿದ್ದರೆ, 2022–23ನೇ ಹಣಕಾಸು ವರ್ಷದಲ್ಲಿ ಶೇ 5.2ರಷ್ಟು ಪ್ರಗತಿ ದಾಖಲಿಸಿತ್ತು.

ಕೆ–ರೈಡ್ K RIDE
ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ (ಕರ್ನಾಟಕ) ನಿಯಮಿತ
ಸಿಐಎನ್: ಯು60100ಕೆ2000ಪಿಎಲ್‌ಸಿ028171
(ಕರ್ನಾಟಕ ಸರ್ಕಾರ ಮತ್ತು ರೈಲ್ವೆ ಸಚಿವಾಲಯದ ಜಂಟಿ ಉದ್ಯಮ)
ನೋಂದಾಯಿತ ಕಚೇರಿ: ಸಂಪರ್ಕ ಸೌಧ, 1ನೇ ಮಹಡಿ, ಒರಿಯನ್ ಮಾಲ್ ಎದುರು, ರಾಜಾಜಿನಗರ, ಬೆಂಗಳೂರು–560010
ಬೆಂಗಳೂರು ಉಪನಗರ ರೈಲ್ವೆ ಯೋಜನೆ
ಪ್ರಕಟಣೆ
ಕೆ–ರೈಡ್ ಇವರು ಬೆಂಗಳೂರು ಉಪನಗರ ರೈಲ್ವೆ ಯೋಜನೆ(BSRP)ಯ ನಿರ್ಮಾಣ ಮತ್ತು ಕಾರ್ಯಾಚರಣೆಗಾಗಿ ಪರಿಸರ ಮತ್ತು ಸಾಮಾಜಿಕ ಪರಿಣಾಮದ ಮೌಲ್ಯಮಾಪನ ಅಧ್ಯಯನವನ್ನು ನಡೆಸಿತು. ವರದಿಗಳನ್ನು ಸಿದ್ಧಪಡಿಸಲಾಗಿದೆ ಹಾಗೂ ಕಂಪನಿಯ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ ಮತ್ತು ವರದಿಗಳನ್ನು https://kride.in/sub-urban-rail-project/ ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಯೋಜನೆಯ ಮಾಹಿತಿಗಳನ್ನು ಪ್ರಸಾರ ಮಾಡಲು, ಸಾರ್ವಜನಿಕ ಸಮಾಲೋಚನೆಯನ್ನು ದಿನಾಂಕ:14.06.2024 ರಂದು ಅನುಗ್ರಹ ಸಮುದಾಯ ಭವನ, ಎಂ.ಜಿ. ರೈಲ್ವೆ ಕಾಲೋನಿ, ಸೇವಾಶ್ರಮ, ಬೆಂಗಳೂರು, ಕರ್ನಾಟಕ–560023, ಭಾರತ ಇಲ್ಲಿ ನಿಗದಿಪಡಿಸಲಾಗಿದೆ.
ಹೆಚ್ಚಿನ ಮಾಹಿತಿಗೆ, ಭೇಟಿ ನೀಡಿ: www.kride.in
ಸಹಿ/– ಪ್ರಧಾನ ವ್ಯವಸ್ಥಾಪಕರು (ಸಿವಿಲ್)

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

KAPL BANGALORE
[A GOVERNMENT OF INDIA ENTERPRISE]
REQUIRED MANPOWER CONTRACTORS
"Looking for Manpower Contractor for deployment of manpower on contract basis to our manufacturing unit, Karnataka Antibiotics & Pharmaceuticals Limited situated at NO. 429/1, KOTUR VILLAGE, NH-4 PUNE-BANGALORE HIGHWAY DHARWAD-580011.The contractor should have well established and legal, statutory complied with various labour Laws. For more details visit Company Website:www.kaplindia.com. The interested parties with requisite experience may participate in E-Tender through KAPL online E-Tender portal i.e. www.tenderwizard.com/KAPL. The closing date and time of E-Tender will be 27.05.2024 at 23:59 Hrs.

COMPUTER OPERATOR for reputed pharma company. Preferably in and around Nelmangala - Tavareker Rd. Ph: 9964343227

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ15,000-20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663542555/ 9663563555

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Teachers/ Professors

WANTED HEADMASTER and Teachers for Primary and High school all subjects @M.E.S Convent , Anjaneya badavane 9th cross, Davanagere. Contact 9880436414

Wanted

WORK FROM Home. ಮನೆಯಲ್ಲಿ ಕುಳಿತು 10,000 - 20,000 ದುಡಿಯಬಹುದು. ವಯೋಮಿತಿಇರುವುದಿಲ್ಲ. ಮೊದಲು ಬಂದವರಿಗೆ ಆದ್ಯತೆ. 8861041526, 9945791526

ಪ್ರವಾಸ

Travel

12.07.2024 13/17ದಿನಗಳು ರೈಲು/ವಿಮಾನದಲ್ಲಿ ಅಮರನಾಥ್, ವೈಷ್ಣೋದೇವಿ, ಕಾಶ್ಮೀರ,ಕುರುಕ್ಷೇತ್ರ ಆಗ್ರ,ದೆಹಲಿ ಇತ್ಯಾದಿ 28000/ ಮೇ,ಜುನ್ ನಲ್ಲಿ 5/8ದಿನಗಳು ಹಡಗು/ವಿಮಾನದಲ್ಲಿ ಅಂಡಮಾನ್ ಹವಳದ್ವೀಪ. Royal Package 'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್'. 9739847429/ 9845560219

ಮೇ ತಿಂಗಳಿಂದ ಪ್ರತಿ ತಿಂಗಳು 8 ದಿನಗಳ ಕಾಶಿ,ಗಯಾ,ಅಯೋಧ್ಯ/ ಚಾರ್‌ಧಾಮ್, ಸೆಪ್ಟೆಂಬರ್ ತಿಂಗಳಲ್ಲಿ ಮುಕ್ತಿನಾಥ ನೇಪಾಳ ಮನೋಕಾಮನ ಮೌಂಟ್ ಎವರೆಸ್ಟ್, ಜನಕಪುರಿ ಅಯೋಧ್ಯ ಕಾಶಿ,ಗಯಾ. ಸಂಪರ್ಕಿಸಿ 'ಶ್ರೀಸುಧಾ ಟ್ರಾವೆಲ್ಸ್' 080-22429289 9448119290 9019301300

19.06.2024 09.07.2024 18.09.2024 ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 07.06.2024 06.07.2024 ನೇಪಾಳ 9 ದಿನಗಳು. 07.06.2024 ಅಸ್ಸಾಂ,ಮೇಘಾಲಯ 9 ದಿನಗಳು. 13.10.2024 24.11.202407.12.2024 ರಾಜಸ್ಥಾನ 10 ದಿನಗಳು. 17.10.2024 26.11.202410.12.2024 ಗುಜರಾತ ಓಂಕಾರೇಶ್ವರ ಉಜ್ಜಯಿನಿ 8/12 ದಿನಗಳು. 5.10.2024 04.11.2024 07.12. 2024 ಕಾಶಿ,ಗಯಾ,ಅಯೋಧ್ಯ 7 ದಿನಗಳು. 17.10.2024 26.11.202410.12.2024 ಮಧ್ಯಪ್ರದೇಶ 9 ದಿನಗಳು. ರೈಲಿನಲ್ಲಿ ಪ್ರಯಾಣಿಸುವವರು 120 ದಿನಗಳ ಮುಂಚಿತವಾಗಿ ತಮ್ಮ ಸೀಟುಗಳನ್ನು ಕಾಯ್ದಿರಿಸಬೇಕು. ಇದಲ್ಲದೇ ಫಾಮಿಲಿ ಪ್ರವಾಸಿಗಳಿಗೆ ವಿಚಾರಿಸಿರಿ. ಜೈನ್ ಟ್ರಾವಲ್ಸ್ ಬೆಂಗಳೂರು03. 9448402248 7022547922

13 ದಿನಗಳ ಚಾರ್‌ಧಾಮ್ ಯಾತ್ರೆ. 10 ದಿನಗಳ ಗುಜರಾತ್. 7 ದಿನಗಳ ಕಾಶಿ,ಅಯೋಧ್ಯ 12ದಿನಗಳ ನೇಪಾಳ ಮುಕ್ತಿನಾಥ್. ಸಂಪರ್ಕಿಸಿ: ನಂದಿ ಹಾಲಿಡೇಸ್ DVG ರಸ್ತೆ, ಬೆಂಗಳೂರು.4. 9980270467 080-41467722

ಸುವರ್ಣ ಯಾತ್ರ, ನೇಪಾಳ ಮುಕ್ತಿನಾಥ, ಪಶುಪತಿನಾಥ ಅಯೋಧ್ಯೆ, ಪೋಕ್ರ, ಕಟ್ಮಂಡು ಪ್ರವಾಸ 9 ದಿನಗಳು 29/5/24 ಹಾಗೂ 18/06/24. 8660233673, 6360146483

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಚಿನ್ನದ ಸಾಲ: ನಿಯಮ ಪಾಲಿಸಿ

₹20 ಸಾವಿರ ನಗದು ಪಾವತಿ ಮಿತಿ: ಆರ್‌ಬಿಐ ನಿರ್ದೇಶನ

ನವದೆಹಲಿ (ಪಿಟಿಐ): ಬ್ಯಾಂಕೇತರ ಹಣಕಾಸು ಕಂಪನಿಗಳು (ಎನ್‌ಬಿಎಫ್‌ಸಿ) ಚಿನ್ನದ ಮೇಲೆ ಸಾಲ ನೀಡುವಾಗ ₹20 ಸಾವಿರಕ್ಕಿಂತ ಹೆಚ್ಚಿನ ಮೊತ್ತವನ್ನು ನಗದು ರೂಪದಲ್ಲಿ ನೀಡಬಾರದು ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಸೂಚಿಸಿದೆ.

ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 269ಎಸ್‌ಎಸ್ ಅನ್ವಯ ಸಾಲ ಪಡೆಯುವ ವ್ಯಕ್ತಿಗೆ ನೀಡುವ ನಗದನ್ನು ₹20 ಸಾವಿರಕ್ಕೆ ಮಿತಿಗೊಳಿಸಲಾಗಿದೆ. ಈ ನಿಯಮಾವಳಿಯನ್ನು ಚಿನ್ನದ ಸಾಲ ನೀಡುವ ಹಣಕಾಸು ಸಂಸ್ಥೆಗಳು ಮತ್ತು ಕಿರು ಹಣಕಾಸು ಸಂಸ್ಥೆಗಳು ಪಾಲಿಸಬೇಕು ಎಂದು ನಿರ್ದೇಶನ ನೀಡಿದೆ.

ಐಐಎಫ್‌ಎಲ್ ಫೈನಾನ್ಸ್ ಕಂಪನಿಗೆ ಚಿನ್ನದ ಸಾಲ ವಿತರಿಸದಂತೆ ನಿರ್ಬಂಧ ಹೇರಿದ ಒಂದು ವಾರದ ಬಳಿಕ ಆರ್‌ಬಿಐನಿಂದ ಈ ನಿರ್ದೇಶನ ಹೊರಬಿದ್ದಿದೆ.

ಈ ಕಂಪನಿಯು ಚಿನ್ನವನ್ನು ಒತ್ತೆಯಾಗಿಟ್ಟುಕೊಂಡು ನೂರಾರು ಗ್ರಾಹಕರಿಗೆ ಸಾಲ ನೀಡಿದೆ. ಸಕಾಲದಲ್ಲಿ ಸಾಲ ಮರು ಪಾವತಿಸದ ಗ್ರಾಹಕರ ಚಿನ್ನವನ್ನು ಹರಾಜಿಗಿಟ್ಟಿತ್ತು. ಈ ಕುರಿತು ನಡೆಸಿದ ದಾಖಲೆಗಳ ಪರಿಶೀಲನೆ ವೇಳೆ ಕಂಪನಿಯ ವ್ಯವಹಾರದಲ್ಲಿ ಹಲವು ದೋಷಗಳಿರುವುದನ್ನು ಆರ್‌ಬಿಐ ಪತ್ತೆ ಹಚ್ಚಿದೆ ಎಂದು ಹೇಳಲಾಗಿದೆ.

'ನಮ್ಮ ಕಂಪನಿಯ ಆನ್‌ಲೈನ್ ಗೋಲ್ಡ್ ಲೋನ್ ಯೋಜನೆಯು ಕಾಗದರಹಿತ ಪ್ರಕ್ರಿಯೆಯಾಗಿದೆ. ಬಹುತೇಕ ಗ್ರಾಹಕರು ಬ್ಯಾಂಕ್ ಖಾತೆಗಳಿಗೆ ನೇರವಾಗಿ ಹಣ ವರ್ಗಾಯಿಸುವಂತೆ ಕೋರುತ್ತಾರೆ' ಎಂದು ಮಣಪ್ಪುರಂ ಫೈನಾನ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ನಂದಕುಮಾರ್ ಹೇಳಿದ್ದಾರೆ.

'ಆರ್‌ಬಿಐ ನಿರ್ದೇಶನವು ಪಾರದರ್ಶಕತೆಗೆ ಒತ್ತು ನೀಡಲಿದೆ. ಇದರಿಂದ ಡಿಜಿಟಲ್ ಇಂಡಿಯಾಕ್ಕೆ ಉತ್ತೇಜನ ಸಿಗಲಿದೆ. ಆದರೆ, ಗ್ರಾಮೀಣ ಭಾಗದ ಬಹಳಷ್ಟು ಗ್ರಾಹಕರು ಮುಖ್ಯವಾಹಿನಿಯ ಬ್ಯಾಂಕಿಂಗ್ ವ್ಯವಸ್ಥೆಯಿಂದ ದೂರ ಉಳಿದಿದ್ದಾರೆ. ಅಂತಹವರ ಮೇಲೆ ಈ ಕ್ರಮವು ಪರಿಣಾಮ ಬೀರಬಹುದು. ತುರ್ತು ಸಂದರ್ಭದಲ್ಲಿ ಚಿನ್ನದ ಸಾಲ ಪಡೆಯುವ ವ್ಯವಸ್ಥೆಯಿಂದ ಅವರು ಹೊರಗುಳಿಸುವ ಸಾಧ್ಯತೆಯಿದೆ' ಎಂದು ಇಂಡೆಲ್ ಮನಿ ಲಿಮಿಟೆಡ್‌ನ ಸಿಇಒ ಉಮೇಶ್ ಮೋಹನನ್ ಹೇಳಿದ್ದಾರೆ.

ಅಕ್ಷಯ ತೃತೀಯ ಚಿನ್ನ, ಬೆಳ್ಳಿ ಧಾರಣೆ ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಕಳೆದ ಎರಡು ದಿನಗಳ ವಹಿವಾಟಿನಲ್ಲಿ ಇಳಿಕೆ ಕಂಡಿದ್ದ ಚಿನ್ನ ಹಾಗೂ ಬೆಳ್ಳಿ ಧಾರಣೆಯು ಅಕ್ಷಯ ತೃತೀಯ ದಿನವಾದ ಶುಕ್ರವಾರ ಏರಿಕೆ ಕಂಡಿದೆ.

ಚಿನ್ನದ ದರ 10 ಗ್ರಾಂಗೆ ₹950 ಏರಿಕೆಯಾಗಿದ್ದು, ₹73 ಸಾವಿರಕ್ಕೆ ಮುಟ್ಟಿದೆ. ಬೆಳ್ಳಿ ಧಾರಣೆಯು ಕೆ.ಜಿಗೆ ₹2,300 ಹೆಚ್ಚಳವಾಗಿದ್ದು, ₹85,500ಕ್ಕೆ ಮಾರಾಟವಾಗಿದೆ.

'ಅಕ್ಷಯ ತೃತೀಯ ದಿನದಂದು ಗ್ರಾಹಕರು ಚಿನ್ನದ ನಾಣ್ಯ, ಗಟ್ಟಿ ಹಾಗೂ ಆಭರಣಗಳ ಖರೀದಿಗೆ ಮುಂದಾಗಿದ್ದರಿಂದ ಚಿಲ್ಲರೆ ಮಾರುಕಟ್ಟೆಯಲ್ಲಿ ವಹಿವಾಟು ಹೆಚ್ಚಿದೆ' ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ಹೇಳಿದ್ದಾರೆ.

ಜಿಂಬಾಬ್ವೆ ತೀವ್ರ ಬರಪೀಡಿತ ನೆರವಿಗೆ ವಿಶ್ವಸಂಸ್ಥೆ ಮನವಿ

ಹರಾರೆ (ಎ.ಪಿ): ತೀವ್ರ ಬರ ಪರಿಸ್ಥಿತಿಯಿಂದಾಗಿ ಜಿಂಬಾಬ್ವೆಯ ಶೇ 50ರಷ್ಟು ಜನಸಂಖ್ಯೆಯು ಆಹಾರ ಮತ್ತು ನೀರಿನ ತೀವ್ರ ಕೊರತೆಯಿಂದ ಬಳಲುತ್ತಿದೆ, 430 ಮಿಲಿಯನ್ ಡಾಲರ್ ನೆರವಿನ ಅಗತ್ಯವಿದೆ ಎಂದು ವಿಶ್ವಸಂಸ್ಥೆ ತಿಳಿಸಿದೆ.

ಕಳೆದ 4 ದಶಕಗಳ ಅವಧಿಯಲ್ಲೇ ಗಂಭೀರವಾದ ಪರಿಸ್ಥಿತಿಯನ್ನು ಜಿಂಬಾಬ್ವೆ ಎದುರಿಸುತ್ತಿದೆ. 76 ಲಕ್ಷ ಜನರಿಗೆ ಜೀವರಕ್ಷಕ ಮಾನವೀಯ ನೆರವು ಅಗತ್ಯವಿದೆ. ಇವರಲ್ಲಿ ಸುಮಾರು 31 ಲಕ್ಷ ಜನರು ತೀವ್ರ ಬಾಧಿತರಾಗಿದ್ದಾರೆ ಎಂದು ವಿಶ್ವಸಂಸ್ಥೆ ಮಾನವೀಯ ನೆರವು ವ್ಯವಹಾರಗಳ ವಿಭಾಗದ ಎಡ್ವರ್ಡ್ ಮ್ಯಾಥ್ಯೂ ಕಲ್ಲೊನ್ ಹೇಳಿದ್ದಾರೆ.

ಜಿಂಬಾಬ್ವೆಯ ಶೇ 60ರಷ್ಟು ಜನರು ಗ್ರಾಮೀಣ ಪ್ರದೇಶಗಳಲ್ಲಿ ವಾಸವಿದ್ದಾರೆ. ಹೆಚ್ಚಿನವರು ಮಾರುಕಟ್ಟೆಯಲ್ಲಿ ಆಹಾರ ಖರೀದಿಸಲೂ ಅಶಕ್ತರಾಗಿದ್ದಾರೆ. ಬರುವ ತಿಂಗಳುಗಳಲ್ಲಿ ಜೀವಹಾನಿ ತಪ್ಪಿಸಲು ತಕ್ಷಣದ ಕ್ರಮ ಅಗತ್ಯವಿದೆ ಎಂದಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಇಸ್ರೇಲ್ ಸೇನೆಯ ಕಾರ್ಯಾಚರಣೆ ಹಿನ್ನೆಲೆಯಲ್ಲಿ ಕೇಂದ್ರೀಯ ಗಾಜಾದ ರಫಾ ನಗರದಲ್ಲಿ ಆಶ್ರಯ ಪಡೆದಿದ್ದ ನಿವಾಸಿಗಳು ಶುಕ್ರವಾರ ಪರಿಕರಗಳ ಸಮೇತ ಸುರಕ್ಷಿತ ಸ್ಥಳಗಳತ್ತ ತೆರಳಿದರು–ಎಎಫ್‌ಪಿ ಚಿತ್ರ

'ರಫಾ' ತೊರೆದ 1 ಲಕ್ಷ ಜನ

ದಕ್ಷಿಣ ಗಾಜಾ: ಆಹಾರ ಪೂರೈಕೆಯಲ್ಲಿ ವ್ಯತ್ಯಯ

ಜೆರುಸಲೇಂ (ಎಪಿ): 'ಆಹಾರ, ಇಂಧನ ಪೂರೈಕೆಯಲ್ಲಿ ಭಾರಿ ವ್ಯತ್ಯಯ ಹಿನ್ನೆಲೆಯಲ್ಲಿ 1,10,000ಕ್ಕೂ ಹೆಚ್ಚು ಮಂದಿ ರಫಾ ನಗರದಿಂದ ತೆರಳಿದ್ದಾರೆ' ಎಂದು ವಿಶ್ವಸಂಸ್ಥೆ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅಮೆರಿಕದ ಎಚ್ಚರಿಕೆಯ ನಡುವೆಯೂ ರಫಾ ನಗರ ಗುರಿಯಾಗಿಸಿ ಇಸ್ರೇಲ್ ದಾಳಿ ಮುಂದುವರಿಸಿರುವುದು ಇದಕ್ಕೆ ಕಾರಣ. ದಾಳಿ ಹಿನ್ನೆಲೆಯಲ್ಲಿ ಮಾನವೀಯ ನೆರವು ನೀಡುವ ಸಿಬ್ಬಂದಿ ಹಾಗೂ ವೈದ್ಯಕೀಯ ಸಿಬ್ಬಂದಿ ಪ್ರವೇಶಿಸಲು ಆಗದ ಸ್ಥಿತಿ ಇದೆ ಎಂದು ರಫಾದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಯು ತಿಳಿಸಿದ್ದಾರೆ.

ಇಂಧನದ ಕೊರತೆಯು ಗಾಜಾದಾದ್ಯಂತ ವೈದ್ಯಕೀಯ ವ್ಯವಸ್ಥೆ, ನೀರಿನ ಪೂರೈಕೆ ವ್ಯವಸ್ಥೆಯ ಮೇಲೂ ಪರಿಣಾಮ ಬೀರಿದೆ. ದಾಳಿಯಿಂದಾಗಿ ಗಾಜಾದಲ್ಲಿ 34,500ಕ್ಕೂ ಹೆಚ್ಚು ಮಂದಿ ಸತ್ತಿದ್ದಾರೆ. ವಸತಿ ಸಮುಚ್ಚಯಗಳು, ಆಸ್ಪತ್ರೆ, ಮಸೀದಿ, ಶಾಲೆ ಕಟ್ಟಡಗಳು ನೆಲಸಮವಾಗಿವೆ ಎಂದು ಹೇಳಿದೆ.

ಏಕಾಂಗಿ ಹೋರಾಟಕ್ಕೂ ಸಿದ್ಧ: 'ಹಮಾಸ್ ಬಂಡುಕೋರರ ವಿರುದ್ಧದ ಹೋರಾಟಕ್ಕೆ ಅಮೆರಿಕ ನೆರವು ನೀಡದಿದ್ದರೂ ಇಸ್ರೇಲ್ ಏಕಾಂಗಿಯಾಗಿ ಹೋರಾಡಲಿದೆ' ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ತಿಳಿಸಿದ್ದಾರೆ.

ಅಮೆರಿಕ ಮತ್ತು ಇಸ್ರೇಲ್ ನಡುವಿನ ಬಿನ್ನಪ್ಪ ಗಂಭೀರವಾಗುತ್ತಿರುವ ಬೆನ್ನಲ್ಲೇ ಈ ಹೇಳಿಕೆ ಹೊರಬಿದ್ದಿದೆ.

'ಪ್ಯಾಲೆಸ್ಟೀನ್‌ಗೆ ವಿಶ್ವಸಂಸ್ಥೆ ಸದಸ್ಯತ್ವ –ನಿರ್ಣಯಕ್ಕೆ ಅಸ್ತು'

ವಿಶ್ವಸಂಸ್ಥೆ (ಪಿಟಿಐ): ವಿಶ್ವಸಂಸ್ಥೆಯ ಪೂರ್ಣಾವಧಿ ಸದಸ್ಯತ್ವ ಪಡೆಯಲು ಪ್ಯಾಲೆಸ್ಟೀನ್ ಅರ್ಹವಾಗಿದ್ದು, ಅದಕ್ಕೆ ಸದಸ್ಯತ್ವ ನೀಡಬೇಕು ಎಂಬ ನಿರ್ಣಯದ ಪರವಾಗಿ ಭಾರತವು ಶುಕ್ರವಾರ ಮತಚಲಾಯಿಸಿತು.

ಅಲ್ಲದೆ, ಈ ಪ್ರಸ್ತಾವವನ್ನು 'ಸಕಾರಾತ್ಮಕ'ವಾಗಿ ಪರಿಗಣಿಸಬೇಕು ಎಂದೂ ಭದ್ರತಾ ಮಂಡಳಿಗೆ ಶಿಫಾರಸು ಮಾಡಿತು. ಈ ಕುರಿತು ಚರ್ಚಿಸಲು 193 ಸದಸ್ಯ ಬಲದ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ತುರ್ತು ಅಧಿವೇಶನ ಇಲ್ಲಿ ನಡೆಯಿತು.

ಪ್ಯಾಲೆಸ್ಟೀನ್‌ಗೆ ಸದಸ್ಯತ್ವ ನೀಡಬೇಕು ಎಂದು ಕೋರುವ ನಿರ್ಣಯದ ಪರವಾಗಿ 143 ಮತಗಳು, ವಿರುದ್ಧವಾಗಿ 9 ಮತಗಳು ಬಿದ್ದವು. 25 ರಾಷ್ಟ್ರಗಳು ಗೈರುಹಾಜರಾಗಿದ್ದವು. ಬಳಿಕ ಸಭೆ ಕರತಾಡನ ಮೂಲಕ ಮೆಚ್ಚುಗೆ ಸೂಚಿಸಿತು.

'ಹಸ್ತಕ್ಷೇಪ, ಅಮೆರಿಕ ನಿರಾಕರಣೆ'

ವಾಷಿಂಗ್ಟನ್ (ಪಿಟಿಐ): 'ಭಾರತದಲ್ಲಿ ಸದ್ಯ ನಡೆಯುತ್ತಿರುವ ಸಾರ್ವತ್ರಿಕ ಚುನಾವಣೆಯಲ್ಲಿ ಅಮೆರಿಕ ಹಸ್ತಕ್ಷೇಪ ಮಾಡುತ್ತಿದೆ' ಎಂಬ ರಷ್ಯಾದ ಆರೋಪವನ್ನು ಅಮೆರಿಕವು ತಳ್ಳಿಹಾಕಿದೆ.

'ಖಂಡಿತವಾಗಿ ಇಲ್ಲ. ಭಾರತದಲ್ಲಿನ ಚುನಾವಣೆಯಲ್ಲಿ ನಮ್ಮ ಪಾತ್ರವಿಲ್ಲ. ಅದು, ಭಾರತದ ಜನರು ತೆಗೆದುಕೊಳ್ಳಬೇಕಾದ ನಿರ್ಧಾರ. ಅಲ್ಲದೆ, ವಿಶ್ವದ ಯಾವುದೇ ಚುನಾವಣೆಯಲ್ಲಿ ನಾವು ಪಾತ್ರ ವಹಿಸುವುದಿಲ್ಲ' ಎಂದು ಅಮೆರಿಕದ ವಿದೇಶಾಂಗ ಇಲಾಖೆಯ ವಕ್ತಾರ ಮ್ಯಾಥ್ಯೂ ಮಿಲ್ಲರ್ ಸ್ಪಷ್ಟಪಡಿಸಿದ್ದಾರೆ.

ಗುರುಪತ್ವಂತ್ ಸಿಂಗ್ ಪನ್ನು ಹತ್ಯೆಯ ಸಂಚು ಕುರಿತ ವಾಷಿಂಗ್ಟನ್ ಪೋಸ್ಟ್‌ನ ಈಚಿನ ವರದಿಗೆ ರಷ್ಯಾದ ವಿದೇಶಾಂಗ ಸಚಿವಾಲಯದ ವಕ್ತಾರೆ ಮಾರಿಯಾ ಝುಕರೋವಾ ಅವರ ಪ್ರತಿಕ್ರಿಯೆ ಉಲ್ಲೇಖಿಸಿ ಮಿಲ್ಲರ್ ಈ ಮಾತು ಹೇಳಿದರು.

ಭಾರತದ ವಿರುದ್ಧ ಅಮೆರಿಕ ಹೀಗೆ ನಿಯಮಿತವಾಗಿ ಆರೋಪಿಸುತ್ತಿದೆ .'ಭಾರತದ ವಿರುದ್ಧ ಅಮೆರಿಕ ಹೀಗೆ ನಿಯಮಿತವಾಗಿ ಆರೋಪಿಸುತ್ತಿದೆ. ಭಾರತದಲ್ಲಿ ಆಂತರಿಕ ರಾಜಕೀಯ ಸ್ಥಿತಿಯನ್ನು ದುರ್ಬಲಗೊಳಿಸುವುದು, ಈ ಮೂಲಕ ಚುನಾವಣೆಯನ್ನು ಸಂಕೀರ್ಣಗೊಳಿಸುವುದು ಇದರ ಉದ್ದೇಶ' ಎಂದು ಹೇಳಿದ್ದರು.

'ಮಾಲ್ದೀವ್ಸ್‌ನಿಂದ ಎಲ್ಲ ಸೈನಿಕರು ವಾಪಸು'

ಮಾಲೆ (ಪಿಟಿಐ): 'ಮಾಲ್ದೀವ್ಸ್‌ನಲ್ಲಿ ನಿಯೋಜಿಸಲಾಗಿದ್ದ ಎಲ್ಲ ಸೈನಿಕರನ್ನು ಭಾರತವು ವಾಪಸ್ ಕರೆಯಿಸಿಕೊಂಡಿದೆ' ಎಂದು ಸರ್ಕಾರ ಶುಕ್ರವಾರ ತಿಳಿಸಿದೆ.

ಭಾರತದ ಎಲ್ಲ ಸೈನಿಕರನ್ನು ವಾಪಸು ಕಳುಹಿಸಲಾಗಿದೆ ಎಂದು ಅಧ್ಯಕ್ಷರ ಕಾರ್ಯಾಲಯದ ವಕ್ತಾರೆ ಹೀನಾ ವಾಲೀದ್ ತಿಳಿಸಿದ್ದಾರೆ. ಆದರೆ, ಎಷ್ಟು ಸೈನಿಕರು ಭಾರತಕ್ಕೆ ಮರಳಿದ್ದಾರೆ ಎಂಬುದನ್ನು ಅವರು ಬಹಿರಂಗಪಡಿಸಿಲ್ಲ. ಮಾಲ್ದೀವ್ಸ್‌ಗೆ ಭಾರತ ಉಡುಗೊರೆಯಾಗಿ ನೀಡಿದ್ದ ಡಾರ್ನಿಯರ್ ಯುದ್ಧ ವಿಮಾನ ಮತ್ತು ಎರಡು ಹೆಲಿಕಾಪ್ಟರ್‌ಗಳ ನಿರ್ವಹಣೆಗಾಗಿ ಸೈನಿಕರನ್ನು ನಿಯೋಜಿಸಲಾಗಿತ್ತು.

ಪಾಕಿಸ್ತಾನ ಗೌರವಿಸುವಂತೆ ಅಯ್ಯರ್ ಸಲಹೆ: ಅಂತರ ಕಾಯ್ದುಕೊಂಡ ಕಾಂಗ್ರೆಸ್

ಮಣಿಶಂಕರ್ ಅಯ್ಯರ್ ಮಾತಿಗೆ ಬಿಜೆಪಿ ಕಿಡಿ

ನವದೆಹಲಿ (ಪಿಟಿಐ): ಪಾಕಿಸ್ತಾನವನ್ನು ಭಾರತ ಗೌರವಿಸಬೇಕು ಎಂದು ಕಾಂಗ್ರೆಸ್ ಮುಖಂಡ ಮಣಿಶಂಕರ್ ಅಯ್ಯರ್ ಹೇಳಿದ್ದ ಹಳೆ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡಿದ್ದು, ಇದು ಬಿಜೆಪಿ ಮತ್ತು ಕಾಂಗ್ರೆಸ್ ನಡುವಿನ ವಾಕ್ಸಮರಕ್ಕೆ ಕಾರಣವಾಗಿದೆ.

'ಈ ಮೂಲಕ ಕಾಂಗ್ರೆಸ್ ಪಕ್ಷವು ಭಯೋತ್ಪಾದನೆಯನ್ನು ಪೋಷಿಸುತ್ತಿರುವ ಪಾಕಿಸ್ತಾನವನ್ನು ಸಮರ್ಥಿಸಿಕೊಳ್ಳುತ್ತಿದೆ' ಎಂದು ಬಿಜೆಪಿ ಆರೋಪಿಸಿದೆ. ಅಯ್ಯರ್ ಅವರ ಹೇಳಿಕೆಯಿಂದ ಕಾಂಗ್ರೆಸ್ ಅಂತರ ಕಾಯ್ದುಕೊಂಡಿದೆ. 'ಬಿಜೆಪಿಯ ಚುನಾವಣಾ ಪ್ರಚಾರವು ಮುಗ್ಗರಿಸುತ್ತಿರುವ ಕಾರಣ, ಅದು ತನ್ನ ಅನುಕೂಲಕ್ಕಾಗಿ ನನ್ನ ಹಳೆ ವಿಡಿಯೊವನ್ನು ಬಳಸಿಕೊಳ್ಳುತ್ತಿದೆ' ಎಂದು ಅಯ್ಯರ್ ದೂರಿದ್ದಾರೆ.

ಕಳೆದ ವರ್ಷ ಬಿಡುಗಡೆ ಆಗಿರುವ ನನ್ನ ಎರಡು ಪುಸ್ತಕಗಳಾದ 'ಮೆಮೊಯಿರ್ಸ್ ಆಫ್ ಎ ಮೇವರಿಕ್' ಮತ್ತು 'ದಿ ರಾಜೀವ್ ಐ ನೊ'ಗಳಲ್ಲಿನ ಸಂಬಂಧಿತ ಭಾಗಗಳನ್ನು ಆಸಕ್ತರು ಓದಬಹುದು ಎಂದು ಅಯ್ಯರ್ ಹೇಳಿದ್ದಾರೆ.

ಅದು ಚಳಿಗಾಲದಲ್ಲಿ ನೀಡಿದ ಸಂದರ್ಶನದ ವಿಡಿಯೊ. ಚುನಾವಣೆ ಸಂದರ್ಭದಲ್ಲಿ ಇದನ್ನು ಪ್ರಸ್ತಾಪಿಸುವ ಮೂಲಕ ಬಿಜೆಪಿ ರಾಜಕೀಯ ಲಾಭಕ್ಕೆ ಮುಂದಾಗಿದೆ
ಮಣಿಶಂಕರ್ ಅಯ್ಯರ್
ಕಾಂಗ್ರೆಸ್ ಮುಖಂಡ

ಈ ಕುರಿತು ವ್ಯಾಪಕ ಟೀಕೆ ವ್ಯಕ್ತವಾದ ಬೆನ್ನಲ್ಲೇ ಪ್ರತಿಕ್ರಿಯಿಸಿರುವ ಕಾಂಗ್ರೆಸ್, ಅಯ್ಯರ್ ಅವರು ಕೆಲ ತಿಂಗಳ ಹಿಂದೆ ಈ ಕುರಿತು ಹೇಳಿರುವ ಮಾತುಗಳನ್ನು ಸಂಪೂರ್ಣವಾಗಿ ಒಪ್ಪಲು ಆಗುವುದಿಲ್ಲ ಎಂದು ಹೇಳುವ ಮೂಲಕ ಅಂತರ ಕಾಯ್ದುಕೊಂಡಿದೆ.

'ಅಯ್ಯರ್ ಅವರ ಅಭಿಪ್ರಾಯಕ್ಕೆ ಕಾಂಗ್ರೆಸ್‌ನ ಸಹಮತ ಇಲ್ಲ. ಅವರ ಮಾತಿಗೂ, ಪಕ್ಷಕ್ಕೂ ಸಂಬಂಧವಿಲ್ಲ. ಪ್ರಧಾನಿ ನರೇಂದ್ರ ಮೋದಿ ಅವರ ಅವಿವೇಕದ ನಡೆಗಳಿಂದ ಜನರ ಗಮನವನ್ನು ಬೇರೆಡೆ ಸೆಳೆಯಲು ಬಿಜೆಪಿ ಹಳೆ ವಿಡಿಯೊ ಬಳಸಿಕೊಳ್ಳುತ್ತಿದೆ' ಎಂದು ಕಾಂಗ್ರೆಸ್‌ನ ಮಾಧ್ಯಮ ವಿಭಾಗದ ಅಧ್ಯಕ್ಷ ಪವನ್ ಖೇರಾ 'ಎಕ್ಸ್'ನಲ್ಲಿ ಹೇಳಿದ್ದಾರೆ.

ಜೈಶಂಕರ್ ವಿಡಿಯೊ ಹಂಚಿಕೊಂಡ ಕಾಂಗ್ರೆಸ್: 'ಹಳೆಯ ವಿಡಿಯೊಗಳನ್ನು ಬಳಸುವುದಾದರೆ, ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಚೀನಾಕ್ಕೆ ಹೆದರಿ ಎಂದು ಸಾರ್ವಜನಿಕವಾಗಿ ಭಾರತಕ್ಕೆ ಸಲಹೆ ನೀಡಿದ್ದ ವಿಡಿಯೊ ಇಲ್ಲಿದೆ ನೋಡಿ' ಎಂದು ಖೇರಾ ಅವರು ವಿದೇಶಾಂಗ ಸಚಿವರ ವಿಡಿಯೊವನ್ನು ಹಂಚಿಕೊಂಡಿದ್ದಾರೆ.

ಸಚಿವ ರಾಜೀವ್ ಕಿಡಿ: 'ಭಾರತವು ಪಾಕಿಸ್ತಾನಕ್ಕೆ ಭಯ ಪಡಬೇಕು ಮತ್ತು ಅದಕ್ಕೆ ಗೌರವ ನೀಡಬೇಕು ಎಂದು ಅಯ್ಯರ್ ಅವರು ಬಯಸುತ್ತಿದ್ದಾರೆ. ಆದರೆ, ನವ ಭಾರತ ಯಾರಿಗೂ ಹೆದರುವುದಿಲ್ಲ. ಅವರ ಹೇಳಿಕೆಗಳು ಕಾಂಗ್ರೆಸ್‌ನ ಉದ್ದೇಶ, ನೀತಿ ಮತ್ತು ಸಿದ್ಧಾಂತಗಳನ್ನು ಎತ್ತಿ ತೋರಿಸಿವೆ' ಎಂದು ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಕಿಡಿಕಾರಿದ್ದಾರೆ.

ರಾಹುಲ್ ಗಾಂಧಿ ಅವರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷವು ಪಾಕಿಸ್ತಾನ ಮತ್ತು ಭಯೋತ್ಪಾದನೆಯ ರಕ್ಷಕ ಮತ್ತು ಸಮರ್ಥಕನಾಗಿ ಮಾರ್ಪಟ್ಟಿದೆ ಎಂದು ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಕಾಂಗ್ರೆಸ್ ನಾಯಕ ಸ್ಯಾಮ್ ಪಿತ್ರೋಡಾ ಇತ್ತೀಚೆಗೆ ಜನಾಂಗೀಯ ಹೇಳಿಕೆ ನೀಡಿದ್ದರು. ಆಗ ಕಾಂಗ್ರೆಸ್ ಅವರ ಹೇಳಿಕೆಯಿಂದ ಅಂತರ ಕಾಯ್ದುಕೊಂಡಿತ್ತು. ಈಗ ಅಯ್ಯರ್ ಹೇಳಿಕೆಯಿಂದ ಅಂತರ ಕಾಯ್ದುಕೊಂಡಿದೆ ಎಂದು ದೂರಿದ್ದಾರೆ.

ಭಾರತದ ಚುನಾವಣೆಯಲ್ಲಿ ಪಾಕ್ ವಿಚಾರ ಏಕೆ: ಪ್ರಿಯಾಂಕಾ ಪ್ರಶ್ನೆ

ಅಮೇಠಿ (ಉತ್ತರ ಪ್ರದೇಶ, ಪಿಟಿಐ): 'ಭಾರತದಲ್ಲಿ ಚುನಾವಣೆಗಳು ನಡೆಯುತ್ತಿರುವಾಗ ಪಾಕಿಸ್ತಾನದ ಬಗ್ಗೆ ಏಕೆ ಚರ್ಚಿಸಲಾಗುತ್ತಿದೆ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಕಿಡಿಕಾರಿದರು.

ಪಿಟಿಐಗೆ ನೀಡಿದ ವಿಶೇಷ ಸಂದರ್ಶನದಲ್ಲಿ ಮಾತನಾಡಿದ ಅವರು, 'ಮಣಿಶಂಕರ್ ಅಯ್ಯರ್ ಅವರು ಈ ಹೇಳಿಕೆಯನ್ನು ಯಾವಾಗ ನೀಡಿದ್ದರು. ಇದು ಹಳೆಯ ಹೇಳಿಕೆಯಾಗಿದ್ದರೆ, ಇಂದು ಅದನ್ನು ಏಕೆ ಚರ್ಚಿಸುತ್ತಿದ್ದೇವೆ. ಎರಡನೇಯದಾಗಿ ಚುನಾವಣೆಗಳು ಎಲ್ಲಿ ನಡೆಯುತ್ತಿವೆ? ಭಾರತದಲ್ಲಿಯೋ ಅಥವಾ ಪಾಕಿಸ್ತಾನದಲ್ಲಿಯೋ? ಭಾರತದಲ್ಲಿ ಚುನಾವಣೆ ನಡೆಯುತ್ತಿರುವಾಗ ಇಲ್ಲಿ ಪಾಕಿಸ್ತಾನದ ಬಗ್ಗೆ ಏಕೆ ಚರ್ಚಿಸುತ್ತಿದ್ದೇವೆ' ಎಂದು ಅವರು ಪ್ರಶ್ನಿಸಿದರು.

ದೇಶದಲ್ಲಿ ನಿರುದ್ಯೋಗ ಪ್ರಮಾಣ 45 ವರ್ಷಗಳಲ್ಲಿಯೇ ಗರಿಷ್ಠ ಮಟ್ಟ ತಲುಪಿದೆ ಎಂದ ಅವರು, ನಿಜವಾದ ಸಮಸ್ಯೆಗಳನ್ನು ಆಧರಿಸಿ ಚುನಾವಣೆಯಲ್ಲಿ ಹೋರಾಡಿ ಎಂದು ಅವರು ಆಡಳಿತ ಪಕ್ಷ ಬಿಜೆಪಿಗೆ ಕರೆ ನೀಡಿದರು.

ಬಿಜೆಪಿಯು ಚುನಾವಣೆಯಲ್ಲಿ ಗೆಲ್ಲಲು ಹಿಂದೂ–ಮುಸ್ಲಿಂ ಕುರಿತ ಮಾತುಗಳನ್ನು ಆಡುತ್ತಿದೆ ಎಂದು ಆರೋಪಿಸಿದ ಅವರು, ಜನರು ಧರ್ಮ ಮತ್ತು ಜಾತಿಯ ಆಧಾರದ ಮೇಲೆ ಚುನಾವಣೆಗಳನ್ನು ಎದುರಿಸಲು ಬಯಸುತ್ತಿಲ್ಲ ಎಂದು ಪ್ರತಿಪಾದಿಸಿದರು.

ವಿಡಿಯೊದಲ್ಲಿ ಏನಿದೆ...

'ಪಾಕಿಸ್ತಾನವು ಸಾರ್ವಭೌಮ ದೇಶವಾಗಿದ್ದು ಭಾರತ ಅದನ್ನು ಗೌರವಿಸಬೇಕು. ಅಲ್ಲದೆ ಅದು ಪರಮಾಣು ಬಾಂಬ್ ಹೊಂದಿರುವ ದೇಶವಾಗಿರುವುದರಿಂದ ಮಾತುಕತೆಯಲ್ಲಿ ತೊಡಗಬೇಕು' ಎಂದು ಮಣಿಶಂಕರ್ ಅಯ್ಯರ್ ಅವರು ಹೇಳಿದ್ದಾರೆ.

ಒಂದು ವೇಳೆ ಅಲ್ಲಿ, 'ಹುಚ್ಚು ವ್ಯಕ್ತಿ'ಯೊಬ್ಬ ಅಧಿಕಾರಕ್ಕೆ ಬಂದು, ಅಣುಬಾಂಬ್ ಪ್ರಯೋಗಿಸಿದರೆ ಒಳ್ಳೆಯದಾಗುವುದಿಲ್ಲ. ಅದರ ಪರಿಣಾಮ ನಾವು ಎದುರಿಸಬೇಕಾಗುತ್ತದೆ ಎಂದು ಅವರು ತಿಳಿಸಿದ್ದಾರೆ.

'ನಾವು ಅವರಿಗೆ ಗೌರವ ನೀಡದಿದ್ದರೆ, ಅವರು ಭಾರತದ ಮೇಲೆ ಪರಮಾಣು ಬಾಂಬ್ ಬಳಸಲು ಯೋಜಿಸಬಹುದು ಎಂದು ಅವರು ಉಲ್ಲೇಖಿಸಿದ್ದಾರೆ.

ನ್ಯಾಯಕ್ಕಾಗಿ ಮಧ್ಯಪ್ರವೇಶಕ್ಕೆ ರಾಷ್ಟ್ರಪತಿಗೆ ಮನವಿ

ಸಿ.ವಿ. ಆನಂದ ಬೋಸ್

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ರಾಜ್ಯಪಾಲ ಸಿ.ವಿ. ಆನಂದ ಬೋಸ್ ವಿರುದ್ಧ ಲೈಂಗಿಕ ಕಿರುಕುಳದ ದೂರು ನೀಡಿರುವ ರಾಜಭವನದ ಮಹಿಳಾ ಸಿಬ್ಬಂದಿ, ತನಗೆ ನ್ಯಾಯ ದೊರಕಿಸಿಕೊಡಲು ಮಧ್ಯಪ್ರವೇಶಿಸುವಂತೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಪತ್ರ ಬರೆದು ಕೋರುವುದಾಗಿ ಶುಕ್ರವಾರ ತಿಳಿಸಿದ್ದಾರೆ.

ರಾಜಭವನ ಆವರಣದಲ್ಲಿನ ಮೇ 2ರ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಬೋಸ್ ಅವರು ಗುರುವಾರ ಸಾರ್ವಜನಿಕರೆದುರು ಬಿಡುಗಡೆಗೊಳಿಸಿದ ಬೆನ್ನಲ್ಲೇ ಸಂತ್ರಸ್ತೆ ಈ ಪ್ರತಿಕ್ರಿಯೆ ನೀಡಿದ್ದಾರೆ.

ಗುರುತು ಬಹಿರಂಗಕ್ಕೆ ಆಕ್ಷೇಪ: 'ಸಾರ್ವಜನಿಕರ ಮುಂದೆ ಪ್ರದರ್ಶಿಸಿದ ದೃಶ್ಯಾವಳಿಯಲ್ಲಿ ನನ್ನ ಮುಖವನ್ನು ಮಸುಕಾಗಿಸದೆ, ಗುರುತು ಬಹಿರಂಗಪಡಿಸಿದ್ದಾರೆ' ಎಂದು ಸಂತ್ರಸ್ತೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ. 'ನನ್ನ ಗುರುತನ್ನು ಗೋಪ್ಯವಾಗಿಡದೇ, ಮೇ 2ರ ಸಿಸಿಟಿವಿ ದೃಶ್ಯಾವಳಿಗಳನ್ನು ಪ್ರದರ್ಶಿಸಿದ್ದು ಸರಿಯಲ್ಲ. ನನ್ನ ಅನುಮತಿ ಇಲ್ಲದೆ ರಾಜ್ಯಪಾಲರು ನನ್ನ ದೃಶ್ಯಾವಳಿಗಳನ್ನು ಹೇಗೆ ಪ್ರದರ್ಶಿಸಿದರು? ಈ ಮೂಲಕ ಅವರು ಇನ್ನೊಂದು ಹೊಸ ಅಪರಾಧ ಎಸಗಿದ್ದಾರೆ' ಎಂದು ಅವರು ದೂರಿದರು.

'ರಾಜ್ಯಪಾಲರಿಗೆ ಸಾಂವಿಧಾನಿಕ ವಿನಾಯಿತಿ ಇರುವ ಕಾರಣಕ್ಕೆ ಪೊಲೀಸರ ಕೈಗಳು ಕಟ್ಟಿಹಾಕಿವೆ. ಹೀಗಾಗಿ ಪೊಲೀಸರ ಮೇಲೆ ಹೆಚ್ಚು ಭರವಸೆ ಇಡಲು ಆಗುತ್ತಿಲ್ಲ' ಎಂದಿರುವ ಸಂತ್ರಸ್ತೆ, 'ನಾನು ತೀವ್ರ ಖಿನ್ನತೆಗೆ ಒಳಗಾಗುತ್ತಿದ್ದೇನೆ. ನ್ಯಾಯಕ್ಕಾಗಿ ರಾಷ್ಟ್ರಪತಿಯವರನ್ನು ಕೋರುವ ಏಕೈಕ ಮಾರ್ಗ ನನ್ನ ಮುಂದಿದೆ' ಎಂದು ಪಿಟಿಐಗೆ ತಿಳಿಸಿದ್ದಾರೆ.

ಪ್ರಧಾನಿಗೆ ಪತ್ರ ಬರೆಯುವುದು ನಿಷ್ಪ್ರಯೋಜಕ: ಈ ಕುರಿತು ಪ್ರಧಾನಿ ನರೇಂದ್ರ ಮೋದಿ ನೆರವು ಪಡೆಯಲು ಯೋಜಿಸುತ್ತಿದ್ದೀರಾ ಎಂಬ ಪ್ರಶ್ನೆಗೆ, 'ಪ್ರಧಾನಿಯವರು ರಾಜಭವನದಲ್ಲಿ ತಂಗಲು ಬಂದಿದ್ದ ದಿನವೇ ಈ ಘಟನೆ ಹೇಗೆ ಸಂಭವಿಸಿತು. ನಾನು ಆ ಸಂಕಷ್ಟದಲ್ಲಿದ್ದ ವೇಳೆ ಅವರ ಭದ್ರತಾ ಸಿಬ್ಬಂದಿ ನನ್ನ ವೇದನೆಗೆ ಸ್ಪಂದಿಸಲಿಲ್ಲ. ಅವರು ಮೋದಿ ಅವರಿಗೆ ವಿಷಯ ತಿಳಿಸಿರಬಹುದು ಎಂದು ಭಾವಿಸಿದ್ದೇನೆ. ಆದರೆ ಅವರಿಂದ ಪ್ರತಿಕ್ರಿಯೆ ಬಂದಿಲ್ಲ. ಹೀಗಿರುವಾಗ ಅವರಿಗೆ ಪತ್ರ ಬರೆಯುವುದು ನಿಷ್ಪ್ರಯೋಜಕ' ಎಂದರು.

ಸಿ.ಎಂ ಕೇಜ್ರಿವಾಲ್ ಜೈಲಿನಿಂದ ಬಿಡುಗಡೆ

ಒಂದನೇ ಪುಟದಿಂದ...

'ಅಂತಹ ಯಾವ ಪೂರ್ವ ನಿದರ್ಶನ ಇಲ್ಲದಿರುವಾಗ ಕೇಜ್ರಿವಾಲ್ ಅವರಿಗೆ ಮಧ್ಯಂತರ ಜಾಮೀನು ನೀಡುವುದು ಸರಿಯಲ್ಲ' ಎಂಬ ಇ.ಡಿ ವಾದವನ್ನು ಪೀಠ ತಳ್ಳಿಹಾಕಿತು.

'ಚುನಾವಣಾ ಪ್ರಚಾರ ಕಾರ್ಯದಲ್ಲಿ ಪಾಲ್ಗೊಳ್ಳುವುದಕ್ಕಾಗಿ ಕೇಜ್ರಿವಾಲ್ ಅವರಿಗೆ ಮಧ್ಯಂತರ ಜಾಮೀನು ನೀಡುವುದರಿಂದ, ದೇಶದ ಜನ ಸಾಮಾನ್ಯರಿಗಿಂತ ರಾಜಕಾರಣಿಗಳಿಗೆ ಹೆಚ್ಚಿನ ಮಣೆ ಹಾಕಿದಂತಾಗುತ್ತದೆ' ಎಂಬ ಇ.ಡಿ ಪರ ವಕೀಲರ ವಾದವನ್ನು ಪೀಠ ಒಪ್ಪಲಿಲ್ಲ.

'ಮಧ್ಯಂತರ ಜಾಮೀನು/ಬಿಡುಗಡೆ ಕುರಿತ ಪ್ರಶ್ನೆ ಎದುರಾದಾಗ, ಪ್ರತ್ಯೇಕ ಭಾಗವಾಗಿರುವ ವ್ಯಕ್ತಿ ಜೊತೆ ತಳುಕು ಹಾಕಿಕೊಂಡಿರುವ ಸೂಕ್ಷ್ಮ ಸಂಗತಿಗಳು ಹಾಗೂ ಸಂದರ್ಭಗಳನ್ನು ನ್ಯಾಯಾಲಯ ಯಾವಾಗಲೂ ಪರಿಗಣಿಸುತ್ತದೆ. ಒಂದು ವೇಳೆ, ಇಂತಹ ಸಂಗತಿಗಳನ್ನು ನಿರ್ಲಕ್ಷಿಸಿದಲ್ಲಿ ಅದು ಅನ್ಯಾಯ ಹಾಗೂ ತಪ್ಪು ಆಗುತ್ತದೆ' ಎಂದ ಪೀಠ, 'ಲೋಕಸಭಾ ಚುನಾವಣೆಯು ಈ ವರ್ಷದ ಅತ್ಯಂತ ಮಹತ್ವದ ಸಂದರ್ಭವಾಗಿದೆ' ಎಂದು ಹೇಳಿತು.

'ಕೇಜ್ರಿವಾಲ್ ವಿರುದ್ಧ ಗಂಭೀರ ಸ್ವರೂಪದ ಆರೋಪಗಳನ್ನು ಮಾಡಲಾಗಿದೆಯಾದರೂ ಯಾವುದೇ ಸಂಶಯ ಇಲ್ಲ. ಆದರೆ, ಅವರಿಗೆ ಇನ್ನೂ ಶಿಕ್ಷೆ ವಿಧಿಸಿಲ್ಲ. ಅವರು ಅಪರಾಧ ಹಿನ್ನೆಲೆ ಹೊಂದಿಲ್ಲ ಹಾಗೂ ಅವರಿಂದ ಸಮಾಜಕ್ಕೆ ಯಾವುದೇ ಬೆದರಿಕೆಯೂ ಇಲ್ಲ' ಎಂದು ಹೇಳಿತು.

'ಅವರ ಬಂಧನ ಎಷ್ಟರ ಮಟ್ಟಿಗೆ ಕಾನೂನುಬದ್ಧ ಮತ್ತು ಸಿಂಧುವಾಗಿದೆ ಎಂಬುದನ್ನೇ ಈ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿದ್ದು, ಈ ಕುರಿತು ಸುಪ್ರೀಂ ಕೋರ್ಟ್ ತನ್ನ ತೀರ್ಪನ್ನು ಪ್ರಕಟಿಸಬೇಕಿದೆ' ಎಂದು ನ್ಯಾಯಮೂರ್ತಿಗಳು ಹೇಳಿದರು.

'ಕೇಜ್ರಿವಾಲ್ ಅವರಿಗೆ 2023ರ ಅಕ್ಟೋಬರ್‌ನಲ್ಲಿ ಮೊದಲ ಸಮನ್ಸ್ ನೀಡಲಾಗಿತ್ತು. ನಂತರ 9 ನೋಟಿಸ್/ಸಮನ್ಸ್‌ಗಳನ್ನು ನೀಡಿದ್ದರೂ ಅವರು ವಿಚಾರಣೆಗೆ ಹಾಜರಾಗಿಲ್ಲ ಎಂಬ ಇ.ಡಿ ವಾದ ಸರಿಯಾಗಿದೆ. ಇದು ಅವರ ಕುರಿತಾದ ಒಂದು ನಕಾರಾತ್ಮಕ ಅಂಶ. ಆದರೆ, ನಾವು ಗಮನ ಹರಿಸಬೇಕಾದ ಇತರ ಸಂಗತಿಗಳು ಸಾಕಷ್ಟಿವೆ. ಕೇಜ್ರಿವಾಲ್ ಒಂದು ರಾಜ್ಯದ ಮುಖ್ಯಮಂತ್ರಿ ಮತ್ತು ರಾಷ್ಟ್ರೀಯ ಪಕ್ಷವೊಂದರ ನೇತಾರ' ಎಂದು ಪೀಠ ಹೇಳಿತು.

ಸಂಭ್ರಮ: ಅರವಿಂದ ಕೇಜ್ರಿವಾಲ್ ಅವರಿಗೆ ಸುಪ್ರೀಂ ಕೋರ್ಟ್ ಮಧ್ಯಂತರ ಜಾಮೀನು ಮಂಜೂರು ಮಾಡುತ್ತಿದ್ದಂತೆಯೇ, ಆಮ್ ಆದ್ಮಿ ಪಕ್ಷ (ಎಎಪಿ) ಹಾಗೂ 'ಇಂಡಿಯಾ' ಮೈತ್ರಿಕೂಟದ ಅಂಗಪಕ್ಷಗಳಲ್ಲಿ ಸಂಭ್ರಮ ಮನೆ ಮಾಡಿತ್ತು.'ಇದು ಸತ್ಯಕ್ಕೆ ಸಂದ ಜಯ' ಎಂದು ಎಎಪಿ ಬಣ್ಣಿಸಿದೆ.

'ಹನುಮಾನ್ ಕೀ ಜೈ. ಇದು ಪ್ರಜಾಪ್ರಭುತ್ವಕ್ಕೆ ಸಿಕ್ಕ ಜಯ. ಲಕ್ಷಾಂತರ ಜನರ ಪ್ರಾರ್ಥನೆ ಮತ್ತು ಆಶೀರ್ವಾದದ ಫಲ. ಎಲ್ಲರಿಗೂ ಧನ್ಯವಾದಗಳು' ಎಂದು ಕೇಜ್ರಿವಾಲ್ ಪತ್ನಿ ಸುನೀತಾ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಮಧ್ಯಂತರ ಜಾಮೀನಿನ ಹಿನ್ನೆಲೆಯಲ್ಲಿ ಜೈಲಿನಿಂದ ಕೇಜ್ರಿವಾಲ್ ಅವರ ಬಿಡುಗಡೆ ತಾತ್ಕಾಲಿಕವಾಗಿದ್ದರೂ, ಮೇ 25ರಂದು ದೆಹಲಿಯಲ್ಲಿನ ಲೋಕಸಭಾ ಕ್ಷೇತ್ರಗಳಿಗೆ ನಡೆಯುವ ಚುನಾವಣೆ ವೇಳೆ ಎಎಪಿಗೆ ಭಾರಿ ಬಲ ಸಿಕ್ಕಂತಾಗಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಅರವಿಂದ ಕೇಜ್ರಿವಾಲ್‌ಗೆ ಮಧ್ಯಂತರ ಜಾಮೀನು ದೊರೆತ ಬಳಿಕ ಎಎಪಿ ಕಾರ್ಯಕರ್ತರು ದೆಹಲಿಯಲ್ಲಿ ಸಿಹಿ ಹಂಚಿ ಸಂಭ್ರಮಿಸಿದರು — ಎಎಫ್‌ಪಿ ಚಿತ್ರ

'ನಿರಂಕುಶ ಪ್ರಭುತ್ವದ ವಿರುದ್ಧ ಹೋರಾಟ'

ನವದೆಹಲಿ: 'ನನ್ನೆಲ್ಲಾ ಶಕ್ತಿಯೊಂದಿಗೆ ಈ ನಿರಂಕುಶ ಪ್ರಭುತ್ವದ ವಿರುದ್ಧ ನಾನು ಹೋರಾಡುತ್ತಿದ್ದೇನೆ. ಆದರೆ, ನನ್ನ ಈ ಹೋರಾಟಕ್ಕೆ ದೇಶದ 140 ಕೋಟಿ ಜನರು ಕೈಜೋಡಿಸಬೇಕು' ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಮನವಿ ಮಾಡಿದರು.

ಸುಪ್ರೀಂ ಕೋರ್ಟ್ ಮಧ್ಯಂತರ ಜಾಮೀನು ನೀಡಿದ ನಂತರ ತಿಹಾರ್ ಜೈಲಿನಿಂದ ಶುಕ್ರವಾರ ಸಂಜೆ ಜೈಲಿನಿಂದ ಹೊರ ನಡೆದ ಅವರು, ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದರು. ಜೈಲಿನಿಂದ ಹೊರ ಬಂದ ಕೂಡಲೇ, 'ಭಗವಾನ್ ಹನುಮಾನ್‌ಗೆ ಧನ್ಯವಾದ' ಎಂದು ಉದ್ಗರಿಸಿದ ಅವರನ್ನು ಆಮ್ ಆದ್ಮಿ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ವಾದ್ಯಗಳ ಮೇಳ, ಜಯಘೋಷಗಳೊಂದಿಗೆ ಸ್ವಾಗತಿಸಿದರು.

ತಾವು ಪ್ರಯಾಣಿಸಿದ ಕಾರಿನ ಸನ್‌ರೂಫ್ ಮೂಲಕ ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಕೇಜ್ರಿವಾಲ್, 'ಭಾರತ್ ಮಾತಾ ಕಿ ಜೈ', 'ವಂದೇ ಮಾತರಂ' ಹಾಗೂ 'ಇನ್‌ಕ್ವಿಲಾಬ್ ಜಿಂದಾಬಾದ್' ಎಂಬ ಘೋಷಣೆಗಳನ್ನು ಕೂಗಿದರು. 'ಶನಿವಾರ ಬೆಳಿಗ್ಗೆ 11ಕ್ಕೆ ಕನ್ನಾಟ್ ಪ್ಲೇಸ್‌ನಲ್ಲಿರುವ ಹನುಮಾನ್ ದೇವಾಲಯಕ್ಕೆ ನಾನು ಭೇಟಿ ನೀಡುವೆ. ನಂತರ, ಪಕ್ಷದ ಕಚೇರಿಯಲ್ಲಿ ಮಧ್ಯಾಹ್ನ 1ಕ್ಕೆ ಪತ್ರಿಕಾಗೋಷ್ಠಿ ನಡೆಸುವೆ' ಎಂದೂ ಕೇಜ್ರಿವಾಲ್ ಹೇಳಿದರು.

'ನಾನು ಶೀಘ್ರವೇ ಜೈಲಿನಿಂದ ಹೊರಬರುತ್ತೇನೆ ಎಂದು ಹೇಳಿದ್ದೆ. ಈಗ ನಿಮ್ಮೊಂದಿಗೆ ಇರುವುದಕ್ಕಾಗಿ ನನಗೆ ಸಂಸತವಾಗುತ್ತಿದೆ. ಮೊತ್ತಮೊದಲಿಗೆ ನಾನು ಹನುಮಾನ್ ದೇವರಿಗೆ ಭಕ್ತಿಯಿಂದ ನಮಿಸುತ್ತೇನೆ. ಆಂಜನೇಯನ ಆಶೀರ್ವಾದದಿಂದಾಗಿಯೇ ನಾನೀಗ ನಿಮ್ಮ ನಡುವೆ ಇದ್ದೇನೆ' ಎಂದರು.

ದಕ್ಷಿಣ ದೆಹಲಿಯಲ್ಲಿ ಶನಿವಾರ ಆಯೋಜಿಸಿರುವ ರೋಡ್‌ಶೋನಲ್ಲಿ ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ಅವರೊಂದಿಗೆ ಕೇಜ್ರಿವಾಲ್ ಪಾಲ್ಗೊಳ್ಳಲಿದ್ದಾರೆ

ಕೇಜ್ರಿವಾಲ್ ಅವರಿಗೆ ಮಧ್ಯಂತರ ಜಾಮೀನು ಸಿಕ್ಕಿರುವುದು ಖುಷಿ ತಂದಿದೆ. ಪ್ರಸಕ್ತ ಲೋಕಸಭಾ ಚುನಾವಣೆ ದೃಷ್ಟಿಯಿಂದ ಇದು ಮಹತ್ವದ ಬೆಳವಣಿಗೆ ಆಗಿದೆ
ಮಮತಾ ಬ್ಯಾನರ್ಜಿ
ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ಕೇಜ್ರಿವಾಲ್ ಮಧ್ಯಂತರ ಜಾಮೀನಿನ ಮೇಲೆ ಹೊರಗಿದ್ದಾರೆ. ಮದ್ಯದ ಹಗರಣದಲ್ಲಿ ಅವರು ಆರೋಪಿ. ಆದರೆ ಆರೋಪಮುಕ್ತರಾಗಿದ್ದಾರೆ ಎಂಬಂತೆ ಎಎಪಿ ಬಿಂಬಿಸಲು ಹೊರಟಿದೆ
ವೀರೇಂದ್ರ ಸಚದೇವ್
ಬಿಜೆಪಿಯ ದೆಹಲಿ ಘಟಕದ ಅಧ್ಯಕ್ಷ

ಆಮ್ ಆದ್ಮಿ ಪಕ್ಷದ ಮುಖಂಡರ ಪ್ರತಿಪಾದನೆ

'ಪ್ರಜಾತಂತ್ರಕ್ಕೆ ಸಂದ ಜಯ'

ನವದೆಹಲಿ(ಪಿಟಿಐ): ದೆಹಲಿ ಮುಖ್ಯಮಂತ್ರಿಯೂ ಆಗಿರುವ ಪಕ್ಷದ ರಾಷ್ಟ್ರೀಯ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರಿಗೆ ಮಧ್ಯಂತರ ಜಾಮೀನು ಮಂಜೂರು ಮಾಡಿರುವ ಸುಪ್ರೀಂ ಕೋರ್ಟ್‌ಗೆ ಧನ್ಯವಾದ ಹೇಳಿರುವ ಆಮ್ ಆದ್ಮಿ ಪಕ್ಷ (ಎಎಪಿ), ಇದು ಪ್ರಜಾತಂತ್ರದ ಗೆಲುವು ಎಂದು ಶುಕ್ರವಾರ ಹೇಳಿದೆ.

ಪಕ್ಷದ ಕಚೇರಿಯಲ್ಲಿ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಎಪಿ ಮುಖಂಡರು, ಈ ಬೆಳವಣಿಗೆ ದೇಶದಲ್ಲಿನ ಸರ್ವಾಧಿಕಾರಿ ಧೋರಣೆಗೆ ಕೊನೆ ಹಾಡಲಿದೆ ಎಂದು ಹೇಳಿದರು.

ಸಚಿವ ಸೌರಭ್ ಭಾರದ್ವಾಜ್,'ಕೇಜ್ರಿವಾಲ್ ಅವರಿಗೆ ಮಧ್ಯಂತರ ಜಾಮೀನು ದೊರೆತಿರುವುದು ತನ್ನ ಭಕ್ತನಿಗೆ ಆಂಜನೇಯ ದೇವರು ಆಶೀರ್ವಾದ ಮಾಡಿದಂತೆ ಆಗಿದೆ' ಎಂದರು.

'40 ದಿನಗಳ ನಂತರ ಕೇಜ್ರಿವಾಲ್ ಅವರಿಗೆ ಮಧ್ಯಂತರ ಜಾಮೀನು ದೊರೆತಿರುವುದು ಪವಾಡಕ್ಕಿಂತ ಕಡಿಮೆಯೇನಲ್ಲ. ಈ ಬೆಳವಣಿಗೆಯು, ದೇಶದಲ್ಲಿನ ಸದ್ಯದ ಪರಿಸ್ಥಿತಿ ಬದಲಾಗುತ್ತದೆ ಎಂಬುದರ ಕುರಿತ ದೈವಿಕ ಸೂಚನೆಯಾಗಿದೆ. ನ್ಯಾಯಾಂಗ ಬಂಧನದಿಂದ ಕೇಜ್ರಿವಾಲ್ ಬಿಡುಗಡೆಯು ದೇಶದಲ್ಲಿ ಭಾರಿ ಬದಲಾವಣೆಗೆ ದಾರಿ ಮಾಡಿ ಕೊಡಲಿದೆ' ಎಂದರು.

'ಪ್ರಜಾಪ್ರಭುತ್ವವನ್ನು ಪ್ರೀತಿಸುವವರಿಗೆಲ್ಲಾ ಸುಪ್ರೀಂ ಕೋರ್ಟ್‌ನ ಈ ತೀರ್ಪು ಸಂತಸ ತಂದಿದೆ. ಜನರ ಪಾಲಿಗೆ ಇದು ಆಶಾಕಿರಣ' ಎಂದು ಎಎಪಿ ದೆಹಲಿ ಘಟಕದ ಸಂಚಾಲಕ ಗೋಪಾಲ್ ರಾಯ್ ಹೇಳಿದರು.

'ಕೇಜ್ರಿವಾಲ್ ಅವರಿಗೆ ಮಧ್ಯಂತರ ಜಾಮೀನು ಮಾತ್ರ ಲಭಿಸಿಲ್ಲ; ಸುಪ್ರೀಂ ಕೋರ್ಟ್‌ನ ಈ ತೀರ್ಮಾನವು ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಗೆಲುವನ್ನು ಖಾತ್ರಿಪಡಿಸಿದಂತಾಗಿದೆ' ಎಂದು ರಾಯ್ ಹೇಳಿದರು. 'ಇದು ಪ್ರಜಾಪ್ರಭುತ್ವ ಮತ್ತು ಸತ್ಯಕ್ಕೆ ಸಿಕ್ಕ ದೊಡ್ಡ ಗೆಲುವು. ಈ ತೀರ್ಪು ಮುಕ್ತ ಮತ್ತು ನ್ಯಾಯಯುತ ಚುನಾವಣೆಯನ್ನು ಖಾತ್ರಿ ಪಡಿಸಲಿದೆ' ಎಂದು ಸಚಿವೆ ಆತಿಶಿ ಮರ್ಲೆನಾ ಹೇಳಿದರು.'ಮತ ಚಲಾವಣೆ ಮೂಲಕ ಪ್ರಜಾಪ್ರಭುತ್ವವನ್ನು ಉಳಿಸಲು ಹಾಗೂ ಸರ್ವಾಧಿಕಾರವನ್ನು ಬದಲಾಯಿಸಲು ದೊರೆತಿರುವ ಕೊನೆಯ ಅವಕಾಶ ಎಂಬುದನ್ನು ಜನರಿಗೆ ಹೇಳಲು ಬಯಸುತ್ತೇನೆ' ಎಂದೂ ಆತಿಶಿ ಹೇಳಿದರು.

ಮಧ್ಯಂತರ ಜಾಮೀನು: ವಿಪಕ್ಷ ನಾಯಕರ ಸ್ವಾಗತ

ನವದೆಹಲಿ(ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಸುಪ್ರೀಂ ಕೋರ್ಟ್ ಮಧ್ಯಂತರ ಜಾಮೀನು ನೀಡಿದ್ದನ್ನು ವಿರೋಧ ಪಕ್ಷಗಳ ನಾಯಕರು ಶುಕ್ರವಾರ ಸ್ವಾಗತಿಸಿದ್ದಾರೆ.

'ಈ ತೀರ್ಪಿನಿಂದಾಗಿ ಪ್ರಜಾಪ್ರಭುತ್ವ ಉಳಿವಿಗಾಗಿ ನಡೆಯುತ್ತಿರುವ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲಾಗುವುದು' ಎಂದು ಹೇಳಿದ್ದಾರೆ.

'ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಂಧಿತರಾಗಿರುವ ಜಾರ್ಖಂಡ್ ಮಾಜಿ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರಿಗೂ ನ್ಯಾಯ ಸಿಗಲಿದೆ' ಎಂದು ಕಾಂಗ್ರೆಸ್ ಮುಖಂಡ ಪವನ್ ಖೇರಾ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

'ಜೂನ್ 4ರ ನಂತರ ನರೇಂದ್ರ ಮೋದಿ ಅವರು ಮಾಜಿ ಪ್ರಧಾನಿಯಾಗುವರು. ನಂತರ ಸಾಬರಮತಿ ಆಶ್ರಮದಲ್ಲಿ ಕುಳಿತು ತಾನು ಯಾವ ರೀತಿಯ ರಾಜಕಾರಣದಲ್ಲಿ ತೊಡಗಿದ್ದೆ ಎಂಬ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಲು ಅವರಿಗೆ ಸಾಕಷ್ಟು ಸಮಯ ಸಿಗಲಿದೆ' ಎಂದು ಖೇರಾ ಹೇಳಿದ್ದಾರೆ.

'ಇದು ಕೇಜ್ರಿವಾಲ್ ಅವರಿಗೆ ಸಿಕ್ಕ ದೊಡ್ಡ ಜಯ' ಎಂದು ಹೇಳಿರುವ ಶಿವಸೇನಾ (ಯುಬಿಟಿ) ನಾಯಕಿ ಪ್ರಿಯಾಂಕಾ ಚತುರ್ವೇದಿ, 'ವಿಪಕ್ಷಗಳ ನಾಯಕರ ದನಿ ಅಡಗಿಸಲು ಬಿಜೆಪಿ ಮಾಡಿದ ಯತ್ನಗಳು ಅದಕ್ಕೇ ತಿರುಗುಬಾಣವಾಗಿವೆ. ನಮ್ಮ ದನಿ ಅಡಗಿಸಲಾಗದು, ಯಾವ ಕಾರಣಕ್ಕೂ ನಮ್ಮ ಹೋರಾಟ ಕೈಬಿಡುವುದಿಲ್ಲ. ಜೈ ಹಿಂದ್' ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಕೇಜ್ರಿವಾಲ್ ಅವರಿಗೆ ಮಧ್ಯಂತರ ಜಾಮೀನು ಸಿಕ್ಕಿರುವುದನ್ನು ನಾನು ಸ್ವಾಗತಿಸುತ್ತೇನೆ. ಪ್ರಜಾಪ್ರಭುತ್ವದ ಉಳಿವಿಗಾಗಿ ಭಾರತದ ನಿಲುವು ದೃಢವಾಗಿರಲಿದೆ
ಶರದ್ ಪವಾರ್, ಎನ್‌ಸಿಪಿ (ಶರದ್‌ಚಂದ್ರ ಪವಾರ್ ಬಣ)

ಸಂಜಯ್ ಸಿಂಗ್ ಪೋಸ್ಟ್: ಎಎಪಿ ರಾಜ್ಯಸಭಾ ಸದಸ್ಯ ಸಂಜಯ್ ಸಿಂಗ್, 'ಸತ್ಯವನ್ನು ಸಂಕಷ್ಟಕ್ಕೆ ದೂಡಬಹುದೇ ಹೊರತು ಅದನ್ನು ಸೋಲಿಸಲು ಸಾಧ್ಯವಿಲ್ಲ. ಸುಪ್ರೀಂ ಕೋರ್ಟ್ ತೀರ್ಪಿಗೆ ಸ್ವಾಗತ. ಸರ್ವಾಧಿಕಾರ ಕೊನೆಗೊಳ್ಳಲಿದೆ. ಸತ್ಯಮೇವ ಜಯತೆ' ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಕುಸ್ತಿ: ಸೆಮಿಫೈನಲ್‌ಗೆ ನಿಶಾ ದಹಿಯಾ

ಇಸ್ತಾಂಬುಲ್ (ಪಿಟಿಐ): ವಿಶ್ವ ಒಲಿಂಪಿಕ್ ಗೇಮ್ಸ್ ಕ್ವಾಲಿಫೈಯರ್‌ನ ಮೊದಲ ದಿನ ಭಾರತದ ಎಲ್ಲ ಆರು ಮಂದಿ ಗ್ರೀಕೊ ರೋಮನ್ ಕುಸ್ತಿಪಟುಗಳು ನಿರಾಶೆ ಮೂಡಿಸಿದ ಬಳಿಕ, ಶುಕ್ರವಾರ ನಿಶಾ ದಹಿಯಾ ಮಹಿಳೆಯರ ಫ್ರೀಸ್ಟೈಲ್ 68 ಕೆ.ಜಿ. ವಿಭಾಗದಲ್ಲಿ ಸೆಮಿಫೈನಲ್ ತಲುಪಿದರು.

ವಿಶ್ವ 23 ವರ್ಷದೊಳಗಿನವರ ಕಂಚಿನ ಪದಕ ವಿಜೇತೆಯಾಗಿರುವ ನಿಶಾ ಒಲಿಂಪಿಕ್ಸ್‌ಗೆ ಐದನೇ ಕೋಟಾ ಪಡೆಯುವ ಅವಕಾಶವನ್ನೂ ಹಸಿರಾಗಿಟ್ಟುಕೊಂಡರು. ತಟಸ್ಥ ಸ್ಪರ್ಧಿಯಾಗಿ ಕಣದಲ್ಲಿದ್ದ ಬೆಲಾರೂಸ್‌ನ ಹದಿವಯಸ್ಸಿನ ಅಲಿನಾ ಶಾವುಚುಕ್ ಅವರನ್ನು ನಿಶಾ 3–0 ಯಿಂದ ಸೋಲಿಸಿ ಕ್ವಾರ್ಟರ್‌ಫೈನಲ್ ಪ್ರವೇಶಿಸಿದರು. 25 ವರ್ಷದ ನಿಶಾ, ಕ್ವಾರ್ಟರ್‌ಫೈನಲ್‌ನಲ್ಲಿ ಝೆಕ್ ರಿಪಬ್ಲಿಕ್‌ನ ಅಡೆಲಾ ಹಂಝ್ಲಿಕೋವಾ ಅವರನ್ನು 7–4 ರಿಂದ ಪಾಯಿಂಟ್ ಆಧಾರದಲ್ಲಿ ಮಣಿಸಿದರು. ಅಡೆಲಾ ಒಂಬತ್ತನೇ ಕ್ರಮಾಂಕ ಹೊಂದಿದ್ದಾರೆ.

ಸೆಮಿಫೈನಲ್‌ನಲ್ಲಿ ಅವರ ಎದುರಾಳಿ ರುಮೇನಿಯಾದ ಅಲೆಕ್ಸಾಂಡ್ರಾ ಆಂಘೆಲ್. ನಿಶಾ ಈ ಸೆಣಸಾಟವನ್ನೂ ಗೆದ್ದಲ್ಲಿ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದ ಐದನೇ ಮಹಿಳಾ ಕುಸ್ತಿಪಟು ಎನಿಸಲಿದ್ದಾರೆ. ಒಂದೊಮ್ಮೆ ಸೋತರೂ, ಕಂಚಿನ ಪದಕ ವಿಜೇತರ ಸೆಣಸಾಟದಲ್ಲಿ ಜಯಶಾಲಿ ಆದರೆ (ಒಂದೇ ಸ್ಪರ್ಧೆಯಲ್ಲಿ) ಮೂರನೇ ಕೋಟಾ ಪಡೆಯಲು ಅವಕಾಶವಿದೆ.

62 ಕೆ.ಜಿ. ವಿಭಾಗದಲ್ಲಿ ಮಾನಸಾ ಉತ್ತಮ ಪ್ರದರ್ಶನ ನೀಡಿದರೂ, ಎಂಟನೇ ಕ್ರಮಾಂಕದ ಬೆಲಾರೂಸ್‌ನ ಸ್ಪರ್ಧಿ ವೆರಾನಿಕಾ ಇವಾನೋವಾ ಅವರಿಗೆ ಮಣಿಯಬೇಕಾಯಿತು. ಈ ಪ್ರಿಕ್ವಾರ್ಟರ್‌ಫೈನಲ್ ಸೆಣಸಾಟ ಮುಗಿಯಲು 25 ಸೆಕೆಂಡುಗಳಿದ್ದಾಗ ಇವಾನೋವಾ ಎದುರಾಳಿಯನ್ನು ಕೆಡವಿಹಾಕಿದರು.

ಬ್ಯಾಡ್ಮಿಂಟನ್: ರುದ್ರ, ಹೇಮಂತ್‌ಗೆ ಗೆಲುವು

ಮಂಗಳೂರು: ರಾಜ್ಯ ರ್‍ಯಾಂಕಿಂಗ್ ಆಟಗಾರರಾದ ರುದ್ರ ಶಾಹಿ ಮತ್ತು ಹೇಮಂತ್ ಗೌಡ ಇಲ್ಲಿ ಶುಕ್ರವಾರ ಆರಂಭಗೊಂಡ ಮಂಗಳಾ ಬ್ಯಾಡ್ಮಿಂಟನ್ ಸಂಸ್ಥೆ ಆಶ್ರಯದ ಮಂಗಳಾ ಕಪ್ ರಾಷ್ಟ್ರೀಯ ಮುಕ್ತ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಪಾರಮ್ಯ ಮೆರೆದರು.

ನಗರದ ಯು.ಎಸ್. ಮಲ್ಯ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಮೈಸೂರಿನ ರಾಮೇಶ್ವರ್ ಬ್ಯಾಡ್ಮಿಂಟನ್ ಸಂಸ್ಥೆಯ ರುದ್ರ ಶಾಹಿ ಮತ್ತು ಬೆಂಗಳೂರಿನ ಅರೈಸ್ ಬ್ಯಾಡ್ಮಿಂಟನ್ ಅಕಾಡೆಮಿಯ ಹೇಮಂತ್ ಗೌಡ ಸುಲಭ ಜಯ ಸಾಧಿಸಿದರು. ಬೆಂಗಳೂರಿನ ಯಾದವ ಪ್ರೊ ಬ್ಯಾಡ್ಮಿಂಟನ್ ಸಂಸ್ಥೆಯ ರಿಷಿ ವಿರುದ್ಧ ರುದ್ರ ಶಾಹಿ 21–14, 21–16ರಲ್ಲಿ ಜಯ ಗಳಿಸಿದರು. ಹೇಮಂತ್ ಗೌಡ ಮೈಸೂರಿನ ಹರ್ಷಿತ್ ಎಸ್.ಡಿ ಅವರನ್ನು 21–9, 21–8ರಲ್ಲಿ ಪರಾಭವಗೊಳಿಸಿದರು.

ಮೊದಲ ದಿನದ ಇತರ ಫಲಿತಾಂಶಗಳು: ಪುರುಷರ ಸಿಂಗಲ್ಸ್: ಎಎಸ್‌ಡಬ್ಲ್ಯುಬಿಯ ಸಯಾನ್ ವಿನು ವಿರುದ್ಧ ಬೆಂಗಳೂರಿನ ಚಿದಾನಂದಗೆ 10–21, 21–19, 21–18ರಲ್ಲಿ ಜಯ, ಮಂಗಳೂರು ಎಸ್‌ಬಿಎಯ ನಿಕೇತನ್ ವಿರುದ್ಧ ಎಎಸ್‌ಆರ್‌ನ ಲೋಕೇಶ್ ಬಾಬುಗೆ 21–13, 21–13ರಲ್ಲಿ, ಪುಣೆಯ ವಾಸಿಂ ಶೇಕ್ ವಿರುದ್ಧ ಅರೈಸ್‌ನ ನಿಖಿಲ್ ಶ್ಯಾಮ್‌ಗೆ 21–17, 21–13ರಲ್ಲಿ, ಮಂಗಳೂರಿನ ಆರವ್ ವಿರುದ್ಧ ಮೈಸೂರಿನ ಅನೂಪ್‌ಗೆ 21–12, 21–12ರಲ್ಲಿ, ಎಎಸ್‌ಡಬ್ಲ್ಯುಬಿಯ ಭರತ್ ವಿರುದ್ಧ ವೆಂಕೀಸ್ ಅಕಾಡೆಮಿಯ ಗಿರೀಶ್ ವೆಂಕಟ್‌ಗೆ 21–11, 21–10ರಲ್ಲಿ, ಸ್ವಸ್ತಿಕಾ ಅಕಾಡೆಮಿಯ ತ್ರಿಶ್ ವಿಠ್ಠಲ್ ವಿರುದ್ಧ ತಿರುವಳ್ಳೂರಿನ ವಿಘ್ನೇಶ್‌ಗೆ 21–14, 21–9ರಲ್ಲಿ ಜಯ.

ಉಡುಪಿಯ ಶೆಲ್ಡನ್ ವಿರುದ್ಧ ಬೆಂಗಳೂರಿನ ಆದಿತ್ಯಗೆ 21–18, 21–23, 21–16ರಲ್ಲಿ ಗೆಲುವು. ಹುಬ್ಬಳ್ಳಿಯ ನರಸಿಂಹ ವಿರುದ್ಧ ಸಮರ್ಥ್ ಅಕಾಡೆಮಿಯ ಪ್ರದ್ಯೋತಾ ರಾವ್‌ಗೆ 19–21, 21–11, 21–9ರಲ್ಲಿ, ಬೆಂಗಳೂರಿನ ದೀಕ್ಷಿತ್ ವಿರುದ್ಧ ಶಿವಮೊಗ್ಗದ ಅಭಿಷೇಕ್‌ಗೆ 21–17, 21–16ರಲ್ಲಿ, ಎಬಿಎಯ ಕೃಷ್ಣ ರಾಜೀವ್ ಎದುರು ಕಾರ್ಕಳದ ಕಾರ್ತಿಕ್‌ಗೆ 21–12, 21–8ರಲ್ಲಿ, ಮೈಸೂರು ಕೊಡವ ಸಮಾಜದ ಹಿತೈಷ್ ಗೌಡ ಎದುರು ವೈಪಿಬಿಎಯ ರೋಹಿತ್‌ಗೆ 21–6, 21–7ರಲ್ಲಿ, ವೈಭವ್ ವಿರುದ್ಧ ಶ್ರೇಯಶ್ವಂತ್‌ಗೆ 15–21, 21–18, 21–10ರಲ್ಲಿ ಗೆಲುವು. ಅರೈಸ್ ಅಕಾಡೆಮಿಯ ಶ್ರೀಧರ್ ಶ್ರೀಕುಮಾರ್ ವಿರುದ್ಧ ಎಡಬ್ಲ್ಯುಎಸ್‌ಬಿಯ ಗುರುಗುಹನ್ ವಾಕ್ ಓವರ್.

ಮಾದರಿ ನೀಡಲು ನಿರಾಕರಿಸಿಲ್ಲ: ಬಜರಂಗ್

ನವದೆಹಲಿ (ಪಿಟಿಐ): 'ಸೋನಿಪತ್‌ನಲ್ಲಿ ಮಾರ್ಚ್‌ನಲ್ಲಿ ಆಯ್ಕೆ ಟ್ರಯಲ್ಸ್ ವೇಳೆ ಉದ್ದೀಪನ ಮದ್ದು ನಿಯಂತ್ರಣ ಘಟಕದ ಅಧಿಕಾರಿಗಳು, ಮಾದರಿ ಪಡೆಯಲು ತಂದಿದ್ದ ಪರೀಕ್ಷಾ ಕಿಟ್‌ಗಳು ಸಮರ್ಪಕವಾಗಿವೆ ಎಂಬ ಬಗ್ಗೆ ಅಗತ್ಯ ಸಾಕ್ಷ್ಯ ನೀಡಲು ವಿಫಲವಾದ ಕಾರಣ ಮೂತ್ರದ ಮಾದರಿ ನೀಡಲು ನಾನು ನಿರಾಕರಿಸಿದ್ದೆ' ಎಂದು ಒಲಿಂಪಿಕ್ ಪದಕ ವಿಜೇತ ಕುಸ್ತಿಪಟು ಬಜರಂಗ್ ಪೂನಿಯಾ ಹೇಳಿದ್ದಾರೆ.

'ಈ ಹಿಂದೆ ಒಮ್ಮೆ ಅವರು (ನಾಡಾ ಅಧಿಕಾರಿಗಳು) ಅವಧಿ ಮುಗಿದ ಕಿಟ್‌ಗಳೊಡನೆ ಮಾದರಿ ಪಡೆಯಲು ಬಂದಿದ್ದರು. ಮತ್ತೊಂದು ಸಂದರ್ಭದಲ್ಲಿ ನಿಯಮಗಳ ಪ್ರಕಾರ ಮೂರು ಕಿಟ್ ತರದೇ, ಒಂದು ಕಿಟ್‌ನೊಡನೆ ಬಂದಿದ್ದರು. ಹೀಗಾಗಿ ಕಿಟ್‌ಗೆ ಸಂಬಂಧಿಸಿ ಅಧಿಕಾರಿಗಳಿಂದ ವಿವರಣೆ ಬಯಸಿದ್ದೆ' ಎಂದು ಅವರು ವಿವರಿಸಿದರು.

ಮದ್ದು ಪರೀಕ್ಷೆ ಅಧಿಕಾರಿಗಳಿಗೆ ವಾಸ್ತವ್ಯದ ಮಾಹಿತಿ ನೀಡಲು ನಿರಾಕರಿಸಿದ ಕಾರಣಕ್ಕೆ ಏಪ್ರಿಲ್ 18ರಂದು ಬಜರಂಗ್ ಅವರಿಗೆ ನೋಟಿಸ್ ನೀಡಿದ್ದ ನಾಡಾ ಐದು ದಿನಗಳ ಬಳಿಕ ಅವರನ್ನು ಅಮಾನತು ಮಾಡಿತ್ತು. ನಾಡಾ ನಿರ್ಧಾರ ಅನುಸರಿಸಿ, ವಿಶ್ವ ಕುಸ್ತಿ ಆಡಳಿತ ನೋಡಿಕೊಳ್ಳುವ ಯುನೈಟೆಡ್ ವರ್ಲ್ಡ್ ರೆಸ್ಲಿಂಗ್ ಅವರನ್ನು ತಾತ್ಕಾಲಿಕ ಅಮಾನತುಗೊಳಿಸಿದೆ.

ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ಸ್ಥಾನಕ್ಕೆ ಶೀಘ್ರದಲ್ಲಿ ಆಹ್ವಾನ: ಜಯ್ ಶಾ

ಪುನರಾಯ್ಕೆ ಇಚ್ಛೆಯಿದ್ದರೆ ದ್ರಾವಿಡ್ ಅರ್ಜಿ ಸಲ್ಲಿಸಲಿ

ಮುಂಬೈ (ಪಿಟಿಐ): ರಾಹುಲ್ ದ್ರಾವಿಡ್ ಅವರಿಗೆ ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ಆಗಿ ಮುಂದುವರಿಯುವ ಇಚ್ಛೆ ಇದ್ದರೆ ಮತ್ತೊಮ್ಮೆ ಅರ್ಜಿ ಸಲ್ಲಿಸಬೇಕು. ನಿಯಮಾನುಸಾರ ಆಯ್ಕೆ ಪ್ರಕ್ರಿಯೆಯ ಮೂಲಕವೇ ಅವರು ಆಯ್ಕೆಗೆ ಪ್ರಯತ್ನಿಸಬೇಕು ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಕಾರ್ಯದರ್ಶಿ ಜಯ್ ಶಾ ಹೇಳಿದ್ದಾರೆ.

ಮುಂದಿನ ತಿಂಗಳು ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಯ ನಂತರ ದ್ರಾವಿಡ್ ಅವರ ಕಾರ್ಯಾವಧಿ ಮುಕ್ತಾಯವಾಗಲಿದೆ. ಮುಂದಿನ ಮೂರು ವರ್ಷಗಳ ಅವಧಿಗೆ ಹೊಸ ಕೋಚ್ ಆಯ್ಕೆ ನಡೆಯುವುದು.

ದ್ರಾವಿಡ್ ಅವರು ಎರಡು ವರ್ಷಗಳ ಅವಧಿಯ ಒಪ್ಪಂದದೊಂದಿಗೆ ನೇಮಕವಾಗಿದ್ದರು. ಕಳೆದ ನವೆಂಬರ್‌ನಲ್ಲಿ ನಡೆದ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ನಂತರ ಅವರು ಮತ್ತು ನೆರವು ಸಿಬ್ಬಂದಿಯ ಕಾರ್ಯಾವಧಿ ಮುಗಿದಿತ್ತು. ಅದರ ನಂತರ ಅವರ ಒಪ್ಪಂದವನ್ನು ಟಿ20 ವಿಶ್ವಕಪ್‌ವರೆಗೂ ವಿಸ್ತರಿಸಲಾಗಿತ್ತು.

'ಮುಂದಿನ ಕೆಲವು ದಿನಗಳಲ್ಲಿ ಅರ್ಜಿಗಳನ್ನು ಆಹ್ವಾನಿಸುತ್ತೇವೆ. ರಾಹುಲ್ ದ್ರಾವಿಡ್ ಅವರ ಕಾರ್ಯಾವಧಿಯು ಶೀಘ್ರದಲ್ಲಿಯೇ ಮುಗಿಯಲಿದೆ. ನಾವು ಸದ್ಯ ಮೂರು ವರ್ಷಗಳ ಅವಧಿಗಾಗಿ ಕೋಚ್ ನೇಮಕ ಮಾಡಲು ಯೋಜಿಸಿದ್ದೇವೆ. ಒಂದೊಮ್ಮೆ ದ್ರಾವಿಡ್ ಅವರಿಗೆ ಇಚ್ಛೆ ಇದ್ದರೆ ಅವರು ಮತ್ತೊಮ್ಮೆ ಅರ್ಜಿ ಸಲ್ಲಿಸಬೇಕು' ಎಂದು ಶಾ ಗುರುವಾರ ಇಲ್ಲಿ ಹೇಳಿದರು.

ಜಯ್ ಶಾ

ದ್ರಾವಿಡ್

'ಭಾರತದ ಕ್ರಿಕೆಟ್ ಇತಿಹಾಸದಲ್ಲಿ ಬೇರೆ ಬೇರೆ ಮಾದರಿಗಳ ತಂಡಗಳಿಗೆ ಪ್ರತ್ಯೇಕ ಕೋಚ್‌ಗಳನ್ನು ನೇಮಕ ಮಾಡಿದ ಉದಾಹರಣೆಗಳು ಇಲ್ಲ. ನಮ್ಮಲ್ಲಿ ಎಲ್ಲ ಮಾದರಿಗಳಲ್ಲಿಯೂ ಆಡುವ ಆಟಗಾರರಿದ್ದಾರೆ. ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ ಮತ್ತು ರಿಷಭ್ ಪಂತ್ ಅವರು ಇದಕ್ಕೆ ಉತ್ತಮ ನಿದರ್ಶನ. ಆದ್ದರಿಂದ ಕ್ರಿಕೆಟ್ ಸಲಹಾ ಸಮಿತಿ (ಸಿಎಸಿ) ತೆಗೆದುಕೊಳ್ಳುವ ನಿರ್ಧಾರವೇ ಅಂತಿಮವಾಗಲಿದೆ. ಅವರು ಮಾಡುವ ಶಿಫಾರಸನ್ನು ನಾನು ಜಾರಿ ಮಾಡುತ್ತೇನೆ' ಎಂದರು.

'ಒಂದೊಮ್ಮೆ ಸಿಎಸಿಯು ವಿದೇಶಿ ಕೋಚ್ ನೇಮಕದ ತೀರ್ಮಾನ ಕೈಗೊಂಡರೂ ನಾನು ಹಸ್ತಕ್ಷೇಪ ಮಾಡುವುದಿಲ್ಲ' ಎಂದೂ ಜಯ್ ಶಾ ಹೇಳಿದರು.

'ರಾಷ್ಟ್ರೀಯ ತಂಡದ ಆಯ್ಕೆ ಸಮಿತಿಯಲ್ಲಿ ಖಾಲಿ ಇರುವ ಒಂದು ಸ್ಥಾನದ ಭರ್ತಿಗೆ ಈಗಾಗಲೇ ಕೆಲವರ ಸಂದರ್ಶನ ಮಾಡಲಾಗಿದೆ' ಎಂದು ಪ್ರತಿಕ್ರಿಯಿಸಿದರು.

ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಮುಖ್ಯಸ್ಥ ಗ್ರೇಗ್ ಬರ್ಕ್ಲೆ ಅವರ ಕಾರ್ಯಾವಧಿಯು ಈ ವರ್ಷಾಂತ್ಯದಲ್ಲಿ ಮುಕ್ತಾಯವಾಗಲಿದೆ. ಆ ಸ್ಥಾನಕ್ಕೆ ನೇಮಕವಾಗುವತ್ತ ತಮ್ಮ ಒಲವು ಇದೆಯೇ ಎಂಬ ಪ್ರಶ್ನೆಗೆ ಜಯ್ ಶಾ ಪ್ರತಿಕ್ರಿಯಿಸಿದರು.

'ಆ ಕುರಿತು ಊಹಾಪೋಹಗಳು ನಡೆಯುತ್ತಲೇ ಇವೆ. ಸದ್ಯಕ್ಕೆ ನಾನು ಇಲ್ಲಿಯೇ (ಬಿಸಿಸಿಐ) ಇರಲು ಬಿಡಿ. ಯಾಕೆ ನಾನಿಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿಲ್ಲವೇ' ಎಂದು ಜಯ್ ಮರುಪ್ರಶ್ನೆ ಹಾಕಿದರು.

'ಕೇಂದ್ರ ಗುತ್ತಿಗೆ: ಇಶಾನ್, ಅಯ್ಯರ್ ಕೈಬಿಟ್ಟಿದ್ದು ಅಗರ್ಕರ್ ನಿರ್ಧಾರ'

ಭಾರತ ತಂಡದ ಆಟಗಾರರಾದ ಇಶಾನ್ ಕಿಶನ್ ಮತ್ತು ಶ್ರೇಯಸ್ ಅಯ್ಯರ್ ಅವರನ್ನು ಬಿಸಿಸಿಐ ಕೇಂದ್ರ ಗುತ್ತಿಗೆಯಿಂದ ಕೈಬಿಡುವ ನಿರ್ಧಾರವು ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಅಗರ್ಕರ್ ಅವರದ್ದಾಗಿತ್ತು ಎಂದು ಜಯ್ ಶಾ ಸ್ಪಷ್ಟಪಡಿಸಿದರು.

'ಆ ಸಭೆಯ ನಿರ್ಣಯಗಳನ್ನು ತಾವೆಲ್ಲರೂ ಪರಿಶೀಲಿಸಬಹುದು. ನಾನು ಆ ಸಭೆಯ ನಿಮಂತ್ರಕನಾಗಿದ್ದೆ ಅಷ್ಟೇ' ಎಂದೂ ಜಯ್ ಶಾ ಅವರು ಗುರುವಾರ ನಡೆದ ಮಾಧ್ಯಮ ಸಂವಾದದಲ್ಲಿ ತಿಳಿಸಿದರು.

'ಆ ಇಬ್ಬರೂ ಆಟಗಾರರು ದೇಶಿ ಕ್ರಿಕೆಟ್‌ನಲ್ಲಿ ಆಡಿರಲಿಲ್ಲ. ಆದ್ದರಿಂದ ಸಮಿತಿಯು ಈ ನಿರ್ಣಯ ಕೈಗೊಂಡಿತು. ಯಾವುದೇ ಆಟಗಾರನೂ ಅನಿವಾರ್ಯವಲ್ಲ. ಅವರಿಬ್ಬರನ್ನು ಕೈಬಿಟ್ಟು ಹೊಸ ಆಟಗಾರರನ್ನು ಸೇರ್ಪಡೆಗೊಳಿಸಲಾಯಿತು. ಅವರಲ್ಲಿ ಸಂಜು ಸ್ಯಾಮ್ಸನ್ ಕೂಡ ಒಬ್ಬರು. ಇದರಲ್ಲಿ ಅಗರ್ಕರ್ ಅವರೇ ನಿರ್ಣಾಯಕರಾಗಿದ್ದರು. ಅವರ ಸಮಿತಿಯು ನೀಡಿದ ಶಿಫಾರಸುಗಳನ್ನು ಜಾರಿಗೊಳಿಸಿದ್ದಷ್ಟೇ ನನ್ನ ಕಾರ್ಯ' ಎಂದರು.

'ಇಂಪ್ಯಾಕ್ಟ್ ಪ್ಲೇಯರ್ ನಿಯಮ ಮರುಪರಿಶೀಲನೆ'

ಬಹಳಷ್ಟು ಆಟಗಾರರಿಂದ ಟೀಕೆಗೊಳಗಾಗಿರುವ ಇಂಪ್ಯಾಕ್ಟ್ ಪ್ಲೇಯರ್ ನಿಯಮದ ಕುರಿತು ಮರುಪರಿಶೀಲನೆ ನಡೆಸುವುದಾಗಿ ಜಯ್ ಶಾ ಹೇಳಿದರು.

ಈ ಬಾರಿಯ ಐಪಿಎಲ್ ಟೂರ್ನಿಯಲ್ಲಿ ಎಂಟು ಪಂದ್ಯಗಳಲ್ಲಿ 250 ರನ್‌ಗಳಿಗಿಂತ ಹೆಚ್ಚಿನ ಮೊತ್ತ ದಾಖಲಾಗಿವೆ. ಇಂಪ್ಯಾಕ್ಟ್ ಪ್ಲೇಯರ್ ನಿಯಮದಿಂದಾಗಿ ಹೆಚ್ಚುವರಿ ಬ್ಯಾಟರ್‌ಗಳು ಅವಕಾಶ ಪಡೆಯುತ್ತಿದ್ದಾರೆ. ಆದ್ದರಿಂದ ಬೃಹತ್ ಮೊತ್ತಗಳು ದಾಖಲಾಗುತ್ತಿವೆ ಎಂದು ಕೆಲವರು ವಾದ ಮಾಡಿದ್ದರು. ಆಲ್‌ರೌಂಡರ್‌ಗಳ ಅವಕಾಶಗಳೂ ಮೊಟಕುಗೊಂಡಿವೆ ಎಂಬ ಆಕ್ಷೇಪಗಳು ವ್ಯಕ್ತವಾಗಿದ್ದವು.

'ಈ ನಿಯಮವನ್ನು ಪ್ರಾಯೋಗಿಕವಾಗಿ ಜಾರಿಗೊಳಿಸಲಾಗಿತ್ತು. ಇನ್ನೊಂದು ಕಡೆ ಇದರಿಂದ ಇಬ್ಬರು ಭಾರತೀಯ ಆಟಗಾರರಿಗೂ ಅವಕಾಶಗಳೂ ಸಿಗುತ್ತದೆ. ಅಲ್ಲದೇ ಪಂದ್ಯಗಳು ಹೆಚ್ಚು ಸ್ಪರ್ಧಾತ್ಮಕವಾಗುತ್ತಿವೆ' ಎಂದೂ ಪ್ರತಿಪಾದಿಸಿದರು.

'ಟಿ20 ವಿಶ್ವಕಪ್ ಟೂರ್ನಿ ಮುಗಿದ ನಂತರ ಐಪಿಎಲ್ ಸಂಬಂಧಿತ ಎಲ್ಲರೂ ಸಭೆ ಸೇರಿ ಈ ನಿಯಮದ ಕುರಿತು ನಿರ್ಧಾರ ತೆಗೆದುಕೊಳ್ಳುತ್ತೇವೆ' ಎಂದು ಹೇಳಿದರು.

ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಕಾಲಿನ್ ಮನ್ರೊ ನಿವೃತ್ತಿ



ಕ್ರೈಸ್ಟ್‌ಚರ್ಚ್ (ಪಿಟಿಐ): ಟಿ20 ವಿಶ್ವಕಪ್‌ಗೆ ರಾಷ್ಟ್ರೀಯ ತಂಡದಲ್ಲಿ ಸ್ಥಾನ ಪಡೆಯಲು ವಿಫಲವಾದ ನ್ಯೂಜಿಲೆಂಡ್‌ನ ಅಗ್ರ ಕ್ರಮಾಂಕದ ಬ್ಯಾಟರ್ ಕಾಲಿನ್ ಮನ್ರೊ ಶುಕ್ರವಾರ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದಾರೆ.

37 ವರ್ಷದ ಮನ್ರೊ ಕಿವೀಸ್ ತಂಡದ ಪರ ಒಂದು ಟೆಸ್ಟ್, 57 ಏಕದಿನ ಮತ್ತು 65 ಟಿ20 ಪಂದ್ಯಗಳನ್ನು ಆಡಿ ಒಟ್ಟು 3,010 ರನ್ ಗಳಿಸಿದ್ದಾರೆ. ಅವರು ಟಿ20 ಮಾದರಿಯಲ್ಲಿ ಸ್ಫೋಟಕ ಬ್ಯಾಟಿಂಗ್ ಮೂಲಕ ಜನಪ್ರಿಯರಾಗಿದ್ದರು.

ಈತನಕ 428 ಟಿ20 ಪಂದ್ಯಗಳನ್ನು ಆಡಿರುವ ಅವರು 30.44 ಸರಾಸರಿಯಲ್ಲಿ 10,961 ರನ್ ಗಳಿಸಿದ್ದಾರೆ. ಅವರು 2020ರಲ್ಲಿ ಭಾರತ ವಿರುದ್ಧದ ಟಿ20 ಪಂದ್ಯದಲ್ಲಿ ರಾಷ್ಟ್ರೀಯ ತಂಡದಲ್ಲಿ ಕೊನೆಯ ಬಾರಿ ಕಾಣಿಸಿಕೊಂಡಿದ್ದರು.

ಚೆಸ್: ಮೂರನೇ ಸ್ಥಾನ ಪಡೆದ ಪ್ರಜ್ಞಾನಂದ

ವಾರ್ಸಾ (ಪೋಲೆಂಡ್), (ಪಿಟಿಐ): ಗ್ರ್ಯಾಂಡ್‌ಮಾಸ್ಟರ್ ಪ್ರಜ್ಞಾನಂದ ಅವರು ಸೂಪರ್‌ಬೆಟ್ ರ್‍ಯಾಪಿಡ್ ಮತ್ತು ಬ್ಲಿಟ್ಜ್ ಚೆಸ್ ಟೂರ್ನಿಯ ರ್‍ಯಾಪಿಡ್ ವಿಭಾಗದಲ್ಲಿ ಮೂರನೇ ಸ್ಥಾನ ಪಡೆದು ಭಾರತದ ಆಟಗಾರರ ಪೈಕಿ ಉತ್ತಮ ನಿರ್ವಹಣೆ ತೋರಿದರು. ಚೀನಾದ ವೀ ಯಿ ಅತ್ಯುತ್ತಮ ಫಾರಂ ಮುಂದುವರಿಸಿ ಈ ವಿಭಾಗದಲ್ಲಿ ಶುಕ್ರವಾರ ಅಗ್ರಸ್ಥಾನ ಪಡೆದರು.

ಈ ಟೂರ್ನಿ ಗ್ರ್ಯಾಂಡ್ ಚೆಸ್ ಟೂರ್‌ನ ಭಾಗವಾಗಿದೆ. ವೀ ಯಿ, ಏಳನೇ ಸುತ್ತಿನ ಪಂದ್ಯದಲ್ಲಿ ವಿಶ್ವ ಚಾಂಪಿಯನ್‌ಷಿಪ್ ಚಾಲೆಂಜರ್ ಗುಕೇಶ್ ವಿರುದ್ಧ, ಎಂಟನೇ ಸುತ್ತಿನಲ್ಲಿ ನಾಡಿರ್ಬೆಕ್ ಅಬ್ದುಸತ್ತಾರೋವ್ (ಉಜ್ಬೇಕಿಸ್ತಾನ) ವಿರುದ್ಧ ಜಯಗಳಿಸಿದರು. ಅಂತಿಮ ಸುತ್ತಿನಲ್ಲಿ ಪ್ರಜ್ಞಾನಂದ ವಿರುದ್ಧ ಡ್ರಾ ಮಾಡಿಕೊಂಡರು.

ವೀ ಯಿ 13 ಪಾಯಿಂಟ್ಸ್ ಗಳಿಸಿದರೆ, ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ 12 ಪಾಯಿಂಟ್ಸ್ ಸಂಗ್ರಹಿಸಿ ಎರಡನೇ ಸ್ಥಾನ ಪಡೆದರು. ಜರ್ಮನಿಯ ವಿನ್ಸೆಂಟ್ ಕೀಮರ್ ಮೇಲೆ ಜಯಗಳಿಸಿದ ನಾರ್ವೆಯ ಆಟಗಾರ, ಉಳಿದೆರಡು ಪಂದ್ಯ 'ಡ್ರಾ' ಮಾಡಿಕೊಂಡರು.

ಹತ್ತು ಆಟಗಾರರ ಈ ಟೂರ್ನಿಯ ಅರ್ಧ ಭಾಗ ಮುಗಿಸಿದ್ದು, ಬ್ಲಿಟ್ಸ್ (ಅತಿ ವೇಗದ) ವಿಭಾಗದಲ್ಲಿ ಡಬಲ್ ರೌಂಡ್‌ರಾಬಿನ್ ಪಂದ್ಯಗಳು (ಒಟ್ಟು 18 ಪಂದ್ಯ) ನಡೆಯಲು ಬಾಕಿಯಿದ್ದು, ನಂತರವಷ್ಟೇ ವಿಜೇತರ ನಿರ್ಧಾರವಗಲಿದೆ. ಈ ಟೂರ್ನಿ ಒಟ್ಟು ₹1.43 ಕೋಟಿ ಬಹುಮಾನ ನಿಧಿ ಹೊಂದಿದೆ.

ಅಂತಿಮ ಫಲಿತಾಂಶ (ರ್‍ಯಾಪಿಡ್): 1. ವೀ ಯಿ (13 ಪಾಯಿಂಟ್ಸ್). 2. ಮ್ಯಾಗ್ನಸ್ ಕಾರ್ಲ್‌ಸನ್ (12 ಪಾಯಿಂಟ್), 3. ಪ್ರಜ್ಞಾನಂದ (10 ಪಾಯಿಂಟ್ಸ್), 4–5: ಪೋಲೆಂಡ್‌ನ ಯಾನ್ ಕ್ರಿಸ್ಟೋಫ್ ಡೂಡ, ರುಮೇನಿಯಾದ ಕಿರಿಲ್ ಶೆವ್ಚೆಂಕೊ (9 ಪಾಯಿಂಟ್ಸ್), 6–7: ಅರ್ಜುನ್ ಇರಿಗೇಶಿ, ಅಬ್ದುಸತ್ತಾರೋವ್ (ತಲಾ 8 ಪಾಯಿಂಟ್ಸ್). 8–10: ಗುಕೇಶ್, ಹಾಲೆಂಡ್‌ನ ಅನಿಶ್ ಗಿರಿ, ವಿನ್ಸೆಂಟ್ ಕೀಮರ್ (ತಲಾ 7 ಪಾಯಿಂಟ್ಸ್).

ಗುಜರಾತ್ ತಂಡದ ಪ್ಲೇ ಆಫ್ ಕನಸು ಜೀವಂತ • ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ ಸೋಲು, ಮೋಹಿತ್‌ಗೆ 3 ವಿಕೆಟ್

ಗಿಲ್– ಸಾಯಿ ಶತಕಗಳ ಭರಾಟೆ

ಅಹಮದಾಬಾದ್ (ಪಿಟಿಐ): ಗುಜರಾತ್ ಟೈಟನ್ಸ್ ನಾಯಕ ಶುಭಮನ್ ಗಿಲ್ ಮತ್ತು ಸಾಯಿ ಸುದರ್ಶನ್ ಅವರ ಶತಕಗಳ ಭರಾಟೆಯ ಮುಂದೆ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಆಟವು ಮಂಕಾಯಿತು.

ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಗಿಲ್ ಬಳಗವು 35 ರನ್‌ಗಳಿಂದ ಜಯಿಸಿತು. ಈ ಮೂಲಕ ಟೈಟನ್ಸ್ ತಂಡವು ಪ್ಲೇ ಆಫ್ ಕನಸನ್ನು ಜೀವಂತವಾಗಿಸಿಕೊಂಡಿತು.

ಪಾಯಿಂಟ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನವನ್ನು ಕಾಯ್ದುಕೊಂಡಿರುವ ಚೆನ್ನೈ ತಂಡದ ಪ್ಲೇ ಆಫ್ ಹಾದಿ ತುಸು ಕಠಿಣವಾಯಿತು. ತನ್ನ ಪಾಲಿನಲ್ಲಿ ಇನ್ನುಳಿದಿರುವ ಎರಡೂ ಪಂದ್ಯಗಳಲ್ಲಿ ಜಯಿಸಲೇಬೇಕಾದ ಒತ್ತಡ ಚೆನ್ನೈ ತಂಡಕ್ಕೆ ಇದೆ. ಅದರಲ್ಲೊಂದು ಪಂದ್ಯವು ರಾಯಲ್ ಚಾಲೆಂಜರ್ಸ್ ಬೆಂಗಳೂರು (ಮೇ 18) ವಿರುದ್ಧವೂ ಇದೆ.

ಈ ಪಂದ್ಯದಲ್ಲಿ ಟಾಸ್ ಗೆದ್ದ ಚೆನ್ನೈ ಸೂಪರ್ ಕಿಂಗ್ಸ್ ನಾಯಕ ಋತುರಾಜ್ ಗಾಯಕವಾಡ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ನಂತರ ತಮ್ಮ ನಿರ್ಧಾರಕ್ಕೆ ಅವರು ಕೈಕೈ ಹಿಸುಕಿಕೊಳ್ಳಬೇಕಾಯಿತು. ಟೈಟನ್ಸ್ ಆರಂಭಿಕ ಜೋಡಿ ಗಿಲ್ (104; 55ಎ, 4X9, 6X6) ಹಾಗೂ ಸಾಯಿ (103; 51ಎ, 4X5, 6X7) ಮೊದಲ ವಿಕೆಟ್ ಜೊತೆಯಾಟದಲ್ಲಿ 210 ರನ್ ಸೇರಿಸಿದರು. ಇದರಿಂದಾಗಿ ತಂಡವು 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 231 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಚೆನ್ನೈ ತಂಡವು 10 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡಿತು. ರಚಿನ್ ರವೀಂದ್ರ, ಅಜಿಂಕ್ಯ ರಹಾನೆ ಹಾಗೂ ಋತುರಾಜ್ ಡಗ್‌ಔಟ್ ಸೇರಿದರು. ಡ್ಯಾರಿಲ್ ಮಿಚೆಲ್ (63;34ಎ) ಮತ್ತು ಮೋಯಿನ್ ಅಲಿ (56; 36ಎ) ಅವರು ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 109 ರನ್ ಗಳಿಸಿ ಗೆಲುವಿನ ಆಸೆ ಚಿಗುರಿಸಿದರು.

ಆದರೆ, 13ನೇ ಓವರ್‌ನಲ್ಲಿ ಬೌಲಿಂಗ್‌ಗೆ ಬಂದ ಮೋಹಿತ್ ಶರ್ಮಾ ಅವರು ಮಿಚೆಲ್ ವಿಕೆಟ್ ಕಬಳಿಸಿ ಜೊತೆಯಾಟ ಮುರಿದರು. ನಂತರದ ಓವರ್‌ಗಳಲ್ಲಿ ಮೋಯಿನ್ ಮತ್ತು ಶಿವಂ ದುಬೆ (21) ಅವರ ಆಟಕ್ಕೂ ಅವರು ತಡೆಯೊಡ್ಡಿದರು. ಕೊನೆಯಲ್ಲಿ ಎಂ.ಎಸ್. ಧೋನಿ 11 ಎಸೆತಗಳಲ್ಲಿ ಮೂರು ಸಿಕ್ಸರ್ ಸೇರಿದಂತೆ ಔಟಾಗದೇ 26 ರನ್‌ಗಳಿಸಿ ಕೊಂಚ ಹೋರಾಟ ತೋರಿದರೂ ಗೆಲುವಿಗೆ ಸಾಕಾಗಲಿಲ್ಲ. ಇದರಿಂದಾಗಿ ಚೆನ್ನೈ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗೆ 196 ರನ್ ಗಳಿಸಲಷ್ಟೇ ಶಕ್ತವಾಯಿತು. ಮೋಹಿತ್ ಮೂರು ವಿಕೆಟ್ ಪಡೆದರೆ, ರಶೀದ್ ಖಾನ್ ಎರಡು ವಿಕೆಟ್ ಗಳಿಸಿದರು.

ಗಿಲ್–ಸಾಯಿ ಜೊತೆಯಾಟ: ಎರಡು ವರ್ಷಗಳ ಹಿಂದೆ ಮೊದಲ ವಿಕೆಟ್ ಜೊತೆಯಾಟದಲ್ಲಿ ಲಖನೌ ಸೂಪರ್ ಜೈಂಟ್ಸ್ ತಂಡದ ಕೆ.ಎಲ್. ರಾಹುಲ್ ಹಾಗೂ ಕ್ವಿಂಟನ್ ಡಿಕಾಕ್ ಮೊದಲ ವಿಕೆಟ್‌ನ ಅಜೇಯ ಜೊತೆಯಾಟವನ್ನು ಗಿಲ್ ಮತ್ತು ಸಾಯಿ ಸಮ ಮಾಡಿದರು.

ಕಾಕತಾಳೀಯವೆಂದರೆ ಇಬ್ಬರೂ ತಮ್ಮ ಶತಕ ಪೂರೈಸಲು ತಲಾ 50 ಎಸೆತಗಳನ್ನು ಎದುರಿಸಿದರು. ಆದರೆ ಗಿಲ್ ಒಂದು ಜೀವದಾನ ಪಡೆದಿದ್ದರು. ಸಾಯಿ ಮಾತ್ರ ನಿಷ್ಕಳಂಕ ಇನಿಂಗ್ಸ್ ಆಡಿದರು. ಗಿಲ್ ಅವರಿಗೆ ಇದು ಐಪಿಎಲ್‌ನಲ್ಲಿ ಒಟ್ಟಾರೆ ನಾಲ್ಕನೇ ಶತಕ ಮತ್ತು ಸಾಯಿಗೆ ಮೊದಲನೇಯದ್ದು. ಗಿಲ್ ಅವರಿಗಿಂತ ಸಾಯಿ ರನ್ ಗಳಿಕೆ ವೇಗದಿಂದ ಕೂಡಿತ್ತು. ಅವರು 201.96 ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದರು.

ಇವರಿಬ್ಬರ ಆಟವು 18ನೇ ಓವರ್‌ನವರೆಗೂ ನಡೆಯಿತು. ಚೆನ್ನೈ ತಂಡಕ್ಕೆ ವೇಗಿಗಳಾದ ಮುಸ್ತಫಿಜುರ್ ರೆಹಮಾನ್, ದೀಪಕ್ ಚಾಹರ್ ಮತ್ತು ಮಥೀಷ ಪಥಿರಾಣ ಅವರ ಗೈರು ಹಾಜರಿಯು ಕಾಡಿತು. ಋತುರಾಜ್ ಮತ್ತು ಮಹೇಂದ್ರಸಿಂಗ್ ಧೋನಿಯವರ ಯಾವ ತಂತ್ರಗಳೂ ಫಲ ಕೊಡಲಿಲ್ಲ. ಮಿಚೆಲ್ ಸ್ಯಾಂಟನರ್ ಹಾಗೂ ಸಿಮ್ರನ್‌ಜೀತ್ ಸಿಂಗ್ ಅವರು ದುಬಾರಿಯಾದರು. ಅವರು 15ರ ಇಕಾನಮಿಯಲ್ಲಿ ರನ್‌ಗಳನ್ನು ಬಿಟ್ಟುಕೊಟ್ಟರು. 18ನೇ ಓವರ್ ಬೌಲಿಂಗ್ ಮಾಡಿದ ತುಷಾರ್ ಎರಡನೇ ಎಸೆತದಲ್ಲಿ ಸಾಯಿ ಹಾಗೂ 6ನೇ ಎಸೆತದಲ್ಲಿ ಗಿಲ್ ವಿಕೆಟ್‌ಗಳನ್ನು ಕಬಳಿಸಿದರು. ಶಾರೂಕ್ ಖಾನ್ ರನ್‌ಔಟ್ ಆದರು. ಡೇವಿಡ್ ಮಿಲ್ಲರ್ 11 ಎಸೆತಗಳಲ್ಲಿ 16 ರನ್ ಗಳಿಸಿ ಅಜೇಯರಾಗಿ ಉಳಿದರು.

ಶತಕ ದಾಖಲಿಸಿದ ಸಾಯಿ ಸುದರ್ಶನ್ ಅವರನ್ನು ಅಭಿನಂದಿಸಿದ ಗುಜರಾತ್ ಟೈಟನ್ಸ್ ನಾಯಕ ಶುಭಮನ್ ಗಿಲ್ –ಪಿಟಿಐ ಚಿತ್ರ

ಅತಿ ಹೆಚ್ಚು ಶತಕಗಳು ದಾಖಲಾದ ಟೂರ್ನಿ



* ಪ್ರಸಕ್ತ ನಡೆಯುತ್ತಿರುವ ಟೂರ್ನಿ

ಪ್ಲೇ ಆಫ್ ಹಾದಿಯ ಕೌತುಕ

ಶುಕ್ರವಾರದ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ತಂಡವು ಹಾಲಿ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್ ಎದುರು ಜಯಿಸುವುದರೊಂದಿಗೆ ಪ್ಲೇ ಆಫ್ ಲೆಕ್ಕಾಚಾರ ಮತ್ತಷ್ಟು ಕುತೂಹಲ ಕೆರಳಿಸಿದೆ.

ಇದರಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಪ್ಲೇ ಆಫ್ ಪ್ರವೇಶಿಸುವ ಸಣ್ಣ ಅವಕಾಶವೊಂದು ಸೃಷ್ಟಿಯಾಗಿದೆ. ಟೈಟನ್ಸ್‌ಗೂ ಅವಕಾಶ ಇದೆ.

ಸ್ಕೋರ್ ಕಾರ್ಡ್

ಗುಜರಾತ್ ಟೈಟನ್ಸ್ 3ಕ್ಕೆ231 (20 ಓವರ್‌ಗಳಲ್ಲಿ)

ಸಾಯಿ ಸುದರ್ಶನ್ ಸಿ ದುಬೆ ಬಿ ತುಷಾರ್ 103 (51ಎ, 4X5, 6X7)
ಶುಭಮನ್ ಸಿ ಜಡೇಜ ಬಿ ತುಷಾರ್ 104 (55ಎ, 4X9, 6X6)
ಮಿಲ್ಲರ್ ಔಟಾಗದೆ 16 (11ಎ, 4X1)
ಶಾರೂಕ್ ರನ್‌ಔಟ್ (ರಚಿನ್/ ಸಿಮ್ರನ್‌ಜೀತ್) 2 (3ಎ)
ಇತರೆ: 6 (ಲೆಗ್‌ಬೈ 1, ವೈಡ್ 5)
ವಿಕೆಟ್ ಪತನ: 1-210 (ಸಾಯಿ ಸುದರ್ಶನ್; 17.2), 2–213 (ಶುಭಮನ್ ಗಿಲ್; 17.6), 3–231 (ಶಾರೂಕ್ ಖಾನ್; 19.6)
ಬೌಲಿಂಗ್: ಮಿಚೆಲ್ ಸ್ಯಾಂಟನರ್ 2–0–31–0, ತುಷಾರ್ ದೇಶಪಾಂಡೆ 4–0–33–2, ಶಾರ್ದೂಲ್ ಠಾಕೂರ್ 4–0–25–0, ಸಿಮ್ರನ್‌ಜೀತ್ ಸಿಂಗ್ 4–0–60–0, ರವೀಂದ್ರ ಜಡೇಜ 2–0–29–0, ಡ್ಯಾರಿಲ್ ಮಿಚೆಲ್ 4–0–52–0

ಚೆನ್ನೈ ಸೂಪರ್ ಕಿಂಗ್ಸ್ 8ಕ್ಕೆ 196 (20 ಓವರ್‌ಗಳಲ್ಲಿ)

ರಹಾನೆ ಸಿ ತೆವಾಟಿಯಾ ಬಿ ಸಂದೀಪ್ 1 (5ಎ)
ರಚಿನ್ ರನ್‌ಔಟ್ (ಮಿಲ್ಲರ್) 1 (2ಎ)
ಋತುರಾಜ್ ಸಿ ರಶೀದ್ ಬಿ ಯಾದವ್ 0 (3ಎ)
ಮಿಚೆಲ್ ಸಿ ಶಾರೂಕ್ ಬಿ ಶರ್ಮಾ 63 (34ಎ, 4x7, 6x3)
ಮೋಯಿನ್ ಸಿ ನೂರ್ ಬಿ ಶರ್ಮಾ 56 (36ಎ, 4x4, 6x4)
ಶಿವಂ ಸಿ ನೂರ್ ಬಿ ಶರ್ಮಾ 21 (13ಎ, 4x2, 6x1)
ರವೀಂದ್ರ ಸಿ ಮಿಲ್ಲರ್ ಬಿ ರಶೀದ್ 18 (10ಎ, 4x2, 6x1)
ಧೋನಿ ಔಟಾಗದೇ 26 (11ಎ, 4x1, 6x3)
ಸ್ಯಾಂಟನರ್ ಬಿ ರಶೀದ್ 0 (2ಎ)
ಶಾರ್ದೂಲ್ ಔಟಾಗದೇ 3 (4ಎ)
ಇತರೆ: 7 (ಲೆಗ್‌ಬೈ 3, ವೈಡ್ 4)
ವಿಕೆಟ್ ಪತನ: 1-2 (ರಚಿನ್ ರವೀಂದ್ರ; 0.6), 2-2 (ಅಜಿಂಕ್ಯ ರಹಾನೆ; 1.1), 3-10 (ಋತುರಾಜ್ ಗಾಯಕವಾಡ್; 2.5), 4-119 (ಡೇರಿಲ್ ಮಿಚೆಲ್; 12.2), 5-135 (ಮೋಯಿನ್ ಅಲಿ; 14.2), 6-165 (ಶಿವಂ ದುಬೆ; 16.4), 7-169 (ರವೀಂದ್ರ ಜಡೇಜ; 17.3), 8-169 (ಮಿಚೆಲ್ ಸ್ಯಾಂಟನರ್; 17.5)
ಬೌಲಿಂಗ್: ಉಮೇಶ್ ಯಾದವ್ 3–0–20–1, ಸಂದೀಪ್ ವಾರಿಯರ್ 3–0–28–1, ಕಾರ್ತಿಕ್ ತ್ಯಾಗಿ 4–0–51–0, ನೂರ್ ಅಹಮ್ಮದ್ 2–0–25–0, ರಶೀದ್ ಖಾನ್ 4–0–38–2, ಮೋಹಿತ್ ಶರ್ಮಾ 4–0–31–3
ಪಂದ್ಯದ ಆಟಗಾರ: ಶುಭಮನ್ ಗಿಲ್

ಪ್ರಮುಖ ದಾಖಲೆಗಳು

210
ಶುಭಮನ್ ಗಿಲ್ ಮತ್ತು ಸಾಯಿ ಸುದರ್ಶನ್ ಮೊದಲ ವಿಕೆಟ್ ಜೊತೆಯಾಟದಲ್ಲಿ ಸೇರಿಸಿದ ರನ್‌ಗಳು. 2022ರಲ್ಲಿ ಲಖನೌ ಸೂಪರ್‌ಜೈಂಟ್ಸ್ ತಂಡದ ಕೆ.ಎಲ್.ರಾಹುಲ್–ಕ್ವಿಂಟನ್ ಡಿಕಾಕ್ ಅವರು ಮುರಿಯದ ಮೊದಲ ವಿಕೆಟ್ ಜೊತೆಯಾಟದಲ್ಲಿ ಇಷ್ಟೇ ರನ್ ಸೇರಿಸಿದ್ದರು.

101
ಐಪಿಎಲ್ ಟೂರ್ನಿಯಲ್ಲಿ ಇದುವರೆಗೆ ದಾಖಲಾದ ಒಟ್ಟು ಶತಕಗಳು. ಈ ಪಂದ್ಯದಲ್ಲಿ ಶುಭಮನ್ ಗಿಲ್ ಗಳಿಸಿದ ಶತಕವು ನೂರನೇಯದ್ದು. 2008ರಲ್ಲಿ ಕೋಲ್ಕತ್ತ ನೈಟ್ ರೈಡರ್ಸ್‌ನಲ್ಲಿ ಆಡಿದ್ದ ಬ್ರೆಂಡನ್ ಮೆಕ್ಲಂ ಮೊಟ್ಟಮೊದಲ ಶತಕ ದಾಖಲಿಸಿದ್ದರು.

4
ಗುಜರಾತ್ ಟೈಟನ್ಸ್ ನಾಯಕ ಶುಭಮನ್ ಗಿಲ್ ಅವರು ಐಪಿಎಲ್‌ನಲ್ಲಿ ಗಳಿಸಿದ ಒಟ್ಟು ಶತಕಗಳು

25
ಸಾಯಿ ಸುದರ್ಶನ್ ಅವರು ಐಪಿಎಲ್‌ನಲ್ಲಿ 1000 ರನ್ ಗಳಿಸಲು ಆಡಿದ ಒಟ್ಟು ಇನಿಂಗ್ಸ್‌ಗಳು. ಅವರು ಸಚಿನ್ ತೆಂಡೂಲ್ಕರ್ ಹಾಗೂ ಋತುರಾಜ್ ಗಾಯಕವಾಡ (ತಲಾ 31), ಜಾನಿ ಬೆಸ್ಟೊ (26) ದಾಖಲೆ ಮುರಿದರು.

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ಕೋಲ್ಕತ್ತ ನೈಟ್ ರೈಡರ್ಸ್	11	8	3	16	1.453
ರಾಜಸ್ಥಾನ ರಾಯಲ್ಸ್	11	8	3	16	0.476
ಸನ್‌ರೈಸರ್ಸ್ ಹೈದರಾಬಾದ್	12	7	5	14	0.406
ಚೆನ್ನೈ ಸೂಪರ್ ಕಿಂಗ್ಸ್	12	6	6	12	0.491
ಡೆಲ್ಲಿ ಕ್ಯಾಪಿಟಲ್ಸ್	12	6	6	12	-0.316
ಲಖನೌ ಸೂಪರ್ ಜೈಂಟ್ಸ್	12	6	6	12	-0.769
ಆರ್‌ಸಿಬಿ	12	5	7	10	0.217
ಗುಜರಾತ್ ಟೈಟನ್ಸ್	12	5	7	10	-1.063
ಮುಂಬೈ ಇಂಡಿಯನ್ಸ್	12	4	8	8	-0.212
ಪಂಜಾಬ್ ಕಿಂಗ್ಸ್	12	4	8	8	-0.423

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (634)
ಪರ್ಪಲ್ ಕ್ಯಾಪ್: ಹರ್ಷಲ್ ಪಟೇಲ್ (20 ವಿಕೆಟ್)

ಭಾರತದ ನೀರಜ್ ಚೋಪ್ರಾ –ಎಪಿ/ ಪಿಟಿಐ ಚಿತ್ರ

ಡೈಮಂಡ್ ಲೀಗ್: ನೀರಜ್‌ಗೆ ಬೆಳ್ಳಿ

ದೋಹಾ (ಎಎಫ್‌ಪಿ): ಒಲಿಂಪಿಕ್ ಚಾಂಪಿಯನ್ ನೀರಜ್ ಚೋಪ್ರಾ ಅವರು ಶುಕ್ರವಾರ ಇಲ್ಲಿ ನಡೆದ ದೋಹಾ ಡೈಮಂಡ್ ಲೀಗ್‌ನ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ಕೂದಲೆಳೆಯ ಅಂತರದಲ್ಲಿ ಚಿನ್ನ ಕಳೆದುಕೊಂಡರು.

2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಗೆದ್ದಿದ್ದ ಜೆಕ್ ಗಣರಾಜ್ಯದ ಜೇಕಬ್ ವಡ್ಲೆಚ್ 88.38 ಮೀಟರ್ ಸಾಧನೆಯೊಂದಿಗೆ ಚಿನ್ನಕ್ಕೆ ಮುತ್ತಿಕ್ಕಿದರು. ಅವರಿಗಿಂತ ಎರಡು ಸೆಂಟಿ ಮೀಟರ್ ಕಡಿಮೆ ದೂರ ಎಸೆದ ಭಾರತದ ನೀರಜ್ ಬೆಳ್ಳಿಗೆ ತೃಪ್ತಿಪಟ್ಟರು. ಗ್ರೆನೆಡಾದ ಆ್ಯಂಡರ್ಸನ್ ಪೀಟರ್ಸ್ ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಕಳೆದ ಋತುವಿನ ಡೈಮಂಡ್ ಲೀಗ್ ಚಾಂಪಿಯನ್ ಆಗಿರುವ ಜೇಕಬ್ ಅವರ ಮೂರನೇ ಪ್ರಯತ್ನದಲ್ಲಿ ಈ ಸಾಧನೆ ಮೂಡಿಬಂತು. ಚೋಪ್ರಾ ಅವರು ಕೊನೆಯ ಪ್ರಯತ್ನದಲ್ಲಿ 88.36 ಮೀಟರ್ ದೂರ ಎಸೆದರು. ಭಾರತದ ಮತ್ತೊಬ್ಬ ಸ್ಪರ್ಧಿ ಕಿಶೋರ್ ಜೇನ 76.31 ಮೀ ದೂರ ಎಸೆಯಲಷ್ಟೇ ಶಕ್ತವಾದರು.

ಕಳೆದ ವರ್ಷ ಇಲ್ಲಿನ ಡೈಮಂಡ್ ಲೀಗ್‌ನಲ್ಲಿ ಚೋಪ್ರಾ ಇಲ್ಲಿ ಚಿನ್ನ ಗೆದ್ದಿದ್ದರು. ನಾಲ್ಕು ಸೆಂಟಿ ಮೀಟರ್‌ನಿಂದ ಚಿನ್ನ ಕಳೆದುಕೊಂಡಿದ್ದ ಜೇಕಬ್, ಈ ಬಾರಿ ಮುಯ್ಯಿ ತೀರಿಸಿಕೊಂಡರು.

ಚೋಪ್ರಾ ಈವರೆಗಿನ ಶ್ರೇಷ್ಠ ಸಾಧನೆ 89.94 ಮೀ. (2022) ಆಗಿದೆ. 90 ಮೀಟರ್ ಸಾಧನೆಯ ಕನಸು ಈ ಕೂಟದಲ್ಲೂ ಈಡೇರಲಿಲ್ಲ.

ಶ್ರೇಯಸ್ ಬಳಗಕ್ಕೆ ಮುಂಬೈ ಸವಾಲು ಇಂದು

ಕೋಲ್ಕತ್ತ (ಪಿಟಿಐ): ಎರಡು ಬಾರಿಯ ಐಪಿಎಲ್ ಚಾಂಪಿಯನ್ ಕೋಲ್ಕತ್ತ ನೈಟ್ ರೈಡರ್ಸ್ ತಂಡವು ಶನಿವಾರ ಮುಂಬೈ ಇಂಡಿಯನ್ಸ್ ಎದುರು ಕಣಕ್ಕಿಳಿಯಲಿದೆ.

16 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿರುವ ಕೋಲ್ಕತ್ತ ತಂಡವು ಈಗಾಗಲೇ ಪ್ಲೇ ಆಫ್ ಸ್ಥಾನ ಖಚಿತಪಡಿಸಿಕೊಂಡಿದೆ. ಹಾರ್ದಿಕ್ ಪಾಂಡ್ಯ ನಾಯಕತ್ವದ ಮುಂಬೈ ತಂಡವು ಹೊರಬಿದ್ದಾಗಿದೆ. ಆದರೆ ಕೋಲ್ಕತ್ತ ತಂಡವು ತನ್ನ ಗೆಲುವಿನ ಲಯವನ್ನು ಮುಂದುವರಿಸಿ ಅಗ್ರಸ್ಥಾನವನ್ನು ಗಟ್ಟಿಗೊಳಿಸಿಕೊಳ್ಳುವ ಛಲದಲ್ಲಿದೆ. ಅದೇ ಮುಂಬೈ ತಂಡವು ಸಮಾಧಾನಕರ ಗೆಲುವಿಗಾಗಿ ಹಂಬಲಿಸುತ್ತಿದೆ.

ಸುನಿಲ್ ನಾರಾಯಣ್, ಆ್ಯಂಡ್ರೆ ರಸೆಲ್, ನಿತೀಶ್ ರೆಡ್ಡಿ, ವೆಂಕಟೇಶ್ ಅಯ್ಯರ್, ರಿಂಕು ಸಿಂಗ್, ನಾಯಕ ಶ್ರೇಯಸ್ ಅಯ್ಯರ್, ಅಂಗಕ್ರಿಷ್ ರಘುವಂಶಿ ಅವರೆಲ್ಲರೂ ರನ್ ಹೊಳೆ ಹರಿಸುತ್ತಿರುವ ಬ್ಯಾಟರ್‌ಗಳಾಗಿದ್ದಾರೆ. ಬೌಲಿಂಗ್‌ನಲ್ಲಿ ಮಿಚೆಲ್ ಸ್ಟಾರ್ಕ್ ಲಯಕ್ಕೆ ಮರಳಿದ್ದಾರೆ. ಹರ್ಷಿತ್ ರಾಣಾ, ಸ್ಪಿನ್ನರ್ ವರುಣ್ ಚಕ್ರವರ್ತಿ ಹಾಗೂ ಸುನಿಲ್ ತಂಡದ ಬೌಲಿಂಗ್ ಶಕ್ತಿಯಾಗಿದ್ದಾರೆ.

ಮುಂಬೈ ತಂಡದಲ್ಲಿ ಸೂರ್ಯಕುಮಾರ್ ಯಾದವ್ ಅದ್ಭುತ ಲಯದಲ್ಲಿದ್ದಾರೆ. ಇಶಾನ್ ಕಿಶನ್, ರೋಹಿತ್ ಶರ್ಮಾ ಅವರು ಉತ್ತಮ ಆರಂಭ ನೀಡಿದರೆ, ಸೂರ್ಯ, ಟಿಮ್ ಡೇವಿಡ್, ತಿಲಕ್ ವರ್ಮಾ ಹಾಗೂ ನಾಯಕ ಹಾರ್ದಿಕ್ ಅವರು ಮಧ್ಯಮ ಕ್ರಮಾಂಕಕ್ಕೆ ಬಲ ತುಂಬಬಲ್ಲರು.

ಜಸ್‌ಪ್ರೀತ್ ಬೂಮ್ರಾ ನಾಯಕತ್ವದ ಬೌಲಿಂಗ್ ಪಡೆಯು ಕೋಲ್ಕತ್ತ ಬ್ಯಾಟರ್‌ಗಳಿಗೆ ಕಡಿವಾಣ ಹಾಕುವ ಸಾಮರ್ಥ್ಯ ಹೊಂದಿದೆ. ಒಂದು ವಾರದ ಹಿಂದೆ ನಡೆದಿದ್ದ ಪಂದ್ಯದಲ್ಲಿ ಉಭಯ ತಂಡಗಳು ಮುಖಾಮುಖಿಯಾಗಿದ್ದವು. ಆಗಲೂ ಕೋಲ್ಕತ್ತ ಜಯಿಸಿತ್ತು. ಆ ಸೋಲಿಗೆ ಮುಯ್ಯಿ ತೀರಿಸಿಕೊಳ್ಳುವ ಛಲದಲ್ಲಿ ಹಾರ್ದಿಕ್ ಬಳಗ ಇದೆ.

ಕೋಲ್ಕತ್ತ ತಂಡಕ್ಕೆ ಇದೂ ಸೇರಿದಂತೆ ಇನ್ನೂ ಮೂರು ಪಂದ್ಯಗಳು ಬಾಕಿಯಿವೆ. ಈ ಹಿಂದೆ ಕೋಲ್ಕತ್ತ ತಂಡವು ಪ್ರಶಸ್ತಿ ಜಯಿಸಿದಾಗ ನಾಯಕರಾಗಿದ್ದ ಗೌತಮ್ ಗಂಭೀರ್ ಈಗ ಮೆಂಟರ್ ಆಗಿದ್ದಾರೆ. ತೆರೆಯ ಹಿಂದಿನ 'ನಾಯಕ'ನಾಗಿ ಪ್ರಶಸ್ತಿ ಜಯಿಸುವ ಕನಸು ಕಾಣುತ್ತಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಸಿನಿಮಾ ಆ್ಯಪ್

ಸೂರ್ಯಕುಮಾರ್ ಯಾದವ್ –ಪಿಟಿಐ ಚಿತ್ರಗಳು
ಸುನಿಲ್ ನಾರಾಯಣ್

ಅಮ್ಮಂದಿರಿಗಾಗಿ ಟ್ರೆಂಡಿ ಫ್ಯಾಷನ್ 4

ಮೈಸೂರ್ ಸ್ಯಾರಿ ಸೆಂಟರ್
-: ಮದುವೆ ಸಂಗ್ರಹ :-

Mysore Saree Center
12,000 Sq.ft Wide Showroom

ಫ್ಯಾಮಿಲಿ ಸ್ಟೋರ್ @ ಕಾರ್ಪೋರೇಷನ್ ಸರ್ಕಲ್, ಸಂಪಂಗಿರಾಮನಗರ.

ದೂ: 9880604443 / 9880751001 / 9341225266

ಅಕ್ಷಯ ತೃತೀಯ

ಅಕ್ಷಯ ತೃತೀಯದ ಶುಭ ಸಂಧರ್ಭದಲ್ಲಿ ಎಲ್ಲಾ ಸೀರೆಗಳ ಮೇಲೆ

FLAT 50% DISCOUNT

- ಕ್ರೇಪ್ ಮೈಸೂರ್ ಸಿಲ್ಕ್ಸ್
- ಕಾಂಚೀಪುರಂ
- ಡಿಸೈನರ್ ಸ್ಯಾರೀಸ್
- ಮೆನ್ಸ್ ವೇರ್
- ಕಿಡ್ಸ್ ವೇರ್

@ ಹೋಲ್‌ಸೇಲ್ ದರದಲ್ಲಿ

ನೇಕಾರರಿಂದ ನೇರ ಮಾರಾಟ

ಮಳೆಗಾಲಕ್ಕೆ ಮನೆಯಲಂಕಾರ

ಪವಿತ್ರಾ ಭಟ್

ಬಿಸಿಲ ಝಳ, ಒಣ ಹವೆಯಿಂದ ಬಸವಳಿದಿದ್ದ ಜನರಿಗೆ ಈಗ ಮಳೆಯ ಸಿಂಚನದ ಮುದ. ಆದರೆ, ಮಳೆಯ ಹಿತದ ನಡುವೆ, ವಾತಾವರಣದ ತೇವಾಂಶದಿಂದ ಉಂಟಾಗುವ ಬೂಜು ಸಮಸ್ಯೆ, ಮನೆಯೊಳಗೆ ದುರ್ಗಂಧ ಬೀರುವುದರ ಜತೆಗೆ, ವಸ್ತುಗಳನ್ನೂ ಹಾಳು ಮಾಡಲಿದೆ. ಹೀಗಾಗಿ ಒಳಾಂಗಣವನ್ನು ಬೆಚ್ಚಗಿರಿಸಿ, ಮನೆಯ ಅಂದವನ್ನೂ ಹೆಚ್ಚಿಸಲು ಇಲ್ಲಿವೆ ಒಂದಷ್ಟು ಮಾರ್ಗೋಪಾಯಗಳು.

ಕರ್ಟನ್

ಮಳೆಗಾಲದಲ್ಲಿ ಕಿಟಕಿಗಳಿಗೆ ಕರ್ಟನ್ ಅಳವಡಿಸುವುದು ಒಳ್ಳೆಯದು. ಆದಷ್ಟು ಹಗುರುವಾದ ಮತ್ತು ತಿಳಿ ಬಣ್ಣದ ಕರ್ಟನ್‌ಗಳನ್ನು ಹಾಕಿ. ಇವು ಮನೆಯೊಳಗೆ ಬೆಳಕು ಬರುವಂತೆ ಮಾಡುತ್ತವೆ. ಜತೆಗೆ ಒಳಗೇ ಕುಳಿತು ಹೊರಗಿನ ವಾತಾವರಣವನ್ನು ಆನಂದಿಸಲು ಅನುವು ಮಾಡಿಕೊಡುತ್ತದೆ.

ವಿಂಡ್ ಚಿಮ್ಸ್

ಮನೆಯ ಹಾಲ್‌ನಲ್ಲಿ ಅಥವಾ ಮನೆಯನ್ನು ಪ್ರವೇಶಿಸುವ ದ್ವಾರದಲ್ಲಿ ವಿಂಡ್ ಚಿಮ್ಸ್ ತೂಗುಹಾಕಿ. ಗಾಳಿ ಬಂದಾಗ ವಿಂಡ್ ಚಿಮ್ಸ್‌ನಿಂದ ಹೊರಬರುವ ಇಂಪಾದ ಸದ್ದು ಹಿತವೆನಿಸುತ್ತದೆ. ಇದು ಮನೆಯ ಅಂದವನ್ನೂ ಇಮ್ಮಡಿಗೊಳಿಸುತ್ತದೆ. ಸಣ್ಣ ಗೆಜ್ಜೆಗಳಿರುವ ವಿಂಡ್ ಚಿಮ್ಸ್, ಲೋಹದ ಅಥವಾ ಬಿದಿರಿನಿಂದ ತಯಾರಿಸಿದಂತಹವುಗಳು ಸೇರಿದಂತೆ ತರಹೇವಾರಿ ವಿಂಡ್ ಚಿಮ್ಸ್‌ಗಳು ಆನ್‌ಲೈನ್, ಮಾರುಕಟ್ಟೆಗಳಲ್ಲಿ ದೊರೆಯುತ್ತವೆ.

ಗಿಡಗಳು

ಮನೆಯ ಒಳಾಂಗಣ ಅಂದವಾಗಿರುವಂತೆ ನೋಡಿಕೊಳ್ಳಲು ಗಿಡಗಳನ್ನು ಇಡುವುದು ಎಲ್ಲಾ ಋತುಗಳಲ್ಲಿ ಒಳ್ಳೆಯದು. ಗಿಡಗಳು ಗಾಳಿಯನ್ನು ಶುದ್ಧೀಕರಿಸುವುದರ ಜತೆಗೆ ಮನಸ್ಸಿಗೆ ಮುದ ತರುತ್ತವೆ. ಉದಾಹರಣೆಗೆ ಸ್ನೇಕ್ ಪ್ಲಾಂಟ್, ಪೀಸ್ ಲಿಲ್ಲಿ, ಜರಿಗಿಡಗಳನ್ನು ಇಡಬಹುದು. ಇವು ನಿಮ್ಮ ಒಳಾಂಗಣವನ್ನು ದೊಡ್ಡದಾಗಿ ಕಾಣುವಂತೆಯೂ ಮಾಡುತ್ತವೆ.

ಮ್ಯಾಟ್‌ಗಳು

ಮನೆಯ ಬಾಗಿಲಿನಲ್ಲಿ ಮ್ಯಾಟ್‌ಗಳನ್ನು ಹಾಕುವುದು ಕೂಡ ಮನೆಗೆ ಒಂದು ಲುಕ್ ನೀಡುತ್ತದೆ. ಮಳೆಗಾಲದಲ್ಲಿ ಬಟ್ಟೆಯ ಮ್ಯಾಟ್‌ಗಳನ್ನು ಹಾಕಬೇಡಿ, ಒದ್ದೆಗೆ ದುರ್ವಾಸನೆ ಬೀರಬಹುದು. ಬದಲು ರಬ್ಬರ್ ಅಥವಾ ತೆಂಗಿನ ನಾರಿನ ಮ್ಯಾಟ್‌ಗಳು ಉತ್ತಮ. ಮ್ಯಾಟ್‌ಗಳ ಬಳಕೆಯಿಂದ ಮನೆ ಕೊಳೆಯಾಗುವುದರಿಂದಲೂ ತಪ್ಪಿಸಬಹುದು.

ಧೂಪ ಮತ್ತು ದೀಪದ ಬಳಕೆ

ಮಳೆಗಾಲದಲ್ಲಿ ಮನೆಯ ಒಳಗೆ ಧೂಪವನ್ನು ಹಚ್ಚಿಡಿ. ಇದು ಉತ್ತಮ ಸುವಾಸನೆಯನ್ನೂ ನೀಡುತ್ತದೆ. ಧೂಪವನ್ನು ಹಚ್ಚಿ ಮೇಣದಬತ್ತಿ ಅಥವಾ ಪುಟ್ಟ ಎಲ್‌ಇಡಿ ಬಲ್ಬ್‌ಗಳ ನಡುವೆ ಇಟ್ಟರೆ ಧೂಪದಿಂದ ಹೊರಬರುವ ಸಣ್ಣ ಹೊಗೆ ಮನೆಯ ಹಾಲ್‌ನಲ್ಲಿ ಪರಿಮಳಯುಕ್ತ ವಾತಾವರಣವನ್ನು ಸೃಷ್ಟಿಸುತ್ತದೆ.

ಲ್ಯಾಂಪ್ ಲೈಟ್‌ಗಳು

ಜೋರು ಮಳೆಗಾಲದಲ್ಲಿ ಮನೆಯೊಳಗೆ ಬೆಳಕಿನ ಕೊರತೆಯಾಗಬಹುದು. ಹೀಗಾಗಿ ಗೋಡೆಯ ಮೇಲೆ ಅಲ್ಲಲ್ಲಿ ಲ್ಯಾಂಪ್‌ಲೈಟ್‌ಗಳನ್ನು ಅಳವಡಿಸಿ. ಇದು ಮನೆಗೆ ಸಾಂಪ್ರದಾಯಿಕ ಲುಕ್ ಜತೆಗೆ ಬೆಳಕನ್ನೂ ನೀಡಬಲ್ಲದು. ಲ್ಯಾಂಪ್‌ಲೈಟ್‌ಗಳು ಹಳದಿ ಬಣ್ಣದಲ್ಲಿ ಇದ್ದರೆ ಉತ್ತಮ.

AFFILIATE SPONSORS

VENFIELD | MYBRA | De Moza | VSTAR | BLOSSOM | LAVIE

FASHION PARTNERS

Pepe Jeans | 3mukti | PETER ENGLAND | CROYDON | Levi's | celio* do it your way. | IDENTITI | CRIMSOUNE CLUB | LOUIS PHILIPPE | JOCKEY | KRITHI | CAPRESE | VIP | AMERICAN TOURISTER | safari | Vie | RUFF | sin

CHANNEL PARTNER | RADIO PARTNER | EVENT PARTNERS | BEAUTY PARTNERS | ORGANISED BY

ವಿಸ್ತಾರ | Radio City | Crocodile | GO COLORS! | MAYBELLINE NEW YORK | LuLu EVENTS | LuLu MALL World of Happiness

ADVERTORIAL

EPIONE
Center for Pain Relief & Beyond
Pain Ortho Neurology & Regenerative Clinics

NABH | FDA

ನಿಮ್ಮ ನೋವನ್ನು ಗುಣಪಡಿಸಿ ಮತ್ತು ನಿಮ್ಮ ಜೀವನವನ್ನು ಪುನರಾರಂಭಿಸಿ. ನೋವು ಪರಿಹಾರಕ್ಕೆ ಇಪಿಯೋನ್ ಸೆಂಟರ್

ಚಿಕಿತ್ಸೆಯಲ್ಲಿ ಹೊಸದೇನಿದೆ? ಇದು ಕ್ರಾಂತಿಕಾರಿ ಪುನರುತ್ಪಾದಕ ಚಿಕಿತ್ಸೆಯಾಗಿದೆ, ಶಸ್ತ್ರಚಿಕಿತ್ಸೆಯಲ್ಲದ ಪುನರುತ್ಪಾದಕ ಚಿಕಿತ್ಸೆಯು ಎಲ್ಲಾ ರೀತಿಯ ನೋವುಗಳಿಗೆ ಸಹಾಯ ಮಾಡುತ್ತದೆ. ಪುನರುತ್ಪಾದಕ ಕ್ರಿಯೆಯು ಹೊಸ ಚಿಕಿತ್ಸೆ ಪದ್ಧತಿಯಾಗಿದ್ದು ಇದು ನೋವಿನ ಅಂಗಾಂಶಗಳನ್ನು ಸರಿಪಡಿಸಲು ಮತ್ತು ಪುನರುತ್ಪಾದಿಸಲು ಸಹಕರಿಸುತ್ತದೆ. ದೇಹದ ಪ್ರತಿಯೊಂದು ಅಂಗಾಂಶವು ಕ್ಷೀಣಿಸುವ ಪ್ರವೃತ್ತಿಯನ್ನು ಹೊಂದಿದೆ ಮತ್ತು ವಯಸ್ಸಾದ ಕಾರಣ ಅಥವಾ ಅತಿಯಾದ ದೇಹದ ಭಾರದಿಂದ ಅಥವಾ ಗಾಯದ ಪರಿಣಾಮವಾಗಿ ದೇಹದ ಕೆಲವು ಭಾಗ ಹಾನಿಗೊಳಗಾಗುತ್ತದೆ. ಮಾನವ ರಕ್ತದಲ್ಲಿನ ಕಿರುಬಿಲ್ಲೆಗಳು ಹಾನಿಗೊಳಗಾದ ಅಂಗಾಂಶವನ್ನು ಪುನರುತ್ಪಾದಿಸುವ ಆಂತರಿಕ ಸಾಮರ್ಥ್ಯವನ್ನು ಹೊಂದಿರುವ ಹಲವಾರು ಬೆಳವಣಿಗೆಯ ಅಂಶಗಳನ್ನು ಒಳಗೊಂಡಿವೆ.

ಇಪಿಯೋನ್ ಭಾರತದ ಮೊದಲ ನೋವು ನಿವಾರಣೆ ಕೇಂದ್ರವಾಗಿದ್ದು, ಇದು ಮಲ್ಟಿಡಿಸಿಪ್ಲಿನರಿ ಮತ್ತು ಮಲ್ಟಿಮೋಡಲ್ ಪೇನ್ ಮ್ಯಾನೇಜ್ಮೆಂಟ್ ಮತ್ತು ಇದು ಸುಧಾರಿತ ನೋವಿನ ಕ್ಲಿನಿಕ್ ಆಗಿದೆ.

ಇಪಿಯೋನ್ ವಿಶ್ವಾಸಾರ್ಹ ನೋವು ಚಿಕಿತ್ಸಾಲಯವಾಗಿ, ಸುಧಾರಿತ ಶಸ್ತ್ರಚಿಕಿತ್ಸಾ ಇಲ್ಲದೆ ಚಿಕಿತ್ಸೆಗಳನ್ನು ನೀಡುತ್ತದೆ, ಎಲ್ಲಾ ನೋವಿಗೂ ಒಂದೇ ಸೂರಿನಡಿ ಚಿಕಿತ್ಸೆ ಲಭ್ಯವಿದೆ.

ಇಪಿಯೋನ್‌ನ ನೋವಿನ ತಜ್ಞರ ತಂಡವು ಪ್ರತಿ ರೋಗಿಯು ವೈಯಕ್ತಿಕ ಗಮನವನ್ನು ಮತ್ತು ಹೆಚ್ಚು ಸೂಕ್ತವಾದ ಚಿಕಿತ್ಸಾ ಆಯ್ಕೆಗಳನ್ನು ಪಡೆಯುತ್ತಾರೆ ಎಂದು ಹೇಳುತ್ತಾರೆ. ಇಪಿಯೋನ್ ಬೆಂಗಳೂರು, ಹೈದರಾಬಾದ್ ಮತ್ತು ಚೆನ್ನೈನಲ್ಲಿ ಪ್ರಸಿದ್ಧತೆಯನ್ನು ಪಡೆದಿದೆ. ಇದು ನೋವು ಚಿಕಿತ್ಸಾಲಯವಾಗಿ ಕಾರ್ಯನಿರ್ವಹಿಸುತ್ತಿದೆ.

ಚಿಕಿತ್ಸೆ ಹೇಗೆ ಮಾಡಲಾಗುತ್ತದೆ?

ಪುನರುತ್ಪಾದಕ ಚಿಕಿತ್ಸೆಯು ನೇರವಾದ ಒಂದು ದಿನದ ಚಿಕಿತ್ಸಾ ವಿಧಾನವಾಗಿದೆ. ರೋಗಿಯ ರಕ್ತವನ್ನು ಚಿಕ್ಕ ಸೂಜಿಯನ್ನು ಬಳಸಿ ಹೊರತೆಗೆಯಲಾಗುತ್ತದೆ ಮತ್ತು ಪ್ಲೇಟ್ಲೆಟ್ ಸಮೃದ್ಧ ಪ್ಲಾಸ್ಮಾವನ್ನು (PRP) ಉತ್ಪಾದಿಸಲು ಕೇಂದ್ರಾವಾಗಿಸುತ್ತದೆ, ಇದು ಬೆಳವಣಿಗೆಯ ಅಂಶಗಳಲ್ಲಿ ಹೆಚ್ಚು. ಹಾನಿಗೊಳಗಾದ ಜಾಗವನ್ನು ಅಲ್ಟ್ರಾಸೌಂಡ್ ಅಥವಾ ಫ್ಲೋರೋಸ್ಕೋಪಿಕ್ ಯಂತ್ರವನ್ನು ಬಳಸಿ ಗುರುತಿಸಲಾಗುತ್ತದೆ ಮತ್ತು ಸಿದ್ಧಪಡಿಸಿದ PRP ಅನ್ನು ಚುಚ್ಚಲಾಗುತ್ತದೆ. ಹಾನಿಗೊಳಗಾದ ಪ್ರದೇಶಕ್ಕೆ PRP ಅನ್ನು ಚುಚ್ಚಿದಾಗ, ಅದು ಸ್ವಲ್ಪ ಪ್ರಮಾಣದ ಉರಿಯೂತವನ್ನು ಉಂಟುಮಾಡುತ್ತದೆ. ಇದು ಗುಣಪಡಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸುತ್ತದೆ. ಬೆಳವಣಿಗೆಯ ಅಂಶಗಳು ಮತ್ತು ಬಿಡುಗಡೆಯಾದ ಕಿಣ್ವಗಳು ಕೊಲಜನ್ ರಚನೆಗೆ ಕಾರಣವಾಗುತ್ತವೆ.

ಇದು ಹೇಗೆ ಕೆಲಸ ಮಾಡುತ್ತದೆ?

ಮಾನವನ ರಕ್ತವು ಪ್ಲೇಟ್ಲೆಟ್ಗಳಲ್ಲಿ ಅನೇಕ ಬೆಳವಣಿಗೆಯ ಅಂಶಗಳನ್ನು ಹೊಂದಿದೆ. ಈ ಬೆಳವಣಿಗೆಯ ಅಂಶಗಳನ್ನು ರಕ್ತದಿಂದ ಹೊರತೆಗೆಯಲಾಗುತ್ತದೆ ಮತ್ತು ಸಂಸ್ಕರಿಸಲಾಗುತ್ತದೆ. ಗಾಯವಾದ ಅಂಗಾಂಗಕ್ಕೆ ಚುಚ್ಚಿದಾಗ, ಅದನ್ನು ಸರಿಪಡಿಸಲು ಸಹಾಯ ಮಾಡುತ್ತದೆ ಮತ್ತು ಹೊಸ ಆರೋಗ್ಯಕರ ಅಂಗಾಂಶದ ಉತ್ಪಾದನೆಗೆ ಕಾರಣವಾಗುತ್ತದೆ.

ಬೆಂಗಳೂರಿನ ಅತ್ಯುತ್ತಮ ನೋವು ನಿರ್ವಹಣಾ ಕೇಂದ್ರಗಳಲ್ಲಿ ಮೊದಲನೆಯ ಸ್ಥಾನವೆಂದು ಪರಿಗಣಿಸಲ್ಪಟ್ಟಿರುವ ಇಪಿಯೋನ್ ನೋವು ನಿರ್ವಹಣಾ ಕೇಂದ್ರವು ಬನಶಂಕರಿ 2ನೇ ಸ್ಟೇಜ್ ನಲ್ಲಿರುವ ಸಿದ್ದಣ್ಣ ಲೇಔಟ್‌ನಲ್ಲಿ ಸುಲಭವಾಗಿ ಪ್ರವೇಶಿಸಬಹುದಾಗಿದೆ. ಸೋಮವಾರದಿಂದ ಶನಿವಾರದವರೆಗೆ, ಇಪಿಯೋನ್ ಚಿಕಿತ್ಸಾ ಕೇಂದ್ರವು ಬೆಳಿಗ್ಗೆ 8 ರಿಂದ ಸಂಜೆ 7 ರವರೆಗೆ ಕಾರ್ಯನಿರ್ವಹಿಸುತ್ತದೆ.

PRP ಥೆರಪಿಯೊಂದಿಗೆ ಚಿಕಿತ್ಸೆ ನೀಡಬಹುದಾದ ಪರಿಸ್ಥಿತಿಗಳು ಯಾವುವು?

- ಮೊಣಕಾಲಿನ ಅಸ್ಥಿಸಂಧಿವಾತ.
- ಅಸ್ಥಿರಜ್ಜು / ಚಂದ್ರಾಕೃತಿ / ಸ್ನಾಯುವಿನ ಗಾಯಗಳು
- ಕ್ರೀಡೆ ಗಾಯಗಳು
- ಸೊಂಟ ಮತ್ತು ಸರ್ವಿಕಲ್ ಸ್ಪಾಂಡಿಲೋಸಿಸ್
- ಭುಜ ಮತ್ತು ಪಾದದ ಜಂಟಿ ಸಂಧಿವಾತ
- ಅಸ್ಥಿರಜ್ಜುಗಳು ಮತ್ತು ಭುಜ ಮತ್ತು ಪಾದದ ಕೀಲುಗಳು
- ಸ್ನಾಯುವಿನ ಗಾಯ
- ಟೆನಿಸ್ ಮೊಣಕೈ
- ಪ್ಲಾಂಟರ್ ಫ್ಯಾಸಿಟಿಸ್
- ಮೈಗ್ರೇನ್

ಪ್ಲಾಸ್ಮಾ ಥೆರಪಿಯ ಪ್ರಯೋಜನಗಳೇನು?

- ಶಸ್ತ್ರಚಿಕಿತ್ಸೆಯಲ್ಲದ ಚಿಕಿತ್ಸೆ, ಒಂದು ದಿನದ ಚಿಕಿತ್ಸಾ ವಿಧಾನ
- ರೋಗಿಗಳು ಅದೇ ದಿನ ತಮ್ಮ ನಿತ್ಯ ಕೆಲಸವನ್ನು ಪುನರಾರಂಭಿಸಬಹುದು, ಸಮಸ್ಯೆಗೆ ಶಾಶ್ವತ ಪರಿಹಾರ
- ಯಾವುದೇ ಅಡ್ಡ ಪರಿಣಾಮಗಳಿಲ್ಲ
- ವಿವಿಧ ವಿಶೇಷ ಯಂತ್ರಗಳನ್ನು ಬಳಸಿ ಮಾಡಲಾಗುತ್ತದೆ ಮತ್ತು ಆದ್ದರಿಂದ ನೋವಿನ ಸೂಕ್ತವಾದ ಪ್ರದೇಶವನ್ನು ಗುರುತಿಸಲಾಗುತ್ತದೆ ಮತ್ತು PRP ಅನ್ನು ನಿಖರವಾದ ಸ್ಥಳದಲ್ಲಿ ಚಿಕಿತ್ಸೆ ಮಾಡಲಾಗುತ್ತದೆ.
- ಈ ತಂತ್ರವನ್ನು ಪಾಶ್ಚಿಮಾತ್ಯ ದೇಶಗಳಲ್ಲಿ ಬಹಳ ಹಿಂದಿನಿಂದಲೂ ಉತ್ತಮ ಫಲಿತಾಂಶಗಳೊಂದಿಗೆ ಅಭ್ಯಾಸ ಮಾಡಲಾಗುತ್ತಿದೆ

ತಾಯಂದಿರ ದಿನದ ಪ್ರಯುಕ್ತ ಕನ್ಸಲ್ಟೇಷನ್ ನಲ್ಲಿ ಮಹಿಳೆಯರಿಗೆ 20% ರಿಯಾಯಿತಿ ನೀಡಲಾಗುವುದು.
ಈ ಕೊಡುಗೆ ಮೇ 8 ರಿಂದ 18 ರವರೆಗೆ

ಆರೋಗ್ಯ ಕ್ಷೇತ್ರದಲ್ಲಿನ ಅತ್ಯುತ್ತಮ ಸೇವೆಗಾಗಿ ಆರೋಗ್ಯ ಸಚಿವರಿಂದ ಪ್ರಶಸ್ತಿ ಸ್ವೀಕರಿಸುತ್ತಿರುವುದು.

ಡಾ. ಸುಧೀರ್ ದಾರಾ
MBBS, MD, FIAPM
ಇಪಿಯೊನ್‌ನ ಸಂಸ್ಥಾಪಕರು & ನಿರ್ದೇಶಕರು
ಹಾಗೂ ಪೇನ್ ಮೆಡಿಸಿನ್‌ನ ಮುಖ್ಯಸ್ಥರು

ಡಾ. ಮಿನಲ್ ಚಂದ್ರ
MBBS, DNA FIAPM,EDPM(EUROPE)
ಸಹ-ಸಂಸ್ಥಾಪಕರು
ಸೀನಿಯರ್ ಇಂಟರ್ವೆನ್ಷನಲ್ ಪೇನ್ ಸ್ಪೆಷಲಿಸ್ಟ್

ಡಾ. ವಿದ್ಯಾ ಬಂಡಾರು
MBBS, MD, FIPM, MSK Radiology Fellowship
ಕ್ಲಿನಿಕಲ್ ಮುಖ್ಯಸ್ಥರು ಮತ್ತು ಸೀನಿಯರ್ ಇಂಟರ್ವೆನ್ಷನಲ್ ಪೇನ್ ಫಿಸಿಷಿಯನ್ ಮತ್ತು ರೇಡಿಯೊಲೊಜಿಸ್ಟ್

ಬೆಂಗಳೂರು 90 6311 6311 / 63 61 22 99 11

ಹೌಸ್ ನಂ.946, 21ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು -560070, ಲ್ಯಾಂಡ್ ಮಾರ್ಕ್-ಬನಶಂಕರಿ ಬಿಡಿಎ ಕಾಂಪ್ಲೆಕ್ಸ್

www.epionepainandspine.com/bengaluru/ ಹೈದರಬಾದ್ - 84660 44441, ಚೆನ್ನೈ - 76313 76313

ಆರೋಗ್ಯದೆಡೆ ಇರಲಿ ಕಾಳಜಿ

ಕಾಳಜಿ

ಆರೋಗ್ಯ ಚೆನ್ನಾಗಿರಲು ಆಹಾರದ ಆಯ್ಕೆ ಸಮರ್ಪಕವಾಗಿರಬೇಕು. ಇದು ಒಂದು ದಿನದ ಮಾತಲ್ಲ. ನಿತ್ಯವೂ ತಾಜಾ ಆಹಾರವನ್ನು ಸೇವಿಸಬೇಕು. ಸಕ್ಕರೆ, ಅನಾರೋಗ್ಯಕರ ಕೊಬ್ಬಿನಿಂದ ತುಂಬಿರುವ ಸಂಸ್ಕರಿತ ಆಹಾರ ಪದಾರ್ಥಗಳಿಂದ ದೂರವಿರಬೇಕು. ಇವುಗಳಿಗೆ ಬದಲಾಗಿ ಧಾನ್ಯಗಳು, ಪ್ರೊಟೀನ್‌ಗಳು, ಅವಕಾಡೊಗಳಲ್ಲಿ ಇರುವ ಉತ್ತಮ ಕೊಬ್ಬಿನಾಂಶವನ್ನು ಸೇವಿಸುವುದರಿಂದ ದೇಹವನ್ನು ಸುಸ್ಥಿತಿಯಲ್ಲಿಡಬಹುದು. ತೂಕ ನಿರ್ವಹಣೆ ಮಾತ್ರವಲ್ಲದೇ ಅನಾರೋಗ್ಯ ಸಮಸ್ಯೆಗಳಿಗೂ ಸಮತೋಲಿತ ಆಹಾರ ಕಡಿವಾಣ ಹಾಕುತ್ತದೆ.

> ಇಂದಿನ ದಿನಗಳಲ್ಲಿ ಎಲ್ಲರೂ ಹಣಗಳಿಕೆಯತ್ತ ಮುಖಮಾಡುತ್ತಿದ್ದಾರೆ. ಆದರೆ, ಆರೋಗ್ಯವೇ ಸಂಪತ್ತು ಎಂಬುದನ್ನು ಮರೆತಿದ್ದೇವೆ. ಜತೆಗೆ ಹವಾಮಾನ ವೈಪರೀತ್ಯ, ಬಿಡುವಿಲ್ಲದ ಯಾಂತ್ರಿಕ ಬದುಕು, ಜೀವನಶೈಲಿಯಿಂದಾಗಿ ಆರೋಗ್ಯ ಕಾಳಜಿಯನ್ನು ಮರೆತಿದ್ದೇವೆ. ಆರೋಗ್ಯ ಕಾಳಜಿ ಹೇಗೆಲ್ಲ ಮಾಡಬಹುದು ಎಂದು ಬೆಂಗಳೂರಿನ ಕಿಂಡರ್ ಆಸ್ಪತ್ರೆಯ ಪೌಷ್ಟಿಕತಜ್ಞೆ ಡಾ.ಸಂಜನಾ ಪ್ರೇಮ್‌ಲಾಲ್ ವಿವರಿಸಿದ್ದಾರೆ.

ನಿದ್ರೆಯೂ ಜೊತೆಗಿರಲಿ

ನಿದ್ರೆ ಸರಿಯಾಗಿದ್ದರೆ ಆರೋಗ್ಯವು ಸರಿಯಾಗಿರುತ್ತದೆ. ನಿಗದಿತ ಸಮಯದಲ್ಲಿ ಗಾಢ ನಿದ್ರೆಯನ್ನು ಮಾಡಬೇಕು.

ಉತ್ತಮ ನಿದ್ರೆಗೆ ಅಗತ್ಯವಿರುವ ವಾತಾವರಣವನ್ನು ಸೃಷ್ಟಿಸಿಕೊಳ್ಳಬೇಕು. ನಿದ್ರೆಗೆ ಜಾರುವ ಮುನ್ನ ಕೆಫೀನ್‌ಗಳ ಸೇವನೆ, ಮೊಬೈಲ್, ಕಂಪ್ಯೂಟರ್ ಬಳಕೆಗೆ ಮಿತಿ ಹಾಕಿಕೊಳ್ಳಬೇಕು. ನಿದ್ರೆಯ ಗುಣಮಟ್ಟ ಹೆಚ್ಚಿಸಲು ಉತ್ತಮ ಅಭ್ಯಾಸಗಳನ್ನು ಕೈಗೊಳ್ಳಬೇಕು. ಅವುಗಳೆಂದರೆ ಮಲಗುವ ಮುನ್ನ ಸಂಗೀತವನ್ನು ಆಲಿಸಬೇಕು. ಸಾಕಷ್ಟು ನಿದ್ರೆಯನ್ನು ಮಾಡುವುದರಿಂದ ಭಾವನಾತ್ಮಕವಾಗಿ ಮತ್ತು ದೈಹಿಕವಾಗಿ ಆರೋಗ್ಯ ಸುಧಾರಿಸಲಿದೆ. ಅಲ್ಲದೆ ಸ್ಥೂಲಕಾಯ ಮತ್ತು ಹೃದ್ರೋಗದಂತಹ ದೀರ್ಘಕಾಲದ ಆರೋಗ್ಯ ಸಮಸ್ಯೆಗಳನ್ನು ತಡೆಗಟ್ಟಲು ನೆರವಾಗಲಿದೆ.

ದೈಹಿಕವಾಗಿ ಸಕ್ರಿಯರಾಗಿರಿ

ನಿಯಮಿತವಾಗಿ ವ್ಯಾಯಾಮ ಮಾಡುವುದನ್ನು ರೂಢಿಸಿಕೊಳ್ಳಿ. ನಿತ್ಯ ಕನಿಷ್ಠ 30 ನಿಮಿಷಗಳ ಕಾಲ ನಡೆಯುವುದು, ಈಜು ಅಥವಾ ಯೋಗದಂಥ ದೈಹಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. ಇದರಿಂದ ಹೃದಯರಕ್ತನಾಳದ ಆರೋಗ್ಯ, ತೂಕ ನಿರ್ವಹಣೆ ಮತ್ತು ಋತುಸಂಬಂಧ ಸಮಸ್ಯೆಗಳು ನಿವಾರಣೆಯಾಗಲಿವೆ.

ವರ್ಷಕ್ಕೊಮ್ಮೆ ಆರೋಗ್ಯ ತಪಾಸಣೆ

ವರ್ಷಕ್ಕೊಮ್ಮೆ ಆರೋಗ್ಯ ತಪಾಸಣೆ ಮಾಡಿಸುವುದನ್ನು ಕಡ್ಡಾಯ ಮಾಡಿಕೊಳ್ಳಿ. ಕೊಬ್ಬು, ರಕ್ತದೊತ್ತಡ, ಮಧುಮೇಹ, ಥೈರಾಯ್ಡ್, ಮೆಮೊಗ್ರಾಮ್ ಒಳಗೊಂಡಂತೆ ನಿಯಮಿತ ಆರೋಗ್ಯ ತಪಾಸಣೆ ಇರಲಿ. ಈ ಮೂಲಕ ಸಂಭಾವ್ಯ ಆರೋಗ್ಯ ಸಮಸ್ಯೆಗಳನ್ನು ಆರಂಭಿಕ ಹಂತದಲ್ಲೇ ಪತ್ತೆಹಚ್ಚಲು ಸಾಧ್ಯವಾಗುತ್ತದೆ.

ಒತ್ತಡ ನಿರ್ವಹಣೆ

ದೀರ್ಘಕಾಲದ ಒತ್ತಡವು ದೈಹಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇರುತ್ತದೆ. ಹೀಗಾಗಿ ನಿಯಮಿತ ವಿಶ್ರಾಂತಿ ಜತೆಗೆ ಸ್ವಯಂ-ಆರೈಕೆಗೆ ಸಮಯ ಮೀಸಲಿಡಬೇಕು. ಅಗತ್ಯ ವ್ಯಾಯಾಮ, ಸೃಜನಾತ್ಮಕ ಹವ್ಯಾಸಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಒತ್ತಡವನ್ನು ನಿಯಂತ್ರಿಸಬಹುದು. ❖

ಭಾರತದ ಆ್ಯಂಡ್ರಾಯ್ಡ್ ಬಳಕೆದಾರರಿಗೆ ಗೂಗಲ್ ವಾಲೆಟ್

ವಿಶ್ವದ ಪ್ರಸಿದ್ಧ ಸರ್ಚ್ ಎಂಜಿನ್ ಗೂಗಲ್, ಭಾರತದಲ್ಲಿ ಆ್ಯಂಡ್ರಾಯ್ಡ್ ಬಳಕೆದಾರರಿಗಾಗಿ ಖಾಸಗಿ ಡಿಜಿಟಲ್ ವಾಲೆಟ್ ಅನ್ನು ಪರಿಚಯಿಸಿದೆ.

ಈ ಮೂಲಕ ಬಳಕೆದಾರರು ಕಾರ್ಡ್‌ಗಳು, ಟಿಕೆಟ್‌ಗಳು, ಪಾಸ್‌ಗಳು, ಡಿಜಿಟಲ್ ಕೀ, ಐಡಿಗಳಂತಹ ಡಿಜಿಟಲ್ ಮಾಹಿತಿಯನ್ನು ಇಲ್ಲಿ ಸ್ಟೋರ್ ಮಾಡಬಹುದಾಗಿದೆ.

ಪ್ಲೇ ಸ್ಟೋರ್ ಮೂಲಕ ಗೂಗಲ್ ವಾಲೆಟ್ ಅನ್ನು ಡೌನ್ಲೋಡ್ ಮಾಡಬಹುದಾಗಿದೆ. ಇದರಲ್ಲಿ ಡೆಬಿಟ್ ಕಾರ್ಡ್, ಕ್ರೆಡಿಟ್ ಕಾರ್ಡ್, ಲಾಯಲ್ಟಿ ಕಾರ್ಡ್, ಗಿಫ್ಟ್ ಕಾರ್ಡ್ ಸೇರಿದಂತೆ ಇತರೆ ಡಿಜಿಟಲ್ ಕಾರ್ಡ್‌ಗಳನ್ನು ಸ್ಟೋರ್ ಮಾಡಬಹುದಾಗಿದೆ.

ಗೂಗಲ್ ವಾಲೆಟ್‌ಗಿಂತಲೂ ಹಣ ಮತ್ತು ಹಣಕಾಸು ವ್ಯವಹಾರಗಳನ್ನು ನಿರ್ವಹಿಸುವ 'Google Pay app'ಭಿನ್ನವಾದುದ್ದಾಗಿದೆ ಎಂದು ಸಂಸ್ಥೆ ಹೇಳಿದೆ.

ಇದೇ ವೇಳೆ, ಗೂಲ್ ಪೇ ಆ್ಯಪ್ ಅನ್ನು ಹಿಂಪಡೆಯುವುದಿಲ್ಲ ಎಂದು ಹೇಳಿರುವ ಗೂಗಲ್, ಇದು ನಮ್ಮ ಪ್ರಾಥಮಿಕ ಪೇಮೆಂಟ್ಸ್ ಆ್ಯಪ್ ಆಗಿ ಮುಂದುವರಿಯಲಿದೆ. ಗೂಗಲ್ ವಾಲೆಟ್ ಅನ್ನು ಪಾವತಿರಹಿತ ಬಳಕೆಗಾಗಿ ಅಭಿವೃದ್ಧಿಪಡಿಸಲಾಗಿದೆ ಎಂದು ತಿಳಿಸಿದೆ.



ಡಯಟ್: ಬೇಡ ಹೊಸ ಪ್ರಯೋಗ

ಡಯಟ್ ಎಂಬುದು ಇಂದಿನ ಜೀವನಶೈಲಿಯ ಭಾಗವಾಗಿದೆ. ಏನು ತಿನ್ನಬೇಕು? ಎಷ್ಟು ತಿನ್ನಬೇಕು? ಎಂಬುದರ ಕುರಿತು ತರಹೇವಾರಿ ಪುಕ್ಕಟೆ ಸಲಹೆಗಳು ಇಂಟರ್‌ನೆಟ್‌ನಲ್ಲಿ ಸಿಗುತ್ತವೆ. ತಪ್ಪು ಗ್ರಹಿಕೆ ಮತ್ತು ಸಲಹೆಗಳಿಂದ ತಪ್ಪಾದ ಆಹಾರಕ್ರಮವನ್ನು ಅನುಸರಿಸಿ ತೊಂದರೆಗೆ ಸಿಲುಕುವವರು ಇದ್ದಾರೆ. ಇದರಿಂದ ತೂಕ ಕಡಿಮೆಯಾಗುವ ಬದಲು ಆಸ್ಪತ್ರೆಗೆ ಸೇರಬೇಕಾದ ಪರಿಸ್ಥಿತಿ ಬರುತ್ತದೆ. ನಿಪುಣ ತಜ್ಞರ ನೆರವಿನಿಂದ ಸರಿಯಾದ ಆಹಾರಪದ್ಧತಿಯನ್ನು ಅಳವಡಿಸಿಕೊಳ್ಳಿ.

ಬಹುತೇಕರ ಡಯಟ್ ಕೆಲ ದಿನ ಅಥವಾ ತಿಂಗಳಿಗೆ ಸೀಮಿತಗೊಂಡಿರುತ್ತದೆ. ತೂಕ ಇಳಿಕೆ, ದೈಹಿಕ ಸೌಂದರ್ಯವನ್ನು ಗಮನದಲ್ಲಿಟ್ಟುಕೊಂಡು ಡಯಟ್ ಮಾಡುವವರೇ ಹೆಚ್ಚಿದ್ದಾರೆ. ಆದರೆ 'ನೋ ಡಯಟ್' ದಿನವೂ ದೈಹಿಕ ಕ್ಷಮತೆಯನ್ನು ಕಾಪಾಡುವುದಲ್ಲದೇ ಕೆಟ್ಟ ಡಯಟ್ ಪದ್ಧತಿಯನ್ನು ನಿರಾಕರಿಸುವ ಬಗ್ಗೆಯೂ ಜಾಗೃತಿ ಮೂಡಿಸುತ್ತದೆ.

ಅಸಂಬದ್ಧ ಡಯಟ್ ಅನುಸರಿಸಿದರೆ ಆಸ್ಪತ್ರೆ ವಾಸ ಗ್ಯಾರಂಟಿ: ಹಲವು ಕಾರಣಗಳಿಗಾಗಿ ಆರೋಗ್ಯಕರವಲ್ಲದ ಡಯಟ್ ಮಾಡಿ ಜನರು ಆಸ್ಪತ್ರೆಗೆ ದಾಖಲಾಗುತ್ತಾರೆ. ಅಗತ್ಯ ಪೋಷಕಾಂಶಗಳನ್ನ ಸೇವಿಸದೆ, ಕ್ಯಾಲೋರಿಗಳುಳ್ಳ ಆಹಾರದಿಂದ ದೂರ ಉಳಿಯುವ ಮೂಲಕ ಅಪೌಷ್ಟಿಕತೆಗೆ ತುತ್ತಾಗುತ್ತಾರೆ. ಇದರಿಂದ ಬಹುಅಂಗಾಂಗ ವೈಫಲ್ಯ ಉಂಟಾಗಬಹುದು.

ಎಲೆಕ್ಟ್ರೋಲೈಟ್ ಅಸಮತೋಲನ, ಹೃದಯಾಘಾತ ಹಾಗೂ ಮೂತ್ರಪಿಂಡದ ಸಮಸ್ಯೆಗಳೂ ಕಾಣಿಸಿಕೊಳ್ಳಬಹುದು. ಅಗತ್ಯ ಆಹಾರ ಪದಾರ್ಥಗಳನ್ನು ಸೇವಿಸದಿದ್ದರೆ, ನಿರ್ಜಲೀಕರಣ, ದೌರ್ಬಲ್ಯ, ವಾಕರಿಕೆ, ಮಲಬದ್ಧತೆ ಜೊತೆಗೆ ವಿಟಮಿನ್‌ಗಳು ಹಾಗೂ ಖನಿಜಗಳ ಅಸಮರ್ಪಕ ಸೇವನೆಯಿಂದ ಪೋಷಕಾಂಶಗಳ ಕೊರತೆ ಉಂಟಾಗುತ್ತದೆ. ಉತ್ತಮ ಆಹಾರ ಸೇವನೆಯನ್ನು ತಪ್ಪಿಸುವುದು ಎಂದರೆ ದೇಹದ ರಕ್ಷಣಾ ವ್ಯವಸ್ಥೆಗೆ ಹಾನಿ ಮಾಡುವುದಾಗಿದೆ.

ತಪ್ಪಾದ ಕ್ರಮಗಳು

ಅತಿಯಾದ ಡಯಟ್‌ನಿಂದಾಗಿ ಅನೋರೆಕ್ಸಿಯಾ ನರ್ವೋಸಾ ಅಥವಾ ಬುಲಿಮಿಯಾ ನರ್ವೋಸಾದಂಥ ಸಮಸ್ಯೆ ಕಾಡಬಹುದು. ಇದು ಗಂಭೀರವಾದ ದೈಹಿಕ ಮತ್ತು ಮಾನಸಿಕ ತೊಂದರೆಗಳನ್ನು ಉಂಟುಮಾಡಬಹುದು. ಆಗ ವೈದ್ಯರ ಸಲಹೆ ಹಾಗೂ ಚಿಕಿತ್ಸೆಯ ಮೊರೆ ಹೋಗುವುದು ಅನಿವಾರ್ಯವಾಗುತ್ತದೆ. ಕೆಲ ಸಂದರ್ಭಗಳಲ್ಲಿ ಅಸಮರ್ಪಕ ಪೋಷಣೆಯೊಂದಿಗೆ ಅತಿ ವ್ಯಾಯಾಮದಿಂದ ಗಾಯಗಳು, ನಿರ್ಜಲೀಕರಣ ಮತ್ತು ಎಲೆಕ್ಟ್ರೋಲೈಟ್ ಅಸಮತೋಲನ ಕೂಡ ಉಂಟಾಗುತ್ತದೆ. ಆಗ ವೈದ್ಯರನ್ನ ಕಾಣಬೇಕಾಗುತ್ತದೆ.

ತಪ್ಪಾದ ಡಯಟ್ ಅನುಸರಿಸುವುದು ಹಾಗೂ ಕಡಿಮೆ ಕ್ಯಾಲೋರಿ ಆಹಾರ ಸೇವನೆಯಿಂದ ದೈಹಿಕ ಹಾಗೂ ಮಾನಸಿಕ ಆರೋಗ್ಯದ ಮೇಲೆ ನಕಾರಾತ್ಮಕ ಪರಿಣಾಮಗಳು ಉಂಟಾಗುತ್ತವೆ.

ಅತೃಪ್ತಿ, ಸ್ವಗೌರವ ಕಡಿಮೆ ಆಗುವುದು, ತಿನ್ನುವ ಅಸ್ವಸ್ಥತೆ, ಮಾಂಸಖಂಡಗಳು ಬಲಹೀನವಾಗುವುದು, ಮೂಳೆಗಳು ದುರ್ಬಲಗೊಳ್ಳುವುದು, ಹೃದ್ರೋಗ ಹಾಗೂ ಹಾರ್ಮೋನ್‌ಗಳ ಅಸಮತೋಲನದಂತಹ ಹಾನಿಕಾರಕ ಅಡ್ಡಪರಿಣಾಮಗಳು ಎದುರಾಗುತ್ತವೆ. ಇವುಗಳನ್ನು ತಡೆಗಟ್ಟಲು ಕೆಟೋಜೆನಿಕ್ ಆಹಾರವನ್ನು ಸೇವಿಸುವುದು ಉತ್ತಮ ಪರಿಣಾಮಗಳನ್ನು ಉಂಟು ಮಾಡುತ್ತದೆ. ಹೆಪಾಟಿಕ್ ಸ್ಟೀಟೋಸಿಸ್, ಮೂತ್ರಪಿಂಡದ ಕಲ್ಲುಗಳು, ಹೈಪೋಪ್ರೋಟೀನೆಮಿಯಾ ಮತ್ತು ವಿಟಮಿನ್ ಕೊರತೆಯಂತಹ ದೀರ್ಘಾಕಾಲಿಕ ಪರಿಣಾಮಗಳು ಎದುರಾಗುತ್ತವೆ. ಆಗ ಕೆಟೋಜೆನಿಕ್ ಆಹಾರ ಸೇವಿಸುವುದನ್ನು ನಿಲ್ಲಿಸಬೇಕಾಗುತ್ತದೆ.

ಶ್ರೇಯಾ ಘೋಷಾಲ್ ಸಂಗೀತ ಸಂಜೆ ಇಂದು

ನಗರದಲ್ಲಿ ಈ ವಾರಾಂತ್ಯ ಬಾಲಿವುಡ್‌ನ ಪ್ರಸಿದ್ಧ ಗಾಯಕಿ ಶ್ರೇಯಾ ಘೋಷಾಲ್ ಅವರು ಹಾಡಿನ ಮೂಲಕ ಸಂಗೀತಪ್ರಿಯರಿರನ್ನು ರಂಜಿಸಲಿದ್ದಾರೆ. 'ಕ್ವೀನ್ ಆಫ್ ಮೆಲೋಡಿ' ಎಂದೇ ಖ್ಯಾತರಾಗಿರುವ ಗಾಯಕಿ ಶ್ರೇಯಾ ಘೋಷಾಲ್ ಅವರಿಂದ ಮೇ 11ರಂದು ಕಾರ್ಯಕ್ರಮ ನಡೆಯಲಿದೆ. ಈ ಸಂಗೀತ ಸಂಜೆಯನ್ನು ಡಾ. ಚೇತನಾ ಆರ್. ಎಸ್ ಅವರ ಕಲಾಲುಹ ಮತ್ತು ರೆಡ್‌ಎಫ್‌ಎಂ ಸಹಭಾಗಿತ್ವದಲ್ಲಿ ನಡೆಯಲಿದೆ. ದಿಶಾ ಹ್ಯಾಬಿಟೇಟ್ ಈ ಕಾರ್ಯಕ್ರಮವನ್ನು ಪ್ರಸ್ತುತಪಡಿಸುತ್ತಿದ್ದು, ಲೈವ್‌ಕನ್ಸರ್ಟ್‌ಗೆ ಬೃಹತ್‌ವೇದಿಕೆ ಸಿದ್ದಗೊಂಡಿದೆ.

ಕಾರ್ಯಕ್ರಮ ನಡೆಯುವ ಸ್ಥಳ: ನಗರದ ನ್ಯೂ ಹಾರಿಜನ್ ಕಾಲೇಜ್ ಆಫ್ ಎಂಜಿನಿಯರಿಂಗ್, ಬೆಳ್ಳಂದೂರು, ಔಟರ್ ರಿಂಗ್ ರೋಡ್.

ಶ್ರೇಯಾ ಘೋಷಾಲ್

ಸಪ್ತಕದ ಸಂಗೀತ ಸಂಭ್ರಮ

ಸಪ್ತಕ ಬೆಂಗಳೂರು 19ನೇ ವಾರ್ಷಿಕ ಸಂಗೀತ ಉತ್ಸವದ ಪ್ರಯುಕ್ತ ಇದೇ ಭಾನುವಾರ (ಮೇ.12)ಸಂಗೀತ ಸಂಭ್ರಮ ಹಮ್ಮಿಕೊಂಡಿದೆ. ಅತಿಥಿಗಳಾಗಿ ಧರಿಣಿದೇವಿ ಮಾಲಗತ್ತಿ ಭಾಗವಹಿಸಲಿದ್ದಾರೆ. **ಗಾಯನ:**ವಿದುಷಿ ರುಚಿರಾ ಪಾಂಡಾ, **ತಬಲಾ:** ಪಂಡಿತ್ ರಾಜೇಂದ್ರ ನಾಕೋಡ, ಪಂಡಿತ್ ಯೋಗೀಶ ಸಂಸಿ, **ಹಾರ್ಮೋನಿಯಂ:** ಪಂಡಿತ್ ವ್ಯಾಸಮೂರ್ತಿ ಕಟ್ಟಿ, ತನ್ಮಯ ದೇವಚಕೆ ಅವರು ನಡೆಸಿಕೊಡಲಿದ್ದಾರೆ.

ಸ್ಥಳ: ಚೌಡಯ್ಯ ಸ್ಮಾರಕ ಸಭಾ ಭವನ, ವೈಯಾಲಿಕಾವಲ್. ಸಂಜೆ 5.30ಕ್ಕೆ.

ರುಚಿರಾ ಪಾಂಡಾ



ಯೋಗೀಶ ಸಂಸಿ

ಹಗುರ ಐಪ್ಯಾಡ್ ಪ್ರೊ ಬಿಡುಗಡೆ

ತಂತ್ರಜ್ಞಾನ

ತೆಳು ಮತ್ತು ಹಗುರವಾದ ವಿನ್ಯಾಸವಿರುವ ವಿನೂತನ ಐಪ್ಯಾಡ್ ಪ್ರೊ ಹಾಗೂ ಇತರ ಕೆಲವು ಸಾಧನಗಳನ್ನು ಆ್ಯಪಲ್ ಈಚೆಗೆ ಅನಾವರಣಗೊಳಿಸಿದೆ.

ಸಿಲ್ವರ್ ಮತ್ತು ಸ್ಪೇಸ್ ಬ್ಲ್ಯಾಕ್ ಬಣ್ಣಗಳಲ್ಲಿ ಲಭ್ಯವಿರುವ ವಿನೂತನ ಐಪ್ಯಾಡ್ ಪ್ರೊ 13 ಇಂಚು ಮತ್ತು 11 ಇಂಚು ಮಾದರಿಗಳಲ್ಲಿ ಲಭ್ಯವಾಗಲಿದೆ. ಜಗತ್ತಿನ ಅತ್ಯಾಧುನಿಕವಾದ ಅಲ್ಟ್ರಾ ರೆಟಿನಾ ಎಕ್ಸ್‌ಡಿಆರ್ ಡಿಸ್‌ಪ್ಲೇ (Ultra Retina XDR) ಯನ್ನು ಈ ಐಪ್ಯಾಡ್‌ಗಳು ಹೊಂದಿರುತ್ತವೆ.

ಹೊಸ ಐಪ್ಯಾಡ್‌ನ ಕಾರ್ಯಾಚರಣೆಯ ಸಾಮರ್ಥ್ಯವನ್ನು ಉನ್ನತ ಮಟ್ಟಕ್ಕೇರಿಸುವ ಹೊಚ್ಚ ಹೊಸ ಎಂ4 ಚಿಪ್‌ನೊಂದಿಗೆ ಹೊಸ ಐಪ್ಯಾಡ್ ಪ್ರೊ ಶಕ್ತಿಶಾಲಿ ಸಾಧನವಾಗಿರುತ್ತದೆ ಎಂದು ಆ್ಯಪಲ್ ಹೇಳಿದೆ.

ವರ್ಚುವಲ್ ಕಾರ್ಯಕ್ರಮದಲ್ಲಿ ಹೊಸ ಐಪ್ಯಾಡ್ ಪ್ರೊ, ಎಂ4 ಚಿಪ್ ಜೊತೆಗೆ, ಆ್ಯಪಲ್ ಪೆನ್ಸಿಲ್ ಪ್ರೊ, ತೆಳುವಾದ ಮತ್ತು ಹಗುರವಾದ ಮ್ಯಾಜಿಕ್ ಕೀಬೋರ್ಡ್ ಸಾಧನಗಳನ್ನೂ ಪರಿಚಯಿಸಲಾಗಿದ್ದು, ಇವುಗಳು ಮೇ 15ರಿಂದ ಮಾರುಕಟ್ಟೆಯಲ್ಲಿ ಲಭ್ಯ ಇರುತ್ತವೆ. ಮುಂಗಡ ಕಾಯ್ದಿರಿಸುವಿಕೆ ಈಗಾಗಲೇ ಆರಂಭವಾಗಿದೆ.

ಹೊಸ ಐಪ್ಯಾಡ್ ಪ್ರೊ ಇದುವರೆಗಿನ ಅತ್ಯಂತ ತೆಳುವಾದ ಆ್ಯಪಲ್ ಉತ್ಪನ್ನವಾಗಿದ್ದು, 11 ಇಂಚಿನ ಮಾದರಿಯು ಕೇವಲ 5.3 ಮಿ.ಮೀ. ಹಾಗೂ 13 ಇಂಚು ಮಾದರಿಯು ಕೇವಲ 5.1 ಮಿ.ಮೀ. ತೆಳು ಇದೆ. ಒಂದು ಪೌಂಡ್‌ಗಿಂತಲೂ (ಸುಮಾರು 450 ಗ್ರಾಂ) ಕಡಿಮೆ ತೂಕ ಹೊಂದಿದೆ.

ಅಲ್ಟ್ರಾ ರೆಟಿನಾ ಎಕ್ಸ್‌ಡಿಆರ್ ಡಿಸ್‌ಪ್ಲೇ, ಎಂ4 ಚಿಪ್, ವಿನೂತನ ಕೃತಕ ಬುದ್ಧಿಮತ್ತೆ (ಎಐ) ಸಾಮರ್ಥ್ಯ, ಆ್ಯಪಲ್ ಪೆನ್ಸಿಲ್ ಪ್ರೊ ಹಾಗೂ ಮ್ಯಾಜಿಕ್ ಕೀಬೋರ್ಡ್‌ಗಳೊಂದಿಗೆ, ಹೊಸ ಐಪ್ಯಾಡ್ ಪ್ರೊಗೆ ಸರಿಸಾಟಿ ಯಾವುದೂ ಇಲ್ಲ ಎಂದು ಆ್ಯಪಲ್‌ನ ಹಿರಿಯ ಉಪಾಧ್ಯಕ್ಷ ಜಾನ್ ಟ್ರೆಮಸ್ ಹೇಳಿದ್ದಾರೆ.

ಈಗ ಹೊಸದಾಗಿ ಬರುತ್ತಿರುವ ಎಲ್ಲ ಸಾಧನಗಳೂ ಎಐ ಅಪ್ಪಿಕೊಂಡಿರುವುದರಿಂದ, ಹೊಸ ಐಪ್ಯಾಡ್ ಪ್ರೊದಲ್ಲಿ ಕೂಡ ಕೃತಕ ಬುದ್ಧಿಮತ್ತೆಯ ವೈಶಿಷ್ಟ್ಯಗಳನ್ನು ಅಳವಡಿಸಲಾಗಿದ್ದು, ಇದಕ್ಕೆ ಪೂರಕವಾಗಿ ಐಪ್ಯಾಡ್ ಒಎಸ್ 17 ಅನ್ನೂ ಅಭಿವೃದ್ಧಿಪಡಿಸಲಾಗಿದೆ ಎಂದು ಆ್ಯಪಲ್ ತಿಳಿಸಿದೆ.

ಇದೇ ಸಂದರ್ಭದಲ್ಲಿ ಶಕ್ತಿಶಾಲಿ ಐಪ್ಯಾಡ್ ಒಎಸ್ 17ರ ವೈಶಿಷ್ಟ್ಯಗಳನ್ನೂ ವಿವರಿಸಲಾಯಿತು. ಇದಲ್ಲದೆ, ಲಾಜಿಕ್ ಪ್ರೊ ಎಂಬ ಸ್ಟುಡಿಯೋ ಅಸಿಸ್ಟೆಂಟ್ ವೈಶಿಷ್ಟ್ಯಗಳಿರುವ ಆಡಿಯೊ ಕಿರು ತಂತ್ರಾಂಶವನ್ನು ಘೋಷಿಸಲಾಯಿತು. ಜೊತೆಗೆ, ಫೈನಲ್ ಕಟ್ ಪ್ರೊ, ಲೈವ್ ಮಲ್ಟಿಕ್ಯಾಮ್ ವೈಶಿಷ್ಟ್ಯ ಸಹಿತವಾದ ವಿಡಿಯೊ ಪ್ರೊಡಕ್ಷನ್ ಕಿರು ತಂತ್ರಾಂಶವನ್ನೂ ಘೋಷಿಸಲಾಯಿತು.

ಐಪ್ಯಾಡ್ ಪ್ರೊ ಅನ್ನು ಆ್ಯಪಲ್ ಆನ್‌ಲೈನ್ ಸ್ಟೋರ್‌ನಲ್ಲಿ ಆರ್ಡರ್ ಮಾಡಬಹುದಾಗಿದ್ದು, ಮೇ 15ರಿಂದ ಆಫ್‌ಲೈನ್ ಸ್ಟೋರ್‌ಗಳಲ್ಲಿ ಲಭ್ಯ ಇರುತ್ತವೆ. 11 ಹಾಗೂ 13 ಇಂಚು ಡಿಸ್‌ಪ್ಲೇ ಇರುವ ಸಾಧನಗಳು 256ಜಿಬಿ, 512 ಜಿಬಿ, 1 ಟಿಬಿ ಹಾಗೂ 2 ಟಿಬಿ ಮಾದರಿಗಳಲ್ಲಿ ಲಭ್ಯ ಇರುತ್ತವೆ.

ಬೆಲೆ

11 ಇಂಚಿನ ವೈಫೈ ಮಾದರಿ ಐಪ್ಯಾಡ್ ಪ್ರೊ ಬೆಲೆ ₹99,900ರಿಂದ ಮತ್ತು ವೈಫೈ + ಸೆಲ್ಯುಲಾರ್ ಮಾದರಿಯ ಬೆಲೆ ₹1,19,900ರಿಂದ ಆರಂಭವಾಗುತ್ತದೆ. 13 ಇಂಚಿನ ವೈಫೈ ಮಾದರಿ ₹1,29,900ರಿಂದ ಮತ್ತು ವೈಫೈ + ಸೆಲ್ಯುಲಾರ್ ಮಾದರಿ ₹1,49,900ರಿಂದ ಆರಂಭವಾಗುತ್ತದೆ.

ಹೊಸ ಆ್ಯಪಲ್ ಪೆನ್ಸಿಲ್ ಪ್ರೊ ಬೆಲೆ ₹11,900, ಆ್ಯಪಲ್ ಪೆನ್ಸಿಲ್ (ಯುಎಸ್‌ಬಿ-ಸಿ) ಬೆಲೆ ₹7,900, ಮ್ಯಾಜಿಕ್ ಕೀಬೋರ್ಡ್ ಬೆಲೆ ₹29,900ರಿಂದ ಆರಂಭವಾಗುತ್ತದೆ. ಆ್ಯಪಲ್ ಲಾಜಿಕ್ ಪ್ರೊ ಕಿರು ತಂತ್ರಾಂಶವು ಹಾಲಿ ಬಳಕೆದಾರರಿಗೆ ಮೇ 13ರಿಂದ ಉಚಿತ ಅಪ್‌ಗ್ರೇಡ್ ಆಗಿ ದೊರೆಯಲಿದೆ. ಅದೇ ರೀತಿ, ಫೈನಲ್ ಕಟ್ ಪ್ರೊ ವಿಡಿಯೊ ಎಡಿಟಿಂಗ್ ಕಿರು ತಂತ್ರಾಂಶಕ್ಕೂ ಮಾಸಿಕ/ವಾರ್ಷಿಕ ಬಳಕೆ ಶುಲ್ಕ ಇರುತ್ತದೆ.



ಆಲಿಯಾ ಭಟ್ ತೊಟ್ಟ 23 ಅಡಿ ಉದ್ದದ ಸೀರೆ

ಆಲಿಯಾ ಭಟ್

ನ್ಯೂಯಾರ್ಕ್‌ನಲ್ಲಿ ನಡೆದ ಮೆಟ್ ಗಾಲಾ ಫ್ಯಾಷನ್ ಷೋ ಕಾರ್ಯಕ್ರಮದಲ್ಲಿ ಬಾಲಿವುಡ್ ನಟಿ ಆಲಿಯಾ ಭಟ್ ಸಖತ್ ಮಿಂಚಿದ್ದಾರೆ. ಸವ್ಯಸಾಚಿ ಮುಖರ್ಜಿ ಡಿಸೈನ್ ಮಾಡಿದ ಹೂವಿನ ವಿನ್ಯಾಸವಿರುವ ಸೀರೆಯುಟ್ಟು ಜಗತ್ತಿನ ಗಮನ ಸೆಳೆದಿದ್ದಾರೆ.

ಎರಡನೇ ಬಾರಿಗೆ ಮೆಟ್ ಗಾಲಾದ ರೆಡ್ ಕಾರ್ಪೆಟ್‌ನಲ್ಲಿ ಆಲಿಯಾ ಹೆಜ್ಜೆ ಹಾಕಿದ್ದಾರೆ. 'ದಿ ಗಾರ್ಡನ್ ಆಫ್ ಟೈಮ್ ಥೀಮ್'ನಲ್ಲಿ ಆಲಿಯಾ ಅವರ ಸೀರೆಯನ್ನು ತಯಾರಿಸಲಾಗಿದೆ.

23 ಅಡಿ ಉದ್ದದ ಸೀರೆ ಸಂಪೂರ್ಣವಾಗಿ ಹೂವುಗಳು, ಗಾಜಿನ ಮಣಿಗಳು ಮತ್ತು ಅಮೂಲ್ಯ ರತ್ನದ ಕಲ್ಲುಗಳನ್ನು ಬಳಸಿ ಸೂಕ್ಷ್ಮವಾಗಿ ಕೈಯಿಂದ ಕಸೂತಿ ಮಾಡಲಾಗಿದೆ.

ತಮ್ಮ ಸೀರೆಯ ವಿಶೇಷತೆಯ ಕುರಿತು ಮಾತನಾಡಿದ ಆಲಿಯಾ, 'ಇದು ಸಂಪೂರ್ಣ ಕೈಯಿಂದ ಕಸೂತಿ ಮಾಡಲಾದ ಸೀರೆಯಾಗಿದೆ. ಈ ಉಡುಪನ್ನು 1,905 ಗಂಟೆಗಳ ಕಾಲ 163 ಕುಶಲಕರ್ಮಿಗಳು, ಕಸೂತಿ ಕೆಲಸಗಾರರು ಪ್ರೀತಿ ಮತ್ತು ಸಮಯದಿಂದ ತಯಾರಿಸಿದ್ದಾರೆ' ಎಂದಿದ್ದಾರೆ.

ಮೆಟ್ ಗಾಲಾದ ರೆಡ್ ಕಾರ್ಪೆಟ್ ಫೋಟೊಗಳನ್ನು ಆಲಿಯಾ ತಮ್ಮ ಇನ್‌ಸ್ಟಾಗ್ರಾಮ್‌ನಲ್ಲಿ ಹಂಚಿಕೊಂಡಿದ್ದಾರೆ.

ಮೆಟ್ ಗಾಲಾ ಎಂಬುದು ದಿ ಮೆಟ್ರೋಪಾಲಿಟನ್ ಮ್ಯೂಸಿಯಂ ಆಫ್ ಆರ್ಟ್ಸ್ ಕಾಸ್ಟ್ಯೂಮ್ ಇನ್‌ಸ್ಟಿಟ್ಯೂಟ್. ಇದಕ್ಕೆ ನಿಧಿ ಸಂಗ್ರಹಿಸಲು ಫ್ಯಾಷನ್ ಕಾರ್ಯಕ್ರಮವನ್ನು ಪ್ರತಿ ವರ್ಷ ಮೇ ತಿಂಗಳ ಮೊದಲ ಸೋಮವಾರದಂದು ನಡೆಸಲಾಗುತ್ತದೆ.

ಸಿನಿ ಹನಿ

ಯಶ್ 'ಟಾಕ್ಸಿಕ್'ಗೆ ನಾಯಕಿಯಾಗಿ ನಯನತಾರಾ ಫಿಕ್ಸ್?

ನಯನತಾರಾ

ಬೆಂಗಳೂರು: ನಟ ಯಶ್ ಅವರ 19ನೇ ಚಿತ್ರ ಟಾಕ್ಸಿಕ್ (TOXIC) ತಯಾರಿ ಜೋರು ನಡೆಯುತ್ತಿದೆ. ಈ ಚಿತ್ರವನ್ನು ಮಲಯಾಳಂನ ಗೀತು ಮೋಹನ್‌ದಾಸ್ ನಿರ್ದೇಶಿಸುತ್ತಿದ್ದಾರೆ.

ಆದರೆ, ಈ ಸಿನಿಮಾದ ನಾಯಕಿ ಪಾತ್ರದ ಆಯ್ಕೆ ಇನ್ನೂ ಮುಗಿಯುತ್ತಿಲ್ಲ. ಯಶ್ ಎದುರಾಗಿ ಮುಖ್ಯ ಪಾತ್ರದಲ್ಲಿ ಬಾಲಿವುಡ್ ಬೆಬೋ ಕರೀನಾ ಕಪೂರ್ ನಟಿಸಬೇಕಿತ್ತು. ಆದರೆ, ದಿನಾಂಕ ಹೊಂದಾಣಿಕೆಯಾಗದೇ ಅವರು ಈ ಚಿತ್ರಕ್ಕೆ ಕಾಲ್‌ಶೀಟ್ ಕೊಡಲು ಆಗುತ್ತಿಲ್ಲ. ಇದರಿಂದ ಅವರು ಹಿಂದೆ ಸರಿದಿದ್ದಾರೆ ಎನ್ನಲಾಗಿದೆ. ಕಿಯಾರಾ ಅಡ್ವಾಣಿ ಅವರಿಗೂ ಚಿತ್ರ ತಂಡ ಸಂಪರ್ಕಿಸಿತ್ತು. ಆದರೆ, ಅವರೂ ಸಹ ಒಪ್ಪಿರಲಿಲ್ಲ.

ಗೀತು ಮೋಹನ್‌ದಾಸ್ ಅವರು ಕರೀನಾ ಅವರನ್ನು ಕೈಬಿಟ್ಟು ಇದೀಗ ಬಹುಭಾಷಾ ನಟಿ ತಮಿಳಿನ ನಯನತಾರಾ ಅವರನ್ನು ಸಂಪರ್ಕಿಸಿದ್ದಾರಂತೆ. ಕಥೆ ಕೇಳಿರುವ ನಯನತಾರಾ ಉತ್ಸುಕರಾಗಿದ್ದು ಟಾಕ್ಸಿಕ್ ಚಿತ್ರದಲ್ಲಿ ಯಶ್ ಎದುರಾಗಿ ಅವರೇ ಬಹುತೇಕ ಅಂತಿಮಗೊಳ್ಳುವ ಸಾಧ್ಯತೆ ಇದೆ. ಈ ಕುರಿತು ಪಿಂಕ್ ವಿಲ್ಲಾ ವೆಬ್‌ಸೈಟ್ ವರದಿ ಮಾಡಿದೆ.

ಅಲ್ಲದೇ ಈ ಹಿಂದೆ ಸಹಪಾತ್ರಗಳ ಆಯ್ಕೆಗೆ ನಿರ್ಮಾಣ ಸಂಸ್ಥೆ ಕೆವಿಎನ್ ಪ್ರೊಡಕ್ಷನ್ ಕಾಸ್ಟಿಂಗ್ ಕಾಲ್ ಕೊಟ್ಟಿತ್ತು. ಆಸಕ್ತ ಪುರುಷ, ಮಹಿಳೆ, ಮಕ್ಕಳು ತಮ್ಮ ಪ್ರತಿಭೆ ತೋರಿಸುವ ವಿಡಿಯೊ ತುಣಕನ್ನು ಕೆವಿಎನ್‌ಗೆ ಕಳುಹಿಸಿಕೊಡಬೇಕು ಎಂದು ಮನವಿ ಮಾಡಿಕೊಂಡಿತ್ತು.

ಕನ್ನಡಕ್ಕೆ RRR ಅಂತಹ ಮಹತ್ವದ ಚಿತ್ರವನ್ನು ತಂದ 'ಕೆವಿಎನ್ ಪ್ರೊಡಕ್ಷನ್ ' ಟಾಕ್ಸಿಕ್ ಚಿತ್ರವನ್ನು ನಿರ್ಮಿಸುತ್ತಿದೆ. ಮೂಲಗಳ ಪ್ರಕಾರ ಯಶ್ ಅವರ ' Monster Mind Creations' ಕೂಡ ಈ ಚಿತ್ರಕ್ಕೆ ಹಣ ಹೂಡುತ್ತಿದೆ ಎನ್ನಲಾಗಿದ್ದು, ಇದೊಂದು ಕಂಟೆಂಟ್ ಆಧಾರಿತ ಚಿತ್ರ. ಅಷ್ಟೇ ಅಲ್ಲದೇ ಬಿಗ್ ಬಜೆಟ್ ಚಿತ್ರವೂ ಹೌದು ಎನ್ನಲಾಗುತ್ತಿದೆ. ಟಾಕ್ಸಿಕ್ ಚಿತ್ರವನ್ನು ಕಣ್ತುಂಬಿಕೊಳ್ಳಲು ಅಭಿಮಾನಿಗಳು ಇನ್ನೂ ಒಂದೂವರೆ ವರ್ಷ ಕಾಯಲೇಬೇಕು. ಚಿತ್ರತಂಡ ಹೇಳಿಕೊಂಡಿರುವ ಪ್ರಕಾರ 2025ರ ಏಪ್ರಿಲ್ 10ರಂದು ಕನ್ನಡ, ಇಂಗ್ಲಿಷ್, ಹಿಂದಿ, ತಮಿಳು, ತೆಲುಗು, ಮಲಯಾಳಂನಲ್ಲಿ ಈ ಚಿತ್ರ ಬಿಡುಗಡೆಯಾಗಲಿದೆ.

ಕಣ್ಣಪ್ಪ: ವಿಶೇಷ ಪಾತ್ರದಲ್ಲಿ ಪ್ರಭಾಸ್



ಈಗಾಗಲೇ ನಟರ ಆಯ್ಕೆ ವಿಚಾರದಲ್ಲಿಯೇ ಸಾಕಷ್ಟು ಸುದ್ದಿಯಲ್ಲಿದೆ ಪ್ಯಾನ್ ಇಂಡಿಯಾ ಮಟ್ಟದಲ್ಲಿ ನಿರ್ಮಾಣವಾಗುತ್ತಿರುವ ಕಣ್ಣಪ್ಪ ಸಿನಿಮಾ. ಈಗ ಇದೇ ಸಿನಿಮಾ ತಂಡಕ್ಕೆ ಇನ್ನೊಬ್ಬ ಸ್ಟಾರ್ ನಟನ ಎಂಟ್ರಿಯಾಗಿದೆ. ಅದು ಬೇರಾರು ಅಲ್ಲ, ಪ್ಯಾನ್ ಇಂಡಿಯನ್ ಹೀರೋ ಪ್ರಭಾಸ್!

ಈಗಾಗಲೇ ಅಕ್ಷಯ್ ಕುಮಾರ್, ಮೋಹನ್ ಬಾಬು, ಮೋಹನ್ ಲಾಲ್, ಶರತ್‌ಕುಮಾರ್ ಕಣ್ಣಪ್ಪ ಚಿತ್ರದ ತಾರಾಬಳಗದಲ್ಲಿದ್ದಾರೆ. ಈಗ ಈ ಸ್ಟಾರ್ ತಾರಾಬಳಗಕ್ಕೆ ಪ್ರಭಾಸ್ ಅವರ ಸೇರಿಕೊಂಡಿದ್ದಾರೆ. ಈ ವಿಚಾರವನ್ನು ಸ್ವತಃ ಚಿತ್ರತಂಡವೇ ಅಧಿಕೃತವಾಗಿ ಘೋಷಣೆ ಮಾಡಿದೆ.

ಮುಖೇಶ್ ಕುಮಾರ್ ಸಿಂಗ್ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಕಣ್ಣಪ್ಪ ಸಿನಿಮಾ, ಬಹುಭಾಷೆಗಳಲ್ಲಿ ಪ್ಯಾನ್ ಇಂಡಿಯಾ ಮಟ್ಟದಲ್ಲಿ ನಿರ್ಮಾಣವಾಗಲಿದೆ. ಬಹುಕೋಟಿ ವೆಚ್ಚದಲ್ಲೂ ಈ ಸಿನಿಮಾ ಮೂಡಿಬರುತ್ತಿದೆ. ಶಿವನ ಪರಮ ಭಕ್ತ ಕಣ್ಣಪ್ಪನಾಗಿ ವಿಷ್ಣು ಮಂಚು ನಟಿಸಲಿದ್ದಾರೆ.

ಕಳೆದ ಏಳು ವರ್ಷಗಳಿಂದ ಈ ಪ್ರಾಜೆಕ್ಟ್ ಸಲುವಾಗಿ ವಿಷ್ಣು ಮಂಚು ಶ್ರಮಿಸುತ್ತಿದ್ದಾರೆ. ಅಷ್ಟೇ ಅದ್ದೂರಿಯಾಗಿಯೇ ಅದನ್ನು ತೆರೆಗೆ ತರುವ ಪ್ರಯತ್ನ ನಡೆಯುತ್ತಿದೆ. ಅದರಂತೆ ಸ್ಟಾರ್ ಕಲಾವಿದರನ್ನೇ ಆಯ್ಕೆ ಮಾಡಿಕೊಳ್ಳುವತ್ತ ಕುತೂಹಲ ಮೂಡಿಸುತ್ತಿದೆ. ಹಾಲಿವುಡ್‌ನ ಶೆಲ್ಡೋನ್ ಚಾವ್ ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ.

ರಶ್ಮಿಕಾ ಮಂದಣ್ಣ

'ಸಿಕಂದರ್'ನಲ್ಲಿ ರಶ್ಮಿಕಾ ಮಂದಣ್ಣ ನಾಯಕಿ

ಮುಂಬೈ: 'ಪುಷ್ಪ', 'ಅನಿಮಲ್' ಚಿತ್ರಗಳ ಖ್ಯಾತಿಯ ಕನ್ನಡದ ನಟಿ ರಶ್ಮಿಕಾ ಮಂದಣ್ಣ ತಮ್ಮ ಮುಂದಿನ ಬಾಲಿವುಡ್ ಚಿತ್ರ 'ಸಿಕಂದರ್'ನಲ್ಲಿ ಸೂಪರ್ ಸ್ಟಾರ್ ಸಲ್ಮಾನ್ ಖಾನ್‌ಗೆ ನಾಯಕಿಯಾಗಿ ನಟಿಸುತ್ತಿದ್ದಾರೆ.

'ಘಜನಿ'.'ಹಾಲಿ ಡೇ' ಚಿತ್ರಗಳ ಖ್ಯಾತಿಯ ಎ.ಆರ್. ಮುರುಗದಾಸ್ ಈ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ಸಾಜಿದ್ ನಾಡಿಯಾವಾಲಾ ಚಿತ್ರ ನಿರ್ಮಾಣ ಮಾಡುತ್ತಿದ್ದು, ಮುಂದಿನ ವರ್ಷದ ರಂಜಾನ್ ಹಬ್ಬಕ್ಕೆ ಬಿಡುಗಡೆಯ ಗುರಿ ಹೊಂದಲಾಗಿದೆ.

'ಸಲ್ಮಾನ್ ಖಾನ್ ಜೊತೆಗೆ ಸಿಕಂದರ್ ಚಿತ್ರದಲ್ಲಿ ನಟಿಸಲು ಫ್ಯಾಬುಲಸ್ ನಟಿ ರಶ್ಮಿಕಾ ಮಂದಣ್ಣ ಅವರಿಗೆ ಸ್ವಾಗತ ಕೋರುತ್ತೇವೆ. ಈ ಅದ್ಭುತ ಜೋಡಿಯ ಸ್ಕ್ರೀನ್ ಮ್ಯಾಜಿಕ್ ಅನ್ನು 2025ರ ಈದ್ ಸಂದರ್ಭದಲ್ಲಿ ಅನಾವರಣಗೊಳಿಸಲಿದ್ದೇವೆ' ಎಂದು ಚಿತ್ರ ನಿರ್ಮಾಣ ಸಂಸ್ಥೆ ಇನ್‌ಸ್ಟಾಗ್ರಾಂ ಪೋಸ್ಟ್‌ನಲ್ಲಿ ತಿಳಿಸಿದೆ

ರಶ್ಮಿಕಾ ಮಂದಣ್ಣ ಸಹ 'ಸಿಕಂದರ್ ಚಿತ್ರದ ಭಾಗವಾಗಲು ಕಾತರಳಾಗಿದ್ದೇನೆ' ಎಂದು ಇನ್‌ಸ್ಟಾದಲ್ಲಿ ಬರೆದುಕೊಂಡಿದ್ದಾರೆ.

'ನನ್ನ ಮುಂದಿನ ಚಿತ್ರದ ಅಪ್‌ಡೇಟ್ ಬಗ್ಗೆ ಬಹಳ ಸಮಯದಿಂದ ಕೇಳುತ್ತಿದ್ದೀರಿ. ಇಲ್ಲಿದೆ ನೋಡಿ ಸರ್‌ಪ್ರೈಸ್.. ಸಿಕಂದರ್ ಚಿತ್ರದ ಭಾಗವಾಗುತ್ತಿರುವುದಕ್ಕೆ ಹೆಮ್ಮೆ ಪಡುತ್ತೇನೆ' ಎಂದು ಬರೆದುಕೊಂಡಿದ್ದಾರೆ.


ಭಾಮಾ

ಸಿಂಗಲ್ ಮಾಮ್ ಆದ ನಟಿ ಭಾಮಾ

ಕನ್ನಡ, ಮಲಯಾಳಂ, ತಮಿಳು ಸೇರಿ ಸುಮಾರು 42 ಸಿನಿಮಾಗಳಲ್ಲಿ ನಟಿಸಿ ಜನಮನ್ನಣೆ ಗಳಿಸಿದ್ದ ನಟಿ ಭಾಮಾ ಇದೀಗ ತಮ್ಮ ದಾಂಪತ್ಯ ಜೀವನದಿಂದ ಬೇರ್ಪಟ್ಟಿರುವ ಬಗ್ಗೆ ಖಚಿತಪಡಿಸಿದ್ದಾರೆ.

ಈ ಕುರಿತು ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಹಂಚಿಕೊಂಡಿರುವ ಭಾಮಾ, ಗಟ್ಟಿಯಾಗಿರುವುದು ಬಿಟ್ಟರೆ ಬೇರೆ ಆಯ್ಕೆಗಳಿಲ್ಲ ಎಂದು ಹೇಳಿದ್ದಾರೆ.

2020ರಲ್ಲಿ ಉದ್ಯಮಿ ಅರುಣ್ ಜಗದೀಶ್ ಎಂಬುವವರನ್ನು ವರಿಸಿದ್ದ ಭಾಮಾ ಅವರು ನಾಲ್ಕೇ ವರ್ಷದಲ್ಲಿ ವಿವಾಹ ಮುರಿದು ಬೀಳಲು ಕಾರಣವೇನು ಎಂಬ ಬಗ್ಗೆ ತಿಳಿಸಿಲ್ಲ. ಅವರಿಗೆ ಗೌರಿ ಎಂಬ ಹೆಸರಿನ ಹೆಣ್ಣು ಮಗುವಿದೆ.

'ಸಿಂಗಲ್ ಮಾಮ್ ಆಗುವವರೆಗೂ ನಾನು ಇಷ್ಟೊಂದು ಗಟ್ಟಿಗಿತ್ತಿ ಎಂದು ನನಗೆ ತಿಳಿದಿರಲಿಲ್ಲ. ಗಟ್ಟಿಯಾಗಿರುವುದು ಬಿಟ್ಟರೆ ನನಗೆ ಬೇರೆ ಆಯ್ಕೆಗಳಿಲ್ಲ. ನಾನು ಮತ್ತು ನನ್ನ ಮಗಳು ಅಷ್ಟೇ' ಎಂದು ಮಗಳೊಂದಿಗಿನ ಫೋಟೊ ಹಂಚಿಕೊಂಡಿದ್ದಾರೆ.

2007ರಲ್ಲಿ ಸಿನಿಮಾ ಬದುಕಿಗೆ ಕಾಲಿಟ್ಟ ಭಾಮಾ ಇದುವರೆಗೂ ತಮಿಳು, ತೆಲುಗು, ಕನ್ನಡ, ಮಲಯಾಳಂ ಸೇರಿದಂತೆ 42 ಸಿನಿಮಾಗಳಲ್ಲಿ ನಟಿಸಿದ್ದಾರೆ. ರಾಕಿಂಗ್ ಸ್ಟಾರ್ ಯಶ್ ನಟನೆಯ 'ಮೊದಲ ಸಲ' ಚಿತ್ರದ ಮೂಲಕ ಭಾಮಾ ಕನ್ನಡಕ್ಕೆ ಪ್ರವೇಶಿಸಿದ್ದರು. ಅದಾದ ಬಳಿಕ ಶೈಲೂ, ಆಟೋ ರಾಜ ಮುಂತಾದ ಚಿತ್ರಗಳಲ್ಲಿಯೂ ನಟಿಸಿದ್ದರು.

ಕುಂಟೆಬಿಲ್ಲೆ ಮಹೂರ್ತ

ಈ ಮೊದಲು ದಕ್ಷ ಯಜ್ಞ, ತರ್ಲೆ ವಿಲೇಜ್, ಋತುಮತಿ ಚಿತ್ರಗಳನ್ನು ನಿರ್ದೇಶನ ಮಾಡಿದ್ದ ಜಿ.ಬಿ.ಎಸ್. ಸಿದ್ದೇಗೌಡ ಅವರು ಕುಂಟೆಬಿಲ್ಲೆ ಸಿನಿಮಾ ನಿರ್ದೇಶನಕ್ಕೆ ಮುಂದಾಗಿದ್ದಾರೆ.

ಯುವನಟ ಯದು ಮೊದಲ ಬಾರಿಗೆ ನಾಯಕರಾಗಿ ಸ್ಯಾಂಡಲ್‌ವುಡ್‌ಗೆ ಎಂಟ್ರಿ ಕೊಡುತ್ತಿದ್ದಾರೆ. ಹತ್ತಕ್ಕೂ ಹೆಚ್ಚು ಚಿತ್ರ ಮಾಡಿರುವ ಮೇಘಶ್ರೀ ನಾಯಕಿಯಾಗಿ ಕಾಣಿಸಿಕೊಳ್ಳಲಿದ್ದಾರೆ.

ಪೋಷಕ ಪಾತ್ರಗಳಲ್ಲಿ ಕಿಶೋರ್, ಪವಿತ್ರ ಲೋಕೇಶ್, ಶಂಕರ್ ಅಶ್ವತ್ಥ್, ಚಂದ್ರಪ್ರಭ ನಟಿಸಲಿದ್ದಾರೆ. ಚಿಕ್ಕ ವಯಸ್ಸಿನಲ್ಲಿ ಆಡುತ್ತಿದ್ದ ಆಟ ಕುಂಟೆಬಿಲ್ಲೆ. ಅದೇ ಟೈಟಲ್ ಇಟ್ಟುಕೊಂಡು ಪ್ರೀತಿ, ನೋವು ಎಲ್ಲವನ್ನೂ ಕಟ್ಟಿಕೊಡಲಿದ್ದೇವೆ ಎಂದು ನಿರ್ದೇಶಕ ಸಿದ್ದೇಗೌಡ ತಿಳಿಸಿದರು.

ನಿರ್ಮಾಪಕ ಎಸ್.ಬಿ. ಶಿವು, ನಿರ್ಮಾಪಕ ಕುಮಾರ್ ಗೌಡ ಮಾತನಾಡಿದರು. ಮೇಘಶ್ರೀ ಪಾತ್ರದ ಬಗ್ಗೆ ಹರ್ಷ ವ್ಯಕ್ತಪಡಿಸಿದರು.

ಸದ್ದು ಮಾಡಿದ ರಣಹದ್ದು

ನಲವತ್ತು ವರ್ಷಗಳಿಂದ ಪೋಷಕ ಕಲಾವಿದನಾಗಿರುವ ಪ್ರಸನ್ನಕುಮಾರ್(ಜಂಗ್ಲಿ ಪ್ರಸನ್ನ) ಕನ್ನಡ ಚಿತ್ರರಂಗಕ್ಕೆ ಚಿರಪರಿಚಿತ. ಈಗ ಅವರು ನಿರ್ದೇಶಕನ ಕ್ಯಾಪ್ ತೊಟ್ಟಿದ್ದಾರೆ. ಚಿತ್ರದ ನಿರ್ಮಾಪಕರು ಅವರೇ. ಪ್ರಸನ್ನಕುಮಾರ್ ಮಕ್ಕಳಾದ ಶಶಾಂಕ್ ಹಾಗೂ ಸೂರಜ್ ಈ ಚಿತ್ರದ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಒಬ್ಬ ಮಗ ನಾಯಕನಾಗಿ, ಮತ್ತೊಬ್ಬ ಮಗ ಖಳನಾಯಕನಾಗಿ ಚಿತ್ರರಂಗ ಪ್ರವೇಶಿಸಲಿದ್ದಾರೆ.

ಈ ಚಿತ್ರದ ಹಾಡುಗಳು ಹಾಗೂ ಟೀಸರ್ ಸಿರಿ ಮ್ಯೂಸಿಕ್ ಮೂಲಕ ಬಿಡುಗಡೆಯಾಯಿತು.

'ನನ್ನ ನಿರ್ದೇಶನದ ಆಸೆಗೆ ಮಕ್ಕಳು ಒತ್ತಾಸೆಯಾದರು. ಹಣವಿಲ್ಲದ ಮನುಷ್ಯನನ್ನು ಸಮಾಜ ಹೇಗೆ ನೋಡುತ್ತದೆ ಎಂಬುದೇ ಚಿತ್ರದ ಕಥಾ ಸಾರಾಂಶ. ಅಷ್ಟೇ ಅಲ್ಲದೆ ನೋಡುಗನಿಗೆ ಬೇಕಾದ ಎಲ್ಲಾ ಅಂಶಗಳಿವೆ. ಚಿತ್ರೀಕರಣ ಮುಕ್ತಾಯವಾಗಿ ಬಿಡುಗಡೆ ಹಂತದಲ್ಲಿದೆ' ಎಂದು ಪ್ರಸನ್ನ ಮಾಹಿತಿ ಹಂಚಿಕೊಂಡರು.

ತಮ್ಮ ಪಾತ್ರದ ಬಗ್ಗೆ ಶಶಾಂಕ್, ಸೂರಜ್ ಮಾಹಿತಿ ನೀಡಿದರು. ಚಿತ್ರದಲ್ಲಿ ನಾಲ್ಕು ಹಾಡುಗಳಿರುವುದಾಗಿ ಸಂಗೀತ ನಿರ್ದೇಶಕ ಸಿಂಗರ್ ಶ್ರೀನಿವಾಸ್ ತಿಳಿಸಿದರು.

ಲಕ್ಷ್ಮೀ ಗೋವಿಂದರಾಜು, ಎಸ್.ಎ.ಚಿನ್ನೇಗೌಡ, ಎಸ್.ಎ. ಗೋವಿಂದರಾಜು, ಎಸ್.ಎ. ಶ್ರೀನಿವಾಸ್ ಅವರು ಟೀಸರ್ ಅನಾವರಣಗೊಳಿಸಿದರು. ನಟ ಶರಣ್ ಹಾಡುಗಳನ್ನು ಲೋಕಾರ್ಪಣೆ ಮಾಡಿದರು. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಎನ್.ಎಂ. ಸುರೇಶ್, ಕರ್ನಾಟಕ ಚಲನಚಿತ್ರ ನಿರ್ಮಾಪಕರ ಸಂಘದ ಅಧ್ಯಕ್ಷರಾದ ಉಮೇಶ್ ಬಣಕಾರ್, ಕರ್ನಾಟಕ ಚಲನಚಿತ್ರ ನಿರ್ದೇಶಕರ ಸಂಘದ ಅಧ್ಯಕ್ಷರಾದ ಎನ್.ಆರ್. ಕೆ ವಿಶ್ವನಾಥ್, ಸಿರಿ ಮ್ಯೂಸಿಕ್‌ನ ಸುರೇಶ್ ಚಿಕ್ಕಣ್ಣ ಇದ್ದರು

ರಣಹದ್ದು ಟೀಸರ್ ಬಿಡುಗಡೆ ಸಮಾರಂಭದಲ್ಲಿ ಗಣ್ಯರು

ಅಮ್ಮನೆಂಬ ಮೋಹಕ ರಾಗ

ಸುಮಾವೀಣಾ

'ಅಮ್ಮಾ...' ಈ ಪದವೇ ಚೇತೋಹಾರಿಯಾದದ್ದು. ಅಮ್ಮಾ! ಎಂದ ಕೂಡಲೆ ಮಧುರ ಭಾವನೆಗಳು ನಮ್ಮೊಳಗೆ ಸಂಭ್ರಮಿಸುತ್ತವೆ. ಹಾಗೆ ಮಕ್ಕಳ ಪಾಲಿಗೆ ಸೌಖ್ಯದ ಸವಿಯನ್ನು ಉಣಬಡಿಸುವ ಮೂರ್ತರೂಪ ಅಮ್ಮಾನೆ. ತನ್ನ ನೋವು ನಿರಾಸೆಗಳನ್ನೆಲ್ಲಾ ಬತ್ತಿಯನ್ನಾಗಿ ಮಾಡಿ, ಆಸೆ-ಕನಸುಗಳನ್ನು ಎಣ್ಣೆಯಾಗಿಸಿ, ಮಕ್ಕಳ ಬದುಕಲ್ಲಿ ಸೌಖ್ಯದ ಹಣತೆ ಹಚ್ಚುತ್ತಾಳೆ. ರೆಕ್ಕೆಬಲಿಯದ ಮರಿಗಳಿಗೆ ಗುಟುಕು ನೀಡುವ ತಾಯಿ ಪಕ್ಷಿ, ಆಗ ತಾನೆ ಹುಟ್ಟಿದ ಕರುವಿನ ಮೈನೆಕ್ಕುವ ಹಸುವಿನಲ್ಲೂ ಅಗಾಧ ಪ್ರೇಮವನ್ನು ಕಾಣಬಹುದು.

'ಅಮ್ಮಾ' ಪದವನ್ನು ವ್ಯಾಖ್ಯಾನಿಸುವುದು ಸುಲಭವೂ, ಸಾಧ್ಯವೂ ಅಲ್ಲದ್ದು. 'ಮನೆಯೆ ಮೊದಲ ಪಾಠಶಾಲೆ ಜನನಿತಾನೆ ಮೊದಲಗುರು' ಎಂಬಂತೆ ಗುರುವಾಗಿ, ಮಾರ್ಗದರ್ಶಕಳಾಗಿ, ಹಿತೈಷಿಣಿಯಾಗಿ, ವಿಮರ್ಶಕಳಾಗಿ, ಸ್ನೇಹಿತೆಯಾಗುವ ಅಮ್ಮ, ಸಮಯಪ್ರಜ್ಞೆ ಮೂಡಿಸಿ ಸಮಾಜಕ್ಕೆ ಸಾಕ್ಷೀಭೂತರಾಗುವ ಮಕ್ಕಳ ಬೆನ್ನ ಹಿಂದೆ ಸದಾ ಬೆಂಗಾವಲಾಗಿ ನಿಲ್ಲುತ್ತಾಳೆ.

ಮೇ.12 ಅಮ್ಮಂದಿರ ದಿನ

ಜನಪದದಲ್ಲಿ 'ಕಣ್ಣು ಕಾಣುವ ತನಕ ಬೆನ್ನು ಬಾಗುವ ತನಕ ತಾಯಿಯಿರಲಿ, ತವರಿರಲಿ' ಎಂದು ಹೇಳಿದ್ದಾರೆ. ಅಮ್ಮನನ್ನು ಕುರಿತ ಎಂಥ ಉದಾತ್ತ ನಿಲುವು? ಅಲ್ಲವೇ?!

'ಯಾರೂ ಇದ್ದರೂ ತನ್ನ ತಾಯವ್ವನ್ಹೋಲರ, ಸಾವಿರ ಕೊಳ್ಳಿ ಒಲಿಯಾಗ ಇದ್ದರೂ ಜ್ಯೋತಿ ನಿನ್ನಾರ್ ಹೋಲ'ರ ಎಂದು ಮನತುಂಬಿ ಅಮ್ಮನೆಂಬ ಆ ಮಹಾಶಕ್ತಿಗೆ ವಂದಿಸುವುದಿದೆ.

'ತಾಯಿಗಿಂತ ಬಂಧುವಿಲ್ಲ ಉಪ್ಪಿಗಿಂತ ರುಚಿಯಿಲ್ಲ' ಎಂಬಂತೆ ಬಂಧುಗಳ ಬಂಧು ಎಂದರೆ ತಾಯಿ ಜೀವವೆ.

'ಮಾ' ಅಂದರೆ ಅಮ್ಮನನ್ನು ಬಿಟ್ಟು ಅರ್ಥಾತ್ ಇತರರಿಗೆ ಸ್ಥಾನವಿಲ್ಲ. ಎಲ್ಲಾ ವಯೋಮಾನದವರಿಗೂ ಎಲ್ಲಾ ಸಂಬಂಧಗಳಿಗೂ ಕಡೆಯದಾಗಿ ಅಮ್ಮ ಪದವನ್ನು ಸೇರಿಸಿಕೊಳ್ಳುತ್ತೇವೆ. ಚಿಕ್ಕಮ್ಮ, ದೊಡ್ಡಮ್ಮ, ಅತ್ತಿಗೆಮ್ಮ, ಅತ್ಯಮ್ಮ, ತಂಗಯಮ್ಮ ಹೀಗೆ... ಯಾವುದೇ ಸಂಬಂಧ ಹೇಳದೇ ಇದ್ದಾಗಲೂ ಆವಮ್ಮ, ಈವಮ್ಮ ಎಂದಾದರೂ ಹೇಳಿಬಿಡುತ್ತೇವೆ.

ದೇವತೆಗಳನ್ನು ಕರೆಯುವಾಗಲೂ ಏಕವಚನದಲ್ಲಿ ಕರೆಯುವುದಿಲ್ಲ. ಶಾರದಾಮಾತೆ, ಶಾರದಾಂಬ, ಸೀತಾಮಾತೆ, ಸೀತಮ್ಮ, ಭೂಮಿತಾಯಿ, ದುರ್ಗಾಂಬೆ, ದುರ್ಗಾಮಾತೆ, ಹೀಗೆ ಕರೆಯುವುದುಂಟು. ಒಟ್ಟಾರೆ 'ಅಮ್ಮ' ಇರಲೇಬೇಕು. ಕಾಲ ಬದಲಾದಂತೆ ನಾವು ಅಪ್ಡೇಟ್ ಆಗುತ್ತಿದ್ದೇವೆ. Miss, madam, aunty ಎಂದು ಕರೆಸಿಕೊಳ್ಳುವುದು ಇಷ್ಟ. ಪದದ ಅರ್ಥ ತಿಳಿಯದೆ. ಎಷ್ಟೋ ಸಾರಿ ಈ ಪದಗಳು ಪ್ರಯೋಗವಾಗುತ್ತ ಇರುತ್ತವೆ. ಇನ್ನು ಕೆಲವರಿಗೆ 'madam' ಅಮ್ಮ ಇಬ್ಬರೂ ಬೇಕು ಹಾಗಾಗಿ 'ಮೇಡಮ್ಮ'ಎಂದು ಬಿಡುತ್ತಾರೆ.

ಅಮ್ಮ ಈ ಪದಕ್ಕೆ ಬದಲಿ ಇಲ್ಲ. ಅಮ್ಮಾ ಎಂದರೆನೆ ಧೈರ್ಯದ ಸಂಕೇತ.

ನಾವೇನೇ ಕೇಳಿದರೂ ಇಲ್ಲ ಎನ್ನದ ಜೀವ! ಉಪಮನ್ಯು ತನ್ನ ತಾಯಿಯ ಬಳಿ ಹೋಗಿ ಕುಡಿಯಲು ಹಾಲು ಬೇಕೆಂದಾಗ ಇಲ್ಲ ಎನ್ನಲಾಗದೇ ಅಕ್ಕಿ ಹುಡಿಯನ್ನು ನೀರಿನಲ್ಲಿ ಬೆರೆಸಿಕೊಡುತ್ತಾಳೆ. ನಂತರದಲ್ಲಿ ಶಿವ ಪ್ರತ್ಯಕ್ಷನಾಗಿ ಹಾಲಿನ ಕಡಲನ್ನೇ ಕರುಣಿಸುತ್ತಾನೆ.

ಬ್ಯಾಸಿಗಿ ದಿವಸಕಿ ಬೇವಿನ ಮರತಂಪು
ಭೀಮಾರತಿ ಎಂಬವ ಹೊಳೆ ತಂಪು
ತಾಯಿ ತಂಪು ತವರಿಗೆ

ಎಂಬಂತೆ ತಾಯಿಯಿದ್ದರೆ ಸರ್ವರಾಜ್ಯವೂ ಇದ್ದಂತೆ, ಅಮ್ಮನ ಬಳಿ ಇರುವಷ್ಟು ಮಮತೆ,ನಡೆಯುವಷ್ಟು ಸುಳ್ಳು, ಸಲಿಗೆ, ಹಠ, ಉದ್ಧಟತನ, ಮೊಂಡುತನ, ದಡ್ಡತನ, ಬಾಲಿಶ ವರ್ತನೆ ಯಾರ ಬಳಿಯೂ ನಡೆಯುವುದಿಲ್ಲ. ಅಮ್ಮನಮನೆ, ತವರುಮನೆ, ತಾಯಿಮನೆ ಇವು ಸದಾ ಅಪ್ಯಾಯಮಾನವೆನಿಸುವ ಸಂಗತಿಗಳು.

ಸಂಸ್ಕೃತಿ-ಸಂಸ್ಕಾರದ ಪಾಠ, ಸ್ವಚ್ಛತೆ, ಸತ್ಯ, ನಿಷ್ಠೆ, ಸ್ವಾಭಿಮಾನ, ಶಿಸ್ತು, ಉದಾರತೆಯ ಪಾಠವನ್ನು ಅಮ್ಮನೇ ಹೇಳಿಕೊಡುವುದು . ಅದಕ್ಕೆ ತಾಯಿಯಂತೆ ಮಗಳು ನೂಲಿನಂತೆ ಸೀರೆ, ಅಮ್ಮನ ಕೈರುಚಿ, ಅಮ್ಮನ ಆರೈಕೆ ಕರುಳಬಳ್ಳಿಯ ಸಂಬಂಧ ಎಂಬ ಪದಪಂಕ್ತಿಗಳು ಚಾಲ್ತಿಯಲ್ಲಿರುವುದು. ಅಷ್ಟಾವಕ್ರಮುನಿಯ ತಾಯಿ ಸುಜಾತೆ ಮಗನನ್ನು ನೋಡಲು ಯಾವಾಗಲೂ ಹಂಬಲಿಸುತ್ತಾಳೆ ಕುರೂಪಿ ಎಂದು ಭಾವಿಸುವುದೇ ಇಲ್ಲ.

ಮಾಡದ ತಪ್ಪಿಗೆ ತನ್ನೈವರೂ ಮಕ್ಕಳನ್ನು ಕರೆದುಕೊಂಡು ವನವಾಸ ಮಾಡುತ್ತಾ ಪ್ರತಿ ಕ್ಷಣದಲ್ಲೂ ತನ್ನನ್ನು ತಾನು ಸವಾಲುಗಳಿಗೆ ಒಡ್ಡಿಕೊಂಡ ಪಾತ್ರ ಎಂದರೆ ಕುಂತಿನೇ. ಕಾಸಿಗೆ ಹೋಗುವುದಕ್ಕಿಂತ ತಾಸ್ಪೋತ್ತಿನ ಹಾದಿ ತವರೂರಿನದ್ದು ಎನ್ನುವ ಹೆಣ್ಣುಮಕ್ಕಳು ದೈವಸನ್ನಿಧಾನಕ್ಕಿಂತ ಮಿಗಿಲಾದ ಸ್ಥಾನವನ್ನು ಕೊಟ್ಟಿದ್ದಾರೆ.

ಬಿ. ಆರ್. ಲಕ್ಷ್ಮಣರಾವ್ ಅವರ 'ಅಮ್ಮಾ ನಿನ್ನ ಎದೆಯಾಳದಲ್ಲಿ ಗಾಳಕ್ಕೆ ಸಿಕ್ಕ ಮೀನು ಮಿಡುಕಾಡುತ್ತಿರುವೆ ನಾನು' ಎಂಬ ಅಭೂತಪೂರ್ವ ಸಾಲುಗಳು ಅಮ್ಮನ ವ್ಯಕ್ತಿಚಿತ್ರಣವೇ ನಮ್ಮ ಕಣ್ಮುಂದೆ ಬಂದುಬಿಡುತ್ತದೆ.

'ಆನಂದಾಮೃತಕರ್ಷಿಣಿ,ಅಮೃತವರ್ಷಿಣಿ' ಎಂಬಂತೆ ಮಕ್ಕಳ ಬದುಕಲ್ಲಿ ಆನಂದವನ್ನು ಅನಂತವಾಗಿ ತರಬಯಸುವವಳೆಂದರೆ ಅಮ್ಮಾ. ಸುಖಸ್ವರೂಪಿಣಿ, ಮಧುರಭಾಷಿಣಿಯಾಗಿ ನಮ್ಮನ್ನು ತಿದ್ದಿದ, ಈ ಜಗತ್ತಿಗೆ ತಂದ ಎಲ್ಲಾ ತಾಯಂದಿರಿಗೂ ಅಮ್ಮಂದಿರ ದಿನದ ಈ ಸಂದರ್ಭದಲ್ಲಿ ನನ್ನ ಪ್ರೀತಿಯ ನಮಸ್ಕಾರಗಳು.

ಅಮ್ಮಂದಿರಿಗೂ ಹಿತವೆನಿಸುವ ಜೀನ್ಸ್

ಪವಿತ್ರಾ ಭಟ್

ಫ್ಯಾಷನ್

ಅಮ್ಮನಾಗಿ ಬಡ್ತಿ ಹೊಂದಿದ ಮೇಲೆ ದೇಹದಲ್ಲಾಗುವ ಬದಲಾವಣೆಗಳಿಂದ ಇಷ್ಟವಾದ ಸ್ಟೈಲಿಷ್ ಬಟ್ಟೆ ತೊಡಲು ಹಿಂಜರಿಯುವವರೇ ಹೆಚ್ಚು. ತೊಟ್ಟರೂ ಇರಿಸುಮುರಿಸು, ಈಗ ಹೇಗೆ ಕಾಣುವೆನೋ ಎಂಬ ಕೀಳರಿಮೆ. ಮೊದಲೆಲ್ಲಾ 'ಜೀನ್ಸ್ ಪ್ಯಾಂಟ್, ಟೀ ಶರ್ಟ್, ಫ್ರಾಕ್‌ಗಳನ್ನು ಧರಿಸುತ್ತಿದ್ದೆ, ಆದರೆ ಮಗುವಾದ ಮೇಲೆ ಇಷ್ಟವಾದ ದಿರಿಸು ಧರಿಸುವುದು ಹೇಗೆ?' ಎಂದು ಹಲವರು ಪ್ರಶ್ನಿಸಿಕೊಳ್ಳುವುದಿದೆ. ಜೀನ್ಸ್ ಎನ್ನುವುದು ಬಹಳ ಕ್ಯಾಷುಯಲ್ ಉಡುಗೆಯಾಗಿದ್ದು, ಅಮ್ಮಂದಿರಿಗಾಗಿಯೇ ಹಲವು ರೀತಿಯ ಜೀನ್ಸ್‌ಪ್ಯಾಂಟ್‌ಗಳು ಮಾರುಕಟ್ಟೆಗೆ ಬಂದಿವೆ. ಅವುಗಳನ್ನು ಧರಿಸಿಯೂ ಟ್ರೆಂಡಿಯಾಗಿ ಕಾಣಬಹುದು.

ಬೂಟ್‌ಕಟ್ ಜೀನ್ಸ್

ಕೆಲವು ಫ್ಯಾಷನ್‌ಗಳು ಎಂದಿಗೂ ಮಾಸದು. ಅದಕ್ಕೆ ಒಂದು ಉದಾಹರಣೆಯೆಂದರೆ ಬೂಟ್‌ಕಟ್ ಜೀನ್ಸ್. ಇದು 60 ಮತ್ತು 70ರ ದಶಕದಲ್ಲಿ ಜನಪ್ರಿಯವಾಗಿತ್ತು, ಈಗಲೂ ಮಹಿಳೆಯರ ನೆಚ್ಚಿನ ಜೀನ್ಸ್ ಆಗಿ ಉಳಿದುಕೊಂಡಿದೆ. ಎಲ್ಲಾ ದೇಹ ಪ್ರಕಾರಗಳಿಗೆ ಸರಿ ಹೊಂದುವಂಥ ಈ ಜೀನ್ಸ್ ಅಮ್ಮಂದಿರಿಗೆ ಉತ್ತಮ ಆಯ್ಕೆಯಾಗಿದೆ.

ಹೈ– ವೇಸ್ಟ್ ಜೀನ್ಸ್

ಹೈ– ವೇಸ್ಟ್ ಜೀನ್ಸ್ ಎಲ್ಲಾ ವಯಸ್ಸಿನ ಮಹಿಳೆಯರು ಇಷ್ಟಪಡುವ ದಿರಿಸು. ಆರಾಮದಾಯಕ ಎನಿಸುವ ಈ ಪ್ಯಾಂಟ್‌ಗಳು ಕೊಂಚ ದಪ್ಪ ಇರುವವರಿಗೆ ಹೇಳಿಮಾಡಿಸಿದಂತಿದೆ. ಅಲ್ಲದೆ ಹೈ– ವೇಸ್ಟ್ ಜೀನ್ಸ್ ಸ್ಲಿಮ್ ಆಗಿ ಕಾಣುವಂತೆ ಮಾಡುತ್ತವೆ.

ಫ್ಲೇರ್ಡ್ ಜೀನ್ಸ್

ರೆಟ್ರೊ ಶೈಲಿಯಂತೆ ಕಾಣಿಸುವ ಫ್ಲೇರ್ಡ್ ಜೀನ್ಸ್‌ಗಳು ಬೂಟ್‌ಕಟ್‌ನಂತೆ ಕಂಡರೂ ಕೊಂಚ ಭಿನ್ನವಾಗಿರುತ್ತದೆ. ತೊಡೆ ಮತ್ತು ಮೀನಖಂಡಗಳ ಭಾಗದಲ್ಲಿ ಅಗಲ ವಾಗಿರುತ್ತದೆ. ಹೀಗಾಗಿ ಧರಿಸಲು ಕೂಡ ಆರಾಮದಾಯಕ ಎನಿಸುತ್ತದೆ. ಕುರ್ತಾ, ಸ್ವೆಟರ್, ಅಥವಾ ಶಾರ್ಟ್ ಟಾಪ್‌ನೊಂದಿಗೆ ಈ ಜೀನ್ಸ್ ಧರಿಸಿದರೆ, ನೀವು ದಪ್ಪವಾಗಿದ್ದರೂ ಸ್ಲಿಮ್ ಆಗಿ ಕಾಣುತ್ತೀರಿ.

ಸಿಗರೇಟ್ ಕಟ್ ಜೀನ್ಸ್

ಕಚೇರಿಗೆ ತೆರಳುವ ಅಮ್ಮಂದಿರಿಗೆ ಸಿಗರೇಟ್ ಕಟ್ ಜೀನ್ಸ್ ಪ್ಯಾಂಟ್‌ಗಳು ವಿಭಿನ್ನ ರೀತಿಯ ಲುಕ್ ನೀಡಲಿದೆ. ಪೂರ್ತಿಯಾಗಿ ಪಾದದವರೆಗೆ ಇರದೆ ಆ್ಯಂಕಲ್‌ನವರೆಗೆ ಮಾತ್ರ ಇರುವ ಪ್ಯಾಂಟ್‌ಗಳಿಗೆ ಟೀ ಶರ್ಟ್ ಅಥವಾ ಶಾರ್ಟ್ ಕುರ್ತಾ ಮತ್ತು ಸ್ಟೈಲಿಷ್ ಚಪ್ಪಲ್ ಧರಿಸಿದರೆ ಅಂದವಾಗಿ ಕಾಣುವಂತೆ ಮಾಡುತ್ತದೆ.

ಜಂಪ್‌ಸೂಟ್‌ಗಳು

ಎಲ್ಲಾ ರೀತಿಯ ದೇಹಾಕೃತಿಯವರಿಗೆ ಜಂಪ್‌ಸೂಟ್‌ಗಳು ಉತ್ತಮ ಆಯ್ಕೆ ಬಟ್ಟೆಯಾಗಿದೆ. ದಪ್ಪ ಅಥವಾ ಸಣ್ಣ ದೇಹವಾಗಿರಲಿ ಆರಾಮವಾಗಿ ಧರಿಸಬಹುದು. ಚಿಕ್ಕಮಕ್ಕಳನ್ನು ಕರೆದೊಯ್ಯುವಾಗ ಉಡುಪನ್ನು ಸರಿಪಡಿಸಿಕೊಳ್ಳಬೇಕೆಂಬ ಗೋಜಲು ಇದರಲ್ಲಿ ಇರುವುದಿಲ್ಲ.

ಇವುಗಳನ್ನು ನೆನಪಿಡಿ

- ಅಮ್ಮಂದಿರು ಜೀನ್ಸ್ ಪ್ಯಾಂಟ್ ಧರಿಸುವಾಗ ಬಣ್ಣಗಳ ಸಂಯೋಜನೆ ಬಗ್ಗೆ ಹೆಚ್ಚು ಗಮನ ಹರಿಸಿ. ಉದಾಹರಣೆಗೆ ಕಂದುನೀಲಿ ಜೀನ್ಸ್‌ಗೆ ತಿಳಿ ನೀಲಿ ಬಟ್ಟೆಗಳು ಹೆಚ್ಚು ಸೂಕ್ತವೆನಿಸುತ್ತವೆ.
- ಜೀನ್ಸ್ ಧರಿಸಿದಾಗ ಶರ್ಟ್ ಮೇಲೆ ಒಂದು ಕೋಟ್ ಧರಿಸಿ
- ನೆನಪಿಡಿ, ಋತುಮಾನಕ್ಕೆ ತಕ್ಕಂತೆ ಜೀನ್ಸ್ ಮೇಲೆ ಟಾಪ್‌ಗಳ ಆಯ್ಕೆಯಿರಲಿ. ಜೀನ್ಸ್‌ನ ಹೊಸ ಮಾದರಿ ಜಂಗಿಗ್ಸ್‌ಕೂಡ ಆಯ್ಕೆಯಲ್ಲಿ ಇರಲಿ.
- ಬೇಸಿಗೆಯಲ್ಲಿ ಕ್ರಾಪ್ ಟಾಪ್, ಶಾರ್ಟ್ ಟಾಪ್, ರಫಲ್ ಶರ್ಟ್‌ಗಳು ಆಯ್ಕೆಯಾಗಿದ್ದರೆ, ಚಳಿಗಾಲ, ಮಳೆಗಾಲದಲ್ಲಿ ಹೂಡಿಗಳು, ಫುಲ್ ಸ್ಲೀವ್ ಶರ್ಟ್‌ಗಳು ಉತ್ತಮ ಆಯ್ಕೆಯಾಗಿರುತ್ತದೆ.
- ಏನನ್ನೇ ಧರಿಸಿದರೂ ಆತ್ಮವಿಶ್ವಾಸದಿಂದ ಇರುವುದು ಬಹುಮುಖ್ಯ.

ಅಕ್ಷಯ ತದಿಗೆ ಚಿನ್ನ, ಬೆಳ್ಳಿ ಏನು ಕೊಂಡರೂ ಅಕ್ಷಯವಾಗುವುದು ಎಂಬ ನಂಬಿಕೆ ಇದೆ. ಮಣ್ಣಿನ ಮಡಕೆ ಕೊಂಡರೂ ಬದುಕು ತಣ್ಣಗಾಗುವುದು ಎಂಬ ನಂಬಿಕೆಯೂ ಇದೆ. ಬಂಗಾರವಾಗದಿದ್ದಲ್ಲಿ ಬಂಗಾರ ಬಣ್ಣದ ಮಾವು ಸೇವಿಸುವುದೂ ಅಕ್ಷಯ ತದಿಗೆಯ ಸಂಭ್ರಮಗಳಲ್ಲಿ ಒಂದು. ಮೂಗುತಿಯಿಂದ ಸರದವರೆಗು, ದೀಪದಿಂದ ಆರತಿ ತಟ್ಟೆವರೆಗೂ ಚಿನ್ನ, ಬೆಳ್ಳಿಯ ಖರೀದಿ ಭರಾಟೆ ಜೋರು. ಬದುಕು ಸಮೃದ್ಧವಾಗಲಿ, ಸಂಪದ್ಭರಿತ ಬದುಕಿನ ನಿರೀಕ್ಷೆಯಲ್ಲಿ ಈ ಮಂಗಲದಿನವು ಮುಗಿಯುತ್ತದೆ. ಬದುಕು ಬಂಗಾರವಾಗಲಿ ಎಂಬ ಅಪೇಕ್ಷೆಯೊದಿಗೆ..

ಪ್ರಜಾವಾಣಿ ಚಿತ್ರಗಳು: ರಂಜು ಪಿ.

ಪ್ರೀತಿಗೆ ಹಲವು ವ್ಯಾಖ್ಯಾನ

ರಶ್ಮಿ ಎಸ್.

ಲಹರಿ

ಛಾಪ್ ತಿಲಕ್ ಸಬ್ ಛೀನ್‌ಲಿ ಮೊಸೆ ನೈನಾ ಲಗೈಕೆ... ಈ ಹಾಡು ಕೇಳಿದಾಗಲೆಲ್ಲ ಸಣ್ಣದೊಂದು ನಗಿ ಅರಳ್ತದ. ಅದಕ್ಕ ಎರಡು ಕಾರಣ, ಒಂದು ಪರವೀನ್ ಅವರ ಗಡಸು ಧ್ವನಿಯ ಹಾಡು, ಇನ್ನೊಂದು ತಾಯಾನ ಸುಮಕೋಮಲ ಮೃದು ಧ್ವನಿಯ ಹಾಡು.

ಇವೆರಡೂ ಧ್ವನಿ ಕೇಳುವಾಗ ಅದೆಷ್ಟು ಸುರಕ್ಷಿತ ಅನಿಸ್ತಿತ್ತಲ್ಲ... ಆ ಸುರಕ್ಷಿತ ಭಾವ ಮತ್ತ ಮತ್ತ ನನ್ನ ಆವರಸ್ಕೊತದ. ಅದೇ ಬೀದರಿನ ಹದಿನೆಂಟು ಕಮಾನುಗಳ ಮನಿ, ದೊಡ್ಡ ಅಂಗಳ, ನನ್ನನ್ನು ಪ್ರೀತಿಸುವ ಜೀವಗಳು. ಮತ್ತು ಪ್ರೀತಿಯ ಇಂಥ ಹಲವಾರು ವ್ಯಾಖ್ಯಾನಗಳು.

ಅಮೀರ್ ಖುಸ್ರೊ ನನಗ ಪರಿಚಯ ಆಗಿದ್ದೇ ಈ ಹಾಡಿನಿಂದ. ಅದ್ವೆಂಗ ಲಿಂಗಪತಿ ಶರಣಸತಿ ಪರಿಕಲ್ಪನೆ ಈ ಹಾಡಿನೊಳಗ ನಾಜೂಕಾಗಿ ಸೇರಕೊಂಡದ ಅಂದ್ರ, ಪ್ರೀತಿಯೊಳಗ ಸಮರ್ಪಣೆಯ ಭಾವವನ್ನು ಹೇಳಕೊಂತ ಹೋಗ್ತದ.

ಛಾಪ್ ತಿಲಕ್ ತೂನೆ ಛೀನ್‌ಲಿ... ಅಂದ್ರ ನನ್ನ ತಿಲಕ, ನನ್ನ ಗುರುತು ಇವೆರಡನ್ನೂ ನೀ ಕಸಿದೆಯಲ್ಲ.. ಒಂದೇ ಒಂದು ಕಣ್ಣೋಟ ಬೆರೆಸಿ ಅಂತ ಸಣ್ಣ ಹುಸಿಮುನಿಸಿನೊಂದಿಗೆ ಪ್ರೀತಿಯ ವೇದನೆ, ನಿವೇದನೆ ಎರಡನ್ನೂ ಮಾಡ್ಕೊಂತ ಹೋಗ್ತಾರ.

ಪ್ರೇಮವೆಂಬುದು ಅದೆಂಥ ನಶೆ, ಕಣ್ತುಂಬ ನೀನೆ, ಮನಸಿನ ತುಂಬಾನೂ ನೀನೆ.. ಪ್ರೇಮವೆಂಬ ಭಟ್ಟಿಯ ಮಧುವ ಉಣಿಸಿ, ನನ್ನ ಮತವಾಲಿಯಾಗಿಸಿದೆ ಒಂದೇ ಒಂದು ಕಣ್ಣೋಟ ಕೂಡಿಸಿ.. ಕಣ್ಣಾಗೊಂದು ಸಣ್ಣ ನಶಾ, ದೂರು ತುಟಿ ಮ್ಯಾಲೊಂದು ನಗಿ ಇಟ್ಕೊಂಡೇ ಕೇಳ್ತಾರ ಕುಸ್ರೊ. ಪ್ರೇಮಕಿ ಭಟ್ಟಿಸೆ ಮಧುವಾ ಪಿಲೈಕೆ/ ಮತ್‌ವಾಲಿ ಕರ್‌ಲೀನಿರೆ ಮೊಸೆ ನೈನಾ ಮಿಲೈಕೆ...ಒಮ್ಮೆ, ಹಂಗ ಆತ್ಮವನ್ನು ಸೀಳುವಂತೆ ನೋಟಗಳೆರಡು ಕೂಡಿದಾಗ, ಈ ಜೀವದ ಮುಂದ ಯಾವ ಗುಟ್ಟುಗಳೂ ಇನ್ನುಳಿಯೂದಿಲ್ಲ ಅನಿಸಿದಾಗ, ಆ ಜೀವದ ಜೊತಿಗೆ ನಾವು ನಮ್ಮ ಸಿಟ್ಟು, ಸೆಡವು, ಸಣ್ಣತನ, ಆಸೆ, ದುರಾಸೆ, ಕನಸು, ಕನವರಿಕೆ ಹಿಂಗ ಎಲ್ಲಾನೂ ಬಯಲಾಗುವಂಥ ಕಣ್ಣು ಕಲೆಯುವ ಆ ಕ್ಷಣ ಹಿಂಗಂತ, ಇಷ್ಟಂತ, ಇಷ್ಟೇ ಅಂತ ಹೇಳೂದೆ ತ್ರಾಸು.

ಆದ್ರ ನನ್ನ ಇಡೀ ವ್ಯಕ್ತಿತ್ವವನ್ನೇ ನಿನಗೆ ಸಮರ್ಪಿಸುತ್ತಲೇ, ನಿನ್ನೊಳಗೆ ಕರಗಿ ಹೋದೆ ಅಂತ ತಾವು ವಿರಹಿನಿಯಾಗಿ, ಪ್ರಣಯಿನಿಯಾಗಿ ಕುಸ್ರೊ ಅವರು ತಮ್ಮ ಪ್ರೀತಿಯ ಸೂಫಿ ಸಂತ ನಿಜಾಮ್ ಔಲಿಯಾ ಅವರಲ್ಲಿ ಆರ್ದ್ರಭಾವದಿಂದ ಕೇಳ್ತಾರ.

ಗೋರಿ ಗೋರಿ ಬಯ್ಯಾ, ಹರಿಹರಿ ಚೂಡಿಯಾ ಬಯ್ಯಾ ಪಕಡ್ ಧಾರ್‌ಲೀನಿರೇ ಮೊಸೆ ನೈನಾ ಮಿಲೈಕೆ.. ಎಂಥ ಬೆಳ್ಳನೆಯ ದುಂಡನೆಯ ಕೈಗಳು, ಹಸಿರು ಬಳೆಗಳಿರುವ ಮುಂಗೈ ನಿಮ್ಮ ಹಿಡಿತದೊಳಗ ಸೆರೆ ಆಯ್ತಲ್ಲ, ಕಂಗಳೆರಡೂ ಕಲೆತಾಗ ಅಂತಾರ. ತಮ್ಮನ್ನೇ ಬಂಧಿಯಾಗಿಸಿಯೂ, ತಮ್ಮಿಂದ ಮುಕ್ತರಾದ ಭಾವ. ದೇವಾ.. ಈ ಜೀವ ಇನ್ನು ನಿನ್ನೊಳಗ ಬಂಧಿ, ನಿನ್ನ ಹಿಡಿತದೊಳಗ ಸುರಕ್ಷಿತ ನಾನು ಅನ್ನುವ ನಿರಾಳ ಭಾವ. ಕುಸ್ರೊ ತಮ್ಮನ್ನೇ ನಿಜಾಮ್ ಔಲಿಯಾ ಅವರಿಗೆ ಕೊಡ್ತಾರ.

ಇದೇನಿದು, ಪ್ರೇಮ ಕಾವ್ಯವೋ, ಭಕ್ತಿ ಸಮರ್ಪಣೆಯೋ.. ಎರಡೂ ಹೌದನಿಸುವ ಹಂಗ ಕುಸ್ರೊ ಮುಂದವರೀತಾರ.

ಖುಸ್ರೊ ನಿಜಾಮ್ ಬಲ್ ಬಲ್ ಜಾಯಿಯೆ ಮೊಹೆ ಸುಹಾಗನ್ ಕೀನಿ ರೆ..ಮೊಸೆ ನೈನಾ ಮಿಲಾಯಿಕೆ.. ನನ್ನ ಜೀವನದ ಪ್ರತಿ ಕ್ಷಣವನ್ನೂ ನಿನಗೆ ಸಮರ್ಪಿಸಿರುವೆ ನಿಜಾಮ್.. ನನ್ನ ವಧುವಾಗಿಸಿಕೊಂಡೆ ನೀ ಕಣ್ಣೊಂದಿಗೆ ನಿನ್ನ ದೃಷ್ಟಿ ಬೆರೆಸಿ.. ಅಂತ್ಹೇಳಿ ಖುಸ್ರೊ ಈ ರಚನೆ ಮುಗಸ್ತಾರ.

ದೇವನೊಂದಿಗೆ ಜೀವದ ಮಿಲನ, ಸಮರ್ಪಣೆ, ಎಲ್ಲವನ್ನೂ ಕಸಿದೂ ವಧುವಾಗಿಸಿದ ಬಗೆಯ ಹೇಳಿದ ಖುಸ್ರೊ, ಅನುಪ್ ಜಲೋಟಾ ಧ್ವನಿಯೊಳಗೂ, ತಾಯನ ಧ್ವನಿಯೊಳಗೂ ಬ್ರಹ್ಮಾಂಡದ ನಾದದಲೆಯ ಮೂಲಕ ತಮ್ಮ ನಿಜಾಮನನ್ನ ಪ್ರತಿಸಲವೂ ಮಿಲನದ ಸಂಭ್ರಮದೊಳಗ ಮಿಂದೇಳ್ತಾರ.

ಪದಗಳು ಅಲ್ಲಲ್ಲೇ ಇರ್ತಾವ. ಪ್ರೀತಿನೂ ಇದ್ದೇ ಇರ್ತದ. ಆದ್ರ ಹೇಳೂದು, ಒಪ್ಕೊಳ್ಳೂದು, ನೀನೆ ಎಲ್ಲವೂ ಅಂತ ಅಪ್ಕೊಳ್ಳೂದು, ಹಂಗ ಅಪ್ಕೊಂಡಿದ್ದನ್ನ ಹಿಂಗೆಲ್ಲ ಹೇಳೂದು.. ಪ್ರೇಮವೆನಲು ಸರಳವೇ?

ಪ್ರಜಾವಾಣಿ ಶನಿವಾರ • ಮೇ 11, 2024

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

REAL ESTATE SELLING

Sites

Anjanapura

BDA SITE FOR SALE Anjanapura 8th Block 30x40 South Facing 6th Block 30x40 West Facing 5th Block 40x60 South facing. Contact: 9880300791

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

Intl Airport Road

RASHI ORCHARDS - BIAAPA Approved, Off BIAL ROAD, behind ITC factory. Property For Sale, West Face, 40x60 Site, 50 feet Road. Buyers Log on to www.Prabhusestates.com, 9902052259

Jakkur

TELECOM LAYOUT 10th Cross, 46X60 West Facing Conversion BBMP B Katha 11,000 Per Sq Negotiable Contact: 9880315695

J P Nagar

JPNAGAR 2ND Phase,40x60,27000/-3rd Phase 30x40, 3.70cr Dollars Colony 50x80, 4BHK Duplex 11.50cr:8904210201

Kempegowda Layout

"40X60- 50X80 COMMERCIAL BDA SITES SALE 80 feet MAIN ROAD 7th BLOCK KEMPEGOWDA LAYOUT- 9845143579"

Multiple Locations

NAVODAYA LAND Developers Approved Sites available in Bangalore. BMRDA- Nelamangala Kunigal Highway Road Rs. 1780 /sft. DC CONVERSION E KHATA- Nelamangala Sondekoppa Road, 1999 /sft. GRAMATANA SITES- Chikkabanavara, Near Acharya College Rs. 2150 /sft. Contact: 9019479011

Mysore Road

KETHOHALLI BIGBANYAN Tree 30x50 4 Sites, East, 2200/-Sqft. 5 KM- Challaghatta Metro. 9945724472, 7829830333.

Nelamangala

EAST FACING 60x54 clear document developed Ramkey Layout excuse agent buyer. Contact Owner 9481028358, 9449611876

R T Nagar

ANANDNAGAR 40X60 Site for Sale, Clear Titles,close to New Airport Road, adjoining U.A.S campus. 9980233835

Sadashiva Nagar

***SADASHIVANAGAR* RESIDENCIAL** Prime Location 54x86 SITE FOR SALE. Contact: 9945079777

Vishweshwariah Layout

40X60 VISHWESHWARAIAH Layout 7th Block Near Deepa Complex & 40X60 Site Sale 5th Block Near Vidyanikethan School: 9945584713

DC CONVERTED SITE FOR SALE 50X80 EAST FACING BBMP A KATHA NEAR ULLAL RTO: 6366232222/ 6366242222

"VISHWESHWARAIAH LAYOUT 1st Block Site No.3245 N/F 30x40 near Shirke Circle. Contact Owner: 8618934679"

AVAILABLE 40X60 BDA Site North Facing 2nd Block Vishveshwariah Layout Good Location. Contact Buyers: 9844603127

VISHWESWARAIAH LAYOUT BDA 6th Block 30x40 South Facing Near 100 Feet Road Good Location: 9980860138

DIRECT OWNER BDA 40x60 SITE SALE VISHVESWARAIAH LAYOUT BLOCK-7, Near KLE Law College, ₹.9000/-. 9742681666

30X40 NORTH Face 1st Block Vishveshwaraiah Layout & 30X40 Ullal Road EastFace Site Sale 7750. Contact: 8310003509

House

Banashankari

2ND STAGE, BDA 500 sft. Independent Corner House for Sale, Wide Road,Ground + 3 Floor. 9343751639.

J P Nagar

50X80 EXCELLENT Residential North Old-House J.P.Nagar`3rd Phase and 40x56 South,Model House street (Agents_Excuse) Murali- 9845232711.

Kanakapura Road

40X60 SITE, 2 BHK HOUSE West, Kendriyanagara, 1.5 KM. From Talaghattapura Metro. 2.40Cr. 9945724472, 7829830333.

Vijayanagar

VIJAYANAGAR PATTEGARPALYA: SALE 30X40 House, East, 6 BHK Duplex, A Katha, Fully Furnished, Owner: 8095976649

Flat

Hanumanthnagar

3BHK FLAT sale Rs. 1.2 Cr. Webster School Road 6th Cross Ashokanagar B'lore-50 call 9945455503

Kumaraswamy Layout

3 BHK Flats Sale 2250 Sft A Katha Fully Teakwood, Italian Marbles. 2 Carparks 1.6Cr Kumaraswamy Layout 15F Bustand: 9611144096

Mysore Road

MYSORE ROAD AVAILABLE LEASE SPACIOUS EAST PARKING THREE BHK FLAT RUPEES THIRTY LAKHS NEGOTIABLE: 9738223432

Agricultural Land

Ramanagara

5 ACRES 27 GUNTAS, BEAUTIFUL COCONUT FARM LAND SALE NEAR CHENNAPATNA, BETWEEN BANGALORE- MYSORE. 9916551395

Mysore Road

"CHANAPATNA 1 ACRE TAR ROAd 47 Lakhs. MADDUR 29 Guntas KESTUR Town 39 Lakhs. 9845178335"

Tumkur

AGRICULTURE LAND Sale Pavagada, Tumakuru District, 1.5 KM from Pavagada Town, 6 Acres 19.5 Guntas. Owner: 9845027986.

Commercial Land

Vijayanagar

COMERCIAL PROPERTY for sale in 80 Feet Road MC LAYOUT E/W Road 40'x82' Rs.19500/Sft, 1.80L Rent. Slightly Negotiable. BROKERS EXCUSED. CONTACT-9916280018

Commerical

Rajajinagar

SALE INDUSTRIAL FLAT. 1800 sq.ft 15 HP. Suitable for small manufacturing/ warehouse. Rajajinagar, Bangalore. 9986086288.

Residential/ Commercial

Others

FINANCE AGAINST Land & Building Properties Industries Schools Hospitals Projects & NRI Funds. @ 9445672935

Villas/Bunglows

HSR Layout

SALE: BMRDA Approved, 4BHK, East_Facing, 2016 constructed, Triplex Villa, Haraluru. Fully furnished. Contact: 7975417648









email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್



ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331